ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಎಂಟನೆಯ ತರಗತಿ

## ಪ್ರಥಮಭಾಷಾ ಕನ್ನಡ ಪಠ್ಯಪುಸ್ತಕ

## ೮

©KTBS
Not to be republished

## ೨೦೧೫

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)**

೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ಮೂರನೆಯ ಹಂತ,
ಬೆಂಗಳೂರು – ೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

## ಅಧ್ಯಕ್ಷರು

**ಡಾ. ಸಿ. ಎಸ್. ರಾಮಚಂದ್ರ,** ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಭಾಷಾವಿಜ್ಞಾನ ಅಧ್ಯಯನ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬.

## ಸದಸ್ಯರು

೧. **ಡಾ. ಮುಳುಕುಂಟೆ ರಮೇಶ್,** ಕನ್ನಡಭಾಷಾ ಅಧ್ಯಾಪಕ, ರಾಗೀಗುಡ್ಡ ಪ್ರೌಢಶಾಲೆ ಜಯನಗರ, ಬೆಂಗಳೂರು – ೫೬೦೦೬೯

೨. **ಶ್ರೀ ವಿ. ರಂಗಪ್ಪಯ್ಯ ಹೊಳ್ಳ ,** ಕನ್ನಡಭಾಷಾ ಅಧ್ಯಾಪಕ (ನಿವೃತ್ತ), ಉಡುಪಿ ಜಿಲ್ಲೆ – ೫೭೬೨೨೫

೩. **ಶ್ರೀ ಬಿ. ಬಾಲಕೃಷ್ಣಯ್ಯ,** ಕನ್ನಡಭಾಷಾ ಅಧ್ಯಾಪಕ, ಸರ್ಕಾರಿ ಪ್ರೌಢಶಾಲೆ ಬೋಗಾದಿ, ಮೈಸೂರು –೫೭೦ ೦೨೬

೪. **ಶ್ರೀ ಸಿ. ಬಿ. ವೀರಭದ್ರಾಚಾರಿ ,** ಕನ್ನಡಭಾಷಾ ಅಧ್ಯಾಪಕ ಸರ್ಕಾರಿ ಪದವಿಪೂರ್ವ ಕಾಲೇಜು ಮಾಲೂರು, ತಾ

೫. **ಡಾ. ಸುಂದರ ಕೇನಾಜೆ ,** ಬಿ.ಆರ್.ಪಿ. ಬಿಆರ್‌ಸಿ ಕಚೇರಿ, ಸುಳ್ಯ ದಕ್ಷಿಣಕನ್ನಡ ಜಿಲ್ಲೆ

೬. **ಶ್ರೀ ವಿ. ಕೆ. ವಿಟ್ಲ,** ಚಿತ್ರಕಲಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಗುರುವಾಯನಕೆರೆ ಬೆಳ್ತಂಗಡಿ, ದ.ಕ. ಜಿಲ್ಲೆ.

## ಪರಿಶೀಲಕರು

**ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

## ಸಂಪಾದಕೀಯ ಮಂಡಳಿ ಸದಸ್ಯರು

೧. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

೨. **ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೩. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಾಪುರ.

## ಮುಖ್ಯ ಸಂಯೋಜಕರು

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ. ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

## ಸಲಹೆ ಮತ್ತು ಮಾರ್ಗದರ್ಶನ

೧. **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫

೨. **ಶ್ರೀ ಪಾಂಡುರಂಗ,** ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

## ಕಾರ್ಯಕ್ರಮ ಸಂಯೋಜಕರು

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

©KTBS Not to be republished

# ಮುನ್ನುಡಿ

೨೦೦೫ ರ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿಗೆ ಅನುಗುಣವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ನೆಯ ಸಾಲಿನಿಂದ ಒಂದರಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ಹನ್ನೊಂದು ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಏಳು ಮಾಧ್ಯಮಗಳಲ್ಲಿ ಕೋರ್ ವಿಷಯಗಳನ್ನು ರಚನೆ ಮಾಡಲಾಗುತ್ತಿದೆ. ೧ ರಿಂದ ೪ನೇ ತರಗತಿಯವರೆಗೆ ಪರಿಸರ ವಿಜ್ಞಾನ ಮತ್ತು ೫ ರಿಂದ ೧೦ನೇ ತರಗತಿಯ ವರೆಗೆ ಐಚ್ಛಿಕ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಗಳಿರುತ್ತವೆ.
೨೦೦೫ ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ.

ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach).

ಪಠ್ಯಪುಸ್ತಕಗಳಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ(learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಮತ್ತು ಸಿ.ಟಿ.ಇ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಿಗೆ, ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ
ಪಠ್ಯಪುಸ್ತಕ ರಚನೆ ಕ.ಪ.ಪು. ಸಂಘ
ಬೆಂಗಳೂರು.

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ ಬೆಂಗಳೂರು

©KTBS Not to be republished

**ಪಠ್ಯ ಓದು ಹಾಗೂ ಬೋಧನೆಗೆ ಮುನ್ನ ಬೋಧಕರೊಂದಿಗೆ ಸಮಾಲೋಚನೆ--------**

ನಾವಿಂದು ನಾಗರಿಕ, ಶೈಕ್ಷಣಿಕ ಹಾಗೂ ಜಾಗತಿಕ ಮೇಲಾಟದಲ್ಲಿದ್ದೇವೆ. ಪ್ರತಿಯೊಂದು ಭೌತಿಕ ಹಾಗೂ ಬೌದ್ಧಿಕ ಆಯಾಮದಲ್ಲೂ ಹೊಸ ಹೊಸ ಶೈಕ್ಷಣಿಕ ಶೋಧನೆ, ಚಿಂತನಾ ಆವಿಷ್ಕಾರ, ಕಲಿಕಾ ತಂತ್ರಗಾರಿಕೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸ್ಥಿರೀಕರಿಸುವ ವಾಸ್ತವಿಕ ಪ್ರಯತ್ನಗಳು ನಾಡಿನ ಉದ್ದಗಲಕ್ಕೂ ನಡೆಯುತ್ತಿವೆ. ಪ್ರಸ್ತುತ ಸಂದರ್ಭ, ಸ್ಥಿತಿಗತಿಯನ್ನು ಮನಗಂಡ ಶಿಕ್ಷಣತಜ್ಞರು, ಮನೋವಿಜ್ಞಾನಿಗಳು, ಸಾಹಿತ್ಯ ವಿದ್ವಾಂಸರು ಹಾಗೂ ಅಂತಾಶಿಸ್ತೀಯ ಮೇಧಾವಿಗಳು ಕಲೆತು ಆಯೋಜಿಸಿದ ನಿರ್ದಿಷ್ಟ ನಿಯೋಜನಾ ಫಲವೇ ಹೊಸ ಪಠ್ಯ ತಯಾರಿ ಹಾಗೂ ಅನುಷ್ಠಾನತೆ.

ಕಲಿಕಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ತಾಯ್ನುಡಿಯ ಕಲಿಕೆ ಅದರ ಬಳಕೆ ಮಹತ್ವದ್ದು. ಅದಕ್ಕೆ ಪೂರಕವಾಗಿ ಶಿಕ್ಷಣ ಇಲಾಖೆ ನಿಗದಿಪಡಿಸುವ ಬೋಧನಾ ಪಠ್ಯ ಅಗತ್ಯ ಹಾಗೂ ಅನಿವಾರ್ಯ. ಸಾಮಾನ್ಯವಾಗಿ ಮಕ್ಕಳ ಪರಿಸರದ ಮಾತು ನಿತ್ಯದ ಪರಸ್ಪರ ಸಂವಹನ ಸಂಪರ್ಕವಷ್ಟೇ ಅಲ್ಲದೆ ಜ್ಞಾನಾರ್ಜನೆಯ ಉದ್ದೇಶವೂ ಅದರದು. ಮಕ್ಕಳು ತಮ್ಮ ನುಡಿಯಲ್ಲೇ ಶಾಲಾಮಟ್ಟದ ಭಾಷಿಕ ಸಾಮರ್ಥ್ಯವನ್ನು ಆರ್ಜಿಸಿಕೊಳ್ಳುತ್ತಾ ಶೈಕ್ಷಣಿಕ ಸಾರ್ಥಕತೆಗೆ ತಮ್ಮನ್ನು ತೆರೆದುಕೊಳ್ಳುವ ಆಶಯದಿಂದ ಔಪಚಾರಿಕ ನೆಲೆಯಲ್ಲಿ ಸಿದ್ಧಪಡಿಸಿದ ಕಲಿಕಾ ಹಾಗೂ ಬೋಧನಾ ಪಠ್ಯವಿದು. ಕಲಿಕೆಯ ಮೂಲಭೂತ ಕೌಶಲಗಳ ವೈಜ್ಞಾನಿಕ ದೃಢತ್ವವೇ ಇವುಗಳ ಆಂತರ್ಯ ದನಿ.

ಕಲಿಕೆ ಹಾಗೂ ಕಲಿಸುವಿಕೆಯ ನಿರ್ಧಾರಿತ ವಿಧಾನ ಮತ್ತು ಮೌಲ್ಯವನ್ನು ಸಾರ್ವತ್ರಿಕ ಶೈಕ್ಷಣಿಕ ನೆಲೆಯಲ್ಲಿ ಮೌಲೀಕರಿಸುವ ಉದ್ದೇಶದಿಂದ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಬದ್ಧವಾಗಿ, ಅಂತೆಯೇ ೨೦೦೧ – ೨೦೦೨ ಶೈಕ್ಷಣಿಕ ಆಧುನಿಕತೆಗೆ ಪೂರಕವಾಗಿ ಪಠ್ಯಪುಸ್ತಕಗಳು ಶೋಧವಾದವು. ಮಕ್ಕಳ ಮಾನಸಿಕ ವಲಯಕ್ಕೆ ಸರಿಹೊಂದುವಂತೆ ಸಾಮರ್ಥ್ಯಾಧಾರದಿಂದ ಪರಿಷ್ಕಾರವಾಗಿ ಕಾಲಧರ್ಮದ ಶೈಕ್ಷಣಿಕತೆಗೆ ಸಮರ್ಪಕವಾದವು. ಹಾಗಾಗಿಯೂ ಇಂದಿನ ಶೈಕ್ಷಣಿಕ ಆಶೋತ್ತರ, ೨೦೦೫ – ಎನ್.ಸಿ.ಎಫ್. ನೆಲೆಯಾಧಾರಿತ ಆನ್ವಯಿಕ ಶೋಧನಾ ಚಿಂತನೆಗಳನ್ನು ಗಂಭೀರವಾಗಿ ಗಮನಿಸುವುದು ಹಿತಕರ. ಇದು ಸುಶಿಕ್ಷಿತ ವ್ಯಕ್ತಿತ್ವ ವಿಕಸನಕ್ಕೆ ನಾಂದಿ.

ಪಠ್ಯಪುಸ್ತಕದಲ್ಲಿ ಕಲಿಕೆ ಮತ್ತು ಬೋಧನಾಂಶಗಳನ್ನು ಸಮಾನ ರೀತ್ಯಾ ಪರಿಗಣಿಸಿ ಯುಕ್ತ ಕಲಿಕಾ ಪ್ರಾಯೋಗಿಕತೆಯ ಮೂಲಕ ಸಮನ್ವಯಗೊಳಿಸಿ, ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡಬೇಕು. ಆ ನೆಲೆಯಲ್ಲಿ ಸಿರಿ ಕನ್ನಡ – ೮ ಸಮರ್ಥನೀಯ. ಇತ್ತೀಚಿನ ಕಲಿಕೆಯ ಎಲ್ಲಾ ಸಾಧಕ–ಬಾಧಕಗಳನ್ನು ತಾರ್ಕಿಕ ರೀತ್ಯಾ ಅಳವಡಿಸಿದೆ. ಮುಖ್ಯವಾಗಿ ತರಗತಿವಾರು ಕಲಿಕೆಯ ಮೂಲವಿಷಯ ಮತ್ತು ನಿರ್ಧರಿಸಿದ ಮಾನವೀಯ ಮೌಲ್ಯಗಳನ್ನು ಪರಿಗಣಿಸಿದೆ. ಭಾಷಾ ಸಾಮರ್ಥ್ಯಗಳನ್ನು ಕ್ಷೇತ್ರಗಳಿಗನುಗುಣವಾಗಿ ಅನ್ವಯಿಸಿ ಸಮರ್ಥ ಕಲಿಕೆಗೆ ಅನುವಾಗುವಂತೆ ಪಠ್ಯದ ಗದ್ಯ–ಪದ್ಯ ಪಾಠಗಳಲ್ಲಿ ಅಳವಡಿಸಿದೆ. ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಂಡಿದೆ. ಇಲ್ಲಿನ ಪಾಠಗಳೆಲ್ಲವೂ ಸ್ವಕಲಿಕೆ ಹಾಗೂ ಬೋಧನಾ ಕೌಶಲಕ್ಕೆ ಸೂಕ್ತವಾಗಿವೆ. ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಹೆಚ್ಚಿಸುವ ಉದ್ದೇಶದಿಂದ ರಚಿಸಿರುವ ಪಾಠಗಳಲ್ಲಿ ವೈವಿಧ್ಯ ಉಂಟು.

ಯೋಜಿತ ಕ್ರಿಯಾತ್ಮಕತೆಯ ಪಠ್ಯದ ಸಾರ್ಥಕತೆಗೆ ಸೂಕ್ತ ಆದ್ಯತೆಯನ್ನು ನೀಡುವುದರ ಹಿನ್ನೆಲೆಯಲ್ಲಿ ಪ್ರಸ್ತುತ ಬೋಧನೆ ಹಾಗೂ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಇಂಬುಕೊಡುವ ಪ್ರಾಯೋಗಿಕ ಹಾಗೂ ತಾತ್ವಿಕ ಪ್ರಯತ್ನ ಇಲ್ಲಿನದು. ಬೋಧನಾ ವಿಶೇಷತೆಯೊಂದಿಗೆ ಆಯ್ದು ನಿಗದಿಪಡಿಸಿದ ಸಾಹಿತ್ಯಪ್ರಕಾರದ ಭಾಗಗಳನ್ನು ಅರ್ಥೈಸಿಕೊಳ್ಳಲು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ವ್ಯವಸ್ಥಿತವಾಗಿ ಅನ್ವಯಿಸಿದೆ. ಭಾಷಾಶುದ್ಧತೆ, ವಾಸ್ತವಿಕತೆ ಮತ್ತು ತರ್ಕಬದ್ಧತೆಯನ್ನೂ ಜತನದಿಂದ ಸ್ಥಿರೀಕರಿಸಿದೆ. ಕಲಿಕಾ ಮೂಲತತ್ವವನ್ನು ಸಮರ್ಪಕವಾಗಿ ಅನುಸರಿಸಿದೆ.

ಇಲ್ಲಿ ಮುಖ್ಯವಾಗಿ ಮಕ್ಕಳು ಕಲಿಕಾ ಪ್ರಾಯೋಗಿಕತೆಯನ್ನು ಸಮರ್ಥರೀತಿಯಲ್ಲಿ ಮೌಲೀಕರಿಸುವ ಉದ್ದೇಶದಿಂದ ಪಠ್ಯದಲ್ಲಿನ ನಿಗದಿತ ಕಲಿಕಾ ಗದ್ಯಪಾಠ ಮತ್ತು ಪದ್ಯಪಾಠಗಳ ಸ್ಪಷ್ಟ ಅರ್ಥೈಸುವಿಕೆಗೆ ಸಂಬಂಧಿಸಿದಂತೆ ಪ್ರಾಯೋಗಿಕ ವಸ್ತುನಿಷ್ಠ/ನಿಖರನಿರ್ಣಯ ಬಹುವಿಧದ ನಮೂನಾ ಪ್ರಶ್ನೆಗಳನ್ನು ನಿದರ್ಶನಾತ್ಮಕವಾಗಿ ಪಠ್ಯಪುಸ್ತಕದಲ್ಲಿ ನೀಡಿದೆ. ಅಲ್ಲದೆ ಕಲಿತ ಪಾಠದ ಸಾರನಿರ್ಣಯಕತೆಯನ್ನು ಬಹುವಿಧದಿಂದ ಪರೀಕ್ಷಿಸಿ ಕಲಿಕಾರ್ಥಿಯ ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಒಂದೆರಡು ಮಾದರಿಗಳನ್ನಷ್ಟೇ ಕೊಟ್ಟಿದೆ. ಇದರಿಂದ ಸ್ವಸಾಮರ್ಥ್ಯ,

©KTBS Not to be republished

ಸ್ವಪ್ರಯೋಗಶೀಲ, ಸ್ವಸೃಜನಶೀಲ, ಸ್ವಸಂವಹನಶೀಲ ಗುಣಗಳು ಸಹಜವಾಗಿ ಹೆಚ್ಚುತ್ತವೆ. ಭಾಷಾ ಹಾಗೂ ಜ್ಞಾನ ಗ್ರಹಿಕೆಗೆ ಸಂಬಂಧಿಸಿದ ಇನ್ನೂ ಹೆಚ್ಚಿನ ಸೂಕ್ತ ಅಭ್ಯಾಸ, ಭಾಷಾಭ್ಯಾಸ ಮತ್ತು ಚಟುವಟಿಕಾ ಮಾದರಿಗಳನ್ನು ಅಳವಡಿಸಿಕೊಳ್ಳುವ ಜವಾಬ್ದಾರಿ ಸ್ವಾತಂತ್ರ್ಯ ಬೋಧಕರದು ಆಗಿರುತ್ತದೆ. ಅದಕ್ಕೇ ಅಭ್ಯಾಸ/ ಚಟುವಟಿಕೇತರ ನಮೂನೆಗಳನ್ನು ನೀಡಿರುವುದಿಲ್ಲ.

ಶಿಕ್ಷಕರ ಬೋಧನಾ ಸಂಪನ್ಮೂಲ ವಿವರವನ್ನು ಬೋಧಕರಿಗೆ ಪ್ರತ್ಯೇಕಿಸದೆ ಪಠ್ಯದಲ್ಲೇ ಸಹಸಂಬಂಧಿ ರೀತಿಯಲ್ಲಿ ಸಂಕ್ಷಿಪ್ತವಾಗಿ ನೀಡಿದೆ. ಸಾಹಿತ್ಯ ಪ್ರಕಾರ ಭಾಷಾ ಕ್ರಿಯಾತ್ಮಕ ವಿಚಾರ, ಕನ್ನಡ ಭಾಷಾ ಅವಸ್ಥಾ ಘಟಕಾಂಶ ಬೋಧನಾ ಆಶಯ ಸಂಬಂಧಿತ ಮಾಹಿತಿ ಇತ್ಯಾದಿಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಒದಗಿಸುವ ಪ್ರಯತ್ನ ಮಾಡಿದೆ.

ನಿಗದಿತ ಮೂಲಪಾಠವನ್ನು ಅರ್ಥೈಸುವ ಅನುಕ್ರಮಣಿಕೆ ಇಂತಿದೆ. ಅರ್ಥೈಸಿ – ಓದಿ, ಕರ್ತೃ–ಭಾವ – ಆಕರ, ಪದ–ಗದ್ಯ/ಪದ್ಯ – ಅರ್ಥ, ಪಠ್ಯಾಧಾರಟಿಪ್ಪಣಿ, ಕಲಿತಪಠ್ಯದ ಅಭ್ಯಾಸ, ಭಾಷಾಭ್ಯಾಸ, ಪ್ರಾಯೋಗಿಕ ಅಭ್ಯಾಸ ಇತ್ಯಾದಿ ಪಠ್ಯದ ಒಳತೋಟಿಗಳು. ಪಠ್ಯಸಾರವನ್ನು ಕಲಿಕಾರ್ಥಿಗಳು ಸುಲಭವಾಗಿ ಅರ್ಥೈಸಿಕೊಳ್ಳುವ ದೃಷ್ಟಿಯಿಂದ ನಿಗದಿತ ಪಾಠದ ಬೋಧನಾ ವಿನ್ಯಾಸವನ್ನು ಹೊಸ ಬೋಧನಾ ವಿಧಾನ ಮತ್ತು ಬೋಧನಾ ವಿಶ್ಲೇಷಣಾ ವಿಧಾನದ ಅಡಿಯಲ್ಲಿ ಪ್ರಸ್ತಾಪಿಸಿದೆ. ಕಲಿಕೆಯ ಮುನ್ನ ಅರ್ಥೈಸಿ – ಓದಿ ಶೀರ್ಷಿಕೆಯಲ್ಲಿ ಗದ್ಯ/ಪದ್ಯದ ಕೆಲವು ವಿಶೇಷ ಪರಿಕಲ್ಪನಾ ಪದಗಳನ್ನು ಓದುವ ಸಲುವಾಗಿ ನೀಡಿದೆ. ಮುಖ್ಯವಾಗಿ ಓದುವಿಕೆಯನ್ನು ಖಚಿತಪಡಿಸುವ ಉದ್ದೇಶವೇ ಇದರದು. ಕಲಿತ ಪಾಠದ ಅಭ್ಯಾಸ ಭಾಗದಲ್ಲಿರುವ ಪ್ರಶ್ನೆಗಳು ಕಲಿಕಾರ್ಥಿಗಳು ಕಲಿಕೆಯಲ್ಲಿ ಸಾಮರ್ಥ್ಯ ಗಳಿಸುವುದಕ್ಕಾಗಿಯೇ ಹೊರತು ಪರೀಕ್ಷೆಯ ಪ್ರಶ್ನಪತ್ರಿಕೆಯ ತಯಾರಿಕೆಗಾಗಿ ಅಲ್ಲ. ಇದೇ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಮೌಲ್ಯಮಾಪನಕ್ಕಾಗಿ ಕೇಳಲೇಬೇಕೆಂಬ ನಿರ್ಬಂಧವಿಲ್ಲ. ಇಲ್ಲಿ ಒಂದು/ಎರಡು/ಮೂರು/ನಾಲ್ಕು/ಐದು...........ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ಕೇಳಲಾಗಿದೆ. ಇದು ವಿಷಯ ಗ್ರಹಣದ ಸಲುವಾಗಿಯೇ ಹೊರತು ಪರೀಕ್ಷಾ ಮೌಲ್ಯಮಾಪನದ ಮಾದರಿಗಾಗಿ ಅಲ್ಲ. ಅಂತೆಯೇ ವಸ್ತುನಿಷ್ಠ ನಿರ್ಣಾಯಕ ಪ್ರಶ್ನೆಗಳು ಕಲಿಕಾರ್ಥಿಯ ನಿರ್ದಿಷ್ಟ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಾಗಿದೆ. ಒಟ್ಟಿನಲ್ಲಿ ಶೈಕ್ಷಣಿಕ ಸಾರೋದ್ದೇಶದ ಪ್ರಣಾಳಿಕೆ ಇದು.

ಪ್ರಸ್ತುತ ಕೈಂಕರ್ಯಕ್ಕೆ ಸಹಕರಿಸಿದ ಪಠ್ಯಪುಸ್ತಕ ರಚನಾಸಮಿತಿಯ ಗೌರವಾನ್ವಿತ ಸದಸ್ಯರೆಲ್ಲರ ಸಮರ್ಪಕ ಸಲಹೆ, ಬೆಂಬಲ, ನೆರವು, ವಿಶ್ವಾಸ ಮತ್ತು ಆದರತೆ ಮನನೀಯ. ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರು, ಉಪನಿರ್ದೇಶಕರು ಹಾಗೂ ಮುಖ್ಯ ಸಂಯೋಜಕರಾದ ಪ್ರೊ. ಮುಡಂಬಡಿತ್ತಾಯ ಅವರ ಸಮಯೋಚಿತ ಸಲಹೆ, ಮಾರ್ಗದರ್ಶನ ಮಹತ್ವದ್ದು. ನಾಡಿನ ಖ್ಯಾತಸಾಹಿತಿಗಳಾದ ಪ್ರೊ. ಸಾ.ಶಿ. ಮರುಳಯ್ಯ ಅವರ ಸೂಕ್ತ ಪರಿಶೀಲನೆ ಸಮ್ಮತ. ಸಂಯೋಜಕ ಶ್ರೀ. ಪಾಂಡುರಂಗ ಅವರ ಒತ್ತಾಸೆ, ಜವಾಬ್ದಾರಿಯುತ ಕಾಳಜಿ ಮತ್ತು ವಿಶ್ವಾಸ ಪೂರ್ವಕ ಅಭಿಮಾನ ವಿಶೇಷ. ಇವರೆಲ್ಲರಿಗೂ ಸಮಿತಿಯ ಪರವಾಗಿ ಆತ್ಮೀಯ ಗೌರವ ಪೂರ್ವಕ ಧನ್ಯವಾದಗಳು.

ಸಿರಿ ಕನ್ನಡ – ೮ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದ ಸಂಪಾದಕ ಮಂಡಳಿಯ ಸದಸ್ಯರಾದ ಗೌರವಾನ್ವಿತ ಪ್ರೊ. ಸಾ.ಶಿ. ಮರುಳಯ್ಯ, ಸಾಹಿತಿಗಳು, ಪ್ರೊ. ಅ.ರಾ. ಮಿತ್ರ, ಸಾಹಿತಿಗಳು ಮತ್ತು ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು ಮಹಿಳಾ ವಿಶ್ವವಿದ್ಯಾನಿಲಯ ಬಿಜಾಪುರ ಅವರ ಸೂಕ್ತ ಮಾರ್ಗದರ್ಶನ ಸಲಹೆ, ಸೂಚನೆಗಳು ಪಠ್ಯಪುಸ್ತಕದ ಮೌಲಿಕತೆಗೆ ಪೋಷಕವಾಗಿವೆ. ಗಂಭೀರ ಚಿಂತನಾಯುಕ್ತ ಮಾತುಗಳು ಸೂಕ್ತ ಹಾಗೂ ಮೌಲಿಕ. ಅಂತೆಯೇ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಗಳಿಂದ ಬಂದಿರುವ ಹಿಮ್ಮಾಹಿತಿ ಸೂಕ್ತ ಹಾಗೂ ಸಮಂಜಸ. ಯುಕ್ತಾಯುಕ್ತತೆಯ ಹಿನ್ನೆಲೆಯಲ್ಲಿ ಅವನ್ನು ಗಮನಿಸಿದೆ. ಅದಕ್ಕಾಗಿ ಪಠ್ಯಪುಸ್ತಕ ರಚನಾಸಮಿತಿಯ ಪರವಾಗಿ ಅವರಿಗೆ ಗೌರವ ಪೂರ್ವಕ ಧನ್ಯವಾದಗಳು.

ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಕರ್ನಾಟಕ ಪಠ್ಯಪುಸ್ತಕ ಸಂಘದ ಆತ್ಮೀಯ ಸ್ನೇಹಿತರಿಗೂ ಸಂಯೋಜಕರಿಗೂ ಕಲಾವಿದರಿಗೂ ಆದರಪೂರ್ವಕ ವಂದನೆಗಳು. ಪಠ್ಯಕ್ಕೆ ಆಯ್ಕೆ ಮಾಡಿಕೊಂಡ ಆಕರ ಸಂಪನ್ಮೂಲ ಭಾಗಗಳನ್ನು ಅಳವಡಿಸಿಕೊಳ್ಳಲು ಒಪ್ಪಿಗೆ ನೀಡಿರುವ ಲೇಖಕ ವಿದ್ವಾಂಸರಿಗೆ ಹಾಗೂ ಕೃತಿ ಸ್ವಾಮ್ಯ ಹೊಂದಿದವರಿಗೂ ಅಭಿಮಾನ ಪೂರ್ವಕ ಧನ್ಯವಾದಗಳು.

**ಸಿ. ಎಸ್. ರಾಮಚಂದ್ರ**

ಅಧ್ಯಕ್ಷ, ಸಿರಿ ಕನ್ನಡ – ೮

ಪಠ್ಯಪುಸ್ತಕ ರಚನಾ ಸಮಿತಿ

©KTBS
Not to be republished

# ಪರಿವಿಡಿ

## ಭಾಗ – ೧, ಪಠ್ಯ ಪ್ರಧಾನ ಅಧ್ಯಯನ


| ಕ್ರಮ ಸಂಖ್ಯೆ | ಗದ್ಯಪಾಠ | | ಪುಟ ಸಂಖ್ಯೆ |
|---|---|---|---|
| ೦೧ | ಮಗ್ಗದ ಸಾಹೇಬ [ಸಣ್ಣಕತೆ] | – ಬಾಗಲೋಡಿ ದೇವರಾಯ | ೧ |
| ೦೨ | ಪರಿಸರ ಸಮತೋಲನ [ವೈಜ್ಞಾನಿಕ] | – ಕೃಷ್ಣಾನಂದ ಕಾಮತ್ | ೧೨ |
| ೦೩ | ತಲಕಾಡಿನ ವೈಭವ [ಪ್ರವಾಸ ಕಥನ] | – ಹಿರೇಮಲ್ಲೂರು ಈಶ್ವರನ್ | ೨೧ |
| ೦೪ | ಸಾರ್ಥಕ ಬದುಕಿನ ಸಾಧಕ [ವ್ಯಕ್ತಿಚಿತ್ರ] | – ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ | ೩೧ |
| ೦೫ | ರಾಜಕುಮಾರಿಯ ಜಾಣ್ಮೆ [ಜನಪದ ಕತೆ] | – ಡಿ. ಕೆ. ರಾಜೇಂದ್ರ | ೩೯ |
| ೦೬ | ಬಿಲ್ಲಹಬ್ಬ [ನಾಟಕ] | – ಎಚ್. ಎಸ್. ವೆಂಕಟೇಶಮೂರ್ತಿ | ೪೮ |
| ೦೭ | ಅಜ್ಜಯ್ಯನ ಅಭ್ಯಂಜನ [ಲಲಿತ ಪ್ರಬಂಧ] | – ಕುವೆಂಪು | ೬೨ |
| ೦೮ | ಅಂತರಾಳ [ಹಳಗನ್ನಡ] | – ಮುದ್ದಣ | ೭೧ |
| | **ಪದ್ಯಪಾಠ** | | |
| ೦೧ | ಕನ್ನಡಿಗರ ತಾಯಿ [ನವೋದಯ] | – ರಾಷ್ಟ್ರಕವಿ ಎಂ. ಗೋವಿಂದಪೈ | ೮೨ |
| ೦೨ | ಭಾರತೀಯತೆ [ಆಧುನಿಕ] | – ಕೆ. ಎಸ್. ನರಸಿಂಹಸ್ವಾಮಿ | ೮೮ |
| ೦೩ | ಗೆಳೆತನ [ಆಧುನಿಕ] | – ಚೆನ್ನವೀರಕಣವಿ | ೯೪ |
| ೦೪ | ಭರವಸೆ [ದಲಿತ/ಬಂಡಾಯ] | – ಬಿ. ಟಿ. ಲಲಿತಾನಾಯಕ್ | ೯೮ |
| ೦೫ | ವಚನಾಮೃತ [ವಚನಗಳು] | – ಅಕ್ಕಮಹಾದೇವಿ<br>– ಅಮುಗೆರಾಯಮ್ಮ – ಆಯ್ದಕ್ಕಿಮಾರಯ್ಯ | ೧೦೨ |
| ೦೬ | ಒಳ್ನುಡಿ [ಸರ್ವಜ್ಞನ ವಚನ] | – ಸರ್ವಜ್ಞ | ೧೦೭ |
| ೦೭ | ಜೀವನ ದರ್ಶನ [ದಾಸರ ಪದ] | – ಶ್ರೀಪಾದರಾಜ – ಪುರಂದರದಾಸ<br>– ಕನಕದಾಸ | ೧೧೪ |
| ೦೮ | ವಾತ್ಸಲ್ಯ [ನಡುಗನ್ನಡ/ಷಟ್ಪದಿ] | – ಕುಮಾರವಾಲ್ಮೀಕಿ (ನರಹರಿ) | ೧೨೦ |


## ಭಾಗ – ೨, ಪಠ್ಯ ಪೋಷಕ ಅಧ್ಯಯನ


| | | | |
|---|---|---|---|
| ೦೧ | ನಮ್ಮ ಹೃದಯ ನಮ್ಮ ಕೈಯಲಿ | – ಬಿ. ಎಂ. ಹೆಗ್ಡೆ [ಅನು. ಮಹಾಬಲೇಶ್ವರ ರಾವ್] | ೧೩೩ |
| ೦೨ | ಸಾರ್ಥಕ | – ದಿನಕರ ದೇಸಾಯಿ | ೧೩೬ |
| ೦೩ | ಭೂಕೈಲಾಸ (ಪೌರಾಣಿಕ ನಾಟಕ) | – ಪಾರಂಪಳ್ಳಿ. ನರಸಿಂಹಐತಾಳ | ೧೩೭ |
| ೦೪ | ಸಿಂಧೂ ಸಂಸ್ಕೃತಿ | – ಸಂಗ್ರಹ (ಪಠ್ಯ ಪುಸ್ತಕ ಸಮಿತಿ) | ೧೪೦ |
| | ಪಠ್ಯಾದಾರಿತ ಪದಕೋಶ | – – | ೧೪೩ |


©KTBS Not to be republished

## ಗದ್ಯಪಾಠ – ೧

# ಮಗ್ಗದ ಸಾಹೇಬ

[ಸಣ್ಣಕತೆ]

**– ಬಾಗಲೋಡಿ ದೇವರಾಯ**

**ಅರ್ಥೈಸಿ – ಓದಿ**

| | | | | | |
|---|---|---|---|---|---|
| ಚತುರ್ಥಿ | ಅಷ್ಟಮಿ | ಭಕ್ಷ್ಯಭೋಜ್ಯ | ಬ್ರಿಟಿಷರು | ವಿಲಾಯತೀ | ನಿಕೃಷ್ಟ |
| ವಿಧೇಯ | ಅಭೀಷ್ಟೆ | ಅಭಿರುಚಿ | ಮಹಾತ್ಮ | ಪ್ರಶಂಸೆ | ನಿಷ್ಠುರ |



**ನಿಗದಿತ ಮೂಲ ಸಣ್ಣಕತೆ – ಗದ್ಯ**

ಮಗ್ಗದ ಸಾಹೇಬ ಅಂದರೆ ಅಬ್ದುಲ್ ರಹೀಮ್ ಸಾಹೇಬ್. ಅವನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿದೆ. ಆದರೂ ಅವನನ್ನು ಮಗ್ಗದ ಸಾಹೇಬನೆಂದೇ ಕರೆಯುವುದು ವಾಡಿಕೆ. ಅವರ ಪೂರ್ವಜರು ಸಾಹೇಬ್ ಬಹಾದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ; ದೇವಸ್ಥಾನವನ್ನೂ ಕಟ್ಟಿಸಿದ್ದರು. ಇಂದಿಗೂ ಈ ದೇವಸ್ಥಾನದಲ್ಲಿ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿದೆ.

©KTBS Not to be republished

ಇಂತಹ ಸಂಪ್ರದಾಯ ಪದ್ಧತಿಗಳು ಇಂದಿಗೂ ಕರ್ಣಾಟಕದಲ್ಲಿ ನಡೆಯುತ್ತಿವೆ. ಇದರಿಂದ ಪೂರ್ವಜರಲ್ಲಿ ಎಂತಹ ಘನತೆ, ಸದಾಚಾರ, ಸದ್ಭಾವನೆಗಳು ಇದ್ದವು ಎಂದು ತಿಳಿಯುವುದು. ಉದಾಹರಣೆಗೆ ನನ್ನದೇ ಹುಟ್ಟೂರಿನ ಪಕ್ಕದಲ್ಲಿ ಮುಸಲ್ಮಾನರ ವಸತಿ ಇದೆ. ಅದರೊಳಗೆ ಒಂದು ಪವಿತ್ರ ಸ್ಥಾನವಿದೆ. ಅಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ನಮ್ಮ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯ ಇತ್ತು.

ಹಾಗೆಯೇ ಗಣೇಶಚತುರ್ಥಿ, ಕೃಷ್ಣಾಷ್ಟಮಿಗಳ ಮರುದಿನ ಮುಸಲ್ಮಾನ ಸಮಾಜದ ಪ್ರತಿಷ್ಠಿತ ಮುಖ್ಯಸ್ಥರು ನಮ್ಮ ಮನೆಗೆ ಬರುವುದು, ಕುಶಲೋಪಚಾರ ಮಾತನಾಡುವುದು, ನಾವು ಅವರಿಗೆ ಮೋದಕ, ಉಂಡೆ, ಚಕ್ಕುಲಿ ಇತ್ಯಾದಿ ಹಬ್ಬದ ಭಕ್ಷ್ಯ–ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು. ಒಂದು ಬಾರಿ ನಮ್ಮ ತಾಯಿ ಕಾಯಿಲೆ ಬಿದ್ದ ಕಾರಣ ತಂದೆಯವರು ಅಂಗಡಿಯಿಂದ ಲಡ್ಡುಗಳನ್ನು ಕೊಂಡು ಕೊಟ್ಟುದಕ್ಕೆ ಅವರಿಗೆ ಬಹಳ ಸಿಟ್ಟು ಬಂತು. 'ರಾಯರೆ, ಅಂಗಡಿಯಿಂದ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೋ ಕಲ್ಲುಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ. ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ?' ಎಂದು ಕೇಳಿಯೇ ಬಿಟ್ಟಿದ್ದರು.

ಅದು ಹೇಗೇ ಇರಲಿ. ಈಗ ಅಬ್ದುಲ್ ರಹೀಮನಿಗೆ 'ಮಗ್ಗದ ಸಾಹೇಬ' ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. "ಅನಿಷ್ಟ ಮಗ್ಗದ ಹೆಸರೆತ್ತಬೇಡಿ"–"ಮಗ್ಗವಲ್ಲ ಕೊರಳಿಗೆ ಹಗ್ಗ!" ಎಂಬುದು ಆತನ ನಿರಾಶೆ, ರೋಷಗಳ ಉದ್ಗಾರವಾಗಿತ್ತು.

ಏಕೆಂದರೆ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯತೀ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿಬಿಟ್ಟರು. ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು, ಒಂದು ವರ್ಷದೊಳಗೇ ಕಳೇಬರಗಳಾಗಿ ಹರಕು ಚಿಂದಿಯಾಗುವುವು. ಬಣ್ಣವೋ ಒಂದೇ ತಿಂಗಳಲ್ಲಿ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುವುದು. ಆದರೇನು? ಬಹು ಅಗ್ಗ. ಜನರಿಗೆ ಬೇಕಾದುದು ಅಗ್ಗದ ವಸ್ತು. ಗುಣವನ್ನು ಯಾರು ಕೇಳುತ್ತಾರೆ? ಅಗ್ಗದ ಮಾಲಿನದೇ ಆಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು.

ಪಾಪ! ಅಬ್ದುಲ್ ರಹೀಮನ ಗತಿ? ಹಿರಿಯರು ಕಟ್ಟಿದ ಭವ್ಯವಾದ ಹಳೆಯ ಕಾಲದ ಮನೆ. ವಿಶಾಲವಾದ ತೋಟ. ಆದರೆ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡನ ಬಲೆಗಳಿಂದ ಆಚ್ಛಾದಿತವಾಗಿವೆ. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬಂತಾಗಿದೆ.

ಈಗ ಅವನಿಗೆ ಒಂದೇ ಹಠ, ಒಂದೇ ವ್ರತ. ಅವನ ಮೂವರು ಗಂಡುಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡಬೇಕು ಎಂದು. ಅಂತೆಯೇ  ಇಬ್ಬರು ಮಕ್ಕಳು ವಿಧೇಯರಾಗಿ ಅವನ ಅಭೀಷ್ಟವನ್ನು ನೆರವೇರಿಸಿದರು. ಒಬ್ಬ ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದ.

Not to be republished ©KTBS

ಇನ್ನೊಬ್ಬ ಪೋಸ್ಟ್ ಮಾಸ್ತರನಾದ. ಆದರೆ ಕೊನೆಯ ಮಗ ಕರೀಮ್‌ನಿಂದ ಬಹಳ ನಿರಾಸೆ ಉಂಟಾಯಿತು. ಕರೀಮ್ ಆಟದಲ್ಲೂ ಪಾಠದಲ್ಲೂ ಬಹು ಚುರುಕು; ಬುದ್ಧಿವಂತ; ಹಸನ್ಮುಖಿ: ಎಲ್ಲರಿಗೂ ಬೇಕಾದವನು. ಆದರೆ ಏನೋ ಕಾರಣದಿಂದ ಅವನಿಗೆ ಅನಿಷ್ಟ ಮಗ್ಗದಲ್ಲಿ ಬಹಳ ಅಭಿರುಚಿ, ಮನೆಯಲ್ಲಾದರೋ ಮಗ್ಗವನ್ನು ಮುಟ್ಟಲೂ ತಂದೆ ಬಿಡುತ್ತಿರಲ್ಲಿಲ್ಲ. ಆದರೆ ಮಗನ ಗ್ರಹಚಾರ ಎನ್ನಿ. ಶಾಲೆಯಲ್ಲಿಯೇ ಮಗ್ಗ ಉದ್ಭವಿಸಬೇಕೇ?

ಮಹಾತ್ಮಾಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ 'ನವೀನ ಶಿಕ್ಷಣ' ಆರಂಭವಾಯಿತು. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವುತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಅವರಲ್ಲಿ ಹಸ್ತಕೌಶಲವನ್ನು, ದೇಹಶ್ರಮದಲ್ಲಿ ಗೌರವ-ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು. ಕೆಲವರಿಗೆ ಬಡಗಿಯ ಕೆಲಸ, ಕೆಲವರಿಗೆ ಬೆತ್ತದ ಕುರ್ಚಿ ಕೆಲಸ ಇತ್ಯಾದಿ ಸಾಮಗ್ರಿಗಳನ್ನು ಮಾಡುವ, ಕೆಲವರಿಗೆ ಕೃಷಿ, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು.

ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿಬಿಟ್ಟ. ಅವನ ತಂದೆಗೆ ರೋಷ ಉಕ್ಕಿಬಂತು. ಮುಖ್ಯೋಪಾಧ್ಯಾಯ ಶಂಕರಪ್ಪ ಅವರೊಡನೆ ನಿಷ್ಠುರವಾಗಿ ಜಗಳವಾಡಿದ್ದನು. ಆದರೆ ಹುಡುಗ ಕರೀಮ್ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ಮಾಡಿಬಿಟ್ಟಿದ್ದ. ಅದನ್ನು ಶಂಕರಪ್ಪ ಅವರು ಸ್ವಾಭಾವಿಕವಾಗಿಯೇ ಪ್ರಶಂಸೆ ಮಾಡಿ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರು. ಅದರ ಫಲಸ್ವರೂಪವಾಗಿ ಸರಕಾರದಿಂದ ಹುಡುಗ ಕರೀಮ್‌ನಿಗೆ ಒಂದು ಬೆಳ್ಳಿಯ ಪದಕವೂ ಒಂದು ನೂರು ರೂಪಾಯಿಯ ಬಹುಮಾನವೂ ಬಂದುಬಿಟ್ಟವು.

ಹುಡುಗನ ಉತ್ಸಾಹ ಆಕಾಶಕ್ಕೇರಿತು. ತಂದೆ ಈ ಹಠಮಾರಿಗೆ ಮಗ್ಗದ ಹುಚ್ಚನ್ನು ಬಿಡಿಸಬೇಕೆಂದು ಶಾಲೆಯಿಂದಲೇ ಬಿಡಿಸಿಬಿಟ್ಟನು. ಹೆಡ್‌ಮಾಸ್ಟರ್ ಶಂಕರಪ್ಪ ಅವರ ಎಷ್ಟೋ ಅವಿನಯ ವಿನಯಗಳನ್ನು ಗಣಿಸದೆ ನಿರಾಕರಿಸಿದನು.

ಒಂದು ದಿನ ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮನದು ಸ್ತ್ರೀಪಾತ್ರ. ಅದಕ್ಕೆಂದು ತಾಯಿಯಿಂದ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ. ನಾಟಕ ಮುಗಿದ ನಂತರ ಮನೆಗೆ ಬರಲಿಲ್ಲ. ಎಲ್ಲೋ ಮಾಯವಾಗಿ ಹೋದ.

ತಂದೆಗೆ ಮೈಯಲ್ಲಿ ಅಗ್ನಿಸಂಚಾರವಾಯಿತು. ಮಗನನ್ನು ಕ್ರೂರವಾಗಿ ಶಪಿಸಿದನು. 'ಹಾಳಾಗಿ ಹೋಗಲಿ! ಹಠಮಾರಿ. ತಂದೆಯ ಮಾತನ್ನು ಉಲ್ಲಂಘಿಸಿದವನು ಎಂದು ಮಾತ್ರ ತಿಳಿದಿದ್ದೆ. ಈಗ ಕಳ್ಳನೆಂದೂ ತಿಳಿಯಿತು. ನನಗೆ ಇಬ್ಬರೇ ಗಂಡು ಮಕ್ಕಳು ; ಕಳ್ಳನಾದವನು, ಮನೆಬಿಟ್ಟು ಓಡಿಹೋದವನು ಮಗನೇ ಅಲ್ಲ' ಎಂದು ಆಣೆ ಹಾಕಿದನು.

©KTBS Not to be republished

ಕೆಲವು ವರ್ಷಗಳ ಅನಂತರ ಕರೀಮ್ ಈಗ ಬೆಳೆದು ಯುವಕನಾಗಿದ್ದಾನೆ – ಮನೆಗೆ ಬಂದು ಬಾಗಿಲು ತಟ್ಟಿದ. ತಂದೆ ಬಾಗಿಲು ತೆರೆದು ಮುಖ ನೋಡಿ ಫಟಾರನೆ ಬಾಗಿಲು ಮುಚ್ಚಿದ. ಒಂದು ಘಂಟೆ ಬಾಗಿಲು ತಟ್ಟಿದರೂ ತಾಯಿ ಅತ್ತು ಹಂಬಲಿಸಿದರೂ ಬಾಗಿಲು ತೆರೆಯಲೇ ಇಲ್ಲ.

ಕೊನೆಗೆ ನಿವೃತ್ತರಾಗಿರುವ ಶಂಕರಪ್ಪ ಅವರ ಮನೆಗೆ ಹೋಗಿ, ಸಂಧಾನ ಮಾಡಿಸಿರಿ ಎಂದು ನಿವೇದಿಸಿದ. 'ನನ್ನ ಮುಖವನ್ನೇ ನೋಡಬಾರದು ಎಂದು ಹಠವಿದ್ದರೆ ಕೊನೆಗೆ ತಾಯಿಯಾದರೂ ನನ್ನನ್ನು ಕಾಣಬಾರದೆ? ಅಮ್ಮನ ಚಿನ್ನದ ಸರವನ್ನು ತಂದಿದ್ದೇನೆ. ಅದರೊಡನೆ ಹತ್ತುಸಾವಿರ ರೂಪಾಯಿಗಳನ್ನು ತಂದಿದ್ದೇನೆ. ಅವನ್ನಾದರೂ ತಾಯಿಯ ಕಾಲ ಮೇಲೆ ಹಾಕಿ ಹೋಗುತ್ತೇನೆ. ತಂದೆಯವರಿಗೆ ಸಮಾಧಾನ ಹೇಳಿ. ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ' ಎಂದ.

ಶಂಕರಪ್ಪ ಅವರು ಮುದುಕನೊಡನೆ ಒಂದು ಗಂಟೆ ಗೋಗರೆದರು, ನಿವೇದಿಸಿದರು, ತರ್ಕಿಸಿದರು, ಚರ್ಚಿಸಿದರು. ಆದರೆ ನಿಷ್ಫಲವಾಯಿತು. ಒಂದು ಪದವನ್ನೂ ಕೇಳುವ ತಾಳ್ಮೆ ಮುದುಕನಿಗೆ ಇರಲಿಲ್ಲ. 'ಸಾಹೇಬ್ ಬಹಾದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿಹಚ್ಚಿದ್ದಾನೆ. ಈ ಮಾತಿನಲ್ಲಿ ನೀವು ಅಡ್ಡಬಾಯಿ ಹಾಕಬೇಡಿ. ನೀವು ಕಲಿಸಿದ ಪಾಠದಿಂದಲೇ ಈ ಹಠಮಾರಿ ನಮ್ಮ ವಂಶದ ಕೀರ್ತಿಯನ್ನು ಮಣ್ಣುಪಾಲು ಮಾಡಿದ. ಹಣ ತಂದಿದ್ದಾನಂತೆ. ಕಳವಿನ ಹಣವೋ ದರೋಡೆಯ ಹಣವೋ?' ಎಂದು ಸಿಡುಕಿದ. ಶಂಕರಪ್ಪ ಅವರು ಮುಖಬಾಡಿಸಿಕೊಂಡು ಹಿಂತೆರಳಿದರು.



ಕರೀಮ್‌ನ ಹಣ ಕಳವಿನದೂ ಅಲ್ಲ. ದರೋಡೆಯದೂ ಅಲ್ಲ. ಸಣ್ಣಪ್ರಾಯದಲ್ಲೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅವನೀಗ ಅದರ ಅಧ್ಯಕ್ಷನಾಗಿದ್ದಾನೆ. ಸಾಕಷ್ಟು ಯಶಸ್ವಿಯೂ ಧನವಂತನೂ ಆಗಿದ್ದಾನೆ. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದ್ದಾನೆ. ಆದರೆ ಈ ವಿಷಯದ ಲವಲೇಶವೂ ತಂದೆಗೆ ತಿಳಿಯದು. ಏಕೆಂದರೆ ಆತ ಕರೀಮ್‌ನ ಕಡೆಗೆ ತನ್ನ ಹೃದಯವನ್ನು, ಮನೆಯ ಬಾಗಿಲು ಮುಚ್ಚಿದಂತೆ–ಸಂಪೂರ್ಣವಾಗಿ ಮುಚ್ಚಿಬಿಟ್ಟಿದ್ದಾನೆ. ಯಾರಾದರೂ ಕರೀಮ್‌ನ ಹೆಸರೆತ್ತಿದರೆ 'ನನಗೆ ಎರಡೇ ಮಕ್ಕಳು, ಕಳ್ಳರ ಪರಿಚಯ ನನಗಿಲ್ಲ' ಎಂದೇ ಅವನ ನಿಷ್ಠುರದ ಉತ್ತರ.

©KTBS Not to be republished

ಕೆಲವು ವರ್ಷಗಳ ಅನಂತರ ಅಬ್ದುಲ್ ರಹೀಮ್ ಹಾಸಿಗೆಯಲ್ಲಿ ಒರಗಿದ್ದಾನೆ. ಅನಾರೋಗ್ಯದಿಂದ ನರಳುತ್ತಾ ಇದ್ದಾನೆ. ಎಲುಬಿನ ಹಂದರವಾಗಿದ್ದಾನೆ. ಕಣ್ಣೂ ಸರಿಯಾಗಿ ಕಾಣಿಸುತ್ತಿಲ್ಲ; ಕಿವಿಯೂ ಸರಿಯಾಗಿ ಕೇಳುತ್ತಿಲ್ಲ. ಶಂಕರಪ್ಪ ಅವರು ಬಾಗಿಲು ತಟ್ಟಿದರು. ಒಳಗೆ ಬಂದರು. ಕೈಯಲ್ಲಿ ಒಂದು ವಾರ್ತಾಪತ್ರಿಕೆ. 'ರಹೀಮ್ ಸಾಹೇಬರೇ, ಈ ಪತ್ರಿಕೆ ನೋಡಿದಿರಾ? ಈ ಭಾವಚಿತ್ರ ನೋಡಿ?' ಮುದುಕ ಕಣ್ಣಿನ ಹತ್ತಿರ ತಂದ. ಆದರೆ ಪಾಪ! ಕಣ್ಣು ಮಂಜಾಗಿವೆ. ಏನೂ ತೋರದು. ಅವನ ಹೆಂಡತಿ ಬಂದು ವಾರ್ತಾಪತ್ರಿಕೆ ತೆಗೆದುಕೊಂಡು ಹೋದಳು.

"ಕರೀಮ್! ನಮ್ಮ ಕರೀಮ್! ನಮ್ಮ ಕರೀಮ್" ಎಂದು ಗಟ್ಟಿಯಾಗಿ ಉದ್ಗರಿಸಿದಳು.

"ಏನು ಜೇಲಿಗೆ ಹೋದನೇ? ಫಾಶೀ ಆಯಿತೇ? ಇನ್ನೂ ಮನೆತನದ ಮೇಲೆ ಏನು ಅಪಕೀರ್ತಿ ಹೇರಿದ್ದಾನೆ?" ಎಂದು ಮುದುಕ ಕೆಮ್ಮುತ್ತ ಕೆಮ್ಮುತ್ತ ಗರ್ಜಿಸಿದ.

"ರಹೀಮ್ ಸಾಹೇಬರೇ, ನಿಮ್ಮ ಮಗ ಕರೀಮ್‌ನಿಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ. ಅದರ ಭಾವಚಿತ್ರ ಈ ವಾರ್ತಾಪತ್ರಿಕೆಯಲ್ಲಿದೆ."


"ಆಂ! ಪದ್ಮಭೂಷಣ! ಅಂದರೇನು?"

"ಪದ್ಮಭೂಷಣ ಅಂದರೆ ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಿನ ಬಿರುದು. ಖಾನ್ ಸಾಹೇಬ್, ಖಾನ್ ಬಹಾದ್ದೂರ್, ದಿವಾನ್ ಬಹಾದ್ದೂರ್ ಇವೆಲ್ಲದರಿಂದಲೂ ಮೇಲೆ, ದೊಡ್ಡ ಬಿರುದು!"

"ಕರೀಮ್! ನನ್ನ ಕರೀಮ್! ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಾದನೇ? ದೇವರು ದೊಡ್ಡವನು. ದೇವರು ದಯಾಳು. ನನ್ನ ಬಾಯಿಯಿಂದ ಬಿದ್ದ ಕೆಟ್ಟ ಮಾತನ್ನು ದೇವರು ಕಿವಿಗೆ ಹಾಕಿಕೊಳ್ಳಲಿಲ್ಲ. ನನ್ನ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕೀರ್ತಿತಂದ" ಎಂದು ಕೆಮ್ಮುತ್ತ ಕೆಮ್ಮುತ್ತ ಬಿಕ್ಕಿಬಿಕ್ಕಿ ಅಳತೊಡಗಿದ ಭಾವುಕನಾಗಿ.

## ಕರ್ತೃ– ಭಾವ – ಆಕರ

**ಬಾಗಲೋಡಿ ದೇವರಾಯ** ಅವರು (೧೯೨೭) ದಕ್ಷಿಣ ಕನ್ನಡ ಜಿಲ್ಲೆಯ ಬಾಗಲೋಡಿಯವರು.



ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಆ ಕಾಲಕ್ಕೆ ಐ.ಎ.ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿದೇಶಿ ಸೇವೆಗೆ ಆಯ್ಕೆಯಾದರು. ಮಾಸ್ತಿ ಹಾಗೂ ಇವರೂ ಸಮಕಾಲೀನರು ಅಲ್ಲದೇ ಸಣ್ಣಕತೆಗಳನ್ನು ಬರೆದವರು. ಇವರು ರಾಯಭಾರಿಯಾಗಿ ಇಟಲಿ, ನೇಪಾಳ, ನೈಜೀರಿಯಾ, ಫಿಲಿಫೈನ್ಸ್, ನ್ಯೂಜಿಲ್ಯಾಂಡ್, ಬಲ್ಗೇರಿಯಾ ಮೊದಲಾದ ದೇಶಗಳಲ್ಲಿ ಕಾರ್ಯನಿರ್ವಹಿಸಿದರು. ಅವರ ಕಥಾ ಸಂಗ್ರಹಗಳೆಂದರೆ **ಹುಚ್ಚು ಮನಸ್ಸಿನ ಮುನಸೀಫ ಮತ್ತು ಇತರ ಕತೆಗಳು, ಆರಾಧನಾ, ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು**. ಬಾಗಲೋಡಿ ದೇವರಾಯ ಅವರು ಒಟ್ಟು ೨೭ ಕತೆಗಳನ್ನು ಬರೆದಿದ್ದಾರೆ. ಇವರು ೧೯೮೫ ರಲ್ಲಿ ನಿಧನರಾದರು.

©KTBS Not to be republished

ಪ್ರಕೃತ ಗದ್ಯಭಾಗ ಧಾರ್ಮಿಕ ಸಹಿಷ್ಣುತೆ, ಗುಡಿಕೈಗಾರಿಕೆಗಳ ವಿನಾಶಕ್ಕೆ ಕಾರಣವಾದ ಅಂಶ, ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣ, ಮಕ್ಕಳ ಆಸಕ್ತಿಗೆ ಪೂರಕವಾದ ಶಿಕ್ಷಣ ನೀಡುವುದು, ಸ್ವಯಂ-ಉದ್ಯೋಗಕ್ಕೆ ಪ್ರೇರಣೆ ಮೊದಲಾದ ಮಹತ್ವದ ಅಂಶಗಳನ್ನು ಒಳಗೊಂಡಿದೆ. ತಂದೆ ಮಗನಿಗಿದ್ದ ಮಗ್ಗದ ಬಗೆಗಿನ ಒಲವಿಗೆ ವಿರೋಧ ವ್ಯಕ್ತಪಡಿಸಿದರು. ಇದರಿಂದ ಮನನೊಂದ ಮಗ ತನ್ನ ಮಾರ್ಗವನ್ನು ಸ್ವತಂತ್ರವಾಗಿ ಕಂಡುಕೊಂಡ ಆಶಯವನ್ನು ಹೊಂದಿದೆ ಈ ಪಠ್ಯಭಾಗ.

**ಪ್ರಕೃತ ಮಗ್ಗದ ಸಾಹೇಬ** ಕಥೆಯನ್ನು **ಬಾಗಲೋಡಿ ದೇವರಾಯ** ಅವರ **ಸಮಗ್ರ ಕತೆಗಳು** ಎಂಬ ಕಥಾಸಂಕಲನದಿಂದ (ಪುಟ ೧೮೫-೧೯೯) ಆಯ್ದ ಕಥೆಯನ್ನು ಸಂಪಾದಿಸಿ ನಿಗದಿಪಡಿಸಿದೆ.

## ಪದ-ಗದ್ಯಾರ್ಥ

ವಿಲಾಯತೀ – ವಿದೇಶ, ಅನ್ಯದೇಶ; ಕಳೇಬರ – ಮೃತ ದೇಹ/ಶರೀರ ; ಆಚ್ಛಾದಿತ – ಮುಚ್ಚಲ್ಪಟ್ಟ ; ಆಧಿಪತ್ಯ – ಯಜಮಾನಿಕೆ; ಚಿಂದಿ – ಚೂರು ; ಅಭೀಷ್ಟ– ಬಯಸಿದ್ದು ; ಪರಿವರ್ತನೆ – ಬದಲಾವಣೆ; ಭಿಕಾರಿ – ನಿರ್ಗತಿಕ ; ಹಸನ್ಮುಖಿ – ನಗುಮುಖಉಳ್ಳವನು ; ಪ್ರಶಂಸೆ – ಹೊಗಳಿಕೆ ; ಗಣಿಸದೆ – ಲೆಕ್ಕಿಸದೆ, ಗೌಪ್ಯ – ಗುಟ್ಟು, ರಹಸ್ಯ

## ಪಠ್ಯಾಧಾರ ಟಿಪ್ಪಣಿ

**ಸಾಹೇಬ್ ಬಹಾದ್ದೂರ್** : ಮೊಗಲ್ ರಾಜರ ಆಳ್ವಿಕೆಯ ಸಂದರ್ಭದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳಿಗೆ ಕೊಡುತ್ತಿದ್ದ ಗೌರವಪೂರ್ವಕ ಬಿರುದು.

**ಉರುಸ್** : ಮಹಮದೀಯ ಸಾಧುಗಳ ಪುಣ್ಯತಿಥಿ ಮತ್ತು ಅಂದು ನಡೆಸುವ ಜಾತ್ರೆ.

**ಪದ್ಮಭೂಷಣ** : ಕಲೆ, ವಿಜ್ಞಾನ, ಸಮಾಜಸೇವೆ, ಕ್ರೀಡೆ ಮುಂತಾದ ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ಸಾಧಕರಿಗೆ ಭಾರತ ಸರ್ಕಾರ ನೀಡುವ ಮೌಲಿಕ ಪ್ರಶಸ್ತಿ.

## ಕಲಿತ ಪಠ್ಯದ ಅಭ್ಯಾಸ

* **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?

೨. ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?

೩. ಅಬ್ದುಲ್ ರಹೀಮನ ಹಠವೇನು?

೪. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?

೫. ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ?

©KTBS Not to be republished

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.

೨. ಲೇಖಕರ ಹುಟ್ಟೂರಿನಲ್ಲಿದ್ದ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು?

೩. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳ ಆಕ್ಷೇಪವೇನು?

೪. ಕರೀಮನಿಗೆ ಶಾಲೆಯಲ್ಲಿ ಮಗ್ಗ ಕಲಿತುದರಿಂದ ಆದ ಪ್ರಯೋಜನವೇನು?

೫. ಶಾಲಾ ವಾರ್ಷಿಕೋತ್ಸವದಂದು ಕರೀಮ ಮಾಡಿದ ಕೆಲಸವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರಿಸಿ**

೧. ನವೀನ ಶಿಕ್ಷಣದ ವೈಶಿಷ್ಟ್ಯಗಳೇನು?

೨. ಶಂಕರಪ್ಪ ಅವರು ರಹೀಮನ ಬಳಿಗೆ ಸಂಧಾನಕ್ಕಾಗಿ ಬಂದ ಪ್ರಸಂಗವನ್ನು ತಿಳಿಸಿ.

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

೧. ಕರೀಮ ಧನವಂತನಾದ ಬಗೆ ಹೇಗೆ? – ವಿವರಿಸಿ

೨. ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವೇನು?

**ಉ. ಸಂದರ್ಭಾನುಸಾರ ವಿವರಿಸಿ**

೧. "ಮಗ್ಗವಲ್ಲ ಕೊರಳಿಗೆ ಹಗ್ಗ!"

೨. "ಕಳ್ಳನಾದವನು, ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ"

೩. "ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ"

೪. "ದೇವರು ದೊಡ್ಡವನು ದೇವರು ದಯಾಳು"

*** ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಬಿಟ್ಟ ಸ್ಥಳ ತುಂಬಿ**

೧. ಅಬ್ದುಲ್ ರಹೀಮನಿಗೆ ______ ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು.

೨. ಮನೆಯಲ್ಲಿ ______ ಇದೆಯೋ ಇಲ್ಲವೋ ಎಂಬಂತಾಗಿದೆ.

೩. ಹುಡುಗನ ______ ಆಕಾಶಕ್ಕೇರಿತು.

೪. ಶಂಕರಪ್ಪ ಅವರು ______ ಹಿಂತೆರಳಿದರು.

೫. ನನಗೆ ಎರಡೇ ಮಕ್ಕಳು ______ ಪರಿಚಯ ನನಗಿಲ್ಲ.

©KTBS Not to be republished

©KTBS Not to be republished

# ಭಾಷಾಭ್ಯಾಸ

## ಸೈದ್ಧಾಂತಿಕ ಭಾಷಾಭ್ಯಾಸ

### ವ್ಯಾಕರಣ ಪರಿಚಯಾತ್ಮಕ ಸ್ಥೂಲ ವಿವರ

ಮಾನವ ಮನಸ್ಸಿನ ಭಾವನೆಗಳನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾನೆ. ಆಡಿದ, ಆಡಬೇಕಾದ ಮಾತುಗಳನ್ನು ನಿರ್ದಿಷ್ಟ ಲಿಪಿಯ (ಲಿಖಿತ) ರೂಪಕ್ಕಿಳಿಸುವುದೇ ಬರೆವಣಿಗೆ. ಪದ ಮತ್ತು ಪದಗಳ ಸಂಬಂಧವನ್ನು ಖಚಿತವಾಗಿ ತಿಳಿಸುವುದೇ ವ್ಯಾಕರಣಶಾಸ್ತ್ರ. ಆದ್ದರಿಂದ ಭಾಷೆಯನ್ನು ಕಲಿಯುವವರು ಆ ಭಾಷೆಯ ವ್ಯಾಕರಣವನ್ನು ಅರಿಯುವುದು ಉತ್ತಮ. ಕ್ರಿಯಾತ್ಮಕ ವ್ಯಾಕರಣದ ಕಲಿಕೆಯಿಂದ ಭಾಷೆಯನ್ನು ಸ್ಪಷ್ಟ ಹಾಗೂ ನಿಖರವಾಗಿ ಬಳಸಲು ಸಾಧ್ಯ.

### ವರ್ಣಮಾಲೆ

**ನಾನು ಶಾಲೆಗೆ ಹೋಗಿ ಬಂದೆನು** ಈ ವಾಕ್ಯದಲ್ಲಿ **ನಾನು, ಶಾಲೆಗೆ, ಹೋಗಿ, ಬಂದೆನು** ನಾಲ್ಕು ಅರ್ಥಪೂರ್ಣ ಪದಗಳಿವೆ. ಒಂದೊಂದು ಪದದಲ್ಲಿಯೂ ಬೇರೆ ಬೇರೆ ಅಕ್ಷರಗಳಿವೆ. ಉದಾ: ನಾನು ಪದದಲ್ಲಿ **ನ್ ಆ ನ್ ಉ** ಎಂಬ ನಾಲ್ಕು ಅಕ್ಷರಗಳಿವೆ. ಬಂದೆನು ಪದದಲ್ಲಿ **ಬ್ ಅ ಂ ದ್ ಎ ನ್ ಉ** ಎಂಬ ಏಳು ಅಕ್ಷರಗಳಿವೆ. ಈ ಎರಡು ಪದಗಳಲ್ಲಿರುವ **ನ್ ನ್ ಬ್ ದ್ ವ್** ಎಂಬ ಅಕ್ಷರಗಳನ್ನು ಉಚ್ಚರಿಸುವಾಗ ಧ್ವನ್ಯಂಗದ ಅಡೆತಡೆಯೊಂದಿಗೆ ಉಚ್ಚರಿಸಬೇಕಾಗುತ್ತದೆ. ಇವೇ **ವ್ಯಂಜನಾಕ್ಷರಗಳು.** ಆ ಅಕ್ಷರಗಳ ಹಿಂದೆ ಅಥವಾ ಮುಂದೆ **ಆ ಉ ಎ** ಮುಂತಾದವು ಧ್ವನ್ಯಂಗದ ಅಡೆತಡೆ ಇಲ್ಲದೆ ಉಚ್ಚರಿಸಬಹುದಾದ ಅಕ್ಷರಗಳಿವೆ ಇವೇ **ಸ್ವರಾಕ್ಷರಗಳು.** ಇವು ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು. ಹಾಗೆಯೇ **ಬಂದೆನು** ಎಂಬ ಪದದಲ್ಲಿರುವ **ಂ** ಎಂಬ ಅಕ್ಷರವನ್ನು ಉಚ್ಚರಿಸಲು ಆಗುವುದಿಲ್ಲ. ಇದರ ಹಿಂದೆ ಸ್ವರಾಕ್ಷರಗಳು ಬಂದಾಗ ಮಾತ್ರ ಉಚ್ಚರಿಸಬಹುದು. ಇದೇ **ಯೋಗವಾಹ.** ಕನ್ನಡ ವರ್ಣಮಾಲೆಯನ್ನು ಪ್ರಧಾನವಾಗಿ **ಸ್ವರ, ವ್ಯಂಜನ ಮತ್ತು ಯೋಗವಾಹ ಎಂಬ ಮೂರು** ವಿಭಾಗ ಮಾಡಲಾಗಿದೆ.

### ಸ್ವರಗಳು

**ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ** – ಇವು ಹದಿಮೂರು **ಸ್ವರಾಕ್ಷರಗಳು.** ಇವುಗಳಲ್ಲಿ **ಅ ಇ ಉ ಋ ಎ ಒ** – ಎಂಬ **ಆರು ಅಕ್ಷರಗಳು ಒಂದೊಂದು ಮಾತ್ರಾ ಕಾಲದಲ್ಲಿ** ಉಚ್ಚರಿಸಲ್ಪಡುವಂತಹ ಅಕ್ಷರಗಳು. ಹಾಗಾಗಿ ಇವು **ಹ್ರಸ್ವಸ್ವರಗಳು. ಆ ಈ ಊ ಏ ಐ ಓ ಔ – ಎಂಬ ಏಳು ಅಕ್ಷರಗಳು ಎರಡೆರಡು ಮಾತ್ರಾ ಕಾಲದಲ್ಲಿ** ಉಚ್ಚರಿಸಲ್ಪಡುವಂತಹ ಅಕ್ಷರಗಳು. ಹಾಗಾಗಿ ಇವು **ದೀರ್ಘಸ್ವರಗಳು.** ಈ ದೀರ್ಘಸ್ವರಗಳು ಕೆಲವೊಮ್ಮೆ ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುತ್ತವೆ. **ಉದಾ : ಅಣ್ಣಾ೩ ಇಲ್ಲಿ ಬಾ. ಮಕ್ಕಳೇ೩** ಇಲ್ಲಿ ಬನ್ನಿ – ಇಲ್ಲಿ (೩) ಎಂದು ಗುರುತಿಸಲ್ಪಟ್ಟ **ಆ೩, ಏ೩** ಅಕ್ಷರಗಳು **ಮೂರು ಮಾತ್ರಾಕಾಲದಲ್ಲಿ** ಉಚ್ಚರಿಸಲ್ಪಟ್ಟಿವೆ. ಹೀಗೆ ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳೇ **ಪ್ಲುತಸ್ವರಗಳು.**

**ವ್ಯಂಜನಗಳು**

**ವರ್ಗೀಯ ವ್ಯಂಜನಗಳು**

| ೧ | ೨ | ೩ | ೪ | ೫ | ವರ್ಗವಿವರ |
|---|---|---|---|---|---|
| ಕ್ | ಖ್ | ಗ್ | ಘ್ | ಙ್ | ೫ – ಕ ವರ್ಗ |
| ಚ್ | ಛ್ | ಜ್ | ಝ್ | ಞ್ | ೫ – ಚ ವರ್ಗ |
| ಟ್ | ಠ್ | ಡ್ | ಢ್ | ಣ್ | ೫ – ಟ ವರ್ಗ |
| ತ್ | ಥ್ | ದ್ | ಧ್ | ನ್ | ೫ – ತ ವರ್ಗ |
| ಪ್ | ಫ್ | ಬ್ | ಭ್ | ಮ್ | ೫ – ಪ ವರ್ಗ |

**ಅವರ್ಗೀಯ ವ್ಯಂಜನಗಳು**

**ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = ೯ ಅವರ್ಗೀಯ ವ್ಯಂಜನಗಳು**

ಕೊಟ್ಟಿರುವ **ಕ್** ದಿಂದ **ಮ್** ವರೆಗಿನ **೨೫** ಅಕ್ಷರಗಳನ್ನು ಉಚ್ಚರಿಸುವಾಗ ಅವು ಹುಟ್ಟುವ ಸ್ಥಳವನ್ನು ಆಧರಿಸಿ ಅವನ್ನು ೫ ವರ್ಗಗಳಾಗಿ ವಿಂಗಡಿಸಲಾಗಿದೆ. ಅವೇ **ವರ್ಗೀಯ ವ್ಯಂಜನಗಳು**. ಅವು ಇಂತಿವೆ:

- **ಕವರ್ಗದ** ಅಕ್ಷರಗಳು **ಕಂಠಭಾಗದಲ್ಲಿ** ಹುಟ್ಟುವುದರಿಂದ ಅವು **ಕಂಠ್ಯ ಅಕ್ಷರಗಳು**
- **ಚವರ್ಗದ** ಅಕ್ಷರಗಳು **ತಾಲುವಿನ (ದವಡೆಯ) ಸಹಾಯದಿಂದ** ಹುಟ್ಟುವುದರಿಂದ ಅವು **ತಾಲವ್ಯ ಅಕ್ಷರಗಳು**
- **ಟವರ್ಗದ** ಅಕ್ಷರಗಳು **ಮೂರ್ಧಭಾಗದಲ್ಲಿ** ಅಂದರೆ ನಾಲಿಗೆಯನ್ನು ಹಿಂದೆ ಚಾಚಿ ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿದಾಗ ಉಚ್ಚಾರಗೊಳ್ಳುವುದರಿಂದ ಅವು **ಮೂರ್ಧನ್ಯ ಅಕ್ಷರಗಳು**
- **ತವರ್ಗದ** ಅಕ್ಷರಗಳು **ಹಲ್ಲುಗಳ** ಬಳಿ ಹುಟ್ಟುವುದರಿಂದ ಅವು **ದಂತ್ಯ ಅಕ್ಷರಗಳು**
- **ಪವರ್ಗದ** ಅಕ್ಷರಗಳು **ತುಟಿಗಳ** ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಅವು **ಓಷ್ಠ್ಯ ಅಕ್ಷರಗಳು**

ಈ ವರ್ಗೀಯ ವ್ಯಂಜನಗಳನ್ನು **ಅಲ್ಪಪ್ರಾಣ, ಮಹಾಪ್ರಾಣ ಮತ್ತು ಅನುನಾಸಿಕ** ಅಕ್ಷರಗಳೆಂದು ವಿಭಾಗಿಸಲಾಗಿದೆ. **ಪ್ರಾಣ** ಎಂದರೆ **ಉಸಿರು** ಎಂದರ್ಥ. **ಕಡಿಮೆ ಪ್ರಾಣದಿಂದ** (ಉಸಿರಿನಿಂದ) ಉಚ್ಚರಿಸಲ್ಪಡುವ **ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್** ಅಕ್ಷರಗಳು ಅಂದರೆ ಪ್ರತಿ ವರ್ಗದ **ಒಂದು ಮತ್ತು ಮೂರನೆಯ** ಅಕ್ಷರಗಳು **ಅಲ್ಪಪ್ರಾಣ** ಅಕ್ಷರಗಳು. ಹೆಚ್ಚು ಪ್ರಾಣದಿಂದ (ಉಸಿರು) ಉಚ್ಚರಿಸಲ್ಪಡುವ **ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್** ಅಕ್ಷರಗಳು ಅಂದರೆ ಪ್ರತಿ ವರ್ಗದ **ಎರಡು ಮತ್ತು ನಾಲ್ಕನೆಯ** ಅಕ್ಷರಗಳು **ಮಹಾಪ್ರಾಣ** ಅಕ್ಷರಗಳು. **ಮೂಗಿನ** (ನಾಸಿಕದ) ಸಹಾಯದಿಂದ ಉಚ್ಚರಿಸಲ್ಪಡುವ **ಙ್ ಞ್ ಣ್ ನ್ ಮ್** ಅಕ್ಷರಗಳು ಅಂದರೆ ವರ್ಗದ **ಕೊನೆಯ** ಅಕ್ಷರಗಳು **ಅನುನಾಸಿಕ** ಅಕ್ಷರಗಳು. ಉಳಿದ **ಒಂಬತ್ತು ಅಕ್ಷರಗಳು** (**ಯ್** ದಿಂದ **ಳ್** ವರೆಗಿನ) ಬೇರೆ ಬೇರೆ ಸ್ಥಳಗಳಲ್ಲಿ ಹುಟ್ಟುವುದರಿಂದ ವರ್ಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ. ಹಾಗಾಗಿ ಅವು **ಅವರ್ಗೀಯ ವ್ಯಂಜನಗಳು**.

©KTBS Not to be republished

**ಯೋಗವಾಹಗಳು**

**ಅನುಸ್ವಾರ (ಂ), ವಿಸರ್ಗ(ಃ)**

**ಯೋಗ** ಎಂದರೆ **ಕೂಡು, ವಾಹ** ಎಂದರೆ **ಹೋಗುವ** ಎಂದರ್ಥ. **ಯೋಗವಾಹ** ಎಂದರೆ **ಕೂಡಿಹೋಗುವ** (ಕೂಡಿಕೊಂಡಿರುವ)ಅಂದರೆ ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರ ಎಂದರ್ಥ.

**ಯೋಗವಾಹಗಳು ಎರಡು**

೧. ಂ – **ಅನುಸ್ವಾರ** (ಒಂದು ಅಕ್ಷರಗಾತ್ರದ ಒಂದು ಸೊನ್ನೆ)

೨. ಃ – **ವಿಸರ್ಗ** (ಎರಡು ಸಣ್ಣ ಸೊನ್ನೆಗಳು ಒಂದರ ಕೆಳಗೆ ಒಂದರಂತೆ ಒಂದು ಅಕ್ಷರಗಾತ್ರದಲ್ಲಿ)

**ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು.**

**ವರ್ಣಮಾಲೆ**

- ಸ್ವರ–೧೩
  - ಹ್ರಸ್ವ: ಅ, ಇ, ಉ, ಋ, ಎ, ಒ
  - ದೀರ್ಘ: ಆ, ಈ, ಊ, ಏ, ಓ, ಐ, ಔ
- ವ್ಯಂಜನ–೩೪
  - ವರ್ಗೀಯ–೨೫
    - ಅಲ್ಪಪ್ರಾಣ: ಕ್, ಚ್, ಟ್, ತ್, ಪ್, ಗ್, ಜ್, ಡ್, ದ್, ಬ್
    - ಮಹಾಪ್ರಾಣ: ಖ್, ಛ್, ಠ್, ಥ್, ಫ್, ಘ್, ಝ್, ಢ್, ಧ್, ಭ್
    - ಅನುನಾಸಿಕ: ಙ್, ಞ್, ಣ್, ನ್, ಮ್
  - ಅವರ್ಗೀಯ–೯: ಯ್, ರ್, ಲ್, ವ್, ಶ್, ಷ್, ಸ್, ಹ್, ಳ್
- ಯೋಗವಾಹ–೨
  - ಅನುಸ್ವಾರ: ಂ
  - ವಿಸರ್ಗ: ಃ

**ಒಟ್ಟು ಅಕ್ಷರಗಳು–೪೯**

©KTBS Not to be republished

## ● ಅಭ್ಯಾಸ – ಅರಿವು

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ? ಅವುಗಳನ್ನು ಹೇಗೆ ವರ್ಗೀಕರಿಸುವಿರಿ? ವಿವರಿಸಿ

೨. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ

೩. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ

೪. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳನ್ನು ತಿಳಿಸಿ

೫. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳನ್ನು ಪಟ್ಟಿಮಾಡಿ

## ● ಪ್ರಾಯೋಗಿಕ ಭಾಷಾಭ್ಯಾಸ

**೧. ಕೊಟ್ಟಿರುವ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ**

ಅಬ್ದುಲ್ ಅವನು ಇಪ್ಪತ್ತು ಆದರೂ ಅವನನ್ನು ಇತ್ಯಾದಿ

ಇರಲಿ ಏಕೆಂದರೆ ಓಡಿಹೋದ ಈಗ ಏನೂ

**೨. ಕೊಟ್ಟಿರುವ ಪದಗಳಲ್ಲಿರುವ ಮಹಾಪ್ರಾಣಾಕ್ಷರಗಳನ್ನು ಬರೆಯಿರಿ**

ಧನವಂತ ರಥ ಘನತೆ ಧರ್ಮ ಮುಖ್ಯ

ಭಕ್ಷ್ಯ ಹಠ ಪಾಠ ಹಸನ್ಮುಖಿ ಫಲ

**೩. ಕೊಟ್ಟಿರುವ ಪದಗಳಲ್ಲಿರುವ ಅವರ್ಗೀಯ ವ್ಯಂಜನಗಳನ್ನು ಬರೆಯಿರಿ**

ಅವನ ಇಂತಹ ಅದರ ಒಳಗೆ ಕುಶಲ

ಹಬ್ಬ ಬಹಳ ತಲ ಸಮಯ ಕಾಲ

### ಹೆಚ್ಚಿನ ಓದು

**ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರ **ನಮ್ಮ ಊರಿನ ರಸಿಕರು** ಕೃತಿಯಲ್ಲಿ ಬರುವ ಶಾಲುಸಾಬಿಯ ವಿಚಾರವನ್ನು ಓದಿ ತಿಳಿಯಿರಿ.

✦ ✦ ✦ ✦ ✦

© KTBS Not to be republished

## ಗದ್ಯಪಾಠ –೨

# ಪರಿಸರ ಸಮತೋಲನ

[ವೈಜ್ಞಾನಿಕ]

– ಕೃಷ್ಣಾನಂದ ಕಾಮತ್

**ಅರ್ಥೈಸಿ – ಓದಿ**

| | | | | |
|---|---|---|---|---|
| ಆಹಾರ–ಆಚ್ಛಾದನ | ಪರ್ಣ | ಭೂಜಲ–ಪ್ರದೇಶ | ನಿರ್ನಾಮ | ಹೌಹಾರು |
| ಹಣ್ಣು–ಹಂಪಲು | ಸಂರಕ್ಷಣೆ | ಆಗು–ಹೋಗು | ಕಂಟಕಪ್ರಾಯ | ವಿಧಾಯಕ |

**ನಿಗದಿತ ಮೂಲ ವೈಜ್ಞಾನಿಕ – ಗದ್ಯ**



ಭೂಮಂಡಲದಲ್ಲಿ ಪ್ರತಿಯೊಂದು ಪ್ರಾಣಿಯೂ ತನಗಿರುವ ಸಂತಾನ ಸಾಮರ್ಥ್ಯವನ್ನು ಬಳಸಿದ್ದರೆ, ಇಲ್ಲವೇ ಅವುಗಳ ಮರಿಗಳೆಲ್ಲಾ ಬದುಕಿ ಇರುವಂತಾಗಿದ್ದರೆ, ಯಾವ ಪ್ರಾಣಿಗೂ ಹೊಟ್ಟೆತುಂಬ ಆಹಾರ ಸಿಗುತ್ತಿರಲಿಲ್ಲ. ಐದು ವರ್ಷಕ್ಕೊಮ್ಮೆ ಒಂದು ಮರಿಗೆ ಜನ್ಮಕೊಡುವ ಆನೆ, ಸಂತತಿ ನಿರ್ಮಿತಿಯಲ್ಲಿ ಅತಿ ಮಂದಗತಿಯದು ಎಂದು ಪರಿಗಣಿಸಿದೆ. ಹೀಗಿದ್ದರೂ ಆನೆಯ ಎಲ್ಲ ಮರಿಗಳೂ ಸರಿಯಾಗಿ ಬೆಳೆದು ಐದು ವರ್ಷಕ್ಕೆ ಒಂದು ಮರಿಗೆ ಜನ್ಮ ಕೊಡುತ್ತಾ ಹೋದರೆ ಒಂದೇ ಶತಮಾನದಲ್ಲಿ ಜಗತ್ತೆಲ್ಲಾ ಆನೆಮಯವಾಗಿ ಹೋಗುತ್ತಿತ್ತು. ಪ್ರತಿಯೊಂದು ಪ್ರಾಣಿಯೂ ತನ್ನ ವಂಶಜರೂ ಬಾಳಬೇಕೆಂದು ಹೆಚ್ಚೆಚ್ಚು ಪ್ರಮಾಣದಲ್ಲಿ ಸಂತಾನ ಅಭಿವೃದ್ಧಿ ಮಾಡುತ್ತದೆ. ಇದರಿಂದಾಗಿ ಆಹಾರ–ಆಚ್ಛಾದನಗಳಿಗಾಗಿ ಸ್ಪರ್ಧೆ ಏರ್ಪಡುವುದು.

ಯೋಗ್ಯತೆಯುಳ್ಳ ವರ್ಗ ಬದುಕಿ ಬಾಳಿದರೆ ಅಯೋಗ್ಯ ಗುಂಪು ನಿರ್ನಾಮವಾಗುತ್ತದೆ. ಉದಾಹರಣೆಗೆ ಒಂದು ಪ್ರದೇಶದಲ್ಲಿ ಕುದುರೆ, ಒಂಟೆ, ಜಿರಾಫೆಗಳು ಬದುಕುತ್ತವೆ ಎಂದಿಟ್ಟುಕೊಳ್ಳೋಣ. ಈ ಮೂರೂ ಪ್ರಾಣಿಗಳು ಹೆಚ್ಚಿನ ಸಂತಾನ ನಿರ್ಮಾಣ ಮಾಡಿದ್ದರಿಂದ ಅಲ್ಲಿದ್ದ ಆಹಾರ ಕಡಿಮೆಯಾಗುತ್ತಾ ಹೋಗುತ್ತದೆ. ಐದಾರು ಅಡಿ ಎತ್ತರದಲ್ಲಿದ್ದ ಪರ್ಣ(ಎಲೆ)ಗಳು ತೀರಿದವೆಂದರೆ ಕುದುರೆಗಳು ಹಸಿವೆಯಿಂದ



© KTBS Not to be republished

ಬಳಲಿ ಸಾಯುತ್ತವೆ. ಆದರೆ ಉದ್ದಕತ್ತುಳ್ಳ ಒಂಟೆ–ಜಿರಾಫೆಗಳು ಎಂಟು–ಹತ್ತು ಅಡಿ ಎತ್ತರದಲ್ಲಿರುವ ಪರ್ಣಗಳನ್ನು ತಿಂದು ಬದುಕುತ್ತವೆ. ಅಲ್ಲಿಯ ಆಹಾರ ತೀರಲು ಒಂಟೆಗೂ ಉಪವಾಸ ಕಟ್ಟಿಟ್ಟದ್ದೇ. ಆದರೆ ಜಿರಾಫೆ ಹನ್ನೆರಡು ಅಡಿಗೂ ಎತ್ತರದಲ್ಲಿದ್ದ ಪರ್ಣ ತಿನ್ನುವಷ್ಟು ಉದ್ದ ಕಾಲು, ಗೋಣು ಪಡೆದಿದ್ದರಿಂದ ಆಹಾರ–ಸ್ಪರ್ಧೆಯಲ್ಲಿ ಕೊನೆಗೆ ಇದೇ ವರ್ಗ ಯಶಸ್ವಿಯಾಗುವುದೆಂದು ಒಂದು ಸಿದ್ಧಾಂತ. ಈ ಶತಮಾನದಲ್ಲಿ ಪ್ರಾಣಿ–ಪರಿಸರಗಳ ಸಂಬಂಧ ಕೂಲಂಕಷವಾಗಿ ಅಭ್ಯಸಿಸಿದ್ದರಿಂದ ಮಾನವನು ಅದರ ಸಂಪೂರ್ಣ ಲಾಭ ಪಡೆದುಕೊಳ್ಳಬಹುದು.

ಜಿರಾಫೆ ವರ್ಗದಲ್ಲಿಯೂ ಅತಿಸಂತಾನ ಇರುವುದರಿಂದ ಇವುಗಳಲ್ಲಿಯೂ ಸ್ಪರ್ಧೆ ಇದ್ದೇ ಇರುತ್ತದೆ. ಇಲ್ಲಿ ಜಿರಾಫೆಗಳಿಗೂ ಉದ್ದಕಾಲು, ಉದ್ದಗೋಣು ಇರುವುದರಿಂದ ಅವುಗಳಲ್ಲಿಯ ಸ್ಪರ್ಧೆ, ಕುದುರೆ, ಒಂಟೆಗಳೊಡನೆ ಇರುವ ಸ್ಪರ್ಧೆಗಿಂತ ತೀಕ್ಷ್ಣವಾಗಿರುತ್ತದೆ. ಆದ್ದರಿಂದ ಜಿರಾಫೆಗಳಲ್ಲಿಯೇ ಸ್ವಲ್ಪ ಉದ್ದಕಾಲು, ಗೋಣುಗಳು ಇದ್ದವುಗಳ ವಂಶ ಮುಂದುವರಿಯುವುದೆಂದೂ ಉಳಿದವು ಅಳಿದು ಹೋಗುವುದೆಂದೂ ನಂಬಿದೆ. ಆದರೆ ಆ ಪಿತೃಗಳ ಸಾಧನೆ ವಂಶ ಪರಂಪರಾಗತವಾಗಿ ಮಕ್ಕಳಿಗೆ ಬರುತ್ತದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಶತಮಾನಗಳಿಂದ ಕನ್ನಡಿಗರು ವೀಳ್ಯ ಚರ್ವಣದಿಂದ ತುಟಿಗಳನ್ನು ಕೆಂಪು ಮಾಡಿಕೊಂಡರೂ ಅವರ ಮಕ್ಕಳು ಕೆಂದುಟಿ ಪಡೆದೇನು ಹುಟ್ಟುವುದಿಲ್ಲ. ಅದರಂತೆ ಹಿಂದಿನ ಚೀನೀ ಹೆಂಗಳೆಯರು ಶತಮಾನಗಳಿಂದ ತಮ್ಮ ಕಾಲುಗಳನ್ನು ಕೃತಕವಾಗಿ ಕಿರಿದು ಮಾಡಿಕೊಳ್ಳುತ್ತ ಬಂದಿದ್ದರೂ ಅವರ ಮಕ್ಕಳ ಕಾಲು ಕಿರಿದಾಗಲೇ ಇಲ್ಲ! ಇದರಂತೆ ಪ್ರಯೋಗಾಲಯದಲ್ಲಿ ಇಲಿಗಳ ನೂರು ತಲೆಮಾರಿನವರೆಗೆ ಬಾಲಕಡಿದರೂ ಯಾವ ತಲೆಮಾರಿನ ಇಲಿಗಳೂ ಬಾಲವಿಲ್ಲದೆ ಜನಿಸಲೇ ಇಲ್ಲ, ಬಹಳ ಆಳವಾದ ಸಂಶೋಧನೆಯ ಅನಂತರ ಇದಕ್ಕೆ ಉತ್ತರ ಕಂಡುಹಿಡಿಯಲಾಗಿದೆ. ಪ್ರತಿಯೊಂದು ಪ್ರಾಣಿಯ ವ್ಯಕ್ತಿತ್ವವನ್ನು ಅದರ ಪ್ರತಿಯೊಂದು ಜೀವಾಣುವಿನಲ್ಲಿ ಇರುವ ಕ್ರೋಮೋಜ಼ೋಮುಗಳು ನಿಯಂತ್ರಿಸುತ್ತವೆ.

ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ–ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತರೆ ಮಾತ್ರ ಬೆಳವಣಿಗೆ ಹೊಂದುತ್ತವೆ. ವಿಪುಲವಾದ ನೀರು, ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ, ಬಯಲು ಪ್ರದೇಶದಲ್ಲಿ ಜಾಲಿ ಗಿಡಗಳೇ ವೃಕ್ಷರಾಜಿ ಎನಿಸಿಕೊಳ್ಳುವುವು. ಇವೇ ಬೀಜಗಳು ಮರುಭೂಮಿ, ರಸ್ತೆ, ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗೆ ಅವಕಾಶವೇ ದೊರೆಯುವುದಿಲ್ಲವಾದ್ದರಿಂದ ನಾಶವಾಗುವುವು.

ಮಾನವ ತನ್ನ ಸ್ವಾರ್ಥಕ್ಕಾಗಿ ಎಷ್ಟೋ ಪ್ರಾಣಿಗಳನ್ನು ನಿರ್ನಾಮ ಮಾಡಿದ್ದಾನೆ, ಮಾಡುತ್ತಿದ್ದಾನೆ. ಜೀವಿತ ಪ್ರಾಣಿಗಳಲ್ಲಿಯೇ ದೊಡ್ಡದು ಎನಿಸಿಕೊಂಡ ದೇಹ–ಆಕಾರ ದೊಡ್ಡದಿದ್ದರೂ ಅತಿ ಸಣ್ಣದಾಗಿರುವ ಸಸ್ಯಾಹಾರವನ್ನೇ ಭಕ್ಷಿಸುವ ಮಾನವನಿಗೆ ಯಾವ ರೀತಿಯಿಂದಲೂ ಕೇಡು ಮಾಡದ ತಿಮಿಂಗಿಲಗಳನ್ನು ಅದರ ಕೊಬ್ಬಿಗಾಗಿ ಬೇಟೆಯಾಡಿ ಇಂದು ಅದರ ಜಾತಿಯೇ ನಿರ್ನಾಮವಾಗುವಷ್ಟು ಕಡಿಮೆ ತಿಮಿಂಗಿಲಗಳು ಉಳಿದಿವೆ. ಮೊಸಳೆಗಳ ಚರ್ಮಕ್ಕೆ ಪಾಶ್ಚಾತ್ಯ ಮಹಿಳೆಯರು ಮನಸೋತಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಮೊಸಳೆಗಳನ್ನು ಅತಿಯಾಗಿ ಬೇಟೆಯಾಡಿ ಇಂದು ಕರ್ನಾಟಕದ ಬನ್ನೇರು ಘಟ್ಟದಲ್ಲಿ ಮೊಸಳೆಗಳಿಗಾಗಿಯೇ

©KTBS Not to be republished

ಮಾಡಿದ ಆಲಯದಲ್ಲಿ ಹೆಚ್ಚಿನ ದಕ್ಷತೆಯಿಂದ ಪಾಲನೆ–ಪೋಷಣೆ ಮಾಡುವ ಪ್ರಸಂಗ ಬರಲ್ಲಿಲವೇ? ಅದರಂತೆ ಹುಲಿ, ಸಿಂಹ, ಚಿರತೆಗಳ ಮೈದೊಗಲು, ಅಪಾರ ಧನ ತರುವುದರಿಂದ ಅವುಗಳನ್ನು ಹೆಚ್ಚಾಗಿ ಬೇಟೆಯಾಡಿದ್ದರಿಂದ ಅವುಗಳ ಸಂತತಿ ಕಡಿಮೆಯಾಗಿದೆ. ಹಾವುಗಳನ್ನಂತೂ ಆಜನ್ಮ ವೈರಿಗಳಂತೆ ಭಾವಿಸಿ ಸಿಕ್ಕಲ್ಲಿ ಕೊಂದು ಕೆಲವು ಜಾತಿಯ ಹಾವುಗಳು ಇಂದು ನಶಿಸಿ ಹೋಗಿದ್ದರಿಂದ ವಿಷಕಾರಿ ಹಾವುಗಳನ್ನು ಸಾಕುವ ಕೇಂದ್ರಗಳನ್ನು ಮುಂಬಯಿ ಮತ್ತು ಮದ್ರಾಸಿನಲ್ಲಿ ಪ್ರಾರಂಭಿಸಬೇಕಾದ ಪ್ರಸಂಗ ಬಂತು.


ಹೊಲಗಳಲ್ಲಿ ಹಾವುಗಳು ಇಲಿಗಳನ್ನು ತಿಂದು ಜೀವಿಸುತ್ತಿದ್ದವು. ಅವುಗಳನ್ನು ನಾಶ ಮಾಡಿದ್ದರಿಂದ ವಿನಾಯಕನ–ವಾಹನಗಳು ಅತಿಯಾಗಿ ಬೆಳೆದು ಗುಲ್ಬರ್ಗಾ ಜಿಲ್ಲೆಯಲ್ಲಿ ಮಾನವನ ಆಹಾರವನ್ನೇ ಭಕ್ಷಿಸಿ ಅವನು ಹೌಹಾರುವಂತೆ ಮಾಡಿವೆ. ಟ್ರಾಂವ್ ಟ್ರಾಂವ್ ಎಂದು ಹಾಡಿ ಮಳೆರಾಯನನ್ನು ಬರ ಮಾಡಿಕೊಳ್ಳುವ ಕಪ್ಪೆಯರಸನ ಮೇಲೆ ಮಾನವನು ಕೊಲೆಗಡುಕನ ಕತ್ತಿಯನ್ನೆತ್ತಿದ್ದಾನೆ. ಅವುಗಳ ಕಾಲುಗಳಿಗೆ ಪಾಶ್ಚಾತ್ಯ ದೇಶದಲ್ಲಿ ಬೇಡಿಕೆ ಇರುವುದರಿಂದ ಅವುಗಳನ್ನು ಸಿಕ್ಕಲ್ಲಿ ಹಿಡಿದು ಕೊಂದು ಕಿಸೆ ತುಂಬಿಸಿಕೊಳ್ಳುತ್ತಿದ್ದಾನೆ. ಮಾನವನು ಬೆಳೆದ ಆಹಾರ – ಧಾನ್ಯದಲ್ಲಿ ಶೇಕಡ ೧೦–೧೫ರಷ್ಟು ಬೆಳೆಗಳನ್ನು ಕ್ರಿಮಿಕೀಟಗಳು ನಾಶ ಮಾಡುತ್ತವೆ ಎಂದು ಲೆಕ್ಕಾಚಾರ ಹಾಕಿದ್ದಾರೆ. ಒಂದು ಕಪ್ಪೆ ದಿನವೊಂದಕ್ಕೆ ೧೦೦–೨೦೦ತನಕ ಕ್ರಿಮಿಕೀಟಗಳನ್ನು ಭಕ್ಷಿಸಿ ಎಷ್ಟೋ ಆಹಾರ–ಧಾನ್ಯವನ್ನು ಸಂರಕ್ಷಿಸುತ್ತದೆ. ಈಗ ಅವುಗಳ ಹತ್ಯೆಯನ್ನು ಪ್ರಾರಂಭಿಸಿದರೆ ಅನ್ನದೇವರು ಮೆಚ್ಚುವನೇ?.

ಒಂದು ದಟ್ಟವಾದ ಕಾಡನ್ನು ಮಾನವ ಕಡಿದನೆಂದು ಇಟ್ಟುಕೊಳ್ಳೋಣ. ಅಲ್ಲಿದ್ದ ಹಕ್ಕಿಗಳು ಬೇರೆ ತಾಣ ಹುಡುಕಿಕೊಳ್ಳಬೇಕಾಗುತ್ತದೆ. ಮೇವು ಇಲ್ಲದ್ದರಿಂದ ಜಿಗರೆಗಳು ಮಾಯವಾಗುತ್ತವೆ. ಜಿಗರೆಗಳನ್ನು ಬೇಟೆಯಾಡಿ ಜೀವಿಸಿದ್ದ ಹುಲಿ, ಚಿರತೆ, ಸಿಂಹಗಳೂ ತೊಲಗಬೇಕಾಗುತ್ತದೆ. ಅವಿತುಕೊಳ್ಳಲು ಮರೆ ಇಲ್ಲದ್ದರಿಂದ ತೋಳ–ಕರಡಿಗಳು ಓಡಿ ಹೋಗುತ್ತವೆ. ಹಣ್ಣು–ಹಂಪಲುಗಳು ಸಿಗದಿದ್ದರಿಂದ ಇಣಚಿ–ಕಣ್ಣು ಕಪ್ಪಡಿಗಳು ಪ್ರಯಾಣ ಬೆಳೆಸುತ್ತವೆ. ಬೋಳು ಮಾಡಿದ ಕಾಡಿನಲ್ಲಿ ವಾಸಿಸಿ ಏನು ಪ್ರಯೋಜನವೆಂದು ಇಲಿಗಳೂ ಹೊರಡುತ್ತವೆ. ಇಲಿಗಳನ್ನು ನಂಬಿದ್ದ ಹಾವೂ ಹಿಂಬಾಲಿಸುತ್ತದೆ. ಕೊರೆಯುವ ಚಳಿ, ಸುಡುವ ಬಿಸಿಲು, ಹರಿವ ನೀರಿಗೆ ನೆಲದೊಳಗಿನ ಪ್ರಾಣಿಗಳು ಸಾವಿಗೀಡಾಗುತ್ತವೆ. ಇಂತಹ ಭೂಮಿಯನ್ನು ಹೊಲಗಳಿಗೆ ಬಳಸಿದರೆ ಅಲ್ಲಿ ಹೊಸ ಪ್ರಾಣಿಗಳು ಬೀಡು ಬಿಡುವುವು.

ಇದರಂತೆ ಮಾನವನು ವಿಮಾನ, ರೈಲ್ವೆ, ಮೋಟಾರು ನಿಲ್ದಾಣಗಳನ್ನು ಕಟ್ಟುವುದರಿಂದ, ಹೆದ್ದಾರಿಗಳನ್ನು ಮಾಡುವುದರಿಂದ ಬಹಳ ಕಾಲದಿಂದ ಇದ್ದ ಸರೋವರ, ಕೆರೆ, ಹೊಂಡಗಳನ್ನು ಬೇರೆಯೇ ಕೆಲಸಕ್ಕೆ ಬಳಸುವುದು ವಾಡಿಕೆ, ಆದರಿಂದ ಕಾರಖಾನೆ–ಊರುಗಳನ್ನು ಬೆಳೆಸುವುದಕ್ಕೆ ಕಾಡು–ಗಿಡ–ಗಂಟಿಗಳನ್ನು ಕಡಿಯುವುದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂಬುದು ಜನ ಸಾಮಾನ್ಯರಿಗೆ ಅರಿವಾಗುವುದೇ ಇಲ್ಲ. ಆದ್ದರಿಂದ ಅಧಿಕಾರದಲ್ಲಿದ್ದವರು, ಅದಕ್ಕಿಂತ ಮಿಗಿಲಾಗಿ ಮುಂದಿನ ಪೀಳಿಗೆಗೆ ಇಂದೇ ಯೋಜನೆಯನ್ನು ತಯಾರಿಸುವ ವಿಜ್ಞಾನಿಗಳು ನಿಸರ್ಗದ ಆಗು–ಹೋಗುಗಳನ್ನು ವಿವರವಾಗಿ ಅಭ್ಯಸಿಸಿ ಮಾನವನ ಚಟುವಟಿಕೆ ಮಾನವನಿಗೇ ಕಂಟಕಪ್ರಾಯವಾಗದಂತೆ ಮುನ್ನೆಚ್ಚರಿಕೆ ವಹಿಸಿ, ವಿಧಾಯಕವಾಗಿ ಕಾರ್ಯಕ್ರಮಗಳನ್ನು ಕೈಗೊಂಡರೆ ಮಾತ್ರ ಈ ಹಿಂದೆ ಮಾಡಿದ ತಪ್ಪುಗಳೆಲ್ಲಾ ಮುಂದೆಯೂ ಆಗುವುದು ನಿಂತೀತು.

© KTBS Not to be republished

## ಕರ್ತೃ – ಭಾವ – ಆಕರ



**ಡಾ. ಕೃಷ್ಣಾನಂದ ಕಾಮತ್** ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ೨೯.೦೯.೧೯೩೪ ರಲ್ಲಿ ಜನಿಸಿದರು. ೧೯೫೯ ರಲ್ಲಿ ಎಂ.ಎಸ್ಸಿ. ಪದವಿಯಲ್ಲಿ ಉತ್ತೀರ್ಣರಾದ ಕಾಮತ್ ಅವರು ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿದರು. ೧೯೬೧ ರಲ್ಲಿ ಡಾಕ್ಟರೇಟ್ ಪದವಿ ಪಡೆದರು. ಉದಯಪುರ ಮತ್ತು ಪಶ್ಚಿಮ ಬಂಗಾಳದ ಪ್ಲಾಸಿಯಲ್ಲಿ ಕಾಮನ್ ವೆಲ್ತ್ ಇನ್ಸ್‌ಟ್ಯೂಟ್ ಆಫ್ ಬಯಲಾಜಿಕಲ್ ಕಂಟ್ರೋಲ್ ಸಂಸ್ಥೆಯ ಕೀಟ ಸಂಶೋಧನಾಧಿಕಾರಿ ಮತ್ತು ಮುಖ್ಯಸ್ಥರಾಗಿ ಸೇವೆಸಲ್ಲಿಸಿರುವರು. ಬೆಂಗಳೂರಿನಲ್ಲಿ ವೈಜ್ಞಾನಿಕ ಛಾಯಾಗ್ರಹಣ ಲ್ಯಾಬೊರೇಟರಿ ಪ್ರಾರಂಭಿಸಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಚಿತ್ರಗಳ ಛಾಯಾಗ್ರಹಣ ಮಾಡಿದ್ದಾರೆ. ಡಾ. ಕೃಷ್ಣಾನಂದ ಕಾಮತ್ ಅವರ ಕೃತಿಗಳೆಂದರೆ – **ನಾನೂ ಅಮೆರಿಕಾಗೆ ಹೋಗಿದ್ದೆ, ಪ್ರಾಣಿ ಪರಿಸರ, ಕೀಟ ಜಗತ್ತು, ಪಶು ಪಕ್ಷಿ ಪ್ರಪಂಚ, ಸಸ್ಯ ಪರಿಸರ, ಇರುವೆಯ ಇರವು, ಸರ್ಪ ಸಂಕುಲ ಮತ್ತು ಕಾವಿ ಕಲೆ** ಇತ್ಯಾದಿ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೨೦.೦೨. ೨೦೦೨ ರಂದು ಇಹಲೋಕ ತ್ಯಜಿಸಿದರು.

* * *

ಪ್ರಕೃತಿ ಒಂದು ಅದ್ಭುತ ಸೃಷ್ಟಿ. ಪ್ರಕೃತಿಯಲ್ಲಿ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳು ಒಂದು ಮಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವಾಗಿರುತ್ತದೆ, ಇಲ್ಲದಿದ್ದರೆ ಪರಿಸರದಲ್ಲಿ ಅಸಮತೋಲನವುಂಟಾಗಿ ಜೀವರಾಶಿಗಳಿಗೆಲ್ಲ ಅಪಾಯ ಕಟ್ಟಿಟ್ಟದ್ದು. ಎಲ್ಲಾ ಪ್ರಾಣಿ ಪಕ್ಷಿಗಳು ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತವೆ. ಜನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಅವು ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿ, ಶಕ್ತಿಯುತವಾದವು ಉಳಿಯುತ್ತವೆ. ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ. ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ, ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶಮಾಡುತ್ತಿದ್ದಾನೆ. ಜನಸಂಖ್ಯಾ ಏರಿಕೆ, ಕೈಗಾರಿಕೀಕರಣ, ನಗರೀಕರಣ, ಆಧುನೀಕರಣಗಳ ಭರಾಟೆಯಲ್ಲಿ ಸುಂದರ ಸಸ್ಯ – ಪ್ರಾಣಿ – ಪಕ್ಷಿಸಂಕುಲ ನಶಿಸಿ ಹೋಗುತ್ತಿದೆ. ನಾವು ಬದುಕಿ ಇತರರನ್ನು ಬದುಕಲು ಬಿಡಬೇಕು. ನಾಳಿನ ಸುಂದರ ಬದುಕನ್ನು ಮುಂದಿನ ಪೀಳಿಗೆ ಕಾಣಬೇಕೆಂಬುದು ಎಲ್ಲರ ಸದಾಶಯವಾಗಬೇಕು. ಇದೇ ಪಾಠದ ಮುಖ್ಯ ಭಾವ.

* * *

ಪ್ರಕೃತ ಗದ್ಯಭಾಗವನ್ನು **ಡಾ. ಕೃಷ್ಣಾನಂದ ಕಾಮತ್** ಅವರ **ಪ್ರಾಣಿ ಪರಿಸರ** ಕೃತಿ (ಪುಟ ೨೭–೩೩) ಯಿಂದ ಆಯ್ದು ಸಂಪಾದಿಸಲಾಗಿದೆ.

©KTBS Not to be republished

## ಪದ – ಗದ್ಯಾರ್ಥ

ಆಚ್ಛಾದನ – ಬಟ್ಟೆ, ವಸ್ತ್ರ ; ಪರ್ಣ – ಎಲೆ ; ಗೋಣು – ಕುತ್ತಿಗೆ ; ಪಿತೃ – ತಂದೆ ; ವೀಳ್ಯ – ತಾಂಬೂಲ (ಎಲೆ, ಅಡಿಕೆ) ; ಚರ್ವಣ – ಅಗಿದು ತಿನ್ನುವುದು ; ಶತಮಾನ – ನೂರು ವರ್ಷಗಳು; ಕ್ರೋಮೋಝೋಮು – ವರ್ಣತಂತು ; ರಾಜಿ – ಗುಂಪು; ವಿಪುಲ – ಹೆಚ್ಚು, ಜಾಸ್ತಿ ; ಆರ್ದ್ರತೆ – ನೀರಿನ ಅಂಶ, ತೇವಾಂಶ ; ಪಾಶ್ಚಾತ್ಯ – ಪಶ್ಚಿಮದೇಶ ; ಕಿಸೆ– ಜೇಬು ; ತಾಣ – ಜಾಗ, ಸ್ಥಳ ; ಚಿಗರೆ – ಜಿಂಕೆ; ಅವಿತು – ಬಚ್ಚಿಟ್ಟುಕೊಳ್ಳುವುದು ; ಕಣ್ಣು ಕಪ್ಪಡಿ – ಬಾವಲಿ ; ವಿಧಾಯಕ – ರಚನಾತ್ಮಕ.

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ಆನೆ ಎಷ್ಟು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ?

೨. ಪ್ರಾಣಿ – ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ?

೩. ಬೀಜ ಪ್ರಸರಣ ಯಾವುದರ ಮೂಲಕ ನಡೆಯುತ್ತದೆ?

೪. ದಟ್ಟವಾದ ಕಾಡು ಎಲ್ಲಿ ಬೆಳೆಯುತ್ತದೆ ?

೫. ಎಲ್ಲಿ ಬಿದ್ದ ಬೀಜಗಳು ನಾಶವಾಗುತ್ತವೆ?

೬. ಪ್ರಾಣಿಗಳಲ್ಲಿಯೇ ದೊಡ್ಡ ಪ್ರಾಣಿ ಯಾವುದು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ಜಿರಾಫೆ ಹೇಗೆ ಆಹಾರ ಸ್ಪರ್ಧೆಯಲ್ಲಿ ಯಶಸ್ವಿಯಾಗುತ್ತದೆ?

೨. ವನ್ಯಜೀವಿ ಸಂರಕ್ಷಣೆಯನ್ನು ಹೇಗೆ ಮಾಡುತ್ತಿದ್ದಾರೆ?

೩. ಸರೋವರ, ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ ಏಕೆ?

೪. ಯೋಜನೆ ತಯಾರಿಸುವ ವಿಜ್ಞಾನಿಗಳು ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿ**

೧. ಮೊಸಳೆ, ಹಾವುಗಳ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.

೨. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು?

©KTBS Not to be republished

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಬಿಟ್ಟ ಸ್ಥಳ ತುಂಬಿ**

೧. ಪ್ರಕೃತ ಗದ್ಯಭಾಗದ ಆಕರ ಕೃತಿ ______________

೨. ಯೋಗ್ಯತೆಯುಳ್ಳ ವರ್ಗ ಬದುಕಿ ಬಾಳಿದರೆ ಅಯೋಗ್ಯ ಗುಂಪು__________

೩. ಮೊಸಳೆಗಳ ಚರ್ಮಕ್ಕೆ ____________ ಸ್ತ್ರೀ ಮನಸೋತಿದ್ದಾಳೆ

೪. ಉದ್ದಕಾಲು, ಗೋಣು ಇರುವ ಪ್ರಾಣಿ ____________

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ಗುಣಿತಾಕ್ಷರ ಪರಿಚಯಾತ್ಮಕ ವಿವರ**

**ದ್ ವ್ ರ್** ವ್ಯಂಜನಾಕ್ಷರಗಳನ್ನು ಸೇರಿಸಿ ಬರೆದರೆ ಪದ ರಚನೆಯಾಗುವುದಿಲ್ಲ. ಅದರ ಬದಲಿಗೆ **ದ್** + **ಏ** = **ದೇ, ವ್** + **ಅ** = **ವ, ರ್** + **ಉ** = **ರು** ಈ ರೀತಿ ಸ್ವರಾಕ್ಷರಗಳನ್ನು ಸೇರಿಸಿ ಬರೆದರೆ ಅರ್ಥಪೂರ್ಣವಾದ **ದೇವರು** ಎಂಬ ಪದ ರಚನೆ ಆಗುತ್ತದೆ. ಹೀಗೆ ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರವೇ **ಗುಣಿತಾಕ್ಷರ.** ಒಂದು ವ್ಯಂಜನಕ್ಕೆ **ಅ** ದಿಂದ **ಔ** ವರೆಗಿನ **೧೩ ಸ್ವರಗಳು** ಸೇರಿದರೆ **೧೩ ಗುಣಿತಾಕ್ಷರಗಳಾಗುತ್ತವೆ. ೩೪ ವ್ಯಂಜನಗಳಿಗೆ** ತಲಾ **೧೩ ಸ್ವರಾಕ್ಷರಗಳನ್ನು** ಸೇರಿಸುವುದರಿಂದ **೪೪೨ ಗುಣಿತಾಕ್ಷರಗಳನ್ನು** ರಚಿಸಬಹುದು. **ಈ ಗುಣಿತಾಕ್ಷರಗಳೇ ಕಾಗುಣಿತಅಕ್ಷರಗಳು**. ಅದೇ ರೀತಿ **ಯೋಗವಾಹಗಳನ್ನು** ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು.

**ಸಂಯುಕ್ತಾಕ್ಷರ**

**ಅಪ್ಪ ಅಮ್ಮ ಅಕ್ಷರ ಅಸ್ತ್ರ** ಮುಂತಾದ ಪದಗಳನ್ನು ಬಳಸುತ್ತೇವೆ. **ಅಪ್ಪ** ಪದದಲ್ಲಿ **ಅ ಪ್ ಪ್ ಅ** ಎಂಬ ನಾಲ್ಕು ಅಕ್ಷರಗಳಿವೆ. ಮೇಲ್ನೋಟಕ್ಕೆ ಎರಡೇ ಅಕ್ಷರಗಳು ಕಾಣುತ್ತವೆ. ಮೊದಲ ಅಕ್ಷರ ಸ್ವರಾಕ್ಷರ. ಎರಡನೆಯ ಅಕ್ಷರದಲ್ಲಿ **ಪ್ ಪ್ ಅ** ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ **ಎರಡು ವ್ಯಂಜನಗಳು** ಮತ್ತು **ಒಂದು ಸ್ವರಾಕ್ಷರ.** ಅದೇ ರೀತಿ **ಅಸ್ತ್ರ** ಪದದಲ್ಲಿ **ಅ ಸ್ ತ್ ರ್ ಅ** ಎಂಬ ಐದು ಅಕ್ಷರಗಳಿವೆ. ಈ ಪದದ ಎರಡನೆಯ ಅಕ್ಷರ **ಸ್ತ್ರ** ದಲ್ಲಿ **ಮೂರು ವ್ಯಂಜನ** ಮತ್ತು **ಒಂದು ಸ್ವರಾಕ್ಷರವಿದೆ.** ಹೀಗೆ – **ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ.** ಇದನ್ನು **ದ್ವಿತ್ವಾಕ್ಷರ/ಒತ್ತಕ್ಷರ** ಎಂತಲೂ ಕರೆಯುವರು. **ಸಂಯುಕ್ತಾಕ್ಷರದಲ್ಲಿ ಸಜಾತೀಯ ಹಾಗೂ ವಿಜಾತೀಯ** ಎಂಬೆರಡು ವಿಧಗಳಿವೆ.

© KTBS Not to be republished

**ಸಜಾತೀಯ ಸಂಯುಕ್ತಾಕ್ಷರ**

**ಅಪ್ಪ, ಅಮ್ಮ, ಲೆಕ್ಕ, ಕಗ್ಗ** ಪದಗಳನ್ನು ಗಮನಿಸಿದಾಗ ಇಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಆಯಾ ಜಾತಿಯ ಎರಡೆರಡು ವ್ಯಂಜನಗಳಿವೆ. ಹೀಗೆ – **ಒಂದೇ ಜಾತಿಯ ಎರಡು ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ಸಜಾತೀಯ ಸಂಯುಕ್ತಾಕ್ಷರ.**

**ವಿಜಾತೀಯ ಸಂಯುಕ್ತಾಕ್ಷರ**

**ಅಷ್ಟ, ಆರ್ಯ, ಅಸ್ತ್ರ** ಪದಗಳಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಬೇರೆ ಬೇರೆ ಜಾತಿಯ ವ್ಯಂಜನಗಳಿವೆ. ಹೀಗೆ – **ಬೇರೆ ಬೇರೆ ಜಾತಿಯ ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ವಿಜಾತೀಯ ಸಂಯುಕ್ತಾಕ್ಷರ.**

**ಪದಗಳು**

ಯಾವುದೇ ಭಾಷೆಯಾಗಲಿ ಅದು ತನ್ನ ಸುತ್ತಮುತ್ತಣ ಭಾಷೆಗಳ ಸಂಪರ್ಕದಿಂದಾಗಿ ಬೇರೆ ಭಾಷೆಗಳ ಪದಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಬೆಳೆಯುತ್ತದೆ. ಇದು ಭಾಷಿಕ ಸಹಜ ಕ್ರಿಯೆ.

**ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು.**

ಈ ವಾಕ್ಯ ಕನ್ನಡ ಭಾಷೆಯ ವಾಕ್ಯವಾದರೂ ಇಲ್ಲಿರುವ ಎಲ್ಲಾ ಪದಗಳು ಕನ್ನಡದವುಗಳಲ್ಲ. **ಮೋಟಾರು** ಪದ ಆಂಗ್ಲ ಭಾಷೆಯಿಂದಲೂ **ಜಬರ್ದಸ್ತ್** ಪದ ಹಿಂದಿ ಭಾಷೆಯಿಂದಲೂ **ಜೀವನ, ಮುಖ್ಯ** ಪದಗಳು **ಸಂಸ್ಕೃತ**ದಿಂದಲೂ ಬಂದ ಪದಗಳಾಗಿದ್ದು ಉಳಿದವು ಕನ್ನಡ ಪದಗಳು. ಹೀಗಾಗಿ ಕನ್ನಡ ಭಾಷೆಯಲ್ಲಿ ಕನ್ನಡದ ಪದಗಳಲ್ಲದೆ ಬೇರೆ ಭಾಷೆಗಳಿಂದ ಬಂದ ಪದಗಳೂ ಇವೆ.

**ದೇಶ್ಯ ಪದ: ಆಯಾ ಭಾಷೆಯ ಮೂಲ** (ಸ್ವಂತ) ಪದಗಳೇ **ದೇಶ್ಯ ಪದಗಳು.**

**ಸಂಖ್ಯಾಪದಗಳು** (ಒಂದರಿಂದ ಒಂಬೈನೂರ ತೊಂಬತ್ತೊಂಬತ್ತರವರೆಗೆ), **ದೇಹದ ಅಂಗಗಳ ಹೆಸರು**(ಕೈ, ಕಾಲು, ಬಾಯಿ ಇತ್ಯಾದಿ), **ವಿಭಕ್ತಿ ಪ್ರತ್ಯಯಗಳು, ಬಂಧುವಾಚಕ ಪದಗಳು** (ಅಜ್ಜ ಅಜ್ಜಿ ಅಪ್ಪ ಅಮ್ಮ ಚಿಕ್ಕಪ್ಪ ಅಣ್ಣ ಇತ್ಯಾದಿ), ಮುಂತಾದ ನಿರ್ದಿಷ್ಟ ಪದಗಳು, ಪ್ರತಿಯೊಂದು ಭಾಷೆಯಲ್ಲೂ ಆಯಾ ಭಾಷೆಗಳ ಸ್ವಂತ ಪದಗಳಾಗಿರುತ್ತವೆ.

**ಅನ್ಯದೇಶ್ಯ ಪದ : ಬೇರೆ ಭಾಷೆಯಿಂದ ಬಂದಿರುವ ಪದಗಳೇ ಅನ್ಯದೇಶ್ಯ ಪದಗಳು.**

ಕನ್ನಡದಲ್ಲಿ ಬಳಕೆಯಾಗುತ್ತಿರುವ **ಅರ್ಜಿ, ಕಚೇರಿ, ಕಾರ್ಖಾನೆ, ಜಮೀನು** ಮುಂತಾದವು **ಹಿಂದುಸ್ತಾನೀ ಭಾಷೆಯ** ಪದಗಳು. **ಕೋರ್ಟು, ಬ್ಯಾಂಕು, ಹಾರ್ಮೋನಿಯಂ, ಹೋಟೆಲು** ಮುಂತಾದವು **ಆಂಗ್ಲಭಾಷೆಯಿಂದ ಬಂದ** ಪದಗಳು. **ಅಲಮಾರು, ಸಾಬೂನು, ಮೇಜು** ಮುಂತಾದವು **ಪೋರ್ಚುಗೀಸ್**

©KTBS Not to be republished

**ಭಾಷೆಯಿಂದ ಬಂದ** ಪದಗಳು. ಹೀಗೆ ಕನ್ನಡ ಭಾಷೆಗೆ ಅನ್ಯಭಾಷಾ ಪದಗಳು ಬಂದಾಗ ಅವು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬದಲಾವಣೆಗೊಂಡು ಬಳಕೆಯಾಗುತ್ತವೆ. **ಮಾಲೆ ರಾಜ ವಿಪತ್ತು ದೇವತೆ** ಮುಂತಾದ ಪದಗಳು **ಸಂಸ್ಕೃತ ಭಾಷೆಯಿಂದ** ಬಂದಿವೆ. ಇವನ್ನು **ಅನ್ಯದೇಶ್ಯ** ಪದಗಳೆಂದು ಕರೆಯುವ ವಾಡಿಕೆ ಇಲ್ಲ. ಇವುಗಳನ್ನು ತದ್ಭವ ಎಂದು ಕರೆಯುವರು.

## ತತ್ಸಮ– ತದ್ಭವ

**ಸಂಸ್ಕೃತ ಮತ್ತು ಪ್ರಾಕೃತ** ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ ಅಲ್ಪಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು ಬದಲಾವಣೆಗೆ ಒಳಪಟ್ಟ ಪದಗಳು ಇವೆ.

**ತತ್ಸಮ: ತತ್** ಎಂದರೆ **ಅದಕ್ಕೆ, ಸಮ** ಎಂದರೆ **ಸಮಾನ** ಎಂದರ್ಥ. ಹಾಗಾಗಿ **ತತ್ಸಮ** ಎಂದರೆ ಸಂಸ್ಕೃತಕ್ಕೆ **ಸಮಾನವಾದುದು** ಎಂದರ್ಥ.

**ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಯಾವುದೇ ಬದಲಾವಣೆ ಹೊಂದದೆ ಹಾಗೆಯೇ ಬಂದು ಸೇರಿದ ಪದಗಳೂ ಇವೆ.** ಉದಾ: **ರಾಮ ಭೀಮ ವಸಂತ ಸೋಮ ಚಂದ್ರ ಕರ್ತೃ ಸ್ತ್ರೀ** ಇತ್ಯಾದಿ ಪದಗಳು. **ಮಾಲೆ ಶಾಲೆ ಆಶೆ, ನಿದ್ರೆ** ಇತ್ಯಾದಿ 'ಅ' ಕಾರಾಂತ ಪದಗಳು 'ಎ' ಕಾರಾಂತವಾಗಿ ಬದಲಾವಣೆಗೊಂಡ ಪದಗಳೂ ಇವೆ. ಇಂತಹ ಪದಗಳನ್ನು 'ತತ್ಸಮ'ಗಳೆಂದು ಕರೆಯಲಾಗುತ್ತದೆ.

**ತದ್ಭವ:** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಹೊಂದಿರುವ ಪದಗಳೇ **ತದ್ಭವಗಳು ('ತತ್' ಎಂದರೆ 'ಅದರಿಂದ' ಅಂದರೆ 'ಸಂಸ್ಕೃತದಿಂದ', 'ಭವ' ಎಂದರೆ 'ಹುಟ್ಟಿದ' ಅಂದರೆ 'ಸಂಸ್ಕೃತದಿಂದಹುಟ್ಟಿದ', ಎಂದರ್ಥ.)** ಸಿರಿ, **ಬಾವಿ, ದನಿ, ಆಸೆ** ಮುಂತಾದ ಪದಗಳು ಅಲ್ಪಸ್ವಲ್ಪ ಬದಲಾವಣೆ ಹೊಂದಿದ ಪದಗಳು. **ಬಸದಿ, ಬೇಸಗೆ, ಕೊಡಲಿ, ಬಸವ, ಬಿನ್ನಣ,** ಮುಂತಾದ ಪದಗಳು ಪೂರ್ಣ ಬದಲಾವಣೆ ಹೊಂದಿದ ಪದಗಳು.

- **ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ಗುಣಿತಾಕ್ಷರ ಎಂದರೇನು?

೨. ಸಂಯುಕ್ತಾಕ್ಷರ ಎಂದರೇನು? ಉದಾಹರಣೆ ನೀಡಿ.

೩. ದೇಶ್ಯ ಮತ್ತು ಅನ್ಯ ದೇಶ್ಯ ಪದಗಳನ್ನು ಪಟ್ಟಿ ಮಾಡಿ.

೪. ಕನ್ನಡದಲ್ಲಿರುವ ಯಾವುದಾದರು ಐದು ತದ್ಭವ ಪದಗಳನ್ನು ಪಟ್ಟಿ ಮಾಡಿ.

- **ಪ್ರಾಯೋಗಿಕ ಭಾಷಾಭ್ಯಾಸ**

©KTBS Not to be republished

೧. **ಕೊಟ್ಟಿರುವ ಪದಗಳಲ್ಲಿರುವ ಗುಣಿತಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ**

ಅವು ಆನೆ ಒಂದು ಅಡಿ ಅತಿ ಇರು ಅವರು ಇರುವುದು ಆಗು

೨. **ಕೊಟ್ಟಿರುವ ಪದಗಳಲ್ಲಿರುವ ಸಜಾತಿ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**

ತನ್ನ ಪ್ರಾಣಿ ಜನ್ಮ ಪರ್ಣ ಯಶಸ್ವಿ ಅಲ್ಲಿಯ ಎತ್ತರ ಸ್ಪರ್ಧೆ

ವೀಳ್ಯ ಆದ್ದರಿಂದ ಪ್ರಯೋಗ ವ್ಯಕ್ತಿತ್ವ ನಮ್ಮ ಅನ್ನ ಲೆಕ್ಕಾಚಾರ ಕ್ರಿಮಿ

೩. **ಕೊಟ್ಟಿರುವ ಪದಗಳ ತದ್ಭವ ರೂಪ ಬರೆಯಿರಿ**

ವರ್ಷ ಜನ್ಮ ವಿಷ ರಾಜ

೪. **ಕೊಟ್ಟಿರುವ ಪದಗಳಲ್ಲಿರುವ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಆರಿಸಿ ಬರೆಯಿರಿ**

ಮರಿ ಒಂದು ರಸ್ತೆ ರೈಲ್ವೆ ದೊಡ್ಡದು ಕಿಸೆ ಐದು ಮೋಟಾರು

## ಹೆಚ್ಚಿನ ಓದು

- **ಡಾ. ಕೃಷ್ಣಾನಂದಕಾಮತ್** ಅವರ **ಪ್ರಾಣಿಪರಿಸರ** ಪುಸ್ತಕವನ್ನು ಓದಿ
- **ಪೂರ್ಣಚಂದ್ರ ತೇಜಸ್ವಿ** ಅವರ **ಪರಿಸರದ ಕತೆ** ಕೃತಿಯನ್ನು ಓದಿ
- **ದೈನಿಕಗಳಲ್ಲಿ** ಬರುವ **ಪರಿಸರ** ಸಂಬಂಧಿತ ಲೇಖನಗಳನ್ನು ಸಂಗ್ರಹಿಸಿ ಓದಿ

✦ ✦ ✦ ✦ ✦

©KTBS Not to be republished

# ತಲಕಾಡಿನ ವೈಭವ

[ಪ್ರವಾಸ ಕಥನ]

– ಹಿರೇಮಲ್ಲೂರು ಈಶ್ವರನ್

**ಅರ್ಥೈಸಿ – ಓದಿ**

| | | | | |
|---|---|---|---|---|
| ಇಳೆಯ | ಉದ್ವೇಗ | ನಾಗಾಲೋಟ | ಅತೃಪ್ತಿ | ಮೂಡಣ |
| ತಾಳಗತಿ | ಶಾಲಿವನ | ಕಲಾರತ್ನ | ಶಿಲ್ಪಶಾಸ್ತ್ರ | ಹಿಮ್ಮೇಳ |



**ನಿಗದಿತ ಮೂಲ ಪ್ರವಾಸ ಕಥನ – ಗದ್ಯ**

೧೯೫೦ನೆಯ ಇಸವಿ ಅಕ್ಟೋಬರ್ ತಿಂಗಳು ಮಂಗಳವಾರ ೨೦ನೆಯ ತಾರೀಖು, ಶಿವನ ಸಮುದ್ರದ ಪ್ರವಾಸಿಗರ ನಿಲ್‌ಮನೆಯಲ್ಲಿ ಕುಳಿತುಕೊಂಡು ಈ ದಿನದ ಪಯಣದ ವಿವರ ಬರೆಯುತ್ತಿದ್ದೇನೆ. ಈಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ. ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ. ನನ್ನ ಬಳಿ ಈ ತಂಗು ಮನೆಯಲ್ಲಿ ನನ್ನ ಗೆಳೆಯರು, ಕನ್ನಡದ ಯಾತ್ರಿಕರು ಮಲಗಿಕೊಂಡಿದ್ದಾರೆ. ಇಂದು ದಿನವೆಲ್ಲ ಅಲೆದು ಅಲೆದು ಅವರು ದಣಿದು ನಿದ್ರೆ ಹೋಗಿದ್ದಾರೆ.

ಶಿವನ ಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು. ನಿಲ್ಮನೆಯನ್ನು ಕೂಡಲೆ ಖಾಲಿ ಮಾಡಿಸಿದರು. ಹಾಸಿಗೆ ಹಾಸಿಕೊಟ್ಟರು. ಊಟ ಉಪಚಾರದ ಬಗೆಗೆ ಕೇಳಿದರು. ಕೊನೆಗೆ ಹೋಗುವಾಗ 'ಗುಡ್‌ನಾಯಿಟ್' ಅಂದರು. ಸುಬ್ರಹ್ಮಣ್ಯಮ್ ನೌಕರನೇನೋ ಅಹುದು. ಆದರೆ ಅವರಿತ್ತ ಸ್ವಾಗತ, ವಿಶ್ವಾಸದ ನುಡಿ ನೆನೆದರೆ ನಾವು ಸುಬ್ರಹ್ಮಣ್ಯನಿಗಿಂತ ಸಣ್ಣವರು ಎನ್ನುವಲ್ಲಿ ಸಂದೇಹವಿಲ್ಲ!

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ

© Not to be republished

ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ.ಶ. ೫೦೦ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ' ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತಃ ಕವಿ. 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣ್ಕೆ.

ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುಧುವೊಳಲಿನಿಂದ ತಂದೆತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿ ಬಂದನು. ಏನು ನಂಬಿ ಬಂದ? ತಲಕಾಡಿನ ಮಣ್ಣನ್ನು! ಇಲ್ಲಿ ರಾಯನಿದ್ದಾನೆ. ಅತ್ತಿಮಬ್ಬೆ ಇದ್ದಾಳೆ. ಅಜಿತಸೇನ ಗುರುಗಳ ಶಿಷ್ಯವೃಂದವಿದೆ. ಅದು ಕಲಾಶ್ರೀ ವಿಹರಿಸುವ ನಂದನವನ.

ಗಂಗವಾಡಿಯು ಹಬ್ಬಿ, ಕನ್ನಡದ ಬಾವುಟವನ್ನು ಬಿತ್ತರದ ಬಾನಿನೆಡೆ ಹಾರಿಸುತ್ತ "ಓಹೋ! ಕನ್ನಡನಾಡು, ಆಹಾ! ಕನ್ನಡನುಡಿ, ಹಾರಿಸಿ, ತೋರಿಸಿ ಕಟ್ಟೆದೆಯ ಬಾವುಟ" ಎಂದು ಹಾಡುತ್ತಿರುವ ಹೊತ್ತಿಗೆ ಚೋಳ ದೇಶದ ಕಡೆಯಿಂದ ಬಿರುಗಾಳಿ ಬೀಸಿತು. ಚೋಳರು ಬಂದರು. ಗುಡಿಗೋಪುರಗಳನ್ನು ಕಟ್ಟಿಸಿದರು. ರಾಜೇಶ್ವರ, ವೈಕುಂಠನಾರಾಯಣ, ಮರಳೇಶ್ವರ, ಪಾತಾಳೇಶ್ವರ, ವೈದ್ಯೇಶ್ವರ ಗುಡಿಗಳನ್ನು ಕಟ್ಟಿಸಿದರು. ೧೧೧೬, ವಿಷ್ಣುವರ್ಧನ ದೊರೆಯ ಆಳ್ವಿಕೆ ಪ್ರಾರಂಭವಾಯಿತು. ವಿಷ್ಣುವರ್ಧನ ದೊರೆಯ ಕಾರ್ಯವನ್ನು ಕೇಳುತ್ತೀರಾ? ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಮನೆಗೆ ಕಳುಹಿಸಿ ಹೊಯ್ಸಳರ ಕನ್ನಡ ಬಾವುಟವನ್ನು ಹಾರಿಸಿ, ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿಕಟ್ಟಿ ಮನೆಗೆ ಬಂದು ಗೆಲುವಿನ ಕಥನವನ್ನು ಬಣ್ಣಿಸಿಯೇ ಬಣ್ಣಿಸಿದರು. ಹೊಯ್ಸಳರು ಹೋದ ನಂತರ ವಿಜಯನಗರದ ರಾಯರು ಬಂದರು. ಮೈಸೂರಿನ ಒಡೆಯರು ಬಂದರು. ಆದರೆ ಯಾರು ಬಂದರೇನು? ಯಾರು ಹೋದರೇನು? ತಿರುಗುವ ಕಾಲಚಕ್ರವನ್ನು ನಿಲ್ಲಿಸುವುದಕ್ಕೆ ಯಾರಿಗೆ ಸಾಧ್ಯ? ತಲಕಾಡಿಗೆ ಕೆಟ್ಟಹೊತ್ತು ಕಾಯ್ದುಕೊಂಡು ಕುಳಿತಿದೆ. ತಪ್ಪಿಸಲು ಏನು ತಪಸ್ಸು ಮಾಡಿದರೂ ಸಾಧ್ಯವೇ ಇಲ್ಲವಾಗಿದೆ .....!

ನಾ ಮುಂದೆ ನೀ ಮುಂದೆ ಎಂದು ತಲಕಾಡಿನ ಕಡೆಗೆ ಪ್ರವಾಸಿಗರನ್ನು ಹೊತ್ತುಕೊಂಡೊಯ್ಯುತ್ತಿದ್ದ ಎರಡು ಮೋಟಾರುಗಳು ಓಡುತ್ತಿರುವಾಗ ನನ್‌ಕಣ್‌ಮುಂದೆ ತಲಕಾಡಿನ ನೆಲದ ಮೇಲೆ ವೈಭವದಿಂದ ರಾಜ್ಯವಾಳಿದವರ ಕಥೆ ಹಕ್ಕಿಯಂತೆ ಚಲಿಸಿ ಪಾತರಗಿತ್ತಿಯಂತೆ ಕುಣಿದು ಮೃಗಜಲದಂತೆ ಮಾಯವಾಯಿತು. ಇದು ಕೀರ್ತಿನಾರಾಯಣನ ದೇಗುಲ. ಕ್ರಿಸ್ತಶಕಾಬ್ದ ೧೧೧೭ನೆಯ ವರ್ಷದಲ್ಲಿ ವಿಷ್ಣುವರ್ಧನದೇವ ತಲಕಾಡಿನ ವಿಜಯದ ನಿಮಿತ್ತ ವೀರನಾರಾಯಣನ ಹೆಸರಿನಲ್ಲಿ ಗುಡಿ ಕಟ್ಟಿಸಿದನು.

ಕೀರ್ತಿನಾರಾಯಣ ದೇವಾಲಯದ ಆಚೆಗೆ ೧೫೦ ಗಜದ ಅಂತರದಲ್ಲಿ ವೈದ್ಯೇಶ್ವರ ದೇವಾಲಯ!

© KTBS Not to be republished

ಈ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು. ದೇವಾಲಯದ ಹೊರವಲಯದಲ್ಲಿ ಇರುವ ಕಲಶಗಳೂ ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ದೇಶಿಸುವುವು. ಇವು ಶೃಂಗೇರಿಯ ವಿದ್ಯಾಶಂಕರ ದೇಗುಲ, ಹಂಪೆಯ ಹಜಾರರಾಮರ ಗುಡಿ, ತಾಡಪತ್ರಿಯ ಲೇಪಾಕ್ಷಿಮಂದಿರ, ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ.

ಸಂಜೆ ಧಾವಿಸಿ ಬರುತ್ತಲಿದ್ದಿತು. ಕಪ್ಪುಪರದೆ ಇಳೆಯ ಮೇಲೆ ರಭಸದಿಂದ ಇಳಿಯುತ್ತಲಿದ್ದಿತು. ನಾವಾಗ ಪಾತಾಳೇಶ್ವರನ ಗುಡಿಯಿಂದ ಮರಳೇಶ್ವರ ದೇಗುಲದೆಡೆಗೆ, ಮರಳೇಶ್ವರನಿಂದ ಗೋಕರ್ಣೇಶ್ವರ ಅಲ್ಲಿಂದ ವೀರಭದ್ರನೆಡೆಗೆ ಮರಳಿನಲ್ಲಿ ಸಿಕ್ಕಿ ಬೀಳುತ್ತಿದ್ದ ಕಾಲುಗಳನ್ನು ಕಸುವಿನಿಂದ ಕೀಳುತ್ತ ಮುಂದಕ್ಕೆ ಬಾಗಿ ಉದ್ವೇಗ ಅನುತಾಪಗಳನ್ನು ಬೆಂದ ಹೃದಯದಲ್ಲಿರಿಸಿಕೊಂಡು ನಾಗಾಲೋಟಕ್ಕೆ ತೊಡಗಿದ್ದೆವು.

ಮೂರು ಮೈಲುಗಳಾಚೆ ವಿಜಯಪುರ, ವಿಜಯಪುರದ ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ನಂಬಿ ಆ ದಾರಿಯಲ್ಲಿ ನಡೆದಾಗ ಮೂಡಣ ದಿಗಂತದಲ್ಲಿ ಕಾರ್ತಿಕ ಹುಣ್ಣಿಮೆಯೆಡೆಗೆ ನಡೆದಿದ್ದ ಚಂದ್ರಮ ಮೆಲ್ಲಮೆಲ್ಲಗೆ ಮೇಲೇರುತ್ತಿದ್ದ. ದಾರಿ ಕೊರಕಲು, ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಹಳ್ಳವೊಂದು ಇದಿರಾಯಿತು. ಮೋಟಾರು ನಿಂತೇ ಬಿಟ್ಟಿತು. ಸಾರಥಿಗೆ ಹೇಳಿದೆ! ಅರ್ಕೇಶ್ವರ ದೇವಾಲಯ ಕಾಣದೆ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಏನು ಮಾಡಲಿ?

ನನ್ನ ಮನದ ಇಂಗಿತವನ್ನು ಅರಿತ ಸಾರಥಿ "ಬನ್ನಿ, ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ, ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದುಕೊಂಡು ಹೋಗೋಣ" ಎಂದನು. ಇಬ್ಬರೂ ಹೋದೆವು. ರಾತ್ರಿ ಒಂದು ಗಂಟೆ. ಎಡಬಲಕ್ಕೆ ಶಾಲಿವನ, ನರಿಗಳು ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ ಹಿಮ್ಮೇಳದವರಂತೆ ಕೂಗುತ್ತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡ ಮರಗಳ ಮೊದೆಯಲ್ಲಿ ಏನೋ ಬೆಳ್ಳಬೆಳ್ಳಗೆ, ಮಸುಕುಮಸುಕಾಗಿ ಕಂಡಿತು. ಎದೆ ಜೋರಿನಿಂದ ಹಾರತೊಡಗಿತು. ಧಾವಿಸಿದೆವು, ಸಮೀಪಿಸಿದೆವು, ಯುರೇಕಾ! ಯುರೇಕಾ!

ಆನಂದದ ಆವೇಶದಲ್ಲಿ ನನ್ನ ಯಾತ್ರಿಕರಿಗೆ ಕೇಳುವಂತೆ ಚೀರು ಧ್ವನಿಯಿಂದ "ಬರ್ರೋ ಗುಡಿ ಸಿಕ್ಕಿತು. ಬರ್ರೋ ದೇವಾಲಯ ದೊರಕಿತು", ಎಂದು ಕೂಗಿದೆ. ಇವರೆಲ್ಲ ಬಂದರು, ನೋಡಿದೆವು! ಅರ್ಕೇಶ್ವರ ಲಿಂಗ ತಲಕಾಡಿನ ಪಂಚಲಿಂಗಕ್ಕೆ ಸೇರಿದ್ದು. ಗೋಕರ್ಣ ತೀರ್ಥದಲ್ಲಿ ಮಿಂದು ಐದೂ ಲಿಂಗಗಳನ್ನು ಒಂದೊಂದು ಸಾರಿ ಸಂದರ್ಶಿಸಿ ವೈದ್ಯೇಶ್ವರ ಲಿಂಗಕ್ಕೆ ವರದಿಯನ್ನೊಪ್ಪಿಸಿ ಸಂಜೆ ಮುಗಿಯುವುದರೊಳಗೆ ಪಂಚಲಿಂಗಗಳ ದರ್ಶನವನ್ನು ಪೂರೈಸಿದರೆ ಶ್ರದ್ಧಾವಂತನಾದ ಭಕ್ತನಿಗೆ ಮುಕ್ತಿ ದೊರಕುವುದೇ ನಿಜ!

ಈಗ ಮಧ್ಯಾಹ್ನವಾಗಿದೆ, ನೇಸರು ಬಾನಿನ ನಡುನೆತ್ತಿಯಿಂದ ಈಚೆಗೆ ಪಡುವಣಕ್ಕೆ ತಿರುಗಿ ಎರಡು

©KTBS Not to be republished

ತಾಸಾಗಿದೆ. ನಾವೀಗ ಹೊಯ್ಸಳರ ನಾಡಿನಲ್ಲಿ ಸಂಚರಿಸುತ್ತಿದ್ದೇವೆ. ಕಪಿಲಾನದಿಯನ್ನು ಆ ಕಡೆಗೆ ಬಿಟ್ಟು ಈಚೆಗೆ ಉತ್ತರಾಭಿಮುಖವಾಗಿ ಹೊರಟು ಮುಂದಕ್ಕೆ ಬಂದರೆ ಹೊಯ್ಸಳ ಬಲ್ಲಾಳರ ಅಭಿಮಾನದ ಕಲಾಸಂಪದವಾಗಿ ನಿಂತಿರುವ ಅನರ್ಘ್ಯ ವಾಸ್ತುಶಿಲ್ಪ ಕಲಾರತ್ನವೊಂದನ್ನು ಕಾಣುತ್ತೇವೆ. ಅದೇ ಸೋಮನಾಥ ದೇವಾಲಯ.

ಹೊಯ್ಸಳ ಬಲ್ಲಾಳರು ಕನ್ನಡದ ಕುಲದೀಪಕರು. ಕ್ರಿಸ್ತಶಕಾಬ್ದ ಸಾವಿರದ ಇಸವಿಯಿಂದ ಹದಿಮೂರು ನೂರರವರೆಗೆ ಎಂದರೆ ಅಖಂಡ ಮೂನ್ನೂರು ವರ್ಷಗಳ ಪರ್ಯಂತ ಕನ್ನಡದ ನಂದಾದೀವಿಗೆಯನ್ನು ಹಚ್ಚಿ ನಾಡುನುಡಿಯನ್ನು ಸಂರಕ್ಷಿಸಿದರು. ಈ ವಂಶದ ಮೂಲಪುರುಷನ ಹೆಸರು ಸಳ. ಮೂಡಿಗೆರೆ ತಾಲೂಕಿನಲ್ಲಿರುವ ಸೊಸೆವೂರು ಇವನ ಜನ್ಮಸ್ಥಳ. ಆಗಿನ ಸೊಸೆವೂರಿಗೆ ಈಗ **ಅಂಗಡಿ** ಎಂದು ಮರುನಾಮಕರಣವಾಗಿದೆ. ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತಂದು ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತ ಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ **ಹೊಯ್‌ಸಳ** ಎಂದು ಆದೇಶವಿತ್ತನೆಂದೂ ಸಳ ಕೂಡಲೆ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೊಯ್ದನೆಂದೂ ತಿಳಿಯುವುದು. ಅಂದಿನಿಂದ ಸಳನ ಮನೆತನಕ್ಕೆ **ಹೊಯ್ಸಳ** ಎಂಬ ಹೆಸರು ಬಂದಿತು.


ಹದಿಮೂರನೆಯ ಶತಮಾನದ ಮಧ್ಯಕಾಲ, ದೋರಸಮುದ್ರದ ಸಿಂಹಾಸನವನ್ನು ಮೂರನೆಯ ನರಸಿಂಹನು ಅಲಂಕರಿಸಿದ್ದನು. ನರಸಿಂಹನ ಮಂತ್ರಿ ಸೋಮದಂಡನಾಥ. ಈತ ಸೋಮನಾಥಪುರದ ದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯ ಹೊಯ್‌ಸಳರು ಕಟ್ಟಿದ ಎಲ್ಲ ದೇವಾಲಯಗಳಿಗಿಂತಲೂ ಉನ್ನತ ಸ್ಥಾನವನ್ನು ಆಕ್ರಮಿಸಿರುವ ಸಂಗತಿಯನ್ನು ಫರ್ಗ್ಯೂಸನ್, ಬುಲಕ್ ವರ್ಕಮನ್ ಮುಂತಾದ ವಾಸ್ತುಶಿಲ್ಪ ವಿಶಾರದರೇ ಹೇಳಿರುವರು. ಬೇಲೂರಿನ ಕೇಶವ ದೇವಾಲಯದ ಶೃಂಗಾರವೇ ಬೇರೆ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ದೊಡ್ಡಸ್ತಿಕೆಯೇ ಬೇರೆ. ಆದರೆ ಇವೆರಡರ ಘನತೆಯನ್ನು ಮೀರಿ ನಿಂತಿರುವ ಸೋಮನಾಥಪುರದ ವೈಶಿಷ್ಟ್ಯವೇ ಇನ್ನೊಂದು ತೆರನಾದುದು. ಹೊಯ್‌ಸಳ ಪದ್ಧತಿಯ ರಚನಾ ಕ್ರಮಕ್ಕೆ ಕಿರೀಟ ಪ್ರಾಯವಾಗಿ ನಿಂತಿರುವ ಸೋಮದಂಡನಾಯಕ ಕಟ್ಟಿಸಿದ ಈ ದೇವಾಲಯ ಶಿಲ್ಪಶಾಸ್ತ್ರಕ್ಕೆ ಮಾದರಿಯಾಗಿದೆ.

ತಲವಿನ್ಯಾಸದಿಂದ ಮೊದಲ್ಗೊಂಡು ಮೂವತ್ತೈದು ಅಡಿ ಎತ್ತರದವರೆಗಿನ ಈ ದೇವಾಲಯದ ಒಂದು ಕಿಂಚಿತ್ ಭಾಗವಾದರೂ ತೆರವಾಗಿಲ್ಲ. ಅಷ್ಟರಮಟ್ಟಿಗೆ ಶಿಲ್ಪಿ ಅಲಂಕಾರ ಮಾಡಿದ್ದಾನೆ. ಗರ್ಭಗುಡಿಯ ಗೋಪುರಗಳು ದೂರದಿಂದಲೇ ಸಂದರ್ಶಕರ ಮನಸ್ಸನ್ನು ಸೆಳೆಯುವವು. ವಿಗ್ರಹಗಳ ಬಗೆಗೂ ಸುಳುಹು ಹೊಳಹುಗಳ ಬಗೆಗೂ ಯಾರೂ ಮಾತನ್ನು ಆಡುವಂತಿಲ್ಲ. ಮೂವತ್ತೈದು ಅಡಿ ಎತ್ತರದ ದೇವಾಲಯವನ್ನು ಏರಿಸುತ್ತ ಕೆಳಗಿನಿಂದ ಮೇಗಡೆಯವರೆಗೂ ಶಿಲಾ ಕನ್ಯೆಯರನ್ನು ಸಿಂಗರಿಸುತ್ತ, ಶಿಲ್ಪಿ ಚಣಚಣಕ್ಕೂ ಮೆರೆದಿರುವ ಕಲಾ ನೈಪುಣ್ಯವನ್ನು ಇನ್ನೊಂದು ಕಡೆ ಕಾಣುವುದು ಅಪರೂಪ. ಕಟ್ಟಡದ ಚಮತ್ಕಾರಿಕವಾದ ಹೊಂದಿಕೆ, ಚೆಲುವು, ಗಾಂಭೀರ್ಯಗಳು ಪ್ರೇಕ್ಷಕರ ಮೇಲೆ ಬೀರುವ ಪರಿಣಾಮ ಅತ್ಯಪೂರ್ವ.

©KTBS Not to be republished

ನಮ್ಮ ದೇಗುಲಗಳೇ ನಮ್ಮ ರಾಷ್ಟ್ರದ ಚರಿತ್ರೆಯ ಹೆಗ್ಗುರುತು. ಇಂತಹ ದೇಗುಲಗಳ ಅಭ್ಯಾಸದಿಂದ ನಮ್ಮ ಬದುಕು ನಯವಾಗುತ್ತದೆ. ನಿರ್ಮಲವಾಗುತ್ತದೆ. ಕವಿಕಂಡ ಸತ್ಯ, ಶಿಲ್ಪಿ ಕಂಡ ಸೌಂದರ್ಯಗಳೇ ನಮ್ಮ ಬಾಳಿನ ಅಲಂಕಾರ.

## ಕರ್ತೃ – ಭಾವ – ಆಕರ



**ಹಿರೇಮಲ್ಲೂರು ಈಶ್ವರನ್** (೧೧.೦೧.೧೯೨೨ – ೨೨.೦೬.೧೯೯೮) ಅವರ ಊರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರು. ಸಮಾಜಶಾಸ್ತ್ರಜ್ಞರಾದ ಇವರು ಅಂತಾರಾಷ್ಟ್ರೀಯ ಪುರಸ್ಕೃತ ಸಾಹಿತಿ. ಲಿಂಗರಾಜ ಮಹಾವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದ ಇವರು ಕೊಲ್ಲಾಪುರದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಆರಂಭಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಶ್ರೀಯುತರು ಕೆನಡಾದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. **ಕವಿ ಕಂಡನಾಡು** (ಪ್ರವಾಸ ಕಥನ), **ವಿಷನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕತೆ, ಹಾಲಾಹಲ, ರಾಜಾರಾಣಿ ದೇಖೋ, ಶಿವನ ಬುಟ್ಟಿ, ತಾಯಿನೋಟ** ಮೊದಲಾದವು ಇವರ ಕೃತಿಗಳು. ಶ್ರೀಯುತರ **ಹರಿಹರನ ಕೃತಿಗಳು ಒಂದು ಸಂಖ್ಯಾನಿರ್ಣಯ** ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರಕಿದೆ.

* * *

ಕರ್ನಾಟಕ, ಶ್ರೀಗಂಧ ಮತ್ತು ಚಂದನಗಳ ನಾಡು; ಚಿನ್ನದ ಖನಿ ಎಂಬ ಪ್ರತೀತಿ ಇದೆ. ಚಾಲುಕ್ಯ, ಹೊಯ್ಸಳ ಮುಂತಾದ ಶೈಲಿಗಳ ದೇವಾಲಯಗಳು ಹೇರಳವಾಗಿರುವುದರಿಂದ ಕರ್ನಾಟಕ ದೇವಾಲಯಗಳ ನಾಡೂ ಹೌದು. ಕರ್ನಾಟಕದ ತಲಕಾಡು ಪ್ರಕೃತಿ ಸೌಂದರ್ಯದಿಂದ ಕೂಡಿರುವುದರ ಜತೆಗೆ ರಾಜಮನೆತನಗಳ ವೈಭವಗಳನ್ನೂ ದೇವಾಲಯಗಳ ಸೌಂದರ್ಯವನ್ನೂ ಹೊಂದಿರುವುದು ವಿಶೇಷ. ಅದರಲ್ಲೂ ಪಂಚ ಶಿವಾಲಯಗಳು ಆಸ್ತಿಕರ ಚಿತ್ತವನ್ನು ಗಮನಸೆಳೆಯುವಲ್ಲಿ ಮಹತ್ವದ ಪಾತ್ರವಹಿಸಿವೆ. ಪ್ರವಾಸಿಗರ, ಯಾತ್ರಾರ್ಥಿಗಳ, ವಾಸ್ತುತಜ್ಞರ ಕೇಂದ್ರಬಿಂದು ತಲಕಾಡಿನ ಚಿತ್ರಣವನ್ನು ಈ ಗದ್ಯಭಾಗ ಒಳಗೊಂಡಿದೆ.

* * *

**ಹಿರೇಮಲ್ಲೂರು ಈಶ್ವರನ್** ಅವರ **ಕವಿಕಂಡ ನಾಡು ಪ್ರವಾಸ ಕಥನ** (ಪುಟ–೦೧–೨೦) ದಿಂದ ಪ್ರಕೃತ ಭಾಗವನ್ನು ಆರಿಸಿ ಸಂಪಾದಿಸಿ ನಿಗದಿಪಡಿಸಿದೆ.

Not to be republished ©KTBS

## ಪದ-ಗದ್ಯಾರ್ಥ

ನಿಲ್‌ಮನೆ – ಪ್ರವಾಸಿಗರು ಉಳಿದುಕೊಳ್ಳುವ ಮನೆ, ಅತಿಥಿಗೃಹ ; ತಂಗುಮನೆ – ಪ್ರವಾಸಿಗರ ವಾಸ್ತವ್ಯಕ್ಕಾಗಿ ಇರುವ ಮನೆ ; ವಾಸ್ತುಶಿಲ್ಪ – ಕಟ್ಟಡ ರಚನೆಯ ಕಲೆ ; ಉಜ್ವಲ – ಶ್ರೇಷ್ಠ ; ಸಂಬೋಧಿಸು– ಕುರಿತು ಹೇಳು ; ನಂದನವನ – ದೇವೇಂದ್ರನ ಉಪವನ, ಸಂತಸ ನೀಡುವ ಪ್ರದೇಶ; ಬಿತ್ತರ– ವಿಸ್ತಾರ ; ಕೆಚ್ಚೆದೆಯ – ಭಯವಿಲ್ಲದ ಮನಸ್ಸಿನ ; ಬಿರುಗಾಳಿ – ಜೋರಾಗಿ ಬೀಸುವ ಗಾಳಿ ; ಸ್ಮಾರಕ – ನೆನಪಿಗಾಗಿ ಕಟ್ಟಿದ್ದು ; ಬಣ್ಣಿಸು – ವರ್ಣಿಸು ; ಪಾತರಗಿತ್ತಿ – ಚಿಟ್ಟೆ, ಪತಂಗ; ಮೃಗಜಲ – ಬಿಸಿಲ್ಗುದುರೆ, ಮರೀಚಿಕೆ; ಸಾರಥಿ – ರಥವನ್ನು ಓಡಿಸುವವ, ವಾಹನ ಚಾಲಕ, ಮಸುಕು – ಅಸ್ಪಷ್ಟ ; ಉದ್ರೇಕ – ಅತಿಶಯ, ಮೇರೆಮೀರು ; ನೇಸರು – ಸೂರ್ಯ ; ಪಡುವಣ – ಪಶ್ಚಿಮ ; ತಾಸು – ಗಂಟೆ ; ಸಂಪದ – ಸಂಪತ್ತು, ಐಶ್ವರ್ಯ ; ಅನರ್ಘ್ಯ – ಶ್ರೇಷ್ಠ

## ಪಠ್ಯಾಧಾರ ಟಿಪ್ಪಣಿ

**ಮೃಗಜಲ:** ವಿಶಾಲ ಮರುಭೂಮಿಯಲ್ಲಿ, ಸಮತಟ್ಟಾದ ಬಟ್ಟಬಯಲಿನಲ್ಲಿ ನೀರಿಲ್ಲದಿದ್ದರೂ ಬಿಸಿಲಿನ ಝಳದಿಂದಾಗಿ ದೂರದಿಂದ ನೋಡುವಾಗ ನೀರಿದ್ದಂತೆ ಭಾಸವಾಗುವುದು. ಇದನ್ನು ಕಂಡು ಬಿಸಿಲಿನ ಝಳಕ್ಕೆ ಕಂಗಾಲಾಗಿ ಬಾಯಾರಿದ ಪ್ರಾಣಿಗಳು (ಮೃಗಗಳು) ನೀರು ಸಿಕ್ಕಿತೆಂದು ಸಂತೋಷದಿಂದ ಬಂದಾಗ ನಿರಾಶೆಗೆ ಒಳಗಾಗುತ್ತವೆ. ಮತ್ತೆ ಮುಂದೆ ನೋಡುತ್ತವೆ. ಆಗ ಅನತಿ ದೂರದಲ್ಲಿ ನೀರಿದ್ದಂತೆ ಕಂಡು ಓಡುತ್ತವೆ. ಅಲ್ಲಿಯೂ ನೀರು ಕಾಣದೆ ನಿರಾಶೆಗೊಳ್ಳುತ್ತವೆ. ಹೀಗೆ ನೀರಿಲ್ಲದ ಜಾಗದಲ್ಲಿ ನೀರಿದ್ದಂತೆ ಭಾಸವಾಗುವುದೇ **ಮೃಗಜಲ**.

**ಯುರೇಕಾ:** ಆರ್ಕಿಮಿಡಿಸ್ ಸ್ನಾನದ ತೊಟ್ಟಿಯಲ್ಲಿ ಸ್ನಾನಕ್ಕಾಗಿ ಇಳಿದಾಗ ಸ್ವಲ್ಪ ನೀರು ಹೊರಗೆ ಚೆಲ್ಲಿತು. ನೀರು ಚೆಲ್ಲಲು ಕಾರಣವೇನಿರಬಹುದೆಂದು ಚಿಂತಿಸಿದಾಗ ತನ್ನನ್ನು ಕಾಡುತ್ತಿದ್ದ ಕಿರೀಟದ ಸಮಸ್ಯೆಗೆ ಪರಿಹಾರ ದೊರೆಯಿತು. ತಕ್ಷಣ **ಯುರೇಕಾ** (ತಿಳಿಯಿತು, ಸಿಕ್ಕಿತು) ಎಂದು ಬೊಬ್ಬಿಡುತ್ತಾ ಓಡಿದನು. ಅದೇ ರೀತಿ ಇಲ್ಲಿ ಲೇಖಕರು ಮತ್ತು ವಾಹನ ಚಾಲಕರು ವಿಜಯಪುರದ ಅರ್ಕೇಶ್ವರನ ಗುಡಿಯನ್ನು ಹುಡುಕುತ್ತಾ ಹೋಗಿ ಸಿಕ್ಕಿದಾಗ **ಯುರೇಕಾ** ಎಂದು ಕೂಗಿಕೊಂಡರು.

**ಕ್ರಿಸ್ತಶಕಾಬ್ದ:** ಕ್ರಿಸ್ತ ಹುಟ್ಟಿದ ಕಾಲದಿಂದ ಆರಂಭವಾದ ಶಕೆ/ವರ್ಷ

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?

೨. ಗಂಗರ ಮೊದಲ ರಾಜಧಾನಿ ಯಾವುದು?

೩. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?

© KTBS Not to be republished

೪. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?

೫. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?

೬. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?

೨. ಚಾವುಂಡರಾಯ ಯಾರು? ಆತನ ವಿಶೇಷತೆಯೇನು?

೩. ಚೋಳರ ಸಾಧನೆಯೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರಿಸಿ**

೧. ಗಂಗರ ಇತಿಹಾಸದ ವಿಶೇಷತೆಯೇನು?

೨. ವೈದ್ಯೇಶ್ವರ ದೇವಾಲಯದ ನಿರ್ಮಾಣದ ಕಾಲನಿರ್ಣಯಕ್ಕೆ ಸಹಕಾರಿಯಾಗುವ ಅಂಶಗಳಾವುವು? – ವಿವರಿಸಿ.

೩. ಲೇಖಕರು 'ಯುರೇಕಾ' ಎಂದು ಕೂಗಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ?

೪. ಸಳನ ವಂಶಕ್ಕೆ 'ಹೊಯ್ಸಳ' ಹೆಸರು ಬರಲು ಕಾರಣವೇನು?

**ಈ. ಸಂದರ್ಭಾನುಸಾರ ವಿವರಿಸಿ**

೧. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"

೨. "ಅದು ಕಲಾಶ್ರೀ ವಿಹರಿಸುವ ನಂದನವನ"

೩. "ಮೋಟರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು"

೪. "ಬರ್ರೋ ಗುಡಿ ಸಿಕ್ಕಿತು ಬರ್ರೋ ದೇವಾಲಯ ದೊರಕಿತು"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

೧. ಸಾಹಿತ್ಯಾವಲೋಕನ, ಭಕ್ತಿಭಂಡಾರಿ ಬಸವಣ್ಣ, ರಾಜಾರಾಣಿ ದೇಖೋ, ವಚನಧರ್ಮಸಾರ.

೨. ಮಾರಸಿಂಹ, ಚಾವುಂಡರಾಯ, ರಾಚಮಲ್ಲ, ರಕ್ಕಸಗಂಗ.

೩. ರಾಜೇಶ್ವರ, ಮರಳೇಶ್ವರ, ಮಹಾಲಿಂಗೇಶ್ವರ, ಪಾತಾಳೇಶ್ವರ.

೪. ಮುಚ್ಚಿಟ್ಟು, ಹಾಡುತ್ತಿರುವ, ಉದ್ಯಮವನ್ನು, ಬಾನಿನೆಡೆ.

©KTBS Not to be republished

# ಭಾಷಾಭ್ಯಾಸ

## ಸೈದ್ಧಾಂತಿಕ ಭಾಷಾಭ್ಯಾಸ

### ಸಂಧಿ ಪರಿಚಯಾತ್ಮಕ ವಿವರ

ಮಾತನಾಡುವಾಗ ಕೆಲವು ಪದಗಳನ್ನು ಬಿಡಿಬಿಡಿಯಾಗಿ ಹೇಳದೆ ಕೂಡಿಸಿ ಹೇಳುತ್ತೇವೆ. ಉದಾ: ಅಲ್ಲಿಅಲ್ಲಿ ಎಂಬ ಎರಡು ಪದಗಳನ್ನು **'ಅಲ್ಲಲ್ಲಿ'** ಎಂದು ಒಂದೇ ಪದವಾಗಿ ಹೇಳುತ್ತೇವೆ. ಇಲ್ಲಿ ಎರಡು ಪದಗಳ ನಾಲ್ಕು ಅಕ್ಷರಗಳು ಒಟ್ಟು ಸೇರಿ ಮೂರು ಅಕ್ಷರಗಳ ಒಂದು ಪದವಾಗಿದೆ. ಹೀಗೆ **– ಪದ ರಚನೆ ಆಗುವಾಗ ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಒಟ್ಟು ಸೇರುವುದೇ ಸಂಧಿ.** ಈ ರೀತಿಯಲ್ಲಿ ಪದಗಳು ಒಟ್ಟು ಸೇರುವಾಗ **ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಬರಬಾರದು.** ಅರ್ಥಕ್ಕೆ ಲೋಪ ಬರುವುದಾದಲ್ಲಿ ಸಂಧಿ ಮಾಡಬಾರದೆಂಬ ನಿಯಮವುಂಟು.

ಹೀಗೆ ಸಂಧಿಯಾಗುವಾಗ **ಸ್ವರದ ಮುಂದೆ ಸ್ವರ ಇದ್ದು** ಸಂಧಿಯಾದರೆ ಅದು **ಸ್ವರಸಂಧಿ. ಸ್ವರದ ಮುಂದೆ ವ್ಯಂಜನ** ಅಥವಾ **ವ್ಯಂಜನದ ಮುಂದೆ ಸ್ವರ ಇದ್ದು** ಸಂಧಿಯಾದರೆ ಅದು **ವ್ಯಂಜನ ಸಂಧಿ.** ಈ ಸಂಧಿಗಳಲ್ಲಿ **'ಕನ್ನಡಸಂಧಿ'** ಮತ್ತು **'ಸಂಸ್ಕೃತ ಸಂಧಿ'** ಗಳೆಂದು ಎರಡು ವಿಧಗಳಿವೆ. **ಕನ್ನಡ** ಪದಗಳೇ ಸೇರಿ ಅಥವಾ **ಕನ್ನಡ** ಮತ್ತು **ಸಂಸ್ಕೃತ** ಪದಗಳು ಸೇರಿ ಸಂಧಿಯಾದರೆ **'ಕನ್ನಡಸಂಧಿ'** ಎಂತಲೂ **ಸಂಸ್ಕೃತ** ಪದಗಳು ಸೇರಿ ಸಂಧಿಯಾದರೆ **'ಸಂಸ್ಕೃತಸಂಧಿ'** ಎಂತಲೂ ಕರೆಯಲ್ಪಡುತ್ತವೆ.

ಸಂಧಿಯಾಗುವಾಗ ಕೆಲವು ವ್ಯತ್ಯಾಸಗಳಾಗುತ್ತವೆ. ಈ ವ್ಯತ್ಯಾಸವೇ **ಸಂಧಿಕ್ರಿಯೆ.** ಈ ವ್ಯತ್ಯಾಸ ಪೂರ್ವಪದದ ಅಂತ್ಯದಲ್ಲಿ ಅಥವಾ ಪರಪದದ (ಉತ್ತರಪದ) ಆದಿಯಲ್ಲಿ ಇಲ್ಲವೇ ಎರಡೂ ಪದಗಳ ಮಧ್ಯದಲ್ಲಿ ನಡೆಯುತ್ತದೆ. ಈ ವರ್ಣ ವ್ಯತ್ಯಾಸಕ್ಕನುಗುಣವಾಗಿ **ಲೋಪ, ಆಗಮ, ಆದೇಶ** ಎಂಬ **ಮೂರು ವಿಧದ ಸಂಧಿಕ್ರಿಯೆ** ನಡೆಯುತ್ತವೆ.

**ಉದಾ: ಬೇರೆ** + ಒಬ್ಬ > **ಬೇರೊಬ್ಬ**

**ರ್ + ಎ + ಒ > ರ್ + ಒ**

ಇಲ್ಲಿ ಸಂಧಿಕ್ರಿಯೆಗೆ ಒಳಪಟ್ಟ ಅಕ್ಷರಗಳನ್ನು ಗೆರೆ ಹಾಕಿ ಗುರುತಿಸಿದೆ. ಸಂಧಿಕ್ರಿಯೆ ನಡೆಯುವ ಮೊದಲು **ಬೇರೆ** ಮತ್ತು **ಒಬ್ಬ** ಎಂಬ ಎರಡು ಪದಗಳಿರುವುದನ್ನು ಗಮನಿಸಬಹುದು. ಪೂರ್ವಪದದ ಅಂತ್ಯದಲ್ಲಿ **ರ್** ಮತ್ತು **ಎ** ಎಂಬ ಎರಡು ಅಕ್ಷರಗಳಿವೆ. ಪರಪದದ ಆದಿಯಲ್ಲಿ **ಒ** ಎಂಬ ಅಕ್ಷರವಿದೆ. ಸಂಧಿಯಾದಾಗ **ಬೇರೊಬ್ಬ** ಎಂಬ ಪದ ರಚನೆಯಾಗಿದ್ದು ಸಂಧಿಗೊಳಪಟ್ಟ **ರೊ** ಅಕ್ಷರದಲ್ಲಿ **ರ್** ಮತ್ತು **ಒ** ಎಂಬ ಎರಡು ಅಕ್ಷರಗಳಿವೆ. ಹಾಗಾಗಿ ಪೂರ್ವಪದದ ಅಂತ್ಯದಲ್ಲಿದ್ದ **ಎ** ಎಂಬ ಸ್ವರಾಕ್ಷರ ಲೋಪವಾಗಿದೆ. ಇದೇ **ಲೋಪಕ್ರಿಯೆ.**

**ಉದಾ: ಮನೆ** + ಅಲ್ಲಿ > **ಮನೆಯಲ್ಲಿ**

**ನ್ + ಎ + ಅ > ನ್ + ಎ + ಯ್ + ಅ**

ಈ ಉದಾಹರಣೆಯನ್ನು ಗಮನಿಸಿದಾಗ ಸಂಧಿಯಾಗುವ ಮೊದಲು ಮೂರು ಅಕ್ಷರಗಳಿದ್ದು ಸಂಧಿಯಾದಾಗ ನಾಲ್ಕು ಅಕ್ಷರಗಳಾಗಿವೆ. ಇಲ್ಲಿ ಪೂರ್ವಪದದ ಅಂತ್ಯ ಮತ್ತು ಪರಪದದ ಆದಿಯ ಮಧ್ಯೆ **ಯ್** ಎಂಬ ವ್ಯಂಜನಾಕ್ಷರ ಸೇರಿಕೊಂಡಿದೆ. ಹೀಗೆ ಹೊಸತಾಗಿ ಅಕ್ಷರ ಬಂದು ಸೇರುವುದೇ **ಆಗಮಕ್ರಿಯೆ.**

**ಉದಾ: ಮಳೆ** + **ಕಾಲ** > **ಮಳೆಗಾಲ**

**ಳ್ + ಎ + ಕ್ + ಆ > ಳ್ + ಎ + ಗ್ + ಆ**

©KTBS Not to be republished

ಇಲ್ಲಿ ಪರಪದದ ಆದಿಯಲ್ಲಿದ್ದ **ಕ್** ಅಕ್ಷರದ ಬದಲಿಗೆ **ಗ್** ಅಕ್ಷರ ಬಂದಿದೆ. ಹೀಗೆ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬರುವುದೇ **ಆದೇಶಕ್ರಿಯೆ**. ಸಂಧಿಕ್ರಿಯೆಯ ಹೆಸರಿನಿಂದಲೇ ಕನ್ನಡ ಸಂಧಿಗಳನ್ನು ಹೆಸರಿಸಲಾಗುವುದು. **ಲೋಪಕ್ರಿಯೆ ಆದರೆ ಲೋಪಸಂಧಿ, ಆಗಮಕ್ರಿಯೆ ಆದರೆ ಆಗಮಸಂಧಿ ಮತ್ತು ಆದೇಶಕ್ರಿಯೆ ಆದರೆ ಆದೇಶಸಂಧಿ**. ಹೀಗೆ ಕನ್ನಡದಲ್ಲಿ **ಲೋಪ, ಆಗಮ** ಮತ್ತು **ಆದೇಶ** ಎಂಬ **ಮೂರು** ವಿಧದ ಸಂಧಿಗಳಿವೆ.

**ಲೋಪಸಂಧಿ: ಸಂಧಿಕ್ರಿಯೆ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಸ್ವರ ಲೋಪವಾದರೆ ಅದು ಲೋಪಸಂಧಿ.**

**ಉದಾ:** ಊರು + ಊರು > ಊರೂರು    ಬಲ್ಲೆನು + ಎಂದು > ಬಲ್ಲೆನೆಂದು
ಊರು + ಇಂದ > ಊರಿಂದ

**ಆಗಮಸಂಧಿ: ಸ್ವರದ ಮುಂದೆ ಸ್ವರಬಂದು ಸಂಧಿಯಾಗುವಾಗ 'ಯ' ಕಾರ ಅಥವಾ 'ವ' ಕಾರವು ಈ ಸ್ವರಗಳ ಮಧ್ಯೆ ಹೊಸದಾಗಿ ಸೇರಿದರೆ ಅದು ಆಗಮಸಂಧಿ.**

**ಉದಾ :** ಕೈ + ಅನ್ನು > ಕೈಯನ್ನು    ಚಳಿ + ಇಂದ > ಚಳಿಯಿಂದ
ಗುರು + ಅನ್ನು > ಗುರುವನ್ನು    ಪುಸ್ತಕ + ಅನ್ನು > ಪುಸ್ತಕವನ್ನು

**ಆದೇಶಸಂಧಿ: ಸಂಧಿಕ್ರಿಯೆ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶಸಂಧಿ. ಕ ತ ಪ** ಗಳಿಗೆ **ಗ ದ ಬ** ಗಳೂ ಕೆಲವೊಮ್ಮೆ **ಪ ಬ ಮ** ಗಳ ಬದಲಿಗೆ **ವ** ಕಾರವೂ **ಆದೇಶವಾಗಿ ಬರುತ್ತವೆ.**

**ಉದಾ :** ಹುಲ್ಲು + ಕಾವಲು > ಹುಲ್ಲುಗಾವಲು    ಬೆನ್ + ಪತ್ತು > ಬೆಂಬತ್ತು
ಮೈ + ತೊಳೆ > ಮೈದೊಳೆ    ಕೆನೆ + ಪಾಲ್ > ಕೆನೆವಾಲ್

**ಪ್ರಕೃತಿಭಾವ :** ಆ + ಆಡು    ಅಯ್ಯೋ + ಇದೇನು
ಓಹೋ + ಅಜ್ಜಿ ಬಂದರೇ    ಅಕ್ಕಾ + ಇತ್ತಬಾ

ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿದಾಗ ಸ್ವರದ ಮುಂದೆ ಸ್ವರ ಬಂದಿರುವುದರಿಂದ **ಲೋಪ** ಅಥವಾ **ಆಗಮ** ಸಂಧಿ ಆಗಬೇಕಿತ್ತು. ಹಾಗೆ ಸಂಧಿ ಮಾಡಿದರೆ ಅರ್ಥ ಕೆಡುತ್ತದೆ. ಹಾಗಾಗಿ ಸಂಧಿ ಮಾಡುವುದಿಲ್ಲ. **ಪ್ಲುತ ಸ್ವರದ ಮುಂದೆ ಸ್ವರ ಬಂದಾಗ; ಅಯ್ಯೋ, ಆಹಾ, ಓಹೋ** ಮುಂತಾದ **ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ** ಹಾಗೂ **ಆ** ಎಂಬ ಪದದ ಮುಂದೆ (ಅಕ್ಷರದ ಮುಂದೆ ಅಲ್ಲ) **ಸ್ವರ ಬಂದಾಗ** ಸಂಧಿ ಮಾಡಬಾರದು. ಹೀಗೆ **– ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇದ್ದ ಹಾಗೆಯೇ ಇರುವುದು ಪ್ರಕೃತಿಭಾವ.**

©KTBS Not to be republished

- **ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ಸಂಧಿ ಎಂದರೇನು? ಅದರ ವಿಧಗಳನ್ನು ಹೇಳಿ.

೨. ಸಂಧಿಕ್ರಿಯೆ ಎಂದರೇನು? ಅದರ ವಿಧಗಳನ್ನು ವಿವರಿಸಿ.

೩. ಪ್ರಕೃತಿಭಾವ ಎಂದರೇನು? ಉದಾಹರಣೆ ಕೊಡಿ.

- **ಪ್ರಾಯೋಗಿಕ ಅಭ್ಯಾಸ**

**ಕೊಟ್ಟಿರುವ ಪದಗಳನ್ನು ಬಿಂಗಡಿಸಿ ಸಂಧಿ ಹೆಸರಿಸಿ**

| | | | | |
|---|---|---|---|---|
| ನಿಮಿಷವಾಗಿದೆ | ದಿನವೆಲ್ಲ | ನಿಲ್ಮನೆಯನ್ನು | ಸಂದೇಹವಿಲ್ಲ | ಕಥನವಿದೆ |
| ಮಿಗಿಲಾಗಿ | ಚರಿತ್ರೆಯಿದೆ | ಹೆಸರಾಗಿದೆ | ತಲೆಯೆತ್ತಿ | ಮುಚ್ಚಿಟ್ಟು |
| ಬಾನಿನೆಡೆ | ಪೂರ್ತಿಯಾಗು | ಹಳ್ಳವೊಂದು | ತಾಸಾಗಿದೆ | ಊರಿಂದ |

## ಹೆಚ್ಚಿನ ಓದು

- **ಡಾ. ಪ್ರಭುಶಂಕರ** ಅವರ **ಅಮೆರಿಕದಲ್ಲಿ ನಾನು ಮತ್ತು ಶಾಂತಿ ಪ್ರವಾಸ ಕಥನವನ್ನು** ಓದಿ
- **ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ** ಅವರ **ಗಂಗೆಯ ಶಿಖರಗಳಲ್ಲಿ ಪ್ರವಾಸ ಕಥನವನ್ನು** ಓದಿ

✦ ✦ ✦ ✦ ✦

©KTBS
Not to be republished


## ಗದ್ಯಪಾಠ – ೪
# ಸಾರ್ಥಕ ಬದುಕಿನ ಸಾಧಕ
[ವ್ಯಕ್ತಿಚಿತ್ರ]

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

**ಅರ್ಥೈಸಿ – ಓದಿ**

ಹಾತೊರೆ ಪರಮೋಚ್ಚ ಮೇಧಾವಿ ಹೃದಯಸ್ಪರ್ಶಿ ದಿವಾನ ಜಗಮೊಂಡು
ದಿಗ್ಗಜ ಮಂಥನ ಮಹಾಧೀಮಂತ ವನಸುಮ ಚೂರುಪಾರು ಬೊಬ್ಬೆ

**ನಿಗದಿತ ಮೂಲ ವ್ಯಕ್ತಿಚಿತ್ರ – ಗದ್ಯ**



ಡಿವಿಜಿ ಅವರು ತಮ್ಮೊಡನೆ ಮಾತು ನಿಲ್ಲಿಸಿಬಿಟ್ಟರೆಂದು ದಿವಾನ್ ಮಿರ್ಜಾ ಸಾಹೇಬರಿಗೆ ಕಳವಳವಾಗಿ ಹೋಗಿತ್ತು. ಆಪ್ತರೆದುರು ಅದನ್ನು ತೋಡಿಕೊಂಡರು. ತಮ್ಮದು ಏನೂ ತಪ್ಪಿಲ್ಲ ಎಂದರು. ಅದಕ್ಕಾಗಿ ಅವರಿವರ ಮೂಲಕ ಪ್ರಯತ್ನ ಕೂಡ ಮಾಡಿದರು. ಆ ಕಾಲದ ದೊಡ್ಡ ದಿವಾನರನ್ನೂ ತಮ್ಮ ಸ್ನೇಹಕ್ಕಾಗಿ ಹೀಗೆ ಹಾತೊರೆಯುವಂತೆ ಮಾಡಿದ ವ್ಯಕ್ತಿಯೇನು ಸಾಮಾನ್ಯರೆ?

ಹಾಗೆಂದು ಅವರೇನು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ, ಎಸ್.ಎಸ್.ಎಲ್.ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ. ಸರ್ಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತು ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು.

ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಹೇಗೆ? ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ, ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

ಡಿವಿಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಡಿವಿಜಿ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಒಬ್ಬರು ಅವರ ಅಜ್ಜಿ, ಎಂದರೆ ತಾಯಿಯ ತಾಯಿ ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿವಿಜಿ ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮ ಅವರ ಹೃದಯಸ್ಪರ್ಶಿಯಾದ ಚಿತ್ರಣವಿದೆ. ಆ ಚಿತ್ರಣಕ್ಕೆ ಆಧಾರವಾದ ವ್ಯಕ್ತಿತ್ವ ಈ ತಿಮ್ಮಪ್ಪನವರದೇ.

©KTBS
Not to be republished

ಡಿವಿಜಿ ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮುಂದಿನ ಓದಿಗೆ ಬೇರೆ ಊರಿಗೇ ಹೋಗಬೇಕು; ಆದರೆ ಹಣದ ಅನುಕೂಲವಿಲ್ಲ. ಓದು ಇಲ್ಲಿಗೆ ಸಾಕು ಎಂದು ತಂದೆ, ಅಜ್ಜಿ ತೀರ್ಮಾನಿಸಿದರು. ಆದರೆ ಡಿವಿಜಿ ಅವರ ಭಾಗ್ಯ ಎಂಬಂತೆ ಅವರ ಸಹಾಯಕ್ಕೆ ಬಂದವನು ರಸೂಲ್‌ಖಾನ್. ಆತನೊಬ್ಬ ಬಂಡಿ ಹೊಡೆಯುವ ವ್ಯಕ್ತಿ. ಬಡವ, ಪ್ರಾಮಾಣಿಕ. ಡಿವಿಜಿ ಅವರ ತಂದೆಗೆ ಬೇಕಾಗಿದ್ದವನು. "ಗುಂಡಣ್ಣ ತುಂಬ ಚುರುಕಾದ ಹುಡುಗ. ಅವನು ಮುಂದೆ ಓದಲೇಬೇಕು", ಅಂತ ರಸೂಲ್‌ಖಾನ್ ಹಟ ಹಿಡಿದುಬಿಟ್ಟ. "ನೀವೆಲ್ಲ ಏನಾದರು ಹೇಳಿ. ಅವನನ್ನು ನನ್ನ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್ ಪೇಟೆ (ಬಂಗಾರಪೇಟೆ) ಗೆ ಹೋಗ್ತಿನಿ. ಬೆಂಗಳೂರಿನ ರೈಲಿನಲ್ಲಿ ಕೂರಿಸಿ ಟಿಕೆಟ್ ಕೊಡಿಸಿ, ಒಂದು ರೂಪಾಯಿ ಕೈ ಖರ್ಚಿಗೆ ಕೊಟ್ಟುಬಿಡ್ತೀನಿ. ಅವನ ಓದು ಮಾತ್ರ ನಡೀಲೇಬೇಕು". ರಸೂಲ್‌ಖಾನ್‌ನ ಈ ನಿರ್ಧಾರ ಎಲ್ಲರನ್ನೂ ದಂಗುಬಡಿಸಿತು. ಎಲ್ಲ ಅವನು ಹೇಳಿದಂತೆಯೇ ನಡೆಯಿತು. ಡಿವಿಜಿ ಬೆಂಗಳೂರನ್ನು ಕಂಡದ್ದು ಹೀಗೆ ರಸೂಲ್‌ಖಾನನ ದಯೆಯಿಂದ.

ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದ ಕಾಲ. ಡಿವಿಜಿ ಆಗ ಯುವ ಪತ್ರಕರ್ತ. ದಸರಾ ಉತ್ಸವ ಬಂತು. ರಾಜ್ಯದ ಎಲ್ಲ ಪತ್ರಿಕೆಗಳೂ ಅದರ ವಿಶೇಷ ವರದಿ ನೀಡಿದವು. ಇದಾದ ನಾಲ್ಕು ದಿನಕ್ಕೆ ಪತ್ರಕರ್ತರಿಗೆಲ್ಲ ಸರ್ಕಾರದಿಂದ ದೊಡ್ಡ ಮೊತ್ತ ಸಂಭಾವನೆ ರೂಪದಲ್ಲಿ ಹೋಯಿತು. ಡಿವಿಜಿ ತಮಗೆ ಬಂದಿದ್ದ ಹಣದ ಸಹಿತ ದಿವಾನರಲ್ಲಿಗೆ ಬಂದರು.

"ಏನು ಬಂದಿರಿ ಗುಂಡಪ್ಪ?"

"ನನಗೆ ಈ ಹಣ ಯಾಕೆ ಕಳಿಸಿದ್ದಾರೆ?"

ದಸರಾ ಉತ್ಸವವನ್ನು ಚೆನ್ನಾಗಿ ವರದಿ ಮಾಡಿದ್ದೀರಿ, ಅದಕ್ಕೆ.

"ಅದಕ್ಕೆ ಹಣ ಯಾಕೆ ಕಳಿಸಬೇಕು?"

"ಪತ್ರಕರ್ತರಿಗೆ ಓಡಾಟ, ಖರ್ಚು ಇರುತ್ತದೆ. ಅಲ್ಲದೆ ಹಿಂದಿನಿಂದ ಬಂದ ಪದ್ಧತಿ"

"ವರದಿ ಮಾಡುವುದು ಪತ್ರಕರ್ತರ ಕರ್ತವ್ಯ. ಅದಕ್ಕೆ ಖರ್ಚಾದರೆ ಪತ್ರಿಕೆಯವರು ಕೊಡಬೇಕು, ಸರ್ಕಾರವಲ್ಲ. ನನಗೆ ಈ ಹಣ ಖಂಡಿತ ಬೇಡ. ಬೇಡವೇ ಬೇಡ". ಎಂದರು ಡಿವಿಜಿ.

ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಹೇಳಿದರು.

"ಈ ಮನುಷ್ಯನ ರೀತಿಯೇ ಬೇರೆ. ಇವರಿಗೆ ನಾವು ಹಣ ಕೊಡಲು ಬರುವುದಿಲ್ಲ. ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡಿ!"

ವಿಶ್ವೇಶ್ವರಯ್ಯ ಅವರು ತಮ್ಮ ಕೆಲಸ ಕಾರ್ಯಗಳಲ್ಲಿ ಎಷ್ಟೋ ಜನ ಮೇಧಾವಿಗಳ ಸಹಾಯ ಪಡೆಯುತ್ತಿದ್ದರು. ಪ್ರತಿಯಾಗಿ ಅದಕ್ಕೆ ತಕ್ಕ ಸಂಭಾವನೆಯನ್ನು ಕೊಡುತ್ತಿದ್ದರು. ಡಿವಿಜಿ ಅವರಿಂದಲೂ ಅವರು ಅನೇಕ ಕೆಲಸ ಮಾಡಿಸಿಕೊಂಡಿದ್ದುಂಟು. ಮೊದಲ ಸಲ ಅವರಿಗೆ ಸಂಭಾವನೆ ಕೊಡಲು ಹೋದಾಗ ಡಿವಿಜಿ ಒಪ್ಪಲಿಲ್ಲ. ಇದು ರಾಜ್ಯದ ಕೆಲಸ. ಅಲ್ಲದೆ ವಿಶ್ವೇಶ್ವರಯ್ಯ ಎಂಥ ಮಹಾವ್ಯಕ್ತಿ! ಅವರ ಜೊತೆಗೆ ವ್ಯವಹರಿಸಿದ್ದೇ ತಮಗೊಂದು ಹೆಮ್ಮೆ. ಹಾಗಿರುವಾಗ ಅದಕ್ಕೆ ಸಂಭಾವನೆಯೇ? ಎಂದಿಗೂ ಕೂಡದು. ಇದು ಅವರ ತರ್ಕ. ಆದರೆ ಈ ತರ್ಕ ನಡೆಯಲಿಲ್ಲ. ಡಿವಿಜಿ ಮೊಂಡಾದರೆ ವಿಶ್ವೇಶ್ವರಯ್ಯ ಜಗಮೊಂಡು.

ಇದು ನನ್ನ ವೈಯಕ್ತಿಕ ಕೆಲಸ. ನನಗೆ ಇದಕ್ಕೆ ಹಣ ಬರುತ್ತದೆ. ನೀವು ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ಮುಂದೆ ನಿಮ್ಮ ಸಹಾಯವೇ ಬೇಡ ಎಂದು ಕೋಪಿಸಿಕೊಂಡರು. ಆಯಿತು; ತೆಗೆದುಕೊಳ್ಳಲು ಡಿವಿಜಿ ಒಪ್ಪಿದರು. ಮುಂದೆ ವಿಶ್ವೇಶ್ವರಯ್ಯ ಅವರಿಗೆ ಪ್ರತಿಸಲವೂ ಚೆಕ್ಕು ಕೊಡುತ್ತಾ ಹೋದರು. ಡಿವಿಜಿ ಪಡೆಯುತ್ತಾ ಹೋದರು. ಆದರೆ ಆ ಚೆಕ್ಕುಗಳು ಬ್ಯಾಂಕಿನ ಮೆಟ್ಟಿಲನ್ನು ಹತ್ತಿದರೆ ತಾನೆ?

ಹಣವನ್ನು ಸರ್ಕಾರದ ಸಹಾಯವನ್ನು ಇಷ್ಟು ಉದಾಸೀನ ಮಾಡಿದ ವ್ಯಕ್ತಿ ಎಂಥ 'ಶ್ರೀಮಂತ'ರಿದ್ದಿರಬಹುದು. ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಡಿವಿಜಿಗೆ ಹೋಗಲು ಆಗಲಿಲ್ಲ. ಮಕ್ಕಳನ್ನು ಕಳಿಸಿದರು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಗಂಡ ಅಸಮಾಧಾನದಿಂದ ಕೇಳಿದರು.

"ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

'ಇಲ್ಲ'

'ಯಾಕೆ'?

'ಮಕ್ಕಳನ್ನು ಕಳಿಸಿದ್ದೇನಲ್ಲ'

"ಅದು ಸರಿ ನೀನೂ ಹೋಗಬೇಕಷ್ಟೆ. ಅವರು ನಮಗೆ ಬಹಳ ಬೇಕಾದವರು ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?"

"ಮನೆಯಲ್ಲಿ ಯಾರಾದರೂ ಇರಬೇಕಲ್ಲ"

"ನಾನು ಇರುತ್ತೇನೆ. ನೀನು ಹೋಗಿ ಬಾ."

ಅವರ ಹೆಂಡತಿ ಏನೇನೋ ಸಬೂಬು ಹೇಳಿದರು. ಡಿವಿಜಿ ಅದಕ್ಕೆ ಉತ್ತರ ಕೊಡುತ್ತಲೇ ಹೋದರು. ನಿಜವಾದ ಕಾರಣ ಕಡೆಗೆ ಹೊರಬರಲೇಬೇಕಾಯಿತು. ನಾನು ಹೇಳಬಾರದೆಂದಿದ್ದೆ. ನೀವು ಪಟ್ಟುಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೇ ನಿಮ್ಮ ಮರ್ಯಾದೆಗೆ ಊನಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?

ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯಂಥ ಪ್ರಸಿದ್ಧ ಸಂಸ್ಥೆಯನ್ನು ಕಟ್ಟಿದ ಸಾಹಿತಿ ಬೇರೆ ಯಾರಿದ್ದಾರೆ? ಅವರನ್ನು 'ಮಹಾಧೀಮಂತ' ಎಂಬ ಮಾತಿನಿಂದ ವರ್ಣಿಸುವುದು ಸರಿಯಾದೀತೇನೋ. ಅವರು ಬರೆದ ಕವಿತೆಗಳು ಅವರ ವ್ಯಕ್ತಿತ್ವವನ್ನು ಬಹಳ ಸೊಗಸಾಗಿ ವರ್ಣಿಸುತ್ತವೆ. ಈ ಸಾಲುಗಳನ್ನು ಗಮನಿಸಿ.

©KTBS Not to be republished

**ವನಸುಮದೊಲೆನ್ನ ಜೀವನವು ವಿಕಸಿಸುವಂತೆ**
**ಮನವನನುಗೊಳಿಸು ಗುರುವೇ – ಹೇ ದೇವ**
**ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ**
**ಸೌರಭವ ಸೂಸಿ ನಲವಿಂ**
**ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿ**
**ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ**

**ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ**
**ಫಲ ಮಾಗುವಂದು ತುತ್ತೂರಿ ದನಿಯಿಲ್ಲ**
**ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ**

**ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು**
**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ**
**ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ**
**ಎಲ್ಲರೊಳಗೊಂದಾಗು ಮಂಕುತಿಮ್ಮ.**

## ಕರ್ತೃ – ಭಾವ – ಆಕರ



**ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ** ಅವರು ೨೯. ೧೦. ೧೯೩೬ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ತಂದೆ ಶಿವರಾಮ ಭಟ್ಟ, ತಾಯಿ ಮೂಕಾಂಬಿಕೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಆರ್ಟ್ಸ್ ಫ್ಯಾಕಲ್ಟಿಯ ಡೀನ್ ಆಗಿ ದುಡಿದಿದ್ದಾರೆ. ಇವರು ಶ್ರೇಷ್ಠ ಸಾಹಿತಿ, ಪ್ರೌಢ ವಿಮರ್ಶಕ, ಜನಪ್ರಿಯ ಭಾವಗೀತಕಾರ, ಸಮರ್ಥ ಅನುವಾದಕ, ವಿದ್ವಾಂಸ ಮತ್ತು ವಾಗ್ಮಿ.

ಇವರ ಕವನ ಸಂಕಲನಗಳು **ವೃತ್ತ, ಚಿತ್ರಕೂಟ, ಸುಳಿ**. ಇವರ ಪ್ರಸಿದ್ಧ ಧ್ವನಿ ಸುರುಳಿಗಳು **ದೀಪಿಕಾ, ಭಾವಸಂಗಮ, ಬಂದೇಬರತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ**. ಮಕ್ಕಳ ಧ್ವನಿ ಸುರುಳಿಗಳು **ನಂದನ, ಕಿನ್ನರಿ, ನವಿಲುಗರಿ, ಕಿಶೋರಿ** ಮುಂತಾದವು. ಹತ್ತಾರು ಸಾಹಿತ್ಯ ಸಾಧಕರ ಜೀವನ ಘಟನೆಗಳ ಬಗೆಗೆ ಬೆಳಕು ಚೆಲ್ಲುವ **ಸಾಹಿತ್ಯ ರತ್ನ ಸಂಪುಟ** ಕೃತಿಯನ್ನು ರಚಿಸಿದ್ದಾರೆ. ೨೦೦೦ದಲ್ಲಿ ಹೂಸ್ಟನ್ನಿನಲ್ಲಿ ನಡೆದ ಪ್ರಥಮ ಅಮೆರಿಕಾ ವಿಶ್ವ ಕನ್ನಡ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಇವೆಲ್ಲವೂ ಇವರ ಸಾಹಿತ್ಯ ಸೇವೆಗೆ ಸಂದಿವೆ.

©KTBS Not to be republished

ಕನ್ನಡ ನಾಡು ರಸ ಋಷಿಗಳ ಬೀಡು. ಸಾಧು ಸತ್ಪುರುಷರ ನೆಲೆವೀಡು. ಕನ್ನಡ ನಾಡಿನಲ್ಲಿ ಹಲವಾರು ಸತ್ಪುರುಷರು ಜನಿಸಿ, ತ್ಯಾಗಜೀವನ ನಡೆಸಿ, ಇತರರಿಗೆ ಆದರ್ಶಪ್ರಾಯರಾಗಿದ್ದಾರೆ. ಇಂತಹ ಋಷಿಪ್ರಾಯರಾದವರಲ್ಲಿ ಡಿವಿಜಿ ಅವರೂ ಒಬ್ಬರು. ಸುಸಂಸ್ಕೃತ ವಿದ್ಯಾವಂತರಾದ ಡಿವಿಜಿ ಅವರು ಸುಮಾರು **೬೬** ಕೃತಿಗಳನ್ನು ಎಂದರೆ ಸುಮಾರು **೮೦೦೦** ಪುಟಗಳ ಸಾಹಿತ್ಯವನ್ನು **೧೫೦೦** ಪುಟಗಳ ಬಿಡಿ ಲೇಖನಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಸಿರಿವಂತ ಸಾಹಿತಿ. ಲೇಖಕ, ಪತ್ರಕರ್ತ, ಸಂಪಾದಕ, ಸಾಹಿತಿ ಮತ್ತು ರಾಜಕಾರಣಿಯಾಗಿ ಎಲ್ಲದಕ್ಕೂ ಮಿಗಿಲಾಗಿ ಲೌಕಿಕ ಆಸೆ ಆಮಿಷಗಳಿಗೆ ಒಳಗಾಗದೇ ಮೇರು ವ್ಯಕ್ತಿತ್ವದ ಆದರ್ಶ ವ್ಯಕ್ತಿಯಾಗಿ ಬಾಳಿ ಬದುಕಿದವರು **ಡಾ. ಡಿ.ವಿ.ಗುಂಡಪ್ಪ** ಅವರು. ತನಗಾಗಿ ಯಾವುದೇ ಆಸ್ತಿ, ಹಣ ಮುಂತಾದುವನ್ನು ಗಳಿಸದೆ ಸದಾ ಸಮಾಜಮುಖಿಯಾಗಿ, ಆದರ್ಶ ರಾಷ್ಟ್ರನಿರ್ಮಾಣಕ್ಕಾಗಿ ದಣಿಯದೇ ದುಡಿದವರು ಡಿವಿಜಿ. ಅವರ ಸಾರ್ಥಕಬದುಕು, ಆದರ್ಶ ಜೀವನ ನಮ್ಮೆಲ್ಲರ ಬದುಕಿನ ಸೂತ್ರವಾಗಲಿ ಎಂಬುದೇ ಪಠ್ಯದ ಆಶಯ.

* * *

**ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಸಾಹಿತ್ಯ ರತ್ನ ಸಂಪುಟ** ಕೃತಿಯಿಂದ ಪ್ರಸ್ತುತ ಗದ್ಯ ಭಾಗವನ್ನು ಆಯ್ದು ಸಂಪಾದಿಸಿ (ಪುಟ–೧೫–೨೬) ನಿಗದಿಪಡಿಸಿದೆ.

## ಪದ – ಗದ್ಯಾರ್ಥ

ಪರಮೋಚ್ಚ – ಅತ್ಯುನ್ನತ ; ಮೇಧಾವಿ – ಬುದ್ಧಿವಂತ ; ತಿರುಪೆ – ಭಿಕ್ಷೆ ; ಮೆಟ್ರಿಕ್ಯುಲೇಷನ್ – ೧೦ನೆಯ ತರಗತಿಗೆ ಸಮಾನ ಓದು; ಸಂಭಾವನೆ – ಗೌರವಧನ; ತರ್ಕ – ವಾದ; ವನ – ಕಾಡು; ಸುಮ – ಹೂವು ; ಕಾನನ – ವನ, ಕಾಡು; ವಿಕಸನ – ಹಿಗ್ಗುವಿಕೆ, ಅರಳುವಿಕೆ, ದೊಡ್ಡದಾಗುವಿಕೆ; ಇಳೆ – ಭೂಮಿ

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ / ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಡಿವಿಜಿ ಅವರ ಹುಟ್ಟೂರು ಯಾವುದು?

೨. ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?

೩. ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

೪. ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು?

೫. ಡಿವಿಜಿ ಅವರು ಸ್ಥಾಪಿಸಿದ ಸಂಸ್ಥೆ ಯಾವುದು?

©KTBS Not to be republished

ಆ. **ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ರಸೂಲ್‌ಖಾನ್ ಅವರು ಡಿವಿಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು?

೨. ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಏನು ಹೇಳಿದರು?

೩. ಡಿವಿಜಿ ಅವರು ಏಕೆ ಸಂಭಾವನೆಯನ್ನು ಪಡೆಯಲಿಲ್ಲ?

೪. ಡಿವಿಜಿ ಅವರ ಶ್ರೀಮತಿ ಅವರು ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಏಕೆ ಹೋಗಿರಲಿಲ್ಲ?

೫. ಎಲ್ಲರೊಂದಿಗೆ ಹೇಗೆ ಬಾಳಬೇಕೆಂದು ಡಿವಿಜಿ ಹೇಳಿದ್ದಾರೆ?

ಇ. **ಕೊಟ್ಟಿರುವ ಪ್ರಶ್ನೆಗಳಿಗೆ ಆರು/ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

೧. ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.

೨. ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

ಈ. **ಸಂದರ್ಭಾನುಸಾರ ವಿವರಿಸಿ**

೧. "ಏನು ಬಂದಿರಿ ಗುಂಡಪ್ಪ?"

೨. "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

೩. "ನನ್ನ ಹತ್ತಿರ ಇರುವುದು ಇದೊಂದೇ ಸೀರೆ"

೪. "ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ"

೫. "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ"

- **ವಸ್ತುನಿಷ್ಠ / ನಿಖರ ನಿರ್ಣಯ ಪ್ರಶ್ನೆಗಳು**

**ಬಿಟ್ಟ ಸ್ಥಳ ತುಂಬಿ**

೧. ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು ____________

೨. ಮಿರ್ಜಾ ಅವರ ಕಾಲಕ್ಕೆ ಡಿವಿಜಿ ದೊಡ್ಡ ____________ ಎಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

೩. ಮುಳಬಾಗಿಲು ________________ ಜಿಲ್ಲೆಗೆ ಸೇರಿದೆ.

೪. ಡಿವಿಜಿ ಅವರು ಮುಳಬಾಗಿಲಿನ ______ ______ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪೂರ್ತಿಗೊಳಿಸಿದರು.

೫. ಡಿವಿಜಿ ಅವರು ಕನ್ನಡ ಸಾರಸ್ವತ ಲೋಕದ _________ ಎಂದು ಕರೆಸಿಕೊಂಡರು.

©KTBS Not to be republished

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ನಾಮಪದ ಪರಿಚಯಾತ್ಮಕ ವಿವರ**

- **ಭೀಮನು ಚೆನ್ನಾಗಿ ಹಾಡಿದನು.**
- **ರಾಗಿಣಿಯು ನೃತ್ಯ ಸ್ಪರ್ಧೆಯಲ್ಲಿ ಪ್ರಥಮಸ್ಥಾನವನ್ನು ಪಡೆದಳು.**

  ಈ ಎರಡು ವಾಕ್ಯಗಳನ್ನು ಗಮನಿಸಿದಾಗ ಬೇರೆ ಬೇರೆ ಬಗೆಯ ಪದಗಳು ಬಳಕೆಯಾಗಿರುವುದನ್ನು ಕಾಣಬಹುದು. ವ್ಯಾಕರಣದ ಪ್ರಕಾರ ಇಂತಹ ಪದಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಲಾಗಿದೆ.

- ಭೀಮನು, ರಾಗಿಣಿಯು, ನೃತ್ಯ ಸ್ಪರ್ಧೆಯಲ್ಲಿ, ಪ್ರಥಮಸ್ಥಾನವನ್ನು – **ನಾಮಪದಗಳು.**
- ಹಾಡಿದನು, ಪಡೆದಳು – **ಕ್ರಿಯಾಪದಗಳು.**
- ಚೆನ್ನಾಗಿ – **ಅವ್ಯಯ.**

  ಹೀಗೆ ಆಡುವ ಮಾತುಗಳನ್ನು ಮುಖ್ಯವಾಗಿ **ನಾಮಪದ, ಕ್ರಿಯಾಪದ ಮತ್ತು ಅವ್ಯಯ** ಎಂಬ ಮೂರು ಗುಂಪುಗಳನ್ನಾಗಿ ಮಾಡಬಹುದು.

- ಭೀಮನು, ಭೀಮನನ್ನು, ಭೀಮನಿಂದ, ಭೀಮನಿಗೆ, ಭೀಮನ ದೆಸೆಯಿಂದ, ಭೀಮನ, ಭೀಮನಲ್ಲಿ ಇವೆಲ್ಲವೂ ನಾಮಪದಗಳೇ ಆಗಿರುತ್ತವೆ. ಇವುಗಳಲ್ಲಿ **ಭೀಮ** ಎಂಬುದು ಮೂಲರೂಪವಾಗಿದೆ. ಇದೇ **ನಾಮಪ್ರಕೃತಿ.**

ಇಲ್ಲಿ **ಭೀಮ** ಎಂಬ ನಾಮಪ್ರಕೃತಿಯ ಜೊತೆಗೆ **ಉ, ಅನ್ನು, ಇಂದ, ಗೆ, ದೆಸೆಯಿಂದ, ಅ, ಅಲ್ಲಿ** ಎಂಬ ಏಳು ತೆರನಾದ **ನಾಮವಿಭಕ್ತಿಪ್ರತ್ಯಯಗಳು** ಸೇರಿವೆ. ಹೀಗೆ **–ನಾಮಪ್ರಕೃತಿಗಳಿಗೆ ನಾಮವಿಭಕ್ತಿಗಳು ಸೇರಿ ಆಗುವ ಪದವೇ ನಾಮಪದ.**

**ನಾಮವಿಭಕ್ತಿಗಳು :** ಕ್ರಿಯಾಪದದೊಂದಿಗೆ ನಾಮಪದದ ಸಂಬಂಧವನ್ನು ತಿಳಿಸುವ **ಕರ್ತೃ, ಕರ್ಮ, ಕರಣ** ಮುಂತಾದುವು **ಕಾರಕಾರ್ಥಗಳು. ಕಾರಕಾರ್ಥವನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿಪ್ರತ್ಯಯಗಳು.** ಇವುಗಳ ಸ್ವರೂಪ ಮತ್ತು ಪರಸ್ಪರ ಸಂಬಂಧವನ್ನು ಕೊಟ್ಟಿರುವ ಕೋಷ್ಟಕದ ಸಹಾಯದಿಂದ ತಿಳಿಯೋಣ.

| **ವಿಭಕ್ತಿಗಳು** | **ವಿಭಕ್ತಿ ಪ್ರತ್ಯಯಗಳು** | **ಕಾರಕಾರ್ಥ** | **ನಾಮಪದ** |
|---|---|---|---|
| ಪ್ರಥಮಾ | ಉ | ಕರ್ತೃ ಅರ್ಥ | ಮನೆಯು |
| ದ್ವಿತೀಯಾ | ಅನ್ನು | ಕರ್ಮಾರ್ಥ | ಮನೆಯನ್ನು |
| ತೃತೀಯಾ | ಇಂದ | ಕರಣಾರ್ಥ (ಸಾಧನ) | ಮನೆಯಿಂದ |
| ಚತುರ್ಥೀ | ಕ್ಕೆ, ಗೆ, ಇಕೆ, | ಸಂಪ್ರದಾನ (ಕೊಡುವಿಕೆ) | ಮನೆಗೆ |
| ಪಂಚಮೀ | ದೆಸೆಯಿಂದ | ಅಪಾದಾನ (ಅಗಲುವಿಕೆ) | ಮನೆಯ ದೆಸೆಯಿಂದ |
| ಷಷ್ಠೀ | ಅ | ಸಂಬಂಧ | ಮನೆಯ |
| ಸಪ್ತಮೀ | ಅಲ್ಲಿ | ಅಧಿಕರಣ | ಮನೆಯಲ್ಲಿ |

©KTBS Not to be republished

ಈ ವಿಭಕ್ತಿ ಪ್ರತ್ಯಯಗಳು ನಾಮಪ್ರಕೃತಿಗೆ ಬಂದು ಸೇರುವಾಗ ಹೆಚ್ಚಾಗಿ 'ಅ' ಕಾರಾಂತ ಪದಗಳಿಗೆ 'ನ' ಕಾರವೂ (ರಾಮನು, ರಾಮನನ್ನು, ರಾಮನಲ್ಲಿ ಇತ್ಯಾದಿ) 'ಎ' ಕಾರಾಂತ ಪದಗಳಿಗೆ 'ಯ' ಕಾರವೂ (ಮನೆಯು, ಮನೆಯಿಂದ, ಮನೆಯ, ಮನೆಯಲ್ಲಿ) ಆದೇಶವಾಗಿ ಬರುತ್ತವೆ. ಆದರೆ ಇತ್ತೀಚೆಗೆ ಕೆಲವು ಪ್ರದೇಶಗಳ ಆಡು ಭಾಷೆಯ ಪ್ರಭಾವದಿಂದ **'ಮನೆಯಲ್ಲಿ'** ಪದ **'ಮನೆನಲ್ಲಿ'** ಎಂತಲೂ **'ಶಾಲೆಯಲ್ಲಿ'** ಪದ **'ಶಾಲೆನಲ್ಲಿ'** ಎಂತಲೂ ಪ್ರಯೋಗವಾಗುತ್ತಿದೆ. ಇಲ್ಲಿ **'ನ'** ಕಾರ ಹೇಗೆ ಆಗಮವಾಯಿತೆಂದು ತಿಳಿಯದು. ಆದರೆ ಅದೇ **'ಮನೆ'** ಎಂಬ **'ಎ'** ಕಾರಾಂತ ಪದಕ್ಕೆ **ಸಪ್ತಮೀವಿಭಕ್ತಿ** ಬಿಟ್ಟು ಉಳಿದ ವಿಭಕ್ತಿಪ್ರತ್ಯಯಗಳು ಸೇರಿದಾಗ ಈ ಕ್ರಿಯೆ ಕಾಣಿಸುವುದಿಲ್ಲ. ಅಂದರೆ **'ಮನೆಯು, ಮನೆಯನ್ನು, ಮನೆಯಿಂದ, ಮನೆಯ'** ಪದಗಳಲ್ಲಿ ವ್ಯಾಕರಣ ನಿಯಮ ರೀತ್ಯಾ **'ಯ'** ಕಾರವೇ ಆಗಮವಾಗಿದೆಯೇ ಹೊರತು **'ಮನೆನು, ಮನೆನನ್ನು, ಮನೆನಿಂದ, ಮನೆನ'** ಎಂಬ ರೂಪವನ್ನು ಹೊಂದಿಲ್ಲ. **ಸಪ್ತಮೀವಿಭಕ್ತಿ** ಸೇರಿದಾಗ ಮಾತ್ರ ಇಂತಹ ಕ್ರಿಯೆ ಕಾಣುತ್ತದೆ. ಹಾಗಾಗಿ **'ಮನೆಯಲ್ಲಿ'** ಪದದ ಬದಲಿಗೆ **'ಮನೆನಲ್ಲಿ'** ಎಂಬ ರೀತಿಯ (ಅಂದರೆ ಸಪ್ತಮೀ ವಿಭಕ್ತಿ ಸೇರಿದಾಗ ಆಗುವ ತಪ್ಪುಗಳು) ಪ್ರಯೋಗ ವ್ಯಾಕರಣರೀತ್ಯಾ ಸಮ್ಮತವಲ್ಲ.

- **ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ನಾಮಪದ ಎಂದರೇನು?

೨. ನಾಮವಿಭಕ್ತಿ ಪ್ರತ್ಯಯಗಳೆಷ್ಟು? ಯಾವುವು?

- **ಪ್ರಾಯೋಗಿಕ ಅಭ್ಯಾಸ**

೧. **ಕೊಟ್ಟಿರುವ ವಾಕ್ಯಗಳಲ್ಲಿರುವ ನಾಮಪದಗಳನ್ನು ಆರಿಸಿ ಬರೆಯಿರಿ.**

ಅ. ಡಿವಿಜಿಯ ಊರು ಮುಳಬಾಗಿಲು.

ಆ. ಬೆಂಗಳೂರಿನ ರೈಲಿನಲ್ಲಿ ಕೂರಿಸುತ್ತೇನೆ.

ಇ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲವದು.

ಈ. ಡಿವಿಜಿಯ ಬಂಧುಗಳ ಮನೆಯಲ್ಲಿ ಒಂದು ಉತ್ಸವವು ನಡೆಯಿತು.

೨. **ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆದು ಅದು ಯಾವ ವಿಭಕ್ತಿ ಎಂಬುದನ್ನು ಬರೆಯಿರಿ.**

ದಿವಾನರನ್ನು ದಿನದಿನದ ಡಿವಿಜಿಗೆ ಬಲದಿಂದ ವಲಯದಲ್ಲಿ

ಮಂಕುತಿಮ್ಮನ ಶಿಕ್ಷಣವನ್ನು ಓದಿಗೆ ಸಹಾಯಕ್ಕೆ ಬಂಡಿಯಲ್ಲಿ

ದಯೆಯಿಂದ ರಸೂಲ್‌ಖಾನನ

## ಹೆಚ್ಚಿನ ಓದು

✦ **ಡಿವಿಜಿ** ಅವರ **ಮಂಕುತಿಮ್ಮನ ಕಗ್ಗ**ವನ್ನು ಓದಿ

✦ **ಡಿವಿಜಿ** ಅವರ **ಜ್ಞಾಪಕ ಚಿತ್ರಶಾಲೆ ಕೃತಿ**ಯನ್ನು ಓದಿ

✦ **ಡಿವಿಜಿ** ಅವರ **ಮೈಸೂರಿನ ದಿವಾನರುಗಳು ಕೃತಿ**ಯನ್ನು ಓದಿ

✦ ✦ ✦ ✦ ✦



©KTBS Not to be republished

## ಗದ್ಯಪಾಠ – ೫

# ರಾಜಕುಮಾರಿಯ ಜಾಣ್ಮೆ

[ಜನಪದ ಕತೆ]

– ಡಿ. ಕೆ. ರಾಜೇಂದ್ರ

**ಅರ್ಥೈಸಿ – ಓದಿ**

| | | | | | |
|---|---|---|---|---|---|
| ಕಪ್ಪಕಾಣಿಕೆ | ಸೋಲ್ತರೆ | ಹತ್ಕಳುತ್ತೆ | ಕೈವಶ | ಮೆದೆ | ಒಡ್ಡು |
| ಗರುಡ | ಸೂತ್ಕ | ಸೆರೆಯಾಳು | ಎಡೆಮುಡಿ | ಶಪ್ತ | ತಮಾಷೆ |



©KTBS Not to be republished

**ನಿಗದಿತ ಮೂಲ ಜನಪದ ಕತೆ – ಗದ್ಯ**

ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ ಒಬ್ಬ ರಾಜ ಇದ್ದ. ಅವನಿಗೆ ಸುತ್ತೇಳು ಊರಿನವರು ಕಪ್ಪಕಾಣಿಕೆಗಳನ್ನು ತಂದೊಪ್ಪಿಸುತ್ತಿದ್ದರು. ಆದರೆ, ಪಕ್ಕದಲ್ಲಿಯೇ ಅಡಗೂರು ಅಂತ ಒಂದು ಊರಿತ್ತು. ಅದಕ್ಕೆ ಒಬ್ಬ ರಾಜ ಇದ್ದ. ಆ ರಾಜ ಮಾತ್ರ ಇವನಿಗೆ ಕಪ್ಪಕಾಣಿಕೆಗಳನ್ನು ಕೊಡ್ತಿರಲಿಲ್ಲ. ರಾಜನಿಗೆ ಸಿಟ್ಟು ಬಂತು. ಇವನಿಗೆ ಆರು ಜನ ಮಕ್ಕಳಿದ್ದರು. ಆ ರಾಜನ ಮೇಲೆ ಯುದ್ಧ ಮಾಡಿ ಕಪ್ಪಕಾಣಿಕೆಗಳು ಬರುವ ಹಾಗೆ ಮಾಡುತ್ತೇವೆ ಅಪ್ಪಣೆ ಕೊಡಿ ಅಂತ ತಂದೆಯನ್ನು ಕೇಳ್ತರೆ. ರಾಜ ಅದಕ್ಕೆ ಅನುಮತಿ ಕೊಡ್ತನೆ. ಆರು ಜನ ಗಂಡು ಮಕ್ಕಳು ಅಡಗೂರು ರಾಜನ ಮೇಲೆ ಯುದ್ಧಕ್ಕೆ ಹೊರಡ್ತರೆ. ಆದರೆ ಯುದ್ಧದಲ್ಲಿ ಅಡಗೂರು ದೊರೆಗೆ ಒಬ್ಬೊಬ್ಬರಾಗಿ ಸೋಲ್ತರೆ. ಅವನು ಈ ಆರು ಮಂದಿಯನ್ನು ಆ ಊರಿನ ಕಾಳಿಕಾ ದೇವಿ ದೇವಸ್ಥಾನದಲ್ಲಿ ಸೆರೆ ಹಾಕಿಸುತ್ತಾನೆ.

ಯುದ್ಧಕ್ಕೆ ಹೋದ ಮಕ್ಕಳು ಬಾರದಿದ್ದನ್ನು ಕಂಡು ಇಲ್ಲಿಯ ರಾಜನಿಗೆ ಚಿಂತೆ ಹತ್ಕಳುತ್ತೆ. ಕೆಲವು ಕಾಲ ಕಳೆದ ಮೇಲೆ ಇವನಿಗೆ ಒಬ್ಬಳು ಮಗಳು ಹುಟ್ಟುತ್ತಾಳೆ. ಈ ಹುಡುಗಿಗೆ ಎಂಟತ್ತು ವರ್ಷ ತುಂಬಿದ ಮೇಲೆ ತನ್ನ ಗೆಳೆತಿಯರೊಂದಿಗೆ ಗೋಲಿ ಆಟ ಆಡುತ್ತಿರ್ತಳೆ. ಗೋಲಿ ಆಟದಲ್ಲೆಲ್ಲ ಇವಳೇ ಗೆಲ್ಲುತ್ತಿದ್ದಳು. ಹೀಗಿರುವಾಗ ಯಾರೋ ಒಬ್ಬರು "ನೀನು ಹಿಂಗೆ ಆಟ ಆಡ್ತಾ ಇರದ್ರಿಂದಲೇ ನಿನ್ನ ಅಣ್ಣಂದಿರನ್ನು ಕಳೆದುಕೊಂಡದ್ದು" ಅಂತ ಅಂತಾರೆ. ಆಗ ಅವಳು ತನ್ನ ತಂದೆ ತಾಯಿಗಳ ಹತ್ತಿರ ಬಂದು "ನನ್ನ ಆರು ಜನ ಅಣ್ಣದೀರು ಎಲ್ಲಿದ್ದಾರೆ?" ಅಂತ ಕೇಳ್ತಳೆ. ಅದಕ್ಕೆ ಅವರು "ನಿನ್ನ ಆರು ಜನ ಅಣ್ಣಂದಿರು ಹೋಗಿ ಹನ್ನೆರಡು ವರ್ಷ ಆಯ್ತು. ಈಗೆಲ್ಲಿ ನೀನು ಅವರನ್ನು ನೋಡುವುದಕ್ಕೆ ಆಗುತ್ತೆ" ಅಂತ ಹೇಳ್ತರೆ. ಆದರೂ ಅವಳು "ಬಿಡದೆ ನಾನು ಅವರನ್ನು ಪತ್ತೆ ಮಾಡಿ ಬಿಡಿಸಿಕೊಂಡು ಬರುತ್ತೇನೆ. ಅಪ್ಪಣೆ ಕೊಡಿ" ಅಂತ ಕೇಳ್ತಳೆ. ಜತೆಗೆ ತಾನು ಕೇಳುವಷ್ಟು ಹಣವನ್ನೂ ಕುದುರೆಯನ್ನೂ ಕೊಡಬೇಕು ಅಂತ ಕೇಳ್ತಳೆ. ಅವಳು ಕೇಳಿದ್ದನೆಲ್ಲ ಕೊಟ್ಟು ಕಳುಹಿಸುತ್ತಾರೆ.

ರಾಜನ ಮಗಳು ಗಂಡು ವೇಷವನ್ನು ಹಾಕಿಕೊಂಡು ಜತೆಯಲ್ಲಿ ಚಿನ್ನ, ರತ್ನ, ವಜ್ರ – ಎಲ್ಲಾನೂ ತಗಂಡು ತಾನೊಬ್ಬ ವ್ಯಾಪಾರಿ ಅನ್ನಂಗೆ ಕುದುರೆ ಮೇಲೆ ಕುಳಿತು ಹೊರಡ್ತಳೆ, ಅಡಗೂರಿಗೆ ಬರ್ತಳೆ. ಆ ಊರಿನಲ್ಲಿ ಒಬ್ಬ ಮುದುಕಿಯ ಮನೆಯಲ್ಲಿ ಇಳಿದುಕೊಳ್ತಳೆ. ತಾನು ಇರುವವರೆವಿಗೂ ಊಟ ಹಾಕಿದರೆ ತಾನು ಹೋಗುವಾಗ ಬೇಕಾದಷ್ಟು ಹಣ ಕೊಡುವುದಾಗಿ ಆ ಮುದುಕಿಗೆ ಹೇಳ್ತಳೆ. ಅದಕ್ಕೆ ಆ ಮುದುಕಿ 'ಆಗ್ಲಿ' ಅಂತ ಒಪ್ಕಂತಳೆ.

ಇವಳು ಪ್ರತಿದಿನ ಹೋಗಾದು ರತ್ನ ವ್ಯಾಪಾರ ಮಾಡ್ಕಳ್ಳಾದು ಬರಾದು ಹಿಂಗೇ ಮಾಡ್ತಿರ್ತಳೆ. ಇವಳ ಬಳಿ ಒಂದು ಗಿಳಿ ಇರುತ್ತೆ. ಆ ಊರಿನ ರಾಜನ ಬಳಿ ಒಬ್ಬ ಅಕ್ಕಸಾಲೆಯವನು ಇರ್ತಾನೆ. ಇವಳು ರಾಜನ ಬಳಿ ರತ್ನ ತಗಂಡು ಬರ್ತಳೆ. ಇವಳು ಬಂದು ಹೋದ ಮೇಲೆ ಅಲ್ಲಿದ್ದ ಅಕ್ಕಸಾಲಿಗ ರಾಜನ ಬಳಿ "ಇವಳು ಹೆಂಗಸೇ ಹೊರತು, ಗಂಡಸಲ್ಲ" ಅಂತ ಹೇಳ್ತನೆ. ಆಗ ರಾಜ ನಿನಗೆ ಹೇಗೆ ಗೊತ್ತು ? ಅಂತನೆ. ಆಗ ಅಕ್ಕಸಾಲಿಗ, "ಈ ದಿನ ನೀನು ಅವಳನ್ನು ಊಟಕ್ಕೆ ಕರೆ. ಊಟಕ್ಕೆ ಮುಂಚೆ ಸ್ನಾನ ಮಾಡಬೇಕೆಂದು ಹೇಳು" ಎಂದು ಹೇಳಿದ. ಅದರಂತೆ ರಾಜ ಏರ್ಪಾಡು ಮಾಡ್ತನೆ. ಇವಳು ಊಟಕ್ಕೆ ಹೊರಡೋ ಮುಂಚೆ ಇವಳ ಹತ್ತಿರ ಇದ್ದ ಗಿಣಿ "ಅಕ್ಕ ಇವತ್ತು ನೀನು ರಾಜನ ಕೈವಶ ಆಗ್ತೀಯ" ಅಂತ ಹೇಳುತ್ತೆ. ಅದು ಎಲ್ಲಾ ವಿಷಯಾನು ಹೇಳುತ್ತೆ. ಆಗ ಅವಳಿಗೆ ಯೋಚ್ನೆ ಹತ್ಕಳುತ್ತೆ. ಆಗ ಗಿಣಿನೇ ಒಂದುಪಾಯ ಹೇಳ್ಕೊಡುತ್ತೆ. "ನೀನು ಸ್ನಾನ ಮಾಡಕೆ ಮುಂಚೆ ಒಂದು ಗಂಧದ ಕಡ್ಡಿ ಹಚ್ಚಿ ನನ್ನ ಕೈಗೆ ಕೊಡು, ನಾನು ಅದನ್ನ ಹತ್ತಿರದ ಹುಲ್ಲು ಮೆದೆಗೆ ಚುಚ್ಚಿ ಬಿಡುತ್ತೇನೆ, ಆಗ ಮೆದೆ ಹತ್ಕಂಡು ಉರಿಯುತ್ತೆ. ಎಲ್ಲರೂ ಅಲ್ಲಿಗೆ ಓಡಿ ಬರ್ತರೆ. ನೀನು ಅಷ್ಟರೊಳಗೆ ಸ್ನಾನ ಮುಗಿಸಿ ಬಿಡು" ಅಂತ ಹೇಳ್ಕೊಡುತ್ತೆ.

ಇವಳು ರಾಜನ ಮನೆಗೆ ಊಟಕ್ಕೆ ಹೋಗ್ತಳೆ. ರಾಜ, ಊಟಕ್ಕೆ ಮುಂಚೆ ಸ್ನಾನ ಮಾಡ್ಕೊಂಡು ಬರಬೇಕು ಅಂತ ಹೇಳ್ತನೆ. ಆಗ ಇವಳು ಗಿಳಿ ಹೇಳಿದಂಗೆ ಮಾಡ್ತಳೆ. ಒಂದು ಗಂಧದ ಕಡ್ಡಿ ಹಚ್ಚಿ ಸೂರಿಗೆ ಸಿಕ್ಕಿಸ್ತಳೆ. ಗಿಣಿ ಬಂದು ಅದನ್ನ ಕಚ್ಚಿಕೊಂಡು ಹೋಗಿ ಒಂದು ಹುಲ್ಲು ಮೆದೆಗೆ ಇಟ್ಟು ಬಿಡುತ್ತೆ. ಅದು ಗಾಳಿಗೆ ಹತ್ಕೊಂಡು ಉರಿಯೋಕೆ ಶುರುವಾಗುತ್ತೆ. ಜನರೆಲ್ಲಾ ಆ ಕಡೆ ಓಡಿ ಹೋಗ್ತರೆ. ಇವಳು ಸ್ನಾನ ಮುಗಿಸಿಕೊಂಡು ಗಂಡು ರೂಪನ್ನು ಧರಿಸಿ ಹೊರಕ್ಕೆ ಬರ್ತಳೆ. ಊಟ ಉಪಚಾರ ಎಲ್ಲ ಮುಗಿಯುತ್ತೆ. ಇವಳು ತನ್ನ ಜಾಗಕ್ಕೆ ಹಿಂತಿರುಗಿದ ಮೇಲೆ ರಾಜ ಅಕ್ಕಸಾಲಿಗನನ್ನು ಕೇಳ್ತನೆ. ಈಗ ಏನು ಹೇಳ್ತಿಯ ಅಂತ. ಆಗ

ಅವನು ಇನ್ನೂ ಒಂದು ಪರೀಕ್ಷೆಗೆ ಒಡ್ಡು ಅಂತ ಹೇಳಿ ಕೊಡ್ತನೆ. ಅವಳನ್ನು ಕಾಳಿಕಾದೇವಿ ದೇವಸ್ಥಾನಕ್ಕೆ ಹೊರಡುವಂತೆ ಏರ್ಪಾಡ್ ಮಾಡು, ಹೇಗೂ ಅಲ್ಲಿಗೆ ಹೋಗಬೇಕಾದರೆ ಹೊಳೆಯಲ್ಲಿ ಸ್ನಾನ ಮಾಡಿಯೇ ಹೋಗಬೇಕು. ಆಗ ಅವಳ ನಿಜರೂಪ ಬಯಲಾಗುತ್ತೆ ಅಂತಾನೆ.

ರಾಜ ಅದೇ ರೀತಿ ಇವಳನ್ನು ಕಾಳಿಕಾದೇವಿ ದೇವಸ್ಥಾನಕ್ಕೆ ಹೊರಡುವಂತೆ ಏರ್ಪಾಡ್ ಮಾಡ್ತನೆ. ಆ ದಿನವೂ ಗಿಣಿ "ಈ ದಿನ ನೀನು ರಾಜನ ವಶ ಆಗ್ತಿಯ" ಅನ್ನುತ್ತೆ. ಇವಳಿಗೆ ಮತ್ತೆ ಯೋಚ್ನೆ ಹತ್ಕೊಳುತ್ತೆ. ಈ ಸಾರಿನೂ ಗಿಣಿನೇ ಇನ್ನೊಂದು ಉಪಾಯ ಹೇಳ್ಕೊಡುತ್ತೆ. "ನನಗೆ ಒಂದು ಬಿಲ್ಲು ಬೇಕು ಅಂತ ರಾಜನನ್ನು ಕೇಳು. ಅವನು ಕೊಡುತ್ತಾನೆ. ನೀನು ದೇವಸ್ಥಾನಕ್ಕೆ ಹೋಗುವಾಗ ಆ ಬಿಲ್ಲನ್ನು ಜತೆಯಲ್ಲಿ ತಗಂಡು ಹೋಗು. ಹೋಗುವಾಗ ಒಂದು ಗರುಡ ಬರುತ್ತೆ. ಅದನ್ನ ಬಿಲ್ಲಿಂದ ಹೊಡೆ. ಅದು ಕೆಳಕ್ಕೆ ಬೀಳುತ್ತೆ. ಆಗ ನೀನು ಸೂತ್ಕ ಆಯ್ತು, ಮಡಿಬಟ್ಟೆ ಹಾಕ್ಕೊಬೇಕು, ಮನೆಗೆ ಹೋಗಿ ಮಡಿಬಟ್ಟೆ ತಗಂಡು ಬರ್ತೀನಿ ಅನ್ನು. ಆಗ ರಾಜ ನಾನೇ ಹೋಗಿ ತರ್ತಿನಿ ಅಂತ ಹೋಗ್ತನೆ. ಅವನು ಬರುವುದರಲ್ಲಿ ನೀನು ಸ್ನಾನ ಮುಗಿಸಿಬಿಡು" ಅಂತ ಹೇಳ್ಕೊಡುತ್ತೆ, ಇವಳು ಹಾಗೆ ಮಾಡ್ತಳೆ. ರಾಜ ಮನೆಗೆ ಹೋಗಿ ಬೇರೆ ಬಟ್ಟೆ ತಗಂಡು ಬರುವುದರಲ್ಲಿ ಇವಳು ಸ್ನಾನ ಮುಗಿಸಿ ಕಾಳಿಕಾದೇವಿ ದೇವಸ್ಥಾನಕ್ಕೆ ಹೋಗಿರ್ತಳೆ.

ದೇವಸ್ಥಾನದ ಒಳಗಿದ್ದ ಸೆರೆಯಾಳುಗಳನ್ನೆಲ್ಲ ನೋಡ್ತಳೆ. ರಾಜನಿಗೆ ಹೇಳಿ ಅವರನ್ನೆಲ್ಲ ಬಿಡಿಸ್ತಳೆ. ತನ್ನ ಅಣ್ಣಂದಿರು ಅಂತ ಅವಳಿಗೆ ಗೊತ್ತಾದ ಮೇಲೆ ಆರು ಜನರನ್ನೂ ಮುದುಕಿ ಮನೆಗೆ ಕರೆದುಕೊಂಡು ಬರ್ತಳೆ. ಅನಂತರ ಅವರನ್ನು ತನ್ನ ರಾಜ್ಯಕ್ಕೆ ಕಳಿಸಿಕೊಡ್ತಳೆ. ಇವಳೂ ಊರಿಗೆ ಹೊರಡಲೆಂದು ಹೊರಡ್ತಳೆ. ಆ ದೊರೆನೂ ಜತೆಲೇ ಹೊರಡ್ತನೆ. ಇವಳಿಗೆ ಅಡ್ಡಲಾಗಿ ಒಂದು ಹೊಳೆ ಸಿಕ್ಕುತ್ತೆ. ಆಗ ಇವಳು ಈ ಹೊಳೆಯನ್ನು ಎರಡು ಭಾಗ ಮಾಡು, ನಾನು ನನ್ನ ನಿಜರೂಪ ತೋರುತ್ತೇನೆ ಅಂತ ಹೇಳ್ತಳೆ. ಅದರಂತೆ ರಾಜ ಹೊಳೆಯನ್ನು ಎರಡು ಭಾಗ ಮಾಡಿ ಕೊಡ್ತನೆ. ರಾಜನೂ ಅವಳ ಜತೆಯಲ್ಲಿಯೇ ಹೋಗ್ತನೆ. ಆಚೆಗೆ ಹೋದ ಮೇಲೆ ತನ್ನ ನಿಜರೂಪವನ್ನ ತೋರಿಸ್ತಳೆ. ಆಗ ಅವನು "ನಾನು ನಿನ್ನ ಮದುವೆಯಾಗಿ, ನಿನ್ನ ಹೊಟ್ಟೆಯನ್ನು ಬಗೆದು ಕರುಳನ್ನು ತೆಗೆದು ನನ್ನ ಕೊರಳಿಗೆ ಹಾರವನ್ನು ಹಾಕ್ಕೊತೀನಿ" ಅಂತ ಶಪ್ತ ಮಾಡ್ತನೆ. ಅದಕ್ಕೆ ಅವಳೂ ಒಂದು ಶಪ್ತ ಮಾಡ್ತಳೆ. "ನನ್ನ ಮಗನಿಂದಲೇ ನಿನ್ನ ಎಡೆಮುಡಿ ಕಟ್ಟಿಸಿ ಹಾಕ್ತೀನಿ" ಅಂತಳೆ. ಆಗ ದೊರೆ ಇವಳ ತಂದೆ ತಾಯಿಗಳ ಬಳಿ ಹೋಗಿ ಮದುವೆ ಮಾಡಿಕೊಡುವಂತೆ ಕೇಳ್ತನೆ. ಇಬ್ಬರಿಗೂ ಮದುವೆಯಾಗುತ್ತದೆ, ಇಬ್ರೂ ಒಂದೊಂದು ಶಪ್ತ ಮಾಡಿರ್ತರಲ್ಲ, ಅದುನ್ನ ಗೆದ್ಕಳಕ್ಕೆ ಉಪಾಯ ಹುಡುಕ್ತಿರ್ತರೆ.

ಒಂದು ರಾತ್ರಿ ರಾಜನ ಮಗಳು ತನ್ನಂಗೇ ಒಂದು ಗೊಂಬೆ ಮಾಡಿ, ಅದರ ಹೊಟ್ಟೆ ಒಳಕ್ಕೆ ಕರುಳಿನಂಗೇ ಮಾಡಿ, ಹಾಕ್ತಳೆ. ಅದಕ್ಕೆ, ಉದ್ದಿನ ಹಿಟ್ಟು ತಗಂಡು ಅದನ್ನ ದಾರಕ್ಕೆ ಮೆತ್ತಿ ಇಡ್ತಳೆ. ಅವನು ಕತ್ಲೇಲಿ ಅದೇ ಕರುಳು ಅಂತ ತಗಂಡು ತನ್ನ ಕೊಳ್ಗೆ ಸುತ್ಕಂತನೆ. ಇವನು ಮಾರನೇ ದಿನ ಎದ್ದು ತನ್ನ ರಾಜ್ಯಕ್ಕೆ ಹೋಗ್ತನೆ. ಇವಳು ಅಪ್ಪನ ಮನೆಯಲ್ಲೇ ಇರ್ತಳೆ. ಅವಳೂ ಸತ್ತೋದ್ಲು ಅಂತ ಇವನು ತಿಳ್ಕೊಂಡಿರ್ತನೆ. ಅವಳಿಗೆ ಒಂದು ಮಗು ಆಗುತ್ತೆ. ಆ ಮಗನ್ನ ಹನ್ನೆರಡು ವರ್ಷದವರೆಗೆ ಚೆನ್ನಾಗಿ ಸಾಕ್ತಳೆ. ಅವನು ಹೊರಗಡೆ ಗೋಲಿ ಆಟ ಆಡಕೆ ಹೋಗಿರ್ತನೆ. ಎಲ್ಲೋದ್ರು ಇವನೇ ಗೆಲ್ತಿರ್ತನೆ. ಒಂದು ದಿನ ಇವನು ಮನೆಗೆ ಬಂದು ತಾಯಿ ಹತ್ತಿರ ನನ್ನ

©KTBS Not to be republished

ತಂದೆಯಾರು ಅಂತ ಕೇಳ್ತನೆ. ಆಗ ಅವಳು ತನ್ನ ಗಂಡನೊಂದಿಗೆ ಮಾಡಿದ್ದ ಶಪ್ತವನ್ನು ತಿಳಿಸ್ತಾಳೆ. ಆಗ ಇಬ್ಬರೂ ಅಡಗೂರಿಗೆ ಹೋಗ್ತರೆ. ಅಲ್ಲಿ ಆ ಮುದುಕಿಯ ಮನೆಯಲ್ಲಿಯೇ ಇಳ್ಕಂತರೆ. ಈ ಹುಡುಗ ಹಾಗೂ ಹೀಗೂ ಮಾಡಿ ಆ ರಾಜನ ಜತೆ ಸ್ನೇಹ ಬೆಳಿಸ್ತನೆ. ಅವನೂ ಇವನ ಜತೆ ತಮಾಷೆಯಾಗಿ ಅದೂ ಇದೂ ಆಟ ಆಡ್ತಿರ್‍ತಾನೆ. ಒಂದು ದಿನ ಹಗ್ಗದ ಆಟ ಆಡ್ತಿದ್ದಾಗ, ಇವನು ಹಗ್ಗದಿಂದಲೇ ರಾಜನ ಎಡೆಮುಡಿ ಕಟ್ಟಿಬಿಡ್ತನೆ. ತನ್ನ ತಾಯಿನ ಕರೆದುಕೊಂಡು ಬಂದು ಅದುನ್ನ ತೋರಿಸ್ತನೆ. ಆಗ ಇಬ್ರೂ ತಮ್ಮ ತಮ್ಮ ಶಪ್ತ ನೆರವೇರಿತೆಂದು ತಿಳಿದುಕೊಂಡು, ಆ ಅಡಗೂರಿನಲ್ಲಿಯೇ ಮಗನೊಂದಿಗೆ ಸುಖವಾಗಿರ್‍ತರೆ.

## ಕರ್ತೃ – ಭಾವ – ಆಕರ

**ಡಾ. ಡಿ.ಕೆ. ರಾಜೇಂದ್ರ** ಅವರು ೧೩–೦೪–೧೯೪೯ ರಲ್ಲಿ ತುಮಕೂರು ಜಿಲ್ಲೆಯ ತುರವೇಕೆರೆ ತಾಲೂಕಿನ **ದಂಡಿನಶಿವಾರದಲ್ಲಿ** ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು.



೧೯೬೯ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕರಾಗಿ ಸೇವೆ ಆರಂಭಿಸಿದರು. ಅನಂತರ ಆ ಸಂಸ್ಥೆಯಲ್ಲಿ ರೀಡರ್, ಪ್ರಾಧ್ಯಾಪಕ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. **ಪ್ರಬಂಧ ಸಾಹಿತ್ಯ, ವಿಚಾರ ಸಾಹಿತ್ಯ, ವಿಮರ್ಶೆ, ವ್ಯಕ್ತಿ ಚಿತ್ರಣ, ಮಕ್ಕಳ ಸಾಹಿತ್ಯ, ಜಾನಪದ ಸಂಗ್ರಹ, ಸಂಪಾದನೆ ಹಾಗೂ ವಿಶ್ಲೇಷಣೆ** ಮುಂತಾದ ಸಾಹಿತ್ಯ ಕ್ಷೇತ್ರದಲ್ಲಿ ೩೬ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಜಾನಪದ ತಜ್ಞ' ಪ್ರಶಸ್ತಿ, ಎರಡು ಬಾರಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯ ಪುಸ್ತಕ ಬಹುಮಾನ, ಜೀ.ಶಂ.ಪ. 'ಜಾನಪದ ತಜ್ಞ' ಪ್ರಶಸ್ತಿ ಸಂದಿವೆ. ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

* * *

ಹೆಣ್ಣೊಬ್ಬಳು ತನ್ನ ಬುದ್ಧಿ ಸಾಮರ್ಥ್ಯದಿಂದ ರಾಜನೊಬ್ಬನನ್ನು ಮಣಿಸುವ ತಂತ್ರಗಾರಿಕೆ ಪ್ರಸ್ತುತ ಕತೆಯ ವಸ್ತು. ತನ್ನ ಅಣ್ಣಂದಿರನ್ನು ರಕ್ಷಿಸುವುದಕ್ಕಾಗಿ ವೈರಿ ರಾಜನನ್ನು ಉಪಾಯವಾಗಿ ಸೋಲಿಸಿ ಕೊನೆಗೆ ಅದೇ ರಾಜನನ್ನು ಮದುವೆಯಾಗಿ ಶಪಥ ಪೂರೈಸಿದ ಕುತೂಹಲ ಕತೆಯಿದು. ಇದು ಹೆಣ್ಣಿನ ಛಲ, ಬುದ್ಧಿವಂತಿಕೆ, ಭ್ರಾತೃಪ್ರೇಮ ವ್ಯಕ್ತಪಡಿಸುವ ಜಾನಪದ ಕತೆ. ಶತ್ರು ರಾಜ ರೂಪಿಸಿದ ಎಲ್ಲ ಸವಾಲುಗಳಿಗೂ ದಿಟ್ಟ ಉತ್ತರ ನೀಡುವ ಮೂಲಕ ರಾಜಕುಮಾರಿ ತನ್ನ ಕಾರ್ಯ ಸಾಧನೆಯಲ್ಲಿ ಜಾಣ್ಮೆಯ ಯಶಸ್ಸನ್ನು ಸಾಧಿಸಿದ್ದಾಳೆ. ಇದೇ ಈ ಕತೆಯ ಮೌಲಿಕ ಆಶಯ.

* * *

ಪ್ರಸ್ತುತ ಜನಪದ ಕಥೆಯ ಭಾಗವನ್ನು ಡಾ. ಡಿ. ಕೆ. ರಾಜೇಂದ್ರ ಅವರು ಸಂಪಾದಿಸಿರುವ **ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳು** ಸಂಕಲನ(ಪುಟ–೧೧೨–೧೧೫) ದಿಂದ ಆಯ್ದು ಪರಿಷ್ಕರಿಸಿ ನಿಗದಿಪಡಿಸಿದೆ.

©KTBS Not to be republished

## ಪದ-ಗದ್ಯಾರ್ಥ

ಅಕ್ಕಸಾಲಿಗ – ಚಿನ್ನದ ಕೆಲಸ ಮಾಡುವವ ; ಮೆದೆ – ಹುಲ್ಲಿನ ಬಣವೆ ; ಸೂರು – ಮಾಡು (ನಾಮಪದ); ಸೂತ್ಕ – ಮೈಲಿಗೆ ; ಎಡೆಮುಡಿ – ಕೈಕಾಲು ಸೇರಿಸಿ ಕಟ್ಟಿ ಹಾಕುವುದು, ಹೆಡೆಮುರಿಕಟ್ಟು; ಕತ್ಲೇಲಿ – ಕತ್ತಲೆಯಲ್ಲಿ ; ಜರಿ – ಹೀಯಾಳಿಸು

## ಪಠ್ಯಾಧಾರ ಟಿಪ್ಪಣಿ

**ಅಡಗೂರು :** ಜನಪದ ಕಥೆಗಳಲ್ಲಿ ಬರುವ ಕಾಲ್ಪನಿಕ ಊರುಗಳ ಹೆಸರಿನಲ್ಲಿ ಒಂದು. ಇದು ಒಂದು ರಾಜ್ಯದ ಹೆಸರು.

**ಮಾತನಾಡುವ ಗಿಳಿ :** ಜನಪದ ಕಥೆಗಳ ವೈಶಿಷ್ಟ್ಯವೇನೆಂದರೆ ಅಲ್ಲಿ ಮನುಷ್ಯ ಮಾತ್ರ ಮಾತುಬಲ್ಲವನಲ್ಲ. ಕತೆಗಳಲ್ಲಿ ಬರುವ ಎಲ್ಲಾ ಪ್ರಾಣಿ, ಪಕ್ಷಿ, ಮರ, ಬೆಟ್ಟ-ಗುಡ್ಡಗಳಿಗೂ ಮಾತು ಬರುತ್ತದೆ. ಜನಪದರು ಇವೆಲ್ಲವನ್ನು ಮಾತನಾಡಿಸುವ ಮೂಲಕ ಪ್ರಕೃತಿಯ ಸಮಸ್ತ ಜೀವಿಗಳನ್ನು ಅಭಿವ್ಯಕ್ತಿಸುತ್ತಾರೆ.

## ಕಲಿತ ಪಾಠದ ಅಭ್ಯಾಸ

- **ವಿಷಯ ಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ಅಡಗೂರು ರಾಜನ ಮೇಲೆ ಯುದ್ಧ ಹೂಡಲು ಕಾರಣವೇನು?

೨. ಅಡಗೂರಿನಲ್ಲಿ ರಾಜನ ಮಗಳು ಎಲ್ಲಿ ಇಳಿದುಕೊಂಡಳು?

೩. ರಾಜನು ರಾಜಕುಮಾರಿಗೆ ಸೂಚಿಸಿದ ಮೊದಲ ಪರೀಕ್ಷೆ ಏನು?

೪. ರಾಜನು ಮಾಡಿದ ಶಪಥವೇನು?

೫. ರಾಜನನ್ನು **ಎಡೆಮುಡಿ** ಕಟ್ಟಿದವರು ಯಾರು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ರಾಜಕುಮಾರರು ಕಾಳಿಕಾದೇವಿ ದೇವಸ್ಥಾನದಲ್ಲಿ ಸೆರೆಯಾಗಲು ಕಾರಣವೇನು?

೨. ರಾಜನ ಮಗಳು ಗಂಡುವೇಷವನ್ನು ಹಾಕಿಕೊಂಡು ಏನು ಮಾಡಿದಳು?

೩. ಊಟಕ್ಕೆ ಮೊದಲು ಸ್ನಾನ ಮಾಡಿ ಬರುವಂತೆ ರಾಜನು ರಾಜಕುಮಾರಿಗೆ ಹೇಳಲು ಕಾರಣವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

೧. ರಾಜಕುಮಾರಿ ಗಂಡುವೇಷದಲ್ಲಿ ಅಡಗೂರಿಗೆ ಹೋಗಲು ಕಾರಣವೇನು?

೨. ರಾಜಕುಮಾರಿಯನ್ನು ರಾಜನು ಮದುವೆಯಾಗಲು ಬಯಸಿದ್ದೇಕೆ?

©KTBS Not to be republished

ಈ. **ಸಂದರ್ಭಾನುಸಾರ ವಿವರಿಸಿ**

೧. "ನನ್ನ ಆರುಜನ ಅಣ್ಣಂದಿರು ಎಲ್ಲಿದ್ದಾರೆ?"

೨. "ಇವಳು ಹೆಂಗಸೇ ಹೊರತು ಗಂಡಸಲ್ಲ"

೩. "ನನಗೆ ಒಂದು ಬಿಲ್ಲು ಬೇಕು"

೪. "ನಿನ್ನ ಎಡೆಮುಡಿ ಕಟ್ಟಿಸಿ ಹಾಕ್ತಿನಿ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಬಿಟ್ಟ ಸ್ಥಳ ತುಂಬಿ**

೧. ಆರು ಮಂದಿಯನ್ನು ಊರಿನಲ್ಲಿದ್ದ __________ ದೇವಸ್ಥಾನದಲ್ಲಿ ಸೆರೆ ಹಾಕಿಸ್ತಾನೆ.

೨. ರಾಜನ ಬಳಿ __________ ಇರ್ತಾನೆ.

೩. ರಾಜಕುಮಾರಿ ಗಂಧದ ಕಡ್ಡಿ ಹಚ್ಚಿ __________ ಸಿಕ್ಕಿಸ್ತಾಳೆ.

೪. ರಾಜಕುಮಾರಿ ಮಗನನ್ನು __________ ವರ್ಷದವರೆಗೆ ಸಾಕುತ್ತಾಳೆ.

©KTBS Not to be republished

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ನಾಮವಾಚಕಗಳ ಪರಿಚಯಾತ್ಮಕ ವಿವರ**

**ನಾಮವಾಚಕಗಳು : ನಾಮವಾಚಕ ಪ್ರಕೃತಿಗಳನ್ನು ವಸ್ತುವಾಚಕ, ಗುಣವಾಚಕ, ಸಂಖ್ಯಾವಾಚಕ, ಸಂಖ್ಯೇಯವಾಚಕ, ಭಾವನಾಮ, ಪರಿಮಾಣವಾಚಕ, ದಿಗ್ವಾಚಕ, ಸರ್ವನಾಮ** ಎಂಬುದಾಗಿ ಅನೇಕ ಗುಂಪುಗಳಾಗಿ ವಿಂಗಡಿಸಬಹುದು.

**ವಸ್ತುವಾಚಕ : ವಸ್ತುಗಳ ಹೆಸರನ್ನು ಹೇಳುವ ಪದಗಳೇ ವಸ್ತುವಾಚಕಗಳು.** ವಸ್ತುಗಳನ್ನು **ಚೇತನ** (ಚೇತನವುಳ್ಳ), **ಅಚೇತನ** (ಚೇತನವಿಲ್ಲದ್ದು) ಎಂದು ವಿಭಾಗಿಸಲಾಗಿದೆ.

**ಉದಾ :** ಮನುಷ್ಯ, ಪ್ರಾಣಿ, ಪಕ್ಷಿ ಇವು **ಚೇತನವುಳ್ಳವು.**

ನೆಲ, ಜಲ, ಹಣ್ಣು, ಕಾಯಿ, ಮನೆ, ಬೆಟ್ಟ ಇವು **ಚೇತನವಿಲ್ಲದವು.**

ಇಂತಹ ವಸ್ತುವಾಚಕಗಳನ್ನು **ರೂಢನಾಮ, ಅಂಕಿತನಾಮ, ಅನ್ವರ್ಥನಾಮ**ಗಳೆಂದು ಮೂರು ವಿಭಾಗ ಮಾಡಲಾಗಿದೆ.

**ರೂಢನಾಮ :** ರೂಢಿಯಿಂದ ಬಂದಿರುವ **ನದಿ, ಪರ್ವತ, ಮನುಷ್ಯ, ಹೆಂಗಸು, ಮರ, ದೇಶ** ಮುಂತಾದ ಪದಗಳು **ರೂಢನಾಮಗಳು.**

**ಅಂಕಿತನಾಮ :** ವ್ಯವಹಾರಕ್ಕಾಗಿ ಅಥವಾ ಗುರುತಿಸಲು ಇಟ್ಟ ಹೆಸರುಗಳಾದ **ಕಾವೇರಿ, ನಕುಲ, ಹಿಮಾಲಯ, ಶಂಕರ, ಬೆಂಗಳೂರು, ಬೇವು** ಮುಂತಾದ ಹೆಸರುಗಳೇ **ಅಂಕಿತನಾಮಗಳು.**

**ಅನ್ವರ್ಥನಾಮ :** ಅರ್ಥಕ್ಕೆ ಅನುಗುಣವಾಗಿ ರಚನೆಯಾದ **ವ್ಯಾಪಾರಿ, ವಿದ್ವಾಂಸ, ರೋಗಿ** ಮುಂತಾದ ಪದಗಳೇ **ಅನ್ವರ್ಥನಾಮಗಳು.**

**ಗುಣವಾಚಕ :** ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ಹೇಳುವ ವಿಶೇಷಣಗಳೇ **ಗುಣವಾಚಕಗಳು.**

**ಉದಾ : ಒಳ್ಳೆಯ, ಕೆಟ್ಟ, ಹೊಸದು, ದೊಡ್ಡದು** ಇತ್ಯಾದಿ ಪದಗಳು.

**ಸಂಖ್ಯಾವಾಚಕ :** ಸಂಖ್ಯೆಯನ್ನು ಸೂಚಿಸುವ ಪದಗಳೇ **ಸಂಖ್ಯಾವಾಚಕಗಳು.**

**ಉದಾ : ಒಂದು, ಎರಡು, ಹತ್ತು, ನೂರೈದು, ಸಾವಿರ, ಲಕ್ಷ** ಇತ್ಯಾದಿ.

**ಸಂಖ್ಯೇಯವಾಚಕ :** 'ಮೂವರು ಮಕ್ಕಳು', 'ನಾಲ್ಕನೆಯ ತರಗತಿ', 'ಐವರು ರಾಜಭಟರು', 'ಇಪ್ಪತ್ತೆರಡನೆಯ ತಾರೀಕು'. ಇಲ್ಲಿ **'ಮೂವರು', 'ನಾಲ್ಕನೆಯ', 'ಐವರು' 'ಇಪ್ಪತ್ತೆರಡನೆಯ'** ಪದಗಳು ಸಂಖ್ಯೆಯಿಂದ ಕೂಡಿರುವ ವಸ್ತುಗಳನ್ನು ಸೂಚಿಸುತ್ತವೆ. ಹೀಗೆ–**ಸಂಖ್ಯೆಯಿಂದ ಕೂಡಿರುವ ವಸ್ತುಗಳನ್ನು ಹೇಳುವ ಪದಗಳೆಲ್ಲ ಸಂಖ್ಯೇಯವಾಚಕಗಳು** (ಎರಡನೆಯ, ನಾಲ್ಕನೆಯ, ಹತ್ತನೆಯ ಇತ್ಯಾದಿ) ಇವುಗಳನ್ನು ಇತ್ತೀಚೆಗೆ ಎರಡನೇ, ನಾಲ್ಕನೇ, ಹತ್ತನೇ ಎಂದೂ ಸಹಾ ಕೆಲವರು ಬಳಸುತ್ತಿದ್ದಾರೆ.

**ಭಾವನಾಮ :** ವಸ್ತು ಮತ್ತು ಕ್ರಿಯೆಗಳ ಭಾವವನ್ನು ತಿಳಿಸುವ ಪದಗಳೇ **ಭಾವನಾಮ.**

ಉದಾ : ಕೆಚ್ಚನೆಯದರ ಭಾವ – **ಕೆಂಪು**

ಬಿಳಿದರ ಭಾವ – **ಬಿಳುಪು**

ಹಿರಿದರ ಭಾವ – **ಹಿರಿಮೆ**

ನೋಡುವುದರ ಭಾವ – **ನೋಟ**

**ಪರಿಮಾಣವಾಚಕ :** **'ಅಷ್ಟು ದೊಡ್ಡ ಮರವನ್ನು ಹೇಗೆ ಕಡಿದರು?' 'ಇಷ್ಟು ಜನರು ಇಲ್ಲಿ ಸೇರಿ ಏನು ಮಾಡುತ್ತಾರೆ?'** 'ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ?' – ಈ ವಾಕ್ಯಗಳಲ್ಲಿ **'ಅಷ್ಟು' 'ಇಷ್ಟು', 'ಎಷ್ಟು'** ಎಂಬ ಪದಗಳಿವೆ. ಈ ಪದಗಳು ನಿರ್ದಿಷ್ಟ ಅಳತೆ, ಸಂಖ್ಯೆಗಳನ್ನು ಹೇಳುವುದಿಲ್ಲ. ಕೇವಲ ಪರಿಮಾಣ ಅಥವಾ ಗಾತ್ರವನ್ನು ಸೂಚಿಸುತ್ತವೆ. ಹೀಗೆ – **ವಸ್ತುವಿನ ಪರಿಮಾಣ, ಗಾತ್ರವನ್ನು ಹೇಳುವ 'ಅಷ್ಟು', 'ಇಷ್ಟು', 'ಹಲವು', 'ಕೆಲವು', 'ಎನಿತು', 'ಅನಿತು' ಆಸು, ಈಸು, ಏಸು ಮುಂತಾದ ಪದಗಳೇ 'ಪರಿಮಾಣವಾಚಕ'ಗಳು.**

**ದಿಗ್ವಾಚಕ :** ದಿಕ್ಕುಗಳನ್ನು ಸೂಚಿಸುವ ಪದಗಳೇ **ದಿಗ್ವಾಚಕಗಳು.**

**ಉದಾ :** ಮೂಡಣ, ತೆಂಕಣ, ಪಡುವಣ, ಬಡಗಣ, ಪೂರ್ವ, ಪಶ್ಚಿಮ, ಆಗ್ನೇಯ, ದಕ್ಷಿಣ, ಉತ್ತರ, ಈಶಾನ್ಯ, ಇತ್ಯಾದಿ.



© KTBS Not to be republished

**ಸರ್ವನಾಮ :** ರಾಜಣ್ಣ ಅಜ್ಜನ ಮನೆಗೆ ಹೊರಟನು. ಅವನ ತಮ್ಮ ಕೃಷ್ಣನು 'ನಾನೂ ಬರುತ್ತೇನೆ' ಎಂದನು. ತಂಗಿ ರಾಜೀವಿ 'ತಾನೂ ಬರುವೆನೆಂದಳು'. ಆಗ ರಾಜಣ್ಣ 'ನೀವು ಇಬ್ಬರೂ ಆದಷ್ಟು ಬೇಗ ತಯಾರಾಗಿರಿ' ಎಂದನು. ಇಲ್ಲಿ **ಅವನ, ನಾನೂ, ತಾನೂ, ನೀವು** ಎಂಬ ಪದಗಳು ಬೇರೆ ಬೇರೆ ನಾಮಪದಗಳ ಬದಲಿಗೆ ಪ್ರಯೋಗಿಸಲ್ಪಟ್ಟವು. ಹೀಗೆ **–ನಾಮಪದಗಳ ಸ್ಥಾನದಲ್ಲಿ ಬಂದು ಅವುಗಳ ಕಾರ್ಯವನ್ನು ನಿರ್ವಹಿಸುವ ಪದಗಳೇ ಸರ್ವನಾಮಗಳು.** ಈ ಸರ್ವನಾಮಗಳನ್ನು **ಪುರುಷಾರ್ಥಕ, ಪ್ರಶ್ನಾರ್ಥಕ ಮತ್ತು ಆತ್ಮಾರ್ಥಕ ಸರ್ವನಾಮಗಳೆಂದು ಮೂರು** ವಿಧಗಳಾಗಿ ವಿಂಗಡಿಸಲಾಗಿದೆ.

**ಪುರುಷಾರ್ಥಕ ಸರ್ವನಾಮ:** ಇದನ್ನು ಮತ್ತೆ **ಮೂರು** ವಿಭಾಗ ಮಾಡಿದೆ.

- **ಉತ್ತಮ ಪುರುಷ** : ನಾನು ನಾವು
- **ಮಧ್ಯಮ ಪುರುಷ** : ನೀನು ನೀವು
- **ಪ್ರಥಮ ಪುರುಷ/ಅನ್ಯ ಪುರುಷ** : ಅವನು – ಇವನು ಅವಳು – ಇವಳು ಅವರು – ಇವರು ಅದು – ಅವು ಇದು – ಇವು

(ಇತ್ತೀಚೆಗೆ ಇವುಗಳನ್ನು ಪ್ರಥಮ, ದ್ವಿತೀಯ, ತೃತೀಯ ಪುರುಷಗಳೆಂದು ಹೇಳುವ ವಾಡಿಕೆ ಆರಂಭವಾಗಿದೆ.)

**ಪ್ರಶ್ನಾರ್ಥಕ ಸರ್ವನಾಮ :** ಯಾರು ಯಾವುದು ಏನು ಯಾವನು ಯಾವಳು

**ಆತ್ಮಾರ್ಥಕ ಸರ್ವನಾಮ :** ತಾನು ತಾವು ತನ್ನ ತಮ್ಮ

- **ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ನಾಮಪ್ರಕೃತಿಗಳ ವಿಧಗಳಾವುವು?

೨. ಭಾವನಾಮ ಎಂದರೇನು?

೩. ಸರ್ವನಾಮ ಎಂದರೇನು? ವಿಧಗಳಾವುವು?

೪. ಪುರುಷಾರ್ಥಕ ಸರ್ವನಾಮಗಳಲ್ಲಿ ಎಷ್ಟು ವಿಧ?

- **ಪ್ರಾಯೋಗಿಕ ಭಾಷಾಭ್ಯಾಸ**

**೧. ಕೊಟ್ಟಿರುವ ಪದಗಳಲ್ಲಿ ರೂಢ, ಅನ್ವರ್ಥ ಮತ್ತು ಅಂಕಿತನಾಮಗಳನ್ನು ಆರಿಸಿ ಬರೆಯಿರಿ.**

ಕಾಲ ಕಾಳಿ ದೇವಸ್ಥಾನ ವ್ಯಾಪಾರಿ ರಾಜ ಅಡಗೂರು

**೨. ಕೊಟ್ಟಿರುವ ಪದಗಳಲ್ಲಿರುವ ಪ್ರಥಮ ಪುರುಷ, ಮಧ್ಯಮ ಪುರುಷ ಮತ್ತು ಉತ್ತಮ ಪುರುಷ ಪದಗಳನ್ನು ಆರಿಸಿ ಬರೆಯಿರಿ.**

ಇವನು ನೀನು ಅವರು ನಾನು ಅವಳು ಇವಳು



©KTBS Not to be republished

- **ಪಠ್ಯಾಧಾರ ಚಟುವಟಿಕೆ**

**೧. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ**

ಅಪ್ಪಣೆಕೊಡು ಸೆರೆಯಾಳು ಶಪ್ತ ಎಡೆಮುಡಿ

**೨. ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ**

೧. ಇವಳಿಗೆ ಮತ್ತೆ ಯೋಚ್ನೆ ಹತ್ಕೊಳುತ್ತೆ

೨. ಅದೇ ಕರುಳು ಅಂತ ತಗಂಡು ತನ್ನ ಕೊರಳ್ಗೆ ಸುತ್ಕಂತನೆ

೩. ನಿಮ್ಮ ಪ್ರಾದೇಶಿಕ ಭಾಷೆಗೆ ಪ್ರಸ್ತುತ ಕಥೆಯನ್ನು ನಾಟಕ ರೂಪಕ್ಕೆ ಪರಿವರ್ತಿಸಿ ಅಭಿನಯಿಸಿ.

೪. ಪ್ರಸ್ತುತ ಪಾಠದಲ್ಲಿ ಬಂದಿರುವ ಗ್ರಾಮ್ಯಪದಗಳನ್ನು ಪಟ್ಟಿಮಾಡಿ.

## ಹೆಚ್ಚಿನ ಓದು

- **ಡಾ. ಡಿ. ಕೆ. ರಾಜೇಂದ್ರ** ಅವರು ಸಂಪಾದಿಸಿರುವ **ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳು** ಸಂಕಲನದ ಇತರ ಕತೆಗಳನ್ನು ಓದಿ
- **ಡಾ. ಜೀ. ಶಂ. ಪರಮಶಿವಯ್ಯ** ಅವರ ಆಯ್ದ **ಜನಪದ ಕತೆಗಳು** ಸಂಕಲನವನ್ನು ಓದಿ
- **ಕ್ಯಾತನಹಳ್ಳಿ ರಾಮಣ್ಣ** ಅವರ ಬೀದರ ಜಿಲ್ಲೆಯ **ಜನಪದ ಕತೆಗಳು** ಪುಸ್ತಕವನ್ನು ಓದಿ

✦ ✦ ✦ ✦ ✦

©KTBS Not to be republished

# ಗದ್ಯಪಾಠ – ೬

# ಬಿಲ್ಲಹಬ್ಬ

[ನಾಟಕ]

– ಎಚ್. ಎಸ್. ವೆಂಕಟೇಶಮೂರ್ತಿ

**ಅರ್ಥೈಸಿ – ಓದಿ**

ಬಿಸಿಲುಮಚ್ಚು ಗೂಢಚಾರ್‍ರು ಧಾಂದ್ಲೆ ಎಳೆಗೂಸು ಜೋಗುಳ

ಹಾಲಾಹಲ ಕ್ಷೀರಸಾಗರಮಥನ ಸಂಕೋಲೆ ಬಿಲ್ಲಹಬ್ಬ ಅಷ್ಟಮಿ

**ನಿಗದಿತ ಮೂಲ ನಾಟಕ – ಗದ್ಯ**

[ರಾತ್ರಿ, ಮಹಾರಾಜ ಕಂಸನ ಅರಮನೆಯ ಬಿಸಿಲುಮಚ್ಚು. ಅಲ್ಲಿ ಮಂತ್ರಿ, ವೈದ್ಯ ಗುಸು ಗುಸು ಮಾತಾಡುತ್ತಿದ್ದಾರೆ. ಒಬ್ಬ ಸೇವಕ ಓಡಿಬಂದು "ಒಡೆಯರು ಬರ್ತಾ ಇದಾರೆ" ಎನ್ನುತ್ತಾನೆ. ಮಂತ್ರಿ ಮತ್ತು ಇತರರು ತಕ್ಷಣ ಎದ್ದು ಕಂಸನನ್ನು ನಿರೀಕ್ಷಿಸುತ್ತಾ ನಿಲ್ಲುತ್ತಾರೆ. ಎರಡೂ ಪಕ್ಕ ದೀವಟಿಕೆಯವರು. ಕಂಸ ರಂಗಕ್ಕೆ ಧಾವಿಸುತ್ತಾನೆ. ಮೆಟ್ಟಿಲು ಹತ್ತಿ ಬಂದಿರೋದರಿಂದ ಏದುಸಿರು ಬಿಡುತ್ತಾ ಇದ್ದಾನೆ.]

**ಕಂಸ :** ಕೃಷ್ಣ ... ಕೃಷ್ಣ... ಕೃಷ್ಣ... ಕೇಳೀ ಕೇಳೀ ನನ್ನ ಕಿವಿ ತೂತು ಬಿದ್ದುಹೋದವು ... ಯಾರು? ಯಾರು? ಈ ಕೃಷ್ಣ..? ಹಾಲು ಕೊಡಲು ಹೋದ ಪೂತನಿಯ ರಕ್ತ ಹೀರಿದನಂತೆ...... ! ಸವಾರಿ ಮಾಡು ಅಂತ ಬೆನ್ನೊಡ್ಡಿದರೆ ಶಕಟನ ಸೊಂಟಾನೆ ಮುರಿದನಂತೆ.. .. .. ! ಅವನ ಕೈಯಲ್ಲಿ ತೃಣಾವರ್ತ ಆಟದ ಬುಗುರಿಯಾಗಿ ಹೋದ ..! ಧೇನುಕ ಬೇಲದ ಹಣ್ಣು ಬಡಿಯೋ ಬಡಿಗೆಯಾದ.. .. .. ! ಗೋವರ್ಧನ ಬೆಟ್ಟ ಯಕಶ್ಚಿತ್ ಛತ್ರಿಯಾಗಿ ಹೋಯ್ತು ! ಯಾರು....?



ಯಾರ್‍ರಿ ಈ ಕೃಷ್ಣ? ಈ ಗೊಲ್ಲರ ಪೋರನಿಗೆ ಈ ಪಾಟಿ ಶಕ್ತಿನಾ.. .. ..? ಎಲ್ಲಿಂದ ಬಂತು ಈ ಶಕ್ತಿ? ಯಾರು ಕೊಟ್ರು ಈ ಶಕ್ತಿ?



© KTBS Not to be republished

**ಮಂತ್ರಿ** : [ತೊದಲುತ್ತಾ] ನಮ್.. ..ಗೂಢಚಾರ್ರು ಶೋಧನೆ ಮಾಡ್ತಿದ್ದಾರೆ ಒಡೆಯಾ ....!...

**ಕಂಸ** : [ರೇಗಿ] ನಮ್.. ..ಗೂಢಚಾರ್ರು ಶೋಧನೆ ಮಾಡ್ತಿದ್ದಾರೆ ಒಡೆಯಾ ....ಎಷ್ಟು ದಿನಾರಿ ಶೋಧನೆ ಮಾಡೋದು.. ..? ಬೆಂಕಿ, ಕೈ ಇಟ್ಟರೆ ತಕ್ಷಣ ಸುಡುತ್ತೆ... ಹಾವು, ಕಾಲಿಟ್ಟರೆ ತಕ್ಷಣ ಕಚ್ಚತ್ತೆ... ... ಶೋಧನೆ ಮಾಡ್ತಾರಂತೆ ಶೋಧನೆ.. .. ನಿಮ್ಮ ಮುಖಕ್ಕೆ ಮಂಗಳಾರತಿ ಎತ್ತ .. ...

**ಮಂತ್ರಿ** : [ಮುಖ ತಿಕ್ಕಿಕೊಳ್ಳುತ್ತಾ] ಮಾಹಿತಿ ಸಂಗ್ರಹ ಕೊನೇ ಹಂತಕ್ಕೆ ... ...

**ಕಂಸ** : ಕೊನೇ ಹಂತಕ್ಕೆ ! ಯಾರ ಕೊನೆ ಹಂತಕ್ಕೆ ? (ಅಣಕದ ನಗೆ ನಕ್ಕು) ಅಹ್ಹಾ.. ..ಕೊನೇ ಹಂತಕ್ಕೆ ಬಂದಿದೆ.. (ಇದ್ದಕ್ಕಿದ್ದಂತೆ ಲೋಕಾಭಿರಾಮಕ್ಕೆ ಬಂದು) ಬರ್ಲಿ ಬಿಡಿ.. .. ಬೇಜಾರು ಮಾಡ್ಕೋಬೇಡಿ ಇವ್ರೆ... ...ನಾನು ಹೇಳಿದೆನಲ್ಲ ಆ ಇಬ್ರು.....

**ಮಂತ್ರಿ** : (ಉತ್ಸಾಹಿತನಾಗಿ) ಇವರೇ ಒಡೆಯಾ ಅವರು... ಇವ ಶೈಲಿಕ ...ಇವ ದುರ್ವಿಧ...

**ಶೈಲಿಕ–ದುರ್ವಿಧ** : (ಹಲ್ಲು ಗಿಂಜುತ್ತಾ) ನಮಸ್ಕಾರ ಅನ್ನದಾತ ...(ಕಂಸನ ಕೈ ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಾ)

**ಶೈಲಿಕ** : ಇದು ನಿಮ್ಮ ಕೈ ಅಲ್ಲ ನಿಮ್ಮ ಕಾಲು...

**ದುರ್ವಿಧ**: ಕಾಲಲ್ಲ ... ನಿಮ್ಮ ಎಕ್ಕಡ...

**ಕಂಸ** : (ನಕ್ಕು) ಶಹಬ್ಬಾಶ್......(ಇಬ್ಬರಿಗೂ ಬೆನ್ತಟ್ಟಿ... ಕೈತೋರಿಸುತ್ತಾ)...ಇದು ಕಾಲಲ್ಲ.. ಎಕ್ಕಡಾನೂ ಅಲ್ಲ ಯಮಪಾಶ!... ...ತಿಳ್ಕೊಳ್ಳಿ.... . ಹಾ.. ..! ಏರ್ಪಾಡೆಲ್ಲ ಆಗಿದೆಯಾ.. .. ..?

**ಶೈಲಿಕ** : (ಉಗುಳು ನುಂಗಿ).. ಆಗಿದೆ ಒಡೆಯಾ .. ..ಸಾಹೇಬ್ರೆ ಬಂದು ಖುದ್ದು ಪರಾಂಬರಿಸಿದ್ದಾರೆ.. .

**ಮಂತ್ರಿ** : ಹೌದು ಒಡೆಯಾ.....ಕ್ರೀಡಾಂಗಣಕ್ಕೆ ಇರೋದು ಒಂದೇ ಹೆಬ್ಬಾಗಿಲು.. ..ಬಾಗಿಲವಾಡದ ಕಮಾನಿಗೆ ಕಿರುಗತ್ತಿ ಅಲಂಕಾರ .. ಬಾಗಿಲವಾಡದ ಕಮಾನಿನ ಮೇಲೆ ಗಾಜಿನ ರಾಜ ಗೋಪುರ.. ... ಅದೇನಾದ್ರೂ ತಲೇ ಮೇಲೆ ಬಿತ್ತು ಅಂದ್ರೆ.. .. ..ಶ್ರೀಮದ್ ರಮಾರಮಣ ಗೋವಿಂದಾ ಗೋವಿಂದ . . .

**ಕಂಸ** : ಆದ್ರೆ ಅದು ತಲೇ ಮೇಲೇ ಬೀಳ್ಬೇಕಲ್ಲಾ?

**ಶೈಲಿಕ** : ಬೀಳತ್ತೆ ಬೀಳತ್ತೆ. . .ಇಡೀ ರಚನೆ ಒಂದು ಸಣ್ಣ ಕೀಲಿನ ಮೇಲೆ ನಿಂತಿರ್ತದೆ. . ಆ ಕೀಲು ಎಳೆದುಬಿಟ್ರೆ. . . ಮುಗೀತು.. ..!

**ಕಂಸ** : ಅಬ್ಬ !. . . ಒಳ್ಳೇ ರಾಕ್ಷಸ ಕಣ್ರೀ ನೀವು. . . ಏನು ಬುದ್ಧಿ ಏನ್ಕತೆ. . ಆ ಪಿಳ್ಳಂಗೋವಿ ಕೃಷ್ಣ ಅದೇ ಬಾಗ್ಲಲ್ಲಿ ತಾನೆ ಬರ್ಬೇಕು ?

**ಮಂತ್ರಿ** : ಬೇರೆ ದಾರೀನೆ ಇಲ್ಲಾ ಅಂತೀನಿ. . .!

**ಕಂಸ** : ಅಂತೀರಿ ನನ್ನ ತಲೆ ತಿಂತೀರಿ.. .. ನಿಮಗೆ ತಲೆ ಇದೆಯೇನ್ರಿ? ಸುಮ್ನೇ ಇನ್ನೊಂದು ಬಾಗಿಲು ಇಡಿ.

**ಮಂತ್ರಿ** : ಇನ್ನೊಂದು ಬಾಗ್ಲಾ. . . ?

**ಕಂಸ** : ಎಲ್ರೂ ಬರೋ ಬಾಗ್ಲಲ್ಲಿ ನಾನೂ ಬರೋಕಾಗುತ್ತಾ ಮತ್ತೆ . . ?

**ಶೈಲಿಕ** : ಆದ್ರೆ ಒಡೆಯಾ. . .



©KTBS Not to be republished

**ಕಂಸ** : ನಿನ್ನ ಬುರುಡೆ ಒಡೆಯಾ. . .ಸರ್ಕಳ್ಳಯ್ಯ ಆಚೆ. . . . . ಏಯ್. .. ನೀನು ಬಾ ಈ ಕಡೆ. . .

**ದುರ್ವಿಧ** : ಅಪ್ಪಣೆಯಾಗಬೇಕು ಅನ್ನದಾತ. . .

**ಕಂಸ** : ನಮ್ಮ ಪಟ್ಟದ ಆನೆ ಹೇಗಿದೆ ಹೇಳು. . ಏನು ಅದರ ಹೆಸರು. . .? ಹಾ. . ಕುವಲಯಾಪೀಡ ... .....!ಕುವಲಯಾ ಪೀ. . .ಡ. .!

**ದುರ್ವಿಧ** : ಔಷಧ – ಪಥ್ಯ ಎಲ್ಲ ಮಾಡಿದೀನಿ . . ಹಳದಿ ಬಣ್ಣ ನೋಡಿದ್ರೆ ಸಾಕು . . .ಫೀ. . .ಅಂತ ಮೈಮೇಲೇ ಬೀಳತ್ತೆ. . .

**ಕಂಸ** : ಬೀಳಬೇಕು ಮತ್ತೆ. . ಬೀಳಬೇಕು...ಕೆಲ್ಸ ಆದಮೇಲೆ ಮದ್ದು ಹಾರ್ಸಿ ಸುಟ್ಟುಬಿಡಿ ಅದನ್ನ ಬೇರೆ ಇನ್ನೇನಾದ್ರೂ ಧಾಂದ್ಲೆ ಮಾಡೀತು . . ಮಕ್ಕಳು ಮರಿ ಇರ್ತಾವೆ..... ಪಾಪ. . .

**ದುರ್ವಿಧ** : (ಲೊಚಗುಟ್ಟಿ) ಅಲ್ವೇ ಮತ್ತೇ. . . !

**ಕಂಸ** : ನೀವಿನ್ನು ಹೊರಡಿ. .. .(ಹೊರಡುತ್ತಾರೆ) ಸ್ವಲ್ಪ ಇರಿ . . .ಕೊಯ್ದು ಮೋಟು ಯಾರಿಗೂ ಗೊತ್ತಾಗಬಾರದು. . ಹಾಂ. ..ನಮ್ಮೂರಲ್ಲಿ ಕಂಬ ಕಂಬಕ್ಕೂ ಕಿವಿ. . ಕಮಕ್ ಕಿಮಕ್ ಅಂದ್ರೆ (ಕೈ ತೋರಿಸಿ) ಇದು ಕೈ ಅಲ್ಲ . . .ಕಾಲಲ್ಲ . . . ಎಕ್ಕಡಾನೂ ಅಲ್ಲ. . (ಶೈಲಿಕ–ದುರ್ವಿಧ ಮುಖ ಮುಖ ನೋಡಿಕೊಂಡು)

**ಶೈಲಿಕ–ದುರ್ವಿಧ** : (ಒಟ್ಟಿಗೇ) ಯಮಪಾಶ. . .

**ಕಂಸ** : ಹ. . .ಹ್ಹ. . ಹ್ಹ. . .ಬಲೇ ತಮಾಷೆ ಕಣ್ರೀ ನೀವು. . .(ಶೈಲಿಕ–ದುರ್ವಿಧ_ಹಿಂದು ಹಿಂದಕ್ಕೆ ಸರಿದು ನಿರ್ಗಮಿಸುತ್ತಾರೆ.) ಮಂತ್ರೀ ಇವರ ಮೇಲೂ ಒಂದು ಕಣ್ಣಿಡು ನೀನು . . . ರಾಜಕೀಯದಲ್ಲಿ ಯಾರನ್ನು ಯಾರೂ ನಂಬಬಾರ್ದು. . . ನಿನ್ನನ್ನು ನೀನೂ ಕೂಡಾ . . ...ಹಹ್ಹಾ. . (ಕಂಸ ದಡಬಡ ಹೋಗಿ ಆಸನದ ಮೇಲೆ ಕೂತು, ಕಾಲು ನೀಡಿ, ಅಂಗಾಲು ಆಡಿಸುತ್ತಾ. . ) ಮಂತ್ರೀ ಬಾ ಇಲ್ಲಿ ಕೂತ್ಕೋ. .

**ಮಂತ್ರಿ** : (ನಿಂತೇ) ಇರ್ಲಿ ಬುದ್ಧೀ

**ಕಂಸ** : (ಬೇಸರದ ರಾಗದಲ್ಲಿ) ಏನು ಇರಬೇಕ್ರಿ. . .? ಮಂಡೇಲಿ ಕೊಂಚ ಮಾಂಸ ಇರಬೇಕು. . ಹಾಂ. . .(ಲೋಕಾಭಿರಾಮವಾಗಿ) ನೀವು ನೋಡಿದ್ದೀರೇನ್ರಿ. . . ?

**ಮಂತ್ರಿ** : ಏನಂದ್ರಿ ಒಡೆಯಾ. . .?

**ಕಂಸ** : (ರೇಗಿ) ನೀವು ನೋಡಿದ್ದೀರೇನ್ರಿ ಆ ಕೃಷ್ಣನ್ನ . . .?

**ಮಂತ್ರಿ** : ಓಹೋ . . .! ನೋಡ್ದೆ ಒಡೆಯಾ. . .

**ಕಂಸ** : ಹೇಗಿದಾನ್ರಿ ಆ ಘಟಿಂಗ. . .?

**ಮಂತ್ರಿ** : (ಏನು ಹೇಳಬೇಕೋ ತೋಚದೆ) ಹಿಹ್ಹೀ. . ಇದ್ದಾನೆ ಒಡೆಯಾ. .

**ಕಂಸ** : ಇದ್ದಾನೆ . . ಗೊತ್ತು. . . ಯಾರ ಹಾಗೆ ಇದ್ದಾನೆ ಅವ . . ?

**ಮಂತ್ರಿ** : ಅಂದ್ರೆ . . ತಾವು ಹೇಳೋದು. . . ?

**ಕಂಸ** : (ತಾರಮ್ಮಯ್ಯ ಮಾಡಿ) ತಮಗೆ ತಿಳೀಲಿಲ್ಲ. . .! ಅಲ್ಲಾ?

**ಮಂತ್ರಿ** : (ತಲೆ ಆಡಿಸುತ್ತಾನೆ)

**ಕಂಸ** : ನಿಮ್ಮ ತಲೆ. . ! (ಥಟ್ಟನೆ ಮುಂದೆ ಬಾಗಿ ಕೂತು) ಆ ಹುಡುಗನ್ನ ನೀವು ಹತ್ತಿರದಿಂದ ನೋಡಿದ್ರಿ ಅಲ್ವಾ. . . ?

**ಮಂತ್ರಿ** : ನೋಡಿದೆ ಒಡೆಯಾ. . .

© KTBS Not to be republished

**ಕಂಸ** : ಅವನು ನಮ್ಮ ದೇವಕಿ ಮಗ ಅನ್ನತ್ತಾ ನಿಮಗೆ. . ? ಕಣ್ಣು . . !? ಮೂಗು . !? ತುಟಿ. . !? ಗದ್ದ. . !? ಏನಾದ್ರು ಹೋಲಿಕೆ ಇದೆಯಾ. ?. ದೇವಕೀ ಥರಾ? ಅಥವಾ ವಸುದೇವನ ಥರಾ ? ಹೊಟ್ಟೇಲಿ ಹುಟ್ಟಿದ್ರೆ ಏನಾದ್ರು ಒಂದು ಹೋಲಿಕೆ ಇರ್ಲೇಬೇಕಲ್ಲ....? ನನ್ನ ನೋಡಿ . . ಈ ಕೈ ಬೆರಳು . .! ಎಲ್ಲಾ ನಮ್ಮ ಅಪ್ಪನದೇ . .ಕೈ ಮಾತ್ರ ನಂದು . . ! (ಕೈ ತೋರಿಸುತ್ತಾನೆ)

**ಮಂತ್ರಿ** : (ಕೈಯನ್ನೇ ದುರುದುರು ನೋಡಿ) ವಸುದೇವ ದೇವಕಿ ಹೋಲಿಕೆ ಏನೂ ಕಾಣಲಿಲ್ಲ. . ಆದ್ರೆ. .. ಆ ಕೈ ಮಾತ್ರಾ ...

**ಕಂಸ** : ಕೈ ಮಾತ್ರಾ . . .

**ಮಂತ್ರಿ** : ಹೀಗೇ ಕಾಣ್ತು.. . . .

**ಕಂಸ** : ಎಲಾ ಇವ್ನಾ . . ! (ಧಡಕ್ಕನೆ ಎದ್ದು ಕೂತು) ಮಕ್ಕಳು ಸೋದರ ಮಾವನ್ನ ಹೋಲ್ತಾವೇನ್ರೀ.?

(ನಿಧಾನ ಕತ್ತಲು)

**ದೃಶ್ಯ–೨**

(ವಸುದೇವ ದೇವಕಿಯರನ್ನು ಕಂಸ ಬಂಧಿಸಿಟ್ಟಿರುವ ಸ್ಥಳ. ಇಬ್ಬರೂ ಸ್ವರ್ಣ ಶೃಂಖಲೆಯಲ್ಲಿದ್ದಾರೆ. ದೇವಕಿ ವಾತಾಯನದ ಬಳಿ ನಿಂತಿದ್ದಾಳೆ. ವಸುದೇವ ಚಿಂತಾಮಗ್ನನಾಗಿ ನಿಂತಿದ್ದಾನೆ.)



**ವಸುದೇವ** : ಅಕ್ರೂರ ಹೇಳಿದ – ಎದೆಯುದ್ದ ಬೆಳ್ದಿದಾರೆ ಮಕ್ಕಳು ಅಂತ. ...ಹದಿನಾರುವರ್ಷ ಆಯ್ತು ಕೃಷ್ಣನ್ನ ನೋಡಿ. . . ನನ್ನ ಕಣ್ಣಲ್ಲಿ ಅವನಿನ್ನೂ ಎಳೆಗೂಸೆ. . .! ಲೋಕದ ಎಲ್ಲಾ ಮಕ್ಕಳು ಅಪ್ಪ ಅಮ್ಮನ ಕಣ್ಣೆದುರು ದಿನಾ ದಿನಾ ಚೂರು ಚೂರು ಬೆಳೀತಾರೆ. . .ಮಕ್ಕಳು ಬೆಳೆಯೋದು ನೋಡೋ ಅಪ್ಪ ಅಮ್ಮಂದಿರ ಪುಣ್ಯವೇ ಪುಣ್ಯ . . .ಮಕ್ಕಳನ್ನು ಆಡಿಸಲಿಲ್ಲ. . .ಆರೈಕೆ ಮಾಡಲಿಲ್ಲ. . . ತೊದಲು ನುಡಿ ಕೇಳಲಿಲ್ಲ. . ತೂಗಲಿಲ್ಲ. . . ಜೋಗುಳ ಹಾಡಲಿಲ್ಲ. . (ವಸುದೇವ ಮಾತನಾಡುತ್ತಿರುವಾಗ ಬಾಗಿಲು ಬಡಿಯುವ ಸದ್ದು)

**ದೇವಕಿ :** (ತಕ್ಷಣ ಕಣ್ಣೊರಸಿಕೊಂಡು) ನೋಡಿ. . .. . ಯಾರೋ ಬಂದ ಹಾಗಿದೆ. . .

**ವಸುದೇವ :** (ಬಾಗಿಲು ತೆರೆಯುತ್ತಾ) ಓಹೋ . .ಮಹಾರಾಜ . . ಬಾ. .ಬಾ. . .

**ಕಂಸ :** (ಕೈ ಬಿಚ್ಚಿ ಮಡಿಚಿ ಮಾಡುತ್ತಾ) ನಿದ್ದೆ ಬಂತಾ ಭಾವಾ. . . ? ಹುಂ . . ಬರದೆ ಏನು ಮಾಡುತ್ತೆ. . ? ಅರಸನ ಅಂಕೆಯಿಲ್ಲ. . . ದೆವ್ವದ ಕಾಟ ಇಲ್ಲ. . .

**ವಸುದೇವ :** ಬಾ. . . ಕೂತುಕೋ... . .

**ಕಂಸ :** ಶಹಬ್ಬಾಷ್ ಭಾವ. . .ನನ್ನ ಮನೇಲಿ ನನಗೇ ಉಪಚಾರ. . .(ಕೂತು ಮೈಮುರಿದು) ನನಗಂತೂ ರಾತ್ರಿಯೆಲ್ಲಾ ನಿದ್ದೇನೇ ಇಲ್ಲ. . . !

**ವಸುದೇವ :** ರಾಜಕಾರ್ಯಾನೇ ಹಾಗೆ ! ಹತ್ತು ಜನರ ಮಧ್ಯೆ ಕೂತಾಗ ಜೋಲಿ. . ಏಕಾಂಗಿ ಇದ್ದಾಗ ಒತ್ತಿದರೂ ಮುಚ್ಚದ ರೆಪ್ಪೆ. . . !

**ಕಂಸ :** (ಗಟ್ಟಿಯಾಗಿ ನಕ್ಕು) ಮೊದಲಿಂದಲೂ ಅಷ್ಟೆ ಬಲೇ ತಮಾಷೆ ನೀನು. . .!

**ವಸುದೇವ :** ದೇವಕೀ. . .ನಿಮ್ಮ ಅಣ್ಣನಿಗೆ ಸ್ವಲ್ಪ ಹಾಲಾದರೂ ಕೊಡು. . . .

**ಕಂಸ :** (ಕಿಸಕ್ಕನೆ ನಕ್ಕು) ಹಾಲಾ. . .? ಹಾಲಾಹಲ ಕುಡಿಯೋರು ನಾವು . .ಹಾಲು ಹಿಡಿಸೋಲ್ಲ ನಮಗೆ. . .ಕ್ಷೀರಸಾಗರ ಮಥನದ ಕಥೆ ಗೊತ್ತಿಲ್ಲ ನಿಮಗೆ. . .? ಬೇಡ ದೇವಕಿ ಹಾಲು ಗೀಲು ಏನೂ ಬೇಡ. ಸ್ವಲ್ಪ ಮಾತಾಡಿ ಹೋಗೋಣ ಅಂತ ಬಂದೆ. . .

**ವಸುದೇವ :** ನಿನ್ನ ಕುಂಬಳ, ನಿನ್ನ ಕುಡುಗೋಲು . . . . ಮಾತಾಡು ಮಹಾರಾಜ. . .

**ಕಂಸ :** ನೋಡಿದೆಯಾ. . .ನೋಡಿದೆಯಾ. . .ಇನ್ನೂ ನನ್ನ ಮೇಲೆ ಅಸಮಾಧಾನ . . ನನ್ನ ತಂಗಿ ಮೇಲೆ ನನಗೆ ಪ್ರೀತಿ ಇಲ್ಲ ಅಂದ್ಕೊಂಡೆಯಾ. . . ? (ಕೈ ಚಾಚಿ ದೇವಕಿಯ ಕೈ ಹಿಡಿದು) ಸಂಕೋಲೆ ಹಾಕ್ಸಿದೀನಿ ನಿಜ. . .ಆದ್ರೆ ನೂರಕ್ಕೆ ನೂರು ಶುದ್ಧ ಅಪರಂಜೀದು. . . ! ಕೊರಳಿಗೆ ಮೂರೆಳೆ ಕೈಗೆ ಎರಡೆಳೆ ಕಾಲಿಗೆ ಒಂದೆಳೆ–ಎಲ್ಲಾ ಚಿನ್ನದ್ದೇ. . .ಇಪ್ಪತ್ತೈದು ವರ್ಷ ಆಯ್ತಲ್ಲ ಮಾಡ್ಸಿ. . .ಸ್ವಲ್ಪ ಆದರೂ ಕಪ್ಪಾಗಿದೆಯಾ. . . ? ಅದು ಪ್ರೀತಿ ಅಂದ್ರೆ. . . .ಇರ್ಲಿ ಬಿಡು ಭಾವ.. (ಎದ್ದು ವಾತಾಯನದ ಬಳಿಗೆ ಹೋಗಿ ನಿಂತು) ನಿಮಗೊಂದು ವಿಶೇಷ ಸುದ್ದಿ ಹೇಳ್ಬೇಕು. . . ಇವತ್ತು ಮಥುರಾನಗರದಲ್ಲಿ ಧನುರ್ಯಾಗ ಮಹೋತ್ಸವ. ದೇಶದ ಎಲ್ಲಾ ಕಡೆಯಿಂದ್ಲೂ ಸಾಹಸೀ ಯುವಕರು ಬಂದಿದ್ದಾರೆ . . . ರಾಜನ ಮುಂದೆ ತಮ್ಮ ಶಕ್ತಿ ಪ್ರದರ್ಶಿಸಬೇಕು. . ಮಥುರಾವೀರ ಪ್ರಶಸ್ತಿ ಗೆಲ್ಲಬೇಕು . . .ಏನು ಹುಚ್ಚೋ ಈ ಹುಡುಗರದ್ದು

**ವಸುದೇವ :** ಇವತ್ತಾ ಬಿಲ್ಲಹಬ್ಬ. . .?

**ಕಂಸ :** ಯಾಕೆ? ನಿಮಗೆ ಗೊತ್ತಿಲ್ವಾ. . ? ಅದೃಷ್ಟವಂತರು ನೀವು. . ನಿಮಗೆ ಏನೂ ಗೊತ್ತಾಗೋಲ್ಲ .. ಹೊತ್ತು ಹೊತ್ತಿಗೆ ಊಟ ಹೊತ್ತು ಹೊತ್ತಿಗೆ ನಿದ್ದೆ ಬಿಸಿಲಲ್ಲಿ ಬೇಯೋ ಹಾಗಿಲ್ಲ. . .ಮಳೇಲಿ ತೋಯೋ ಹಾಗಿಲ್ಲ. . . ನಾಕು ಗೋಡೆ ಮಧ್ಯೆ ನಿಮ್ದೇ ಒಂದು ಪ್ರಪಂಚ. . .ಒಂದು ನೊಣ ಕೂಡಾ ಒಳಗೆ ಬರೋಹಾಗಿಲ್ಲ. . . ಒಂದು ನೊಣ ಹೊರಗೆ ಹೋಗೋಹಾಗಿಲ್ಲ

**ವಸುದೇವ :** (ನಕ್ಕು) ಆದ್ರೂ ಮುಪ್ಪು ಸೆರೆಮನೇ ಒಳಗೆ ಬಂದೇ ಬಿಡ್ತು. . .

**ದೇವಕಿ :** ನೆಮ್ಮದಿ ಸೆರೆಮನೆಯಿಂದ ಹೊರಗೆ . . .

©KTBS Not to be republished

**ಕಂಸ :** ಆದ್ರೂ. . .ಆದ್ರೂ. . . ದೇವಕೀ. . .ಬಂಧನದಲ್ಲಿ ಇದ್ದೂ ನೀವು ಸ್ವತಂತ್ರರು. ..ನಾವೋ ಬಯಲಲ್ಲಿದ್ದೂ ಬಂಧಿಗಳು. . . ಎಲ್ಲಿ ಹೋದ್ರೂ ಈ ಅಂಗರಕ್ಷಕರ ಪೀಡೆ. . .ನಿಶ್ಚಿಂತವಾಗಿ ಊಟ ಮಾಡೋಹಾಗಿಲ್ಲ. . ನಿಶ್ಚಿಂತವಾಗಿ ನಿದ್ದೆ ಮಾಡೋಹಾಗಿಲ್ಲ. . .ಕಣ್ಣು ಮುಚ್ಚಿದರೆ–ತಕಪಕ ಕುಣೀತಾ ನಾನು ಕೊಂದ ಮಕ್ಕಳು ಕಣ್ಣು ಮುಂದೆ ಬರ್ತಾವೆ. . .ಹದಿನಾರು ವರ್ಷದ ಹಿಂದೆ ಅಷ್ಟಮೀ ರಾತ್ರಿ ಅದೆಷ್ಟು ಮಕ್ಕಳು ಹುಟ್ಟಿದವೋ ಈ ದೇಶದಲ್ಲಿ . . .ಎಷ್ಟೂ ಅಂತ ಅವನ್ನ ಕೊಲ್ಲಿಸಲಿ. . . ? ದೇವಕೀ ಹೊಟ್ಟೇಲಿ ಹುಟ್ಟೋ ಎಂಟನೇ ಮಗ–ಅಷ್ಟಮಪುತ್ರ–ನನ್ನ ಕೊಲ್ಲಬೇಕು. . ಆದ್ರೆ ನಿನ್ನ ಎಂಟನೇ ಮಗು ಪುತ್ರ ಅಲ್ಲ. . .ಪುತ್ರಿ. . ! ದೇವಕೀ ದೇವಕೀ . . .ಬೆನ್ನಿಗೆ ಬಿದ್ದ ಅಣ್ಣನಿಗಿಂತ ಹೊಟ್ಟೇಲಿ ಹುಟ್ಟಿದ ಕೂಸು ನಿನಗೆ ದೊಡ್ಡದಾ. . .? ದಯವಿಟ್ಟು. . ದಯವಿಟ್ಟು . . ಹೇಳು. . ನಿನ್ನ ಎಂಟನೇ ಮಗನ್ನ ಎಲ್ಲಿ ಬಚ್ಚಿಟ್ಟಿದ್ದೀ . . ? ನನಗೆ ರಾಜ್ಯ ಬೇಡ . . ಕೋಶ ಬೇಡ. . .ಪಟ್ಟ ಬೇಡ . ಪಗಡಿ ಬೇಡ. . . ಎಲ್ಲಾ ನಿನ್ನ ಗಂಡನಿಗೇ ಕೊಡ್ತೀನಿ . . ನಿನ್ನ ಮಗನ್ನ ಎಲ್ಲಿ ಬಚ್ಚಿಟ್ಟಿದ್ದೀ. . .? ಹೇಳು ಎಲ್ಲಿ ಬಚ್ಚಿಟ್ಟಿದ್ದೀ. . ? (ದೇವಕಿಯ ಭುಜ ಹಿಡಿದು ಕಂಸ ಆವೇಶದಿಂದ ಅಲುಗಿಸುತ್ತಾನೆ)

**ದೇವಕಿ :** (ತಣ್ಣಗೆ) ನಾನು ನಿಜ ಹೇಳಿದ್ರೆ ನೀನು ನಂಬೋದಿಲ್ಲ. . .

**ವಸುದೇವ :** ದೇವಕೀ. . . !

**ಕಂಸ :** ಷ್. . .! (ದೇವಕಿಯ ಗಲ್ಲ ಹಿಡಿದು ಅಲುಗಿಸಿ) ಹೇಳು. . ಹೇಳು ನಿನ್ನ ಮಾತು ನಾನು ನಂಬ್ತೀನಿ..ಹೇಳು..

**ದೇವಕಿ :** ಬಚ್ಚಿಟ್ಟದ್ದು ನಿಜ. . .ಒಂಬತ್ತು ತಿಂಗಳು. . .ಇಲ್ಲಿ. .ಇಲ್ಲಿ. . ಬಚ್ಚಿಟ್ಟಿದ್ದೆ ಮಗೂನ. .

**ಕಂಸ :** ಮತ್ತೆ ಅದೇ ಬೊಗಳೆ.... ಹೇಳೇ...ಛೇ...(ಶತಪಥ ಹಾಕಿ, ಥಟ್ಟನೆ ನಿಂತು) ಹದಿನಾರು ವರ್ಷದ ಹಿಂದೆ ಅಷ್ಟಮಿ ರಾತ್ರಿ ಹುಟ್ಟಿದ ಎಲ್ಲ ಮಕ್ಕಳನ್ನೂ ಕೊಲ್ಲಿಸಿದೆ. . .ಎಲ್ಲ. . .ಎಲ್ಲ. . .ಮಕ್ಕಳನ್ನೂ. . (ರಂಗದ ತುಂಬ ಎಳೆ ಮಕ್ಕಳ ಆಕ್ರಂದನ. ವಸುದೇವ ದೇವಕಿ ಕಿವಿ ಮುಚ್ಚಿಕೊಳ್ಳುತ್ತಾರೆ. ಕಂಸ ಗಹಗಹಿಸಿ ನಗುತ್ತಾ) ಲಕ್ಷ. . .ಲಕ್ಷ. . ಲಕ್ಷ. . ಮಕ್ಕಳು. . .ಆದ್ರೆ ಒಂದು ಮಗೂನ ಮಾತ್ರ ಇನ್ನೂ ಕೊಲ್ಲಲಿಕ್ಕೆ ಆಗಿಲ್ಲ......ಅವ್ನೇ . . .ಅವನೇ . . ಆ ಗೋಕುಲದ ಗೊಲ್ಲರ ಹುಡುಗ ಪಿಳ್ಳಂಗೋವಿ ಕೃಷ್ಣ. . ಥೆ. . .ಕೊಲ್ಲಲಿಕ್ಕೆ ಬಂದವರನ್ನೆಲ್ಲಾ ಅವನೇ ಕೊಂದು ಬಿಟ್ಟ.. . ಹಾ. . ಆ ಕೃಷ್ಣನ ಅಪ್ಪ ನಂದ ನಿನ್ನ ಗಂಡನ ಬಾಲ್ಯ ಸ್ನೇಹಿತ, ಪರಮಾಪ್ತ ಪ್ರಾಣಮಿತ್ರ. . . . .(ವಸುದೇವನ ಕಡೆ ತಿರುಗಿ) ನಿನ್ನ ಮೊದಲ ಹೆಂಡ್ತಿ ರೋಹಿಣಿ, ಅವಳ ಪಿಳ್ಳೆ ಬಲರಾಮ ಆ ನಂದನ ಮನೇಲೇ ಇರೋದು .. . ಅರಮನೆ ಕವಳಕ್ಕೆ ಕತ್ರಿ ಹಾಕೋಕೆ ಬದ್ಲು ಇದ್ಗೊಳ್ಳಿ ಅಲ್ಲೇ ಅಂತ ಸುಮ್ನೆ ಇದ್ದೆ . . .ಈಗ ನೋಡಿದ್ರೆ ನೀವೆಲ್ಲ ಕೂಡಿ ಏನೋ ಮಸಲತ್ತು ಮಾಡ್ತಿರೊ ಹಾಗಿದೆ . . .(ಇಬ್ಬರನ್ನೂ ನೋಡುತ್ತಾ ತಗ್ಗಿದ ದನಿಯಲ್ಲಿ) ಆ ಕೃಷ್ಣ ನಿಮ್ಮ ಮಗನೇ ಇರಬೇಕು. . .ಇರ್ಬೇಕು ಏನು. ..ನಿಮ್ಮ ಮಗನೇ ಅವನು. . . ! (ತನ್ನ ಅಂಗೈ ನೋಡಿಕೊಳ್ಳುತ್ತಾ) ನನ್ನ ಸೋದರಳಿಯ ಅವ್ನು. . .!

©KTBS Not to be republished

**ದೇವಕಿ :** ಸುಳ್ಳು. . .ಕೃಷ್ಣ ನಮ್ಮ ಮಗ ಯಾಕೆ ಆದಾನು. . . ? (ಕಣ್ಣಲ್ಲಿ ನೀರು ತಂದುಕೊಂಡು) ಕೃಷ್ಣ ನಂದನ ಮಗ . . .ಕೃಷ್ಣ ಯಶೋಧೆ ಮಗ. . .(ಅಳುತ್ತಾ) ನನ್ನ ಮಗ ಅಲ್ಲ ಅವನು ನನ್ನ ಮಗ ಅಲ್ಲ ಅವನು. . .!

**ಕಂಸ :** (ಸಮಾಧಾನ ಧ್ವನಿಯಲ್ಲಿ) ನಿಮ್ಮ ಮಗ ಅಲ್ಲ. . .ಸರಿ ಮತ್ತೆ. . . ನಿಮ್ಮ ಮಗ ಅಲ್ಲ ಅವನು. . .! (ದುಡು ದುಡು ಬಾಗಿಲ ಬಳಿ ಹೋಗಿ, ಗಕ್ಕನೆ ತಿರುಗಿ ನೋಡಿ) ಅಂದ್ಮೇಲೆ ಅವನನ್ನ ಕೊಂದ್ರೆ ನಿಮಗೆ ಬೇಜಾರಿಲ್ಲ . . .ಅಲ್ವಾ. . .?

(ರಂಗದಲ್ಲಿ ಕತ್ತಲು)

## ಕರ್ತೃ – ಭಾವ – ಆಕರ



**ಎಚ್. ಎಸ್. ವೆಂಕಟೇಶಮೂರ್ತಿ** ಅವರು (೧೯೪೪) ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೋದಿಗ್ಗೆರೆಯಲ್ಲಿ ಜನಿಸಿದರು. ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು ಬಹುಮುಖ ಪ್ರತಿಭೆಯ ಸಾಹಿತಿ. ಇವರ **ಸಿಂದಾಬಾದನ ಆತ್ಮಕಥೆ, ಕ್ರಿಯಾಪರ್ವ, ಒಣಮರದ ಗಿಳಿಗಳು, ಋತುವಿಲಾಸ, ಎಷ್ಟೊಂದು ಮುಗಿಲು, ಅಮೆರಿಕಾದಲ್ಲಿ ಬಿಲ್ಲಹಬ್ಬ, ಭೂಮಿಯೂ ಒಂದು ಆಕಾಶ** ಮೊದಲಾದವು ಕವನ ಸಂಕಲನಗಳು. **ಒಂದು ಸೈನಿಕ ವೃತ್ತಾಂತ, ಕತ್ತಲೆಗೆ ಎಷ್ಟು ಮುಖ, ಚಿತ್ರಪಟ, ಅಳಿಲು ರಾಮಾಯಣ, ಸುಣ್ಣದ ಸುತ್ತು, ಹೂವಿ ಮತ್ತು ಸಂಧಾನ** ಮೊದಲಾದವು ಪ್ರಮುಖ ನಾಟಕಗಳು.

ಐದು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಇವರ **ಋತುವಿಲಾಸ** ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ ಲಭಿಸಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ದೇವರಾಜ ಬಹದ್ದೂರ್ ಪ್ರಶಸ್ತಿಗಳನ್ನು ಪಡೆದಿರುವ ಇವರು **ಕನ್ನಡದಲ್ಲಿ ಕಥನ ಕವನಗಳು** ವಿಷಯದ ಬಗೆಗೆ ಸಂಶೋಧನೆ ನಡೆಸಿ ಪಿಎಚ್.ಡಿ ಪದವಿಗಳಿಸಿದ್ದಾರೆ.

* * *

ಪ್ರಸ್ತುತ ನಾಟಕದಲ್ಲಿ ಪೌರಾಣಿಕ ಪಾತ್ರವಾದ ಕಂಸ ಅಧಿಕಾರಶಾಹೀ ವ್ಯಕ್ತಿತ್ವದ ಒಂದು ಸಂಕೇತ. ಅಧಿಕಾರಕ್ಕಾಗಿ ಅರಮನೆಗಳಲ್ಲಿ ನಡೆಯುವ ಕಾರಸ್ಥಾನಗಳು, ಅಧಿಕಾರಸ್ಥರ ಆತಂಕ, ತಲ್ಲಣ, ಭಯಗಳು ನಿಚ್ಚಳವಾಗಿ ವ್ಯಕ್ತವಾಗಿವೆ. ಅಧಿಕಾರಲಾಲಸೆ, ಅಂತಸ್ತಿಗಾಗಿ ರಕ್ತಸಂಬಂಧವನ್ನೇ ಕಡಿದುಕೊಳ್ಳುವ ಸ್ವಭಾವವನ್ನಿಲ್ಲಿ ಕಾಣಬಹುದು. ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಮಥುರಾನಗರದಲ್ಲಿ ಬಿಲ್ಲಹಬ್ಬದ ನೆಪ ಮಾಡಿ ಸಂಚು ನಡೆಸುವುದು ನಾಟಕದ ವಸ್ತು. ಅವೆಲ್ಲಕ್ಕಿಂತ ಮುಖ್ಯವಾಗಿ, ನಾಟಕದ ಸಂಭಾಷಣೆಯ ಮೊನಚು, ವ್ಯಂಗ್ಯಭರಿತ ಹಾಸ್ಯ ಓದುಗರ ಮನ ಸೆಳೆಯುವುದು.

* * *

ಪ್ರಕೃತ **ಬಿಲ್ಲಹಬ್ಬ** ನಾಟಕ ಭಾಗವನ್ನು **ಡಾ. ಎಚ್.ಎಸ್. ವೆಂಕಟೇಶಮೂರ್ತಿ** ಅವರ **ಕಂಸಾಯಣ** (ಪುಟ–೪೬–೮೧) ನಾಟಕದಿಂದ ಆಯ್ಕೆ ಮಾಡಿ, ಸಂಪಾದಿಸಿ ನಿಗದಿಪಡಿಸಿದೆ.

©KTBS Not to be republished

**ಪೂರ್ವ ಕಥೆ**

ಮಥುರೆಯ ರಾಜನಾದ ಕಂಸ ತನ್ನ ಸೋದರಿ ದೇವಕಿಯ ವಿವಾಹವನ್ನು ವಸುದೇವನೊಡನೆ ವೈಭವದಿಂದ ನೆರವೇರಿಸಿ, ಮೆರೆವಣಿಗೆಯಲ್ಲಿ ಸಾಗುತ್ತಿದ್ದನು. ಆಗ ಅಶರೀರ ವಾಣಿಯೊಂದು ನಿನ್ನ ಸಾವಿಗೆ ದೇವಕಿಯ ಅಷ್ಟಮ ಪುತ್ರನೇ ಕಾರಣನಾಗುತ್ತಾನೆಂದು ಭವಿಷ್ಯ ನುಡಿಯಿತು. ಇದರಿಂದ ಕ್ರೋಧಗೊಂಡ ಕಂಸ ತಂಗಿಯನ್ನೇ ಕೊಲ್ಲಲು ಸಿದ್ಧನಾದ. ಆದರೆ ವಸುದೇವ ಅಡ್ಡ ಬಂದು ದೇವಕಿಯ ಗರ್ಭದಲ್ಲಿ ಹುಟ್ಟುವ ಎಲ್ಲ ಮಕ್ಕಳನ್ನು ನಿನಗೆ ಒಪ್ಪಿಸುತ್ತೇನೆಂದು ಮಾತು ಕೊಟ್ಟಿದ್ದರಿಂದ ಅವರನ್ನು ಸೆರೆಯಲ್ಲಿಟ್ಟನು. ವಸುದೇವ ಕೊಟ್ಟ ಮಾತಿನಂತೆ ಹುಟ್ಟಿದ ಎಲ್ಲ ಮಕ್ಕಳನ್ನೂ ಕಂಸನಿಗೆ ಒಪ್ಪಿಸುತ್ತಿದ್ದ. ಕಂಸ ಆ ಎಲ್ಲ ಮಕ್ಕಳನ್ನೂ ನಿರ್ದಯವಾಗಿ ಕೊಂದ. ಆದರೆ ಅಷ್ಟಮ ಗರ್ಭದಲ್ಲಿ ಶ್ರೀಮನ್ನಾರಾಯಣನು ಜನಿಸಿ ತನ್ನನ್ನು ಗೋಕುಲದ ನಂದಗೋಪನ ಮನೆಯಲ್ಲಿ ಬಿಟ್ಟು, ಅಲ್ಲಿರುವ ಹೆಣ್ಣು ಶಿಶುವನ್ನು ದೇವಕಿಯ ಮಡಿಲಿನಲ್ಲಿಡಬೇಕೆಂದು ವಸುದೇವನಿಗೆ ತಿಳಿಸಿದನು.

ಕಂಸ ಅಷ್ಟಮ ಗರ್ಭದಲ್ಲಿ ಹೆಣ್ಣುಮಗು ಹುಟ್ಟಿದ್ದನ್ನು ಕಂಡು ಆಶ್ಚರ್ಯಪಟ್ಟರೂ ಅದನ್ನು ಕೊಲ್ಲಲು ಹೋದಾಗ ಅದು ಆಕಾಶಕ್ಕೆ ನೆಗೆದು ನಿನ್ನನ್ನು ಕೊಲ್ಲುವವನು ಗೋಕುಲದಲ್ಲಿ ಬೆಳೆಯುತ್ತಿದ್ದಾನೆಂದು ಹೇಳಿ ಮಾಯವಾಯಿತು. ಇದರಿಂದ ಕಂಸ ಗೋಕುಲದಲ್ಲಿ ಹಿಂದಿನ ದಿನ ಹುಟ್ಟಿದ ಮಕ್ಕಳನ್ನೆಲ್ಲ ಕೊಂದ. ಆದರೆ ನಂದನ ಮನೆಯಲ್ಲಿ ಬೆಳೆಯುತ್ತಿದ್ದ ಕೃಷ್ಣನನ್ನು ಕೊಲ್ಲಲಾಗಲಿಲ್ಲ. ಅವನನ್ನು ಕೊಲ್ಲಲು ಕಂಸ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾಯಿತು. ಕೃಷ್ಣನು ಬೆಳೆಯುತ್ತಿದ್ದಂತೆ ಅವನ ಲೀಲೆಗಳು ಕಂಸನ ಕಿವಿಗೆ ಬೀಳತೊಡಗಿದವು. ಹಾಗಾಗಿ ಮಥುರಾನಗರದಲ್ಲಿ ಸಾಂಪ್ರದಾಯಿಕವಾಗಿ ನಡೆಯುತ್ತಿದ್ದ ಬಿಲ್ಲಹಬ್ಬದ ಸಂದರ್ಭದಲ್ಲಿ ಕೃಷ್ಣನನ್ನು ಆಹ್ವಾನಿಸಿ ಕೊಲ್ಲಲು ನಡೆಸುವ ಸಂಚು ಈ ನಾಟಕದಲ್ಲಿ ವ್ಯಂಗ್ಯ ಹಾಗೂ ಹಾಸ್ಯಗಳಿಂದ ಮಿಳಿತಗೊಂಡು ಮೂಡಿಬಂದಿದೆ.

## ಪದ-ಗದ್ಯಾರ್ಥ

ಬಿಸಿಲು ಮಚ್ಚು – ಬಿಸಿಲು ಮಾಳಿಗೆ ; ಬಡಿಗೆ – ದೊಣ್ಣೆ, ಕೋಲು ; ಪೋರ – ಹುಡುಗ, ಗೂಢಚಾರ – ಗುಪ್ತಚರ ; ಶೋಧ – ಹುಡುಕು ; ಮಾಹಿತಿ – ತಿಳಿವಳಿಕೆ, ವಿವರಣೆ ; ಲೋಕಾಭಿರಾಮ– ಸಹಜವಾಗಿ; ಎಕ್ಕಡ – ಪಾದುಕೆ, ಪಾದರಕ್ಷೆ ; ಪಾಶ – ಹಗ್ಗ ; ಪರಾಂಬರಿಸು – ಗಮನಿಸು, ಪರಿಶೀಲಿಸು; ಕ್ರೀಡಾಗಾರ – ಕ್ರೀಡಾಂಗಣ ; ಹೆಬ್ಬಾಗಿಲು – ಮಹಾದ್ವಾರ ; ಪಥ್ಯ – ಆಹಾರದ ಕಟ್ಟುಪಾಡು, ಯೋಗ್ಯವಾದುದು ; ತಮಾಷೆ – ಹಾಸ್ಯ; ಕೊಂಚ – ಸ್ವಲ್ಪ ; ಘಟಿಂಗ – ತುಂಟ, ಭಂಡ ; ತಾರಮ್ಮಯ್ಯ – ಅಂಗೈ ಆಡಿಸು ; ವಾತಾಯನ–ಕಿಟಕಿ ; ಕೂಸು – ಮಗು ; ಹಾಲಾಹಲ – ವಿಷ ; ಕ್ಷೀರ – ಹಾಲು; ಮಥಿಸು – ಕಡೆ; ಸಂಕೋಲೆ – ಸರಪಳಿ; ಅಪರಂಜಿ – ಬಂಗಾರ; ಯಾಗ– ಯಜ್ಞ ; ತೊಯ್ – ನೆನೆ, ಒದ್ದೆಯಾಗು; ಸೆರೆಮನೆ – ಬಂದೀಖಾನೆ ; ಪೀಡೆ – ತೊಂದರೆ ; ಬೊಗಳೆ–ಕೆಲಸಕ್ಕೆ ಬಾರದ ಮಾತು, ಪೊಳ್ಳು ಹರಟೆ; ಅಷ್ಟಮೀ – ಎಂಟನೆಯ; ಕೋಶ – ಭಂಡಾರ; ಪಟ್ಟ–ಸಿಂಹಾಸನ ; ಪಗಡಿ – ಕಾಣಿಕೆ, ಗೌರವ ; ಪಿಳ್ಳಂಗೋವಿ – ಕೊಳಲು ; ಸ್ನೇಹಿತ – ಗೆಳೆಯ, ಸಂಗಾತಿ, ಜತೆಗಾರ ; ಪಿಳ್ಳೆ – ಮಗು

©KTBS Not to be republished

## ಪದ್ಯಾಧಾರ ಟಿಪ್ಪಣಿ

**ಕಂಸ** : ಕಂಸ ಮಥುರಾನಗರದ ಯದುವಂಶದ ಮಹಾರಾಜನಾದ ಉಗ್ರಸೇನನ ಮಗ. ಉಗ್ರಸೇನನ ರಾಣಿ ಒಮ್ಮೆ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ದ್ರುಮಿಲನೆಂಬ ರಾಕ್ಷಸ ಮೋಸದಿಂದ ಉಗ್ರಸೇನನ ರೂಪದಲ್ಲಿ ಬಂದು ಕಂಸನ ಹುಟ್ಟಿಗೆ ಕಾರಣನಾದ. ಅನಂತರ ನಿಜ ವಿಷಯದ ಅರಿವಾಗಿ ರಾಣಿಯು **ನಿನ್ನ ದುರ್ನಡತೆಯಿಂದ ಜನಿಸಿದವನು ಯದುವಂಶದವನಿಂದಲೇ ಸಾಯಲಿ** ಎಂದು ಶಪಿಸಿದಳು.

**ಪೂತನಿ** : ಕಂಸನ ಪರಿವಾರದ ಒಬ್ಬ ರಾಕ್ಷಸಿ. ಈಕೆ ಸುಂದರ ಸ್ತ್ರೀ ವೇಷದಿಂದ ನಂದನ ಮನೆಯನ್ನು ಹೊಕ್ಕು, ಅಲ್ಲಿ ಕೃಷ್ಣನಿಗೆ ವಿಷಪೂರಿತ ಹಾಲೂಡಲು ತೊಡಗಿದಾಗ ಕೃಷ್ಣ ಆಕೆಯ ಜೀವವನ್ನೇ ಹೀರಿದನು. ಪೂತನಿ ಕೂಗುತ್ತಾ ಭಯಂಕರ ರಾಕ್ಷಸಿಯ ರೂಪತಾಳಿ ಪ್ರಾಣಬಿಟ್ಟಳು.

**ಶಕಟ** : ಕಂಸನ ಪರಿವಾರಕ್ಕೆ ಸೇರಿದ ರಾಕ್ಷಸ. ಇವನು ಕಂಸನ ಆಜ್ಞೆಯಂತೆ ಬಂಡಿ (ಶಕಟ)ಯ ರೂಪಹೊಂದಿ, ಗೋಕುಲದಲ್ಲಿದ್ದ ಬಾಲಕೃಷ್ಣನನ್ನು ಕೊಲ್ಲ ಹೋದನು. ಕೃಷ್ಣನ ಅಂಗಾಲ ಹೊಡೆತದಿಂದ ಮುರಿದುಬಿದ್ದು, ತನ್ನ ನಿಜ ರೂಪವನ್ನು ಹೊಂದಿ ಅಲ್ಲಿಯೇ ಸಾವನ್ನಪಿದನು.

**ತೃಣಾವರ್ತ**: ಕಂಸನ ಅನುಚರ ರಕ್ಕಸರಲ್ಲಿ ಒಬ್ಬ. ಕಂಸನ ಆಜ್ಞೆಯಂತೆ ಬಿರುಗಾಳಿಯ ರೂಪದಲ್ಲಿ ಬಂದು. ಯಶೋದೆ ಮಲಗಿಸಿದ್ದ ಮಗುವನ್ನು ಆಕಾಶಕ್ಕೆ ಹಾರಿಸಿಕೊಂಡು ಹೋದನು. ಕೊನೆಕೊನೆಗೆ ಕೃಷ್ಣನ ಭಾರವನ್ನು ತಡೆಯಲಾರದೆ, ಅವನ ವೇಗ ತಗ್ಗಿತು. ಮಗುವನ್ನು ಕೆಳಕ್ಕೆ ಬೀಳಿಸಲು ಯತ್ನಿಸಿದನು. ಆದರೆ ಕೃಷ್ಣ ರಾಕ್ಷಸನ ಕುತ್ತಿಗೆಯನ್ನು ಬಲವಾಗಿ ಹಿಡಿದು, ಒಂದು ಸಲ ಗುದ್ದಿದೊಡನೆ, ತೃಣಾವರ್ತ ತನ್ನ ನಿಜ ರೂಪಿನಿಂದ ಸತ್ತು ಬಿದ್ದನು.

**ಧೇನುಕ** : ಕಂಸನ ಅನುಯಾಯಿ ರಾಕ್ಷಸರಲ್ಲಿ ಒಬ್ಬ. ಇವನು ಬೃಂದಾವನದ ಸಮೀಪದ ತಾಳವನದಲ್ಲಿ ವಾಸವಾಗಿದ್ದನು. ಗೋಪಾಲಕರು ಕೃಷ್ಣ ಬಲರಾಮರೊಂದಿಗೆ ತಾಳೆಹಣ್ಣುಗಳನ್ನು ತಿನ್ನುತ್ತಿರುವಾಗ ಕತ್ತೆಯ ರೂಪದಲ್ಲಿ ಬಂದು ಬಲರಾಮನ ಮೇಲೆ ಬಿದ್ದನು. ಬಲರಾಮನು ಕೃಷ್ಣನ ಸೂಚನೆಯಂತೆ ಅದರ ಹಿಂಗಾಲುಗಳನ್ನು ಹಿಡಿದು ಗರಗರನೆ ತಿರುಗಿಸಿ ತಾಳೆಮರಕ್ಕೆ ಹೊಡೆದು ಕೊಂದನು.

**ಗೋವರ್ಧನಬೆಟ್ಟ** : ಯಮುನಾ ನದಿತೀರದ ಪರ್ವತ. ಒಮ್ಮೆ ನಂದಗೋಕುಲದ ಗೊಲ್ಲರೆಲ್ಲರೂ ಇಂದ್ರಯಾಗವನ್ನು ಮಾಡಬೇಕೆಂದಿರುವಾಗ, ಕೃಷ್ಣ ಆ ಯಾಗವನ್ನು ನಿಲ್ಲಿಸಿ, ಗೋವರ್ಧನಗಿರಿಯನ್ನೇ ಪೂಜೆ ಮಾಡುವಂತೆ ಹೇಳಿದನು. ಇದರಿಂದ ಕೋಪಗೊಂಡ ಇಂದ್ರನು ಚಂಡ ವೃಷ್ಟಿಯನ್ನುಂಟು ಮಾಡಿದನು. ಆಗ ಕೃಷ್ಣ ಗೋವರ್ಧನಗಿರಿಯನ್ನೇ ಎತ್ತಿ ಹಿಡಿದು ಮಳೆಯಿಂದ ಗೋವುಗಳನ್ನೂ ಗೋಪಾಲಕರನ್ನೂ ರಕ್ಷಿಸಿದ.

**ಅಕ್ರೂರ** : ನಹುಷನ ವಂಶಕ್ಕೆ ಸೇರಿದ ಶ್ವಫಲ್ಕನ ಮಗ. ಕಂಸನ ಅಷ್ಟ ಮಂತ್ರಿಗಳಲ್ಲಿ ಒಬ್ಬ. ಕಂಸನ ಅಪ್ಪಣೆಯಂತೆ ಬಲರಾಮ ಕೃಷ್ಣರನ್ನು ಮಥುರೆಗೆ ಕರೆತರುವಾಗ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿದ್ದ ಸಂದರ್ಭದಲ್ಲಿ ಅಕ್ರೂರನಿಗೆ, ಕೃಷ್ಣ ತನ್ನ ದಿವ್ಯ ರೂಪವನ್ನು ತೋರಿಸಿದನು.

© KTBS Not to be republished

**ಬಿಲ್ಲಹಬ್ಬ** : ಇದು ಶೌರ್ಯ ಪ್ರದರ್ಶನಕ್ಕೆ ಸಂಬಂಧಪಟ್ಟ ಒಂದು ಕಾರ್ಯಕ್ರಮ. ಕಂಸನಲ್ಲಿ ಇಂದ್ರಧನುಸ್ಸಿಗೆ ಸಮನಾದ, ಪರಮ ವೈಭವದಿಂದ ಪ್ರತಿಷ್ಠಿತವಾದ, ಅನುದಿನವೂ ಪೂಜಿಸಲ್ಪಡುತ್ತಿದ್ದ, ಹಲವಾರು ಸೈನಿಕರಿಂದ ಸತತವಾಗಿ ರಕ್ಷಿಸಲ್ಪಡುತ್ತಿದ್ದ ಒಂದು ಬೃಹತ್ ಗಾತ್ರದ ಧನಸ್ಸು (ಬಿಲ್ಲು) ಇತ್ತು. ಇದು ಸಾಮಾನ್ಯರಿಗೆ ಅಲ್ಲಾಡಿಸಲೂ ಸಾಧ್ಯವಾಗುತ್ತಿರಲಿಲ್ಲ. ಒಂದು ದೊಡ್ಡ ಪೆಟ್ಟಿಗೆಯೊಳಗೆ ಮಲಗಿಸಿಟ್ಟಿದ್ದ ಈ ಬಿಲ್ಲನ್ನು ವರ್ಷಕ್ಕೊಮ್ಮೆ ಶೌರ್ಯಪ್ರದರ್ಶನಕ್ಕೆ ಕಂಸ ಬಳಸುತ್ತಿದ್ದ. **"ಪೆಟ್ಟಿಗೆಯೊಳಗೆ ಮಲಗಿಸಿಟ್ಟಿರುವ ಈ ಬಿಲ್ಲನ್ನು ಬಿಲ್ಲಾಳುಗಳು ತೆಗೆದು ನೇರವಾಗಿ ನಿಲ್ಲಿಸಿ ಅದರ ಹೆದೆಯೇರಿಸಬೇಕು"** ಎಂಬುದು ಶರ್ತವಾಗಿರುತ್ತಿತ್ತು. ಈ ಪ್ರಕ್ರಿಯೆಯನ್ನು **'ಧನುರ್ಯಜ್ಞ'** ಅಥವಾ **'ಬಿಲ್ಲಹಬ್ಬ'** ಎಂದು ಕರೆಯಲಾಗುತ್ತಿತ್ತು. ಚಾಣೂರ, ಮುಷ್ಟಿಕ, ಕೂಟ, ಶಲ, ಶೋಶಲ ಮುಂತಾದ ಜಟ್ಟಿಪ್ರಮುಖರು ಮಲ್ಲಯುದ್ಧ ಪ್ರದರ್ಶನ ಮಾಡುತ್ತಿದ್ದರು. ಕಂಸನೂ ಮಲ್ಲಯುದ್ಧ ಪ್ರವೀಣನಾದುದರಿಂದ ಈ ಕ್ರೀಡೋತ್ಸವಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತಿತ್ತು. ತನ್ನ ಶತ್ರುಗಳಾದ ಕೃಷ್ಣ ಬಲರಾಮರನ್ನು **'ಬಿಲ್ಲಹಬ್ಬದ'** ನೆಪದಿಂದ ಮಥುರೆಗೆ ಕರೆಸಿಕೊಂಡು ಕೊಲ್ಲುವ ಸಂಚು ಹೂಡಿದ ಕಂಸ ಅವರನ್ನು ಅಕ್ರೂರನ ಮೂಲಕ ಕರೆಸಿಕೊಳ್ಳುತ್ತಾನೆ. ಅಣ್ಣ ಬಲರಾಮನೊಂದಿಗೆ ಮಥುರೆಗೆ ಬಂದ ಕೃಷ್ಣನು **ಧನುರ್ಯಜ್ಞದ** ಆ ಮಹಾಧನುಸ್ಸನ್ನು ತನ್ನ ಎಡಗೈಯಿಂದ ಮೇಲೆತ್ತಿ ಅದರ ಹೆದೆಯನ್ನು ಬಿಗಿದು ಸುದೀರ್ಘವಾಗಿ ಸೆಳೆಯುತ್ತಾನೆ. ಆಗ ಆ ಬಿಲ್ಲು ಮುರಿದು ಬೀಳುತ್ತದೆ. ಆ ಸಂದರ್ಭದಲ್ಲಿ ಉಂಟಾದ ಶಬ್ದವು ಭೂಮ್ಯಾಕಾಶಗಳನ್ನು ಆವರಿಸಿ ಕಂಸನು ನಡುಗಿ ಹೋಗುತ್ತಾನೆ.

**ಕ್ಷೀರಸಾಗರ** : ಹಾಲಿನ ಸಮುದ್ರ. ಸಪ್ತ ಸಮುದ್ರಗಳಲ್ಲಿ ಒಂದು. ಇದನ್ನು ಸುರಾಸುರರು ಮಥಿಸಿ, ಅಮೃತ ಮೊದಲಾದ ವಸ್ತುಗಳನ್ನು ಪಡೆದರು.

**ರೋಹಿಣಿ** : ವಸುದೇವನ ಮೊದಲ ಹೆಂಡತಿ. ಬಲರಾಮನ ತಾಯಿ.

**ಬಲರಾಮ** : ವಸುದೇವನ ಮೊದಲ ಹೆಂಡತಿ ರೋಹಿಣಿಯ ಉದರದಲ್ಲಿ ಯೋಗದೇವಿಯ ಕೃಪೆಯಿಂದ ಜನಿಸಿದವನು. ಕೃಷ್ಣನ ಸಹೋದರ.

**ನಂದ** : ಗೋಕುಲದ ಗೊಲ್ಲರ ಯಜಮಾನ. ಕೃಷ್ಣನ ಸಾಕುತಂದೆ

**ಯಶೋದೆ** : ನಂದನ ಹೆಂಡತಿ. ಕೃಷ್ಣನ ಸಾಕುತಾಯಿ.

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ಕೃಷ್ಣ ಯಾರ ಸೊಂಟವನ್ನು ಮುರಿದ?

೨. ಕೃಷ್ಣನ ಕೈಯಲ್ಲಿ ಸಿಕ್ಕ ಧೇನುಕ ಏನಾದ?

೩. ಮಂತ್ರಿ ಕಂಸನ ಬಳಿಗೆ ಕರೆತಂದ ಇಬ್ಬರು ಯಾರು?



©KTBS Not to be republished

೪. ವಸುದೇವನಿಗೆ ಮಕ್ಕಳ ವಿಚಾರ ಹೇಳಿದವರು ಯಾರು?

೫. ವಸುದೇವ ಹೇಳುವಂತೆ ರಾಜಕಾರ್ಯ ಹೇಗಿರುತ್ತದೆ?

೬. ನಂದ ಯಾರೆಂದು ಕಂಸ ಹೇಳುತ್ತಾನೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ಕೃಷ್ಣ ಯಾರ‍್ಯಾರನ್ನು ಕೊಂದ?

೨. ಕ್ರೀಡಾಗಾರದಲ್ಲಿ ಆಗಿದ್ದ ಗುಪ್ತ ಏರ್ಪಾಡು ಏನು?

೩. ವಸುದೇವ ಮಕ್ಕಳನ್ನು ನೆನೆದು ವ್ಯಥೆಪಟ್ಟ ಬಗೆ ಹೇಗೆ?

೪. ಕಂಸ ತಂಗಿಯ ಮೇಲಿನ ಪ್ರೀತಿ ಎಂಥದ್ದೆಂದು ಹೇಳಿಕೊಂಡಿದ್ದಾನೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರಿಸಿ**

೧. ಗೂಢಚಾರರು ಯಾವುದರ ಬಗ್ಗೆ ಶೋಧನೆ ಮಾಡುತ್ತಿದ್ದಾರೆ? – ವಿವರಿಸಿ.

೨. ಕೃಷ್ಣನನ್ನು ಕೊಲ್ಲಲು ದುರ್ವಿಧ–ಶೈಲಿಕರು ಮಾಡಿದ್ದ ಏರ್ಪಾಡುಗಳೇನು?

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

೧. ಕಂಸನು ತನ್ನ ಮಾನಸಿಕ ತಳಮಳವನ್ನು ವಸುದೇವನಲ್ಲಿ ಹೇಗೆ ತೋಡಿಕೊಂಡಿದ್ದಾನೆ? – ವಿವರಿಸಿ

೨. ಕಂಸ ದೇವಕಿಯಿಂದ ಕೃಷ್ಣನ ಬಗ್ಗೆ ತಿಳಿಯಲು ಹೋಗಿ ನಿರಾಶನಾದದ್ದು ಹೇಗೆ? ತಿಳಿಸಿ.

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಹೊಂದಿಸಿ ಬರೆಯಿರಿ**

| ಅ | ಆ |
|---|---|
| ೧. ಒಡೆಯ | ಕುವಲಯಾಪೀಡ |
| ೨. ಶಿಲ್ಪಿ | ಶಕಟ |
| ೩. ವೈದ್ಯ | ಗೋವರ್ಧನ |
| ೪. ಆನೆ | ದುರ್ವಿಧ |
| ೫. ಬೆಟ್ಟ | ಶೈಲಿಕ |
| | ಧೇನುಕ |
| | ಕಂಸ |

© KTBS Not to be republished

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ಲಿಂಗ, ವಚನ ಮತ್ತು ವಾಕ್ಯಗಳ ಪರಿಚಯಾತ್ಮಕ ವಿವರ**

**ಲಿಂಗಗಳು**

- **ಶ್ಯಾಮ ಗಿರೀಶನಿಗೆ ಬುದ್ಧಿ ಹೇಳಿದನು.**
- **ಗೌರಿ ತನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು.**
- **ಆಡು ಸೊಪ್ಪನ್ನು ತಿನ್ನುತ್ತದೆ.**

ಮೊದಲ ವಾಕ್ಯದಲ್ಲಿರುವ **'ಶ್ಯಾಮ', 'ಗಿರೀಶ'** ಪದಗಳು ಗಂಡಸರಿಗೂ **'ಗೌರಿ', 'ತಂಗಿ'** ಪದಗಳು ಹೆಂಗಸರಿಗೂ **'ಆಡು', 'ಸೊಪ್ಪು'** ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ್ದೆಂದು ತಿಳಿಯುತ್ತದೆ.

**'ಗಂಡಸು'** ಎಂಬ ಅರ್ಥ ನೀಡುವ ಪದಗಳನ್ನು **ಪುಲ್ಲಿಂಗ** ಎಂತಲೂ **'ಹೆಂಗಸು'** ಎಂಬ ಅರ್ಥ ನೀಡುವ ಪದಗಳನ್ನು **ಸ್ತ್ರೀಲಿಂಗ** ಎಂತಲೂ **'ಗಂಡಸು'** ಎಂಬ ಅರ್ಥವನ್ನೂ **'ಹೆಂಗಸು'** ಎಂಬ ಅರ್ಥವನ್ನೂ ನೀಡದ ಪದಗಳನ್ನು **ನಪುಂಸಕಲಿಂಗ** ಎಂತಲೂ ಕರೆಯುವರು.

**ವಚನಗಳು**

**ವಚನ** ಎಂದರೆ **ಎಣಿಕೆ** ಎಂದರ್ಥ. ವಸ್ತು ಅಥವಾ ವ್ಯಕ್ತಿಗಳನ್ನು ಎಣಿಸುವಾಗ ಒಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಎಣಿಸಿ ಒಂದಕ್ಕಿಂತ ಹೆಚ್ಚಾದರೆ ಎಷ್ಟು ಎಂದು ನಿರ್ಧರಿಸುತ್ತೇವೆ. ಹೀಗೆ – **ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುವ ಪದಗಳೇ ಏಕವಚನ. ಒಂದಕ್ಕಿಂತ ಹೆಚ್ಚು ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳೇ ಬಹುವಚನ.**

ಏಕವಚನದ ನಾಮಪ್ರಕೃತಿಗಳಿಗೆ **ಅರು, ವು, ಗಳು, ಅಂದಿರು** ಇತ್ಯಾದಿ **ಬಹುವಚನ ಸೂಚಕಗಳು** ಸೇರಿ **ಬಹುವಚನ** ಪದಗಳಾಗುತ್ತವೆ.

ಉದಾ : ರಾಜ + ಅರು > ರಾಜರು     ನೀನು + ವು > ನೀವು

ಮರ + ಗಳು > ಮರಗಳು     ಅಣ್ಣ + ಅಂದಿರು > ಅಣ್ಣಂದಿರು

ರಾಣಿ + ಅರು > ರಾಣಿಯರು

© KTBS Not to be republished

## ವಾಕ್ಯಗಳು

ಮಾತು ಪದಗಳಿಂದ ಆರಂಭವಾಗುತ್ತದೆ. ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ. ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ **ವಾಕ್ಯ**. ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗ ಮಾತ್ರ **ವಾಕ್ಯ** ಎನಿಸಿಕೊಳ್ಳುತ್ತದೆ.

**ಈ ವಾಕ್ಯಗಳನ್ನು ಗಮನಿಸಿ**

**೧. ಜಿಂಕೆ ಹುಲ್ಲನ್ನು ತಿಂದಿತು.**

**೨. ಕೃಷ್ಣ ಧೇನುಕಾಸುರನನ್ನು ಕೊಂದ.**

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ. ಆದರೆ ಪ್ರತಿಯೊಂದು ವಾಕ್ಯದಲ್ಲಿರುವ ಯಾವುದಾದರೂ ಒಂದು ಪದ ಇಲ್ಲವಾದಲ್ಲಿ ಆ ವಾಕ್ಯ ಪೂರ್ಣ ಅರ್ಥ ಕೊಡದೆ ಪ್ರಶ್ನೆ ಮೂಡುವಂತೆ ಮಾಡುತ್ತದೆ.

**ಉದಾ :** ಮೊದಲ ವಾಕ್ಯದಲ್ಲಿರುವ **'ಜಿಂಕೆ'** ಪದ ಇಲ್ಲವಾದರೆ ಹುಲ್ಲನ್ನು ತಿಂದುದು ಯಾವುದು? ಎಂಬ ಪ್ರಶ್ನೆ ಮೂಡುತ್ತದೆ. **'ಹುಲ್ಲನ್ನು'** ಪದ ಇಲ್ಲವಾದರೆ ಜಿಂಕೆ ಏನನ್ನು ತಿಂದಿತು ಎಂಬ ಪ್ರಶ್ನೆ ಮೂಡುತ್ತದೆ. **'ತಿಂದಿತು'** ಪದ ಇಲ್ಲವಾದರೆ ಜಿಂಕೆ ಹುಲ್ಲನ್ನು ಏನು ಮಾಡಿತು ಎಂಬ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಇಲ್ಲಿ **'ಜಿಂಕೆ'** ಎಂಬುದು **'ಕರ್ತೃಪದ'**; **'ಹುಲ್ಲು'** ಎಂಬುದು **'ಕರ್ಮಪದ'**; **'ತಿಂದಿತು'** ಎಂಬುದು **'ಕ್ರಿಯಾಪದ'**. ಅರ್ಥಪೂರ್ಣ ವಾಕ್ಯ ಎಂದರೆ **ಕರ್ತೃ, ಕರ್ಮ, ಕ್ರಿಯಾಪದ**ಗಳಿಂದ ವ್ಯವಸ್ಥಿತವಾಗಿ ಕೂಡಿರುವ ಪದಸಮೂಹ. ಆದರೆ ಕೆಲವು ಕ್ರಿಯಾಪದಗಳು ಕರ್ಮಪದವನ್ನು ಅಪೇಕ್ಷಿಸುವುದಿಲ್ಲ. ಅಂತಹ ಕ್ರಿಯಾಪದದ ಜತೆಗೆ ಕರ್ತೃಪದ ಇದ್ದರೆ ಅರ್ಥಪೂರ್ಣ ವಾಕ್ಯವಾಗುತ್ತದೆ.

**● ಅಭ್ಯಾಸ ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ಲಿಂಗದ ವಿಧಗಳಾವುವು?

೨. ಬಹುವಚನವನ್ನು ನಿದರ್ಶನದ ಮೂಲಕ ವಿವರಿಸಿ.

೩. ವಾಕ್ಯ ಎಂದರೇನು?

©KTBS Not to be republished

**ಪ್ರಾಯೋಗಿಕ ಭಾಷಾಭ್ಯಾಸ**

**೧. ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಾಗಿ ವರ್ಗೀಕರಿಸಿ.**

ಕೃಷ್ಣ ಹಾಲು ಪೂತನಿ ಶಕಟ ಬುಗುರಿ ಬೇಲದಹಣ್ಣು ಪೋರ ಬೆಂಕಿ ಒಡೆಯ ಕೈ ಕೀಲು ಎಕ್ಕಡ ಆನೆ ಅಕ್ರೂರ ದೇವಕಿ ವಸುದೇವ ಕಂಸ ಕ್ಷೀರಸಾಗರ ಕುಂಬಳ ರೋಹಿಣಿ ಯಶೋಧೆ, ಮಗ

**೨. ಕೊಟ್ಟಿರುವ ಪದಗಳ ಬಹುವಚನ ರೂಪ ಬರೆಯಿರಿ.**

ಮಂತ್ರಿ ವೈದ್ಯ ಸೇವಕ ಆಟ ಹಾವು ಕಣ್ಣು ಅಮ್ಮ ಕೈ ರಾಕ್ಷಸ ನನ್ನ ನಾನು ನೀನು ಮಗು

**೩. ಕೊಟ್ಟಿರುವ ವಾಕ್ಯಗಳಲ್ಲಿರುವ ಕರ್ಮ, ಕ್ರಿಯಾ ಹಾಗೂ ಕರ್ತೃಪದಗಳನ್ನು ಆರಿಸಿ ಬರೆಯಿರಿ.**

ಅ. ಕೃಷ್ಣ ಪೂತನಿಯನ್ನು ಕೊಂದನು.

ಆ. ಕಂಸ ಆವೇಶವನ್ನು ತೋರಿದ.

ಇ. ಅಷ್ಟಮಿಯ ದಿನ ಹುಟ್ಟಿದ ಎಲ್ಲ ಮಕ್ಕಳನ್ನೂ ಕಂಸ ಕೊಲ್ಲಿಸಿದ.

## ಹೆಚ್ಚಿನ ಓದು

- **ಕೆ. ಎಂ. ಮುನ್ಷಿ** ಅವರ **ಕೃಷ್ಣಾವತಾರ** ಕೃತಿ ಓದಿ
- **ತ.ಸು. ಶಾಮರಾಯರ ವಚನ ಭಾಗವತ** ಓದಿ

✦ ✦ ✦ ✦ ✦

©KTBS Not to be republished

## ಗದ್ಯಪಾಠ – ೭

# ಅಜ್ಜಯ್ಯನ ಅಭ್ಯಂಜನ

[ಲಲಿತ ಪ್ರಬಂಧ]

– ಕುವೆಂಪು

**ಅರ್ಥೈಸಿ – ಓದಿ**

| | | | | |
|---|---|---|---|---|
| ಅಭ್ಯಂಜನ | ಬೆರಗಾಗಿ | ಮಾಲೀಸು | ಉಚ್ಚಳಿಸಿ | ಭ್ರೂಮಧ್ಯೆ |
| ಕರ್ಮಕ್ರಿಯೆ | ಬೋಗಣೆ | ಕೊಣದಕಲ್ಲು | ಕಾರ್ಯದಕ್ಷತೆ | ಮೂರ್ಛೆ |



**ನಿಗದಿತ ಮೂಲ ಲಲಿತ ಪ್ರಬಂಧ – ಗದ್ಯ**

ಬಯಲುಸೀಮೆಯವರು ಐದೇ ನಿಮಿಷದಲ್ಲಿ ಸ್ನಾನ ಮಾಡಿ ಎರಡೇ ನಿಮಿಷದಲ್ಲಿ ಊಟ ಮಾಡುವ ಮಂದಿ! ನೀವು ಊಹಿಸಲಾಗದಿದ್ದರೆ ನಾನೇ ಹೇಳಿಬಿಡುತ್ತೇನೆ–ಅಭ್ಯಂಜನ! ಬೆರಗಾಗಬೇಡಿ. ನಿಮಗೆ ಗೊತ್ತಿಲ್ಲ. ಮಲೆನಾಡಿನಲ್ಲಿ ಅಭ್ಯಂಜನವೆಂದರೆ ಮಹಾಕಾರ್ಯ. ಅಭ್ಯಂಜನದ ದಿನ ಯಾರು ಸಾಯುತ್ತಾರೆ? ಯಾರು ಉಳಿಯುತ್ತಾರೆ? ಯಾರು ಮೂರ್ಛೆ ಬೀಳುತ್ತಾರೆ? ಹೇಳುವುದೇ ಕಷ್ಟ. ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ!

ಭಾನುವಾರ ಅಭ್ಯಂಜನಕ್ಕೆ ಅರ್ಧ ಡಬ್ಬ ಹರಳೆಣ್ಣೆ, ಎರಡುಬುತ್ತಿ ಸೀಗೆಪುಡಿ ಮನೆ ಲೆಕ್ಕಕ್ಕೆ ಖರ್ಚು. ನಾವು ಏಳೆಂಟು ಜನ ಹುಡುಗರು ಜತೆಗೆ ದೊಡ್ಡವರೂ; ಅಪ್ಪಯ್ಯ, ಚಿಕ್ಕಪ್ಪಯ್ಯ, ಸಣ್ಣಚಿಕ್ಕಯ್ಯ,

© KTBS Not to be republished

ದೊಡ್ಡಕಕ್ಕಯ್ಯ, ಅಣ್ಣಯ್ಯ, ಅಜ್ಜಯ್ಯ ಮುಂತಾದವರು! ಎರಡು ಆಳುಗಳಿಗೆ ಎಣ್ಣೆ ತಿಕ್ಕೀ ತಿಕ್ಕೀ ಸಾಕಾಗಿ ಹೋಗಬೇಕು. ಎಷ್ಟೋ ಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿರುವುದು ಉಂಟು! ಮತ್ತೆರಡು ಆಳುಗಳು ನೀರು ಸರಿಪಡಿಸುವುದು, ಅಂದರೆ ಹಂಡೆಗಳಲ್ಲಿ ಕುದಿಯುವ ನೀರನ್ನು ತೆಗೆದು, ಬೇರೆ ಕಡಾಯಗಳಿಗೆ ಹಾಕಿ, ತಣ್ಣೀರು ಬೆರೆಸಿ ಹದ ಮಾಡುವರು. ನೀರು ಬೆರೆಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ; ಅಲ್ಲದೇ ಒಂದು ದೋಣಿ ಸುಮಾರು ಹನ್ನೆರಡು ಹದಿಮೂರು ಅಡಿಗಳಷ್ಟು ಉದ್ದದ್ದು. ಆ ದೋಣಿ ಏಕೆ ಅನ್ನುವಿರೋ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದ ಮೇಲೆ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಪ್ರಮುಖ ಅಂಗ. ನೀರು ಬಿಸಿಬಿಸಿಯಾಗಿರುವುದು. ಅದನ್ನು ಬಿಸಿನೀರು ಎಂದರೆ ತಪ್ಪಾಗಬಹುದು. ಸುಡುನೀರು ಎನ್ನುವುದೇ ಉತ್ತಮ ಮತ್ತು ಸತ್ಯಕ್ಕೆ ಸಮೀಪವಾದುದು. ಅಭ್ಯಂಜನದಲ್ಲಿ ಬಿಸಿನೀರನ್ನು ಉಪಯೋಗಿಸುವುದೇ ಇಲ್ಲ;ಎಲ್ಲಾ ಸುಡುನೀರೆ! ಎಷ್ಟೋ ಸಾರಿ ಹುಡುಗರನ್ನು ಬಲವಂತದಿಂದ ಎಳೆದುಕೊಂಡು ಹೋಗಿ ಅದರಲ್ಲಿ ಅದ್ದಿದಾಗ ಕಿಟ್ಟನೆ ಕಿರಿಚಿಕೊಂಡು ಕೆಳಗೆ ಹಾರಿ ಕಲ್ಲಿನ ಮೇಲೆ ಬಿದ್ದು ಗಾಯ ಮಾಡಿಕೊಂಡಿರುವ ಪ್ರಸಂಗವೂ ಉಂಟು. ಇಷ್ಟೊಂದು ವಿಧವಿಧವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕುಸಾಕಾಗಿ ಹೋಗುತ್ತದೆ.

ಅತ್ತ ಐಗಳು ಕಿರಿಯರಿಗೆ ಎಣ್ಣೆ ಹಚ್ಚಿಹಚ್ಚಿ ಬಿಡುತ್ತಿರುವರು. ಅದೊಂದು ದೊಡ್ಡ ಗೋಳು. ತಿಮ್ಮು ಎಣ್ಣೆ ಹಚ್ಚಿಸಿಕೊಳ್ಳುತ್ತಾ ಕಿಟ್ಟನೆ ಕಿರುಚಿದ. ಏಕೆಂದರೆ ಮೊನ್ನೆ ಮಾವಿನಮರದಿಂದ ಕೆಳಗೆ ಹಾರಿದಾಗ ಬಿದ್ದು ಗಾಯವಾಗಿದ್ದನ್ನು ಯಾರಿಗೂ ಹೇಳದೇ ಮುಚ್ಚಿಟ್ಟಿದ್ದ. ಐಗಳು ಅದನ್ನು ಅರಿಯದೇ ಕುದುರೆಗೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೇ ತಿಕ್ಕಿದರು. ಹಾಗೆ ಮಾಡುವಾಗ ಕೀತುಹೋದ ಗಾಯ ಹಿಸಿದುಕೊಂಡು ಇದ್ದಕ್ಕಿದ್ದಂತೆ ದೃಗ್ಗೋಚರವಾಯ್ತು. ಅಂತು ಗಾಯದ ನೋವಿಗೆ ಗುಟ್ಟು ರಟ್ಟಾಯಿತು ಎಂದೂ ಗೋಳೋ ಎಂದು ಅಳುತ್ತಿದ್ದ. ಅವನನ್ನು ಸಮಾಧಾನ ಮಾಡಿದ್ದೇ ತಡ ವಾಸು ಕೂಗುತ್ತಿದ್ದಾನೆ. ಏನು? ತಲೆಗೆ ಹಾಕಿದ ಎಣ್ಣೆ ಶಿವನ ತಲೆಯ ಜಟೆಯಿಂದ ಹೊರಟ ಶ್ರೀಮದ್ ಗಂಗೆಯಂತೆ ಕೇಶರಾಶಿಗಳಿಂದ ಉಚ್ಚಳಿಸಿ ಲಲಾಟದ ಮಾರ್ಗವಾಗಿ ಭ್ರೂಮಧ್ಯೆ ಇಳಿದು ಕಮಲನಯನಗಳನ್ನು ಪ್ರವೇಶಿಸಿ ಬಿಟ್ಟಿತು. ನೆಗೆದು ನೆಗೆದು ಬಿದ್ದುಬಿದ್ದು ಕಿರುಚಿಕೊಳ್ಳುತ್ತಿದ್ದಾನೆ. ಬಟ್ಟೆಯಿಂದ ಕಣ್ಣು ಜಜ್ಜಿಹೋಗುವಂತೆ ಒರೆಸಿದ್ದಾಯಿತು. ಆದರೆ ಈ ಗಲಾಟೆಯಲ್ಲಿ ತಲೆಯಲ್ಲಿದ್ದ ಕಜ್ಜಿಯ ಜ್ಞಾಪಕವೇ ಅವರಿಗಾಗಲಿಲ್ಲ. ಅದನ್ನು ಎಡಗೈಯಿಂದ ಬಲವಾಗಿ ಅದುಮಿದ್ದರಿಂದ ಅವನು ಮತ್ತೂ ಕುಣಿದು ಕೂಗತೊಡಗಿದ. ಹುಡುಗರ ಗುಂಪಿನಲ್ಲಿ ಹೀಗೆ ಘಟನೆಗಳು ಪ್ರಾಪ್ತವಾಗುತ್ತಿರಲಾಗಿ ದೊಡ್ಡವರ ಮೈಗೆ ಆಳುಗಳು ಎಣ್ಣೆ ಉಜ್ಜುತ್ತಿದ್ದಾರೆ. ಅಜ್ಜಯ್ಯ ದೂರದಲ್ಲಿ ಕುಳಿತು ಎಣ್ಣೆ ಉಜ್ಜಿಸಿಕೊಳ್ಳುತ್ತಿದ್ದಾರೆ. ಅವರ ಮೈಯೆಲ್ಲಾ ತೈಲಮಯ. ಆಳು ತಲೆಗೆ ಎಣ್ಣೆಹಾಕಿ ಪಟ್ ಪಟ್ ಎಂದು ಮದ್ದಲೆ ಬಡಿಯುವಂತೆ ಬಿಡುವಿಲ್ಲದೇ ಬಡಿಯುತ್ತಿದ್ದಾನೆ. ಆ ಏಟಿಗೆ ಅಭ್ಯಾಸವಿಲ್ಲದವರಾಗಿದ್ದರೆ ಮೆದುಳು ಕದಡಿ ಹೋಗುತ್ತಿತ್ತು. ಆದರೆ ಅಜ್ಜಯ್ಯ ಅಚಲರಾಗಿ, ಧೀರರಾಗಿ ಕುಳಿತಿದ್ದಾರೆ.

ಈ ಮಧ್ಯೆ ಅವರು ಎಣ್ಣೆ ಹಚ್ಚಿಕೊಳ್ಳುವುದನ್ನು ಪ್ರಾರಂಭಿಸುವಾಗ ಮಾಡುವ ಕರ್ಮಕ್ರಿಯೆಗಳನ್ನು ಹೇಳಿದರೆ ಅಪ್ರಕೃತವಾಗದು. ಅಲ್ಲಿ ನೋಡಿ! ಅವರ ಮುಂದೆ ನೆಲದ ಮೇಲೆ ಬೆರಳಿನಿಂದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ. ಅವು ಅಶ್ವತ್ಥಾಮ ಹನುಮಂತ ಮೊದಲಾದ ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕ ತೈಲಬಿಂದುಗಳು. ಅದಾದ ಮೇಲೆ ಅವರು ಏನೇನೋ ಹೇಳುತ್ತಾ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬೊಟ್ಟನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಉಜ್ಜಲು ಅಪ್ಪಣೆ ಕೊಡುವರು. ಈ ಪ್ರಾರಂಭೋತ್ಸವವನ್ನು ಬಹಳ ಭಯಭಕ್ತಿಯಿಂದ ದೇವರನ್ನು ನೋಡುವಂತೆ ನೋಡುತ್ತಿದ್ದೆವು.

© KTBS Not to be republished

ಇಷ್ಟು ಹೊತ್ತಿಗೆ ದೊಡ್ಡ ಬೋಗಣಿಯಲ್ಲಿ ಪಾನಕ ಸಿದ್ಧವಾಗುವುದು, ಎಣ್ಣೆ ಹಚ್ಚಿ ಆಯಾಸಗೊಂಡವರಿಗಲ್ಲ; ಹಚ್ಚಿಸಿಕೊಂಡು ಆಯಾಸಪಟ್ಟವರಿಗೆ, ಅಲ್ಲದೇ ಅಭ್ಯಂಜನದ ನಡುವೆ ಬಿಸಿನೀರು ಮಿಂದು ಶಕ್ತಿಗುಂದಿದವರಿಗೂ ಪಾನಕಕೊಟ್ಟು ಪುನ: ಸಶೇಷವಾದ ಸ್ನಾನವನ್ನು ಪೂರೈಸಲು ಶಕ್ತಿಬರುವಂತೆ ಮಾಡುವುದು ರೂಢಿಯಾಗಿತ್ತು. ಅಷ್ಟು ಬಿಸಿಬಿಸಿಯಾದ ಸುಡು ನೀರನ್ನು ಹೇಗೆ ಮೀಯುತ್ತಿದ್ದೆವೋ ನಾನರಿಯೆ. ಈಗ ಅದನ್ನು ನೆನೆದರೆ ಸಾಕು ಮೈ ಬೆವರುವುದು. ಆ ಬಿಸಿನೀರಿನ ದೋಣಿಯಲ್ಲಿ ಅರ್ಧ ಗಂಟೆ ಮಲಗಿ ಅಲ್ಲಿಂದ ಕೆಳಗೆ ಇಳಿಯಲು ಶಕ್ತಿಸಾಲದೆ ಇತರರ ಸಹಾಯದಿಂದ ಕೆಳಗಿಳಿದರೆ, ಕೂಡಲೇ ಕಡಾಯಿಯಲ್ಲಿ ಸಿದ್ಧವಾಗಿದ್ದ ಸುಡುನೀರನ್ನು ತಲೆಯ ಮೇಲೆ ರಪ್‌ರಪ್ ಸದ್ದು ಬರುವಂತೆ ಹಾಕುವರು. ಶಿಥಿಲವಾಗಿದ್ದ ಜೀವ ಮತ್ತೂ ಶಿಥಿಲವಾಗಿ ನಿಲ್ಲಲಾರದೆ ಕೊಣದ ಕಲ್ಲಿನ ಮೇಲೆ ಕುಳಿತರೆ, ಒಬ್ಬರಲ್ಲ ಇಬ್ಬರು ಸೀಗೆಯಿಂದ ಮೈಯುಜ್ಜಲು ತೊಡಗುವರು.

ಅವರ ತಿಕ್ಕಾಟ ಎಳೆದಾಟದಲ್ಲಿ ಮೂರ್ಛೆ ಬರುವಂತಾಗುತ್ತಿತ್ತು. ಆಮೇಲೆ ತಲೆಯಲ್ಲಿದ್ದ ಹರಳೆಣ್ಣೆ ಸಂಪೂರ್ಣವಾಗಿ ಹೋಗುವಂತೆ ತಲೆಯುಜ್ಜುವರು. ಆ ಸಮಯದಲ್ಲಿ ಅಳದೆ ಇರುವ ಹುಡುಗರೇ ಇಲ್ಲ. ಕಣ್ಣನ್ನು ಎಷ್ಟು ಬಲವಾಗಿ ಮುಚ್ಚಿದರೂ ಸೀಗೆಯ ನೀರು ಹೇಗೋ ಒಳಗೆ ನುಗ್ಗಿಯೇ ನುಗ್ಗುವುದು. ಸ್ನಾನ ಮುಗಿಯುವಷ್ಟರಲ್ಲಿ ಮೈಯಲ್ಲ ಹಣ್ಣಾಗಿ ಹುಣ್ಣಾಗಿ ಕಣ್ಣಿನಂತೆಯೇ ಕೆಂಪಾಗಿ, ನಿಲ್ಲಲಾರದಷ್ಟು ಶಕ್ತಿಗುಂದದೆ ಇದ್ದರೆ ಅದು ನಿಜವಾದ ಅಭ್ಯಂಜನ ಅಲ್ಲವೇ ಅಲ್ಲ ಎಂದು ನಮ್ಮವರ ನಂಬುಗೆ. ಸ್ನಾನ ಮುಗಿಯಿತು. ಐಗಳು ಹುಡುಗನನ್ನು ಮೆಲ್ಲನೆ ಕೈಹಿಡಿದು ನಡೆಯಿಸಿಕೊಂಡು ಹೋಗಿ ಸಿದ್ಧವಾಗಿದ್ದ ಹಾಸಿಗೆಯ ಮೇಲೆ ಮಲಗಿಸುವರು. ಚೆನ್ನಾಗಿ ಬೆವರಲಿ ಎಂದು ಶಾಲು, ಕಂಬಳಿ, ರಗ್ಗು ಎಲ್ಲವನ್ನೂ ಮುಖ ಮುಚ್ಚಿ ಹೊದಿಸುವರು. ಒಳಗೆ ಪ್ರಾಣಿ ಬೆವತೂ ಬೆವತೂ ಹಾಸಿಗೆಯೆಲ್ಲ ತೊಯ್ದು ಹೋಗುತ್ತದೆ. ಹೀಗೆ ಹುಡುಗರನ್ನು ಒಬ್ಬೊಬ್ಬರಾಗಿ ಹಣ್ಣು ಹಣ್ಣು ಮಾಡಿ ಹಾಸಿಗೆಗೆ ತಳ್ಳಿದ ಮೇಲೆ ದೊಡ್ಡವರ ಸ್ನಾನ ಪ್ರಾರಂಭವಾಗುತ್ತದೆ. ಕಡೆಯಲ್ಲಿ ನಮ್ಮ ಅಜ್ಜಯ್ಯ ಅವರ ಅಭ್ಯಂಜನ. ಎಲ್ಲರಿಗೂ ಹೆದರಿಕೆ!.

ಅಜ್ಜಯ್ಯಗೆ ಎಲ್ಲರಿಗಿಂತಲೂ ಹೆಚ್ಚು ಬಿಸಿಯಾದ ನೀರುಬೇಕು. ಅವರು ಮೀಯುವ ನೀರಿಗೆ ನಾವು ಕೈಯಿಟ್ಟರೆ ಫಕ್ಕನೆ ಹೊರಗೆ ಎಳೆದುಕೊಳ್ಳುವಂತಾಗುತ್ತಿತ್ತು. ಅಭ್ಯಂಜನದ ಕಾಲದಲ್ಲಿ ಅವರು ಎರಡು–ಮೂರು ಸಾರಿಯಾದರೂ ಮೂರ್ಛೆ ಹೋಗದೆ ಇರುತ್ತಿರಲಿಲ್ಲ. ಅಷ್ಟೊಂದು ಬಿಸಿಯಾದ ನೀರು ಮಿಂದರೆ ಯಾರಿಗೆ ತಾನೆ ಮೂರ್ಛೆ ಬರುವುದಿಲ್ಲ? ಅದರಲ್ಲಿಯೂ ಸ್ವಲ್ಪ ವಯಸ್ಸು ಹೋದವರು. ಅವರು ದೋಣಿಯಲ್ಲಿ ದೀರ್ಘಕಾಲ ಮಲಗುವರು. ಏಳುವಾಗ ಒಂದು ಲೋಟ ಪಾನಕ ಖರ್ಚಾಗುತ್ತಿತ್ತು. ಆಮೇಲೆ ಆಳುಗಳು ಮೈಕೈಗಳನ್ನೂ ತಲೆಯನ್ನೂ ಸೀಗೆಯಿಂದ ಗಸಗಸ ಉಜ್ಜುತ್ತಿದ್ದರು. ಪುನ: ಸುಡುನೀರು ಜಲಪಾತದಂತೆ ತಲೆಯ ಮೇಲೆ ಬೀಳುತ್ತಿತ್ತು. ಇಷ್ಟು ಹೊತ್ತಿಗೆ ಮೂರ್ಛೆ ಹೋಗಿ ಕೊಣದ ಕಲ್ಲಿನ ಮೇಲೆ ಮಲಗಿ ಬಿಡುತ್ತಿದ್ದರು. ಆಗ ಹಾಹಾಕಾರವೆದ್ದು ಜನಗಳು ಹಿಂದೆ ಮುಂದೆ ಓಡಾಟ ಮಾಡುವುದೇ ಕಾರ್ಯದಕ್ಷತೆಯ ಚಿಹ್ನೆ ಎಂದು ತಿಳಿದುಕೊಂಡಂತೆ ತೋರುತ್ತಿತ್ತು. ಒಳಗಿನಿಂದ ಅಜ್ಜಮ್ಮ ಬರುತ್ತಿದ್ದರು. ಕೆಲವರು ಪಾನಕ ಕುಡಿಸುವರು; ಕೆಲವರು ತಣ್ಣೀರನ್ನು ತಲೆಗೆ ತಟ್ಟುವರು; ಕೆಲವರು ಗಾಳಿ ಬೀಸುವರು; ಕೆಲವರು ತೋಟದಾಚೆಯ ಭೂತರಾಯನಿಗೆ ಅಡ್ಡಬಿದ್ದು ಅಜ್ಜಯ್ಯನನ್ನು ಸಂರಕ್ಷಿಸುವಂತೆ ಅಂಗಲಾಚಿ ಬೇಡುವರು.


ಅಂತೂ ಸ್ವಲ್ಪ ಹೊತ್ತಿಗೆ ಅಜ್ಜಯ್ಯನ ಮೂರ್ಛೆ ಕೊನೆಗೊಂಡು 'ಅಮ್ಮಯ್ಯ', 'ನಾರಾಯಣ' ಮೊದಲಾದ ಪದಗಳು ಅವರ ಬಾಯಿಂದ ಹೊರಬಿದ್ದು ಎಲ್ಲರಿಗೂ ಧೈರ್ಯವನ್ನುಂಟು ಮಾಡುತ್ತಿದ್ದುವು. ಸರಿ; ಮತ್ತೆ ಜಳಕ, ಮತ್ತೆ ಮೂರ್ಛೆ! ಹೀಗಾಗಿ ಕೊನೆಗೆ ಸ್ನಾನ ಕೊನೆಗಾಣುವುದು. ಅವರಿಗೆ ನೀರೆರೆದವರು ಕೈಗಳನ್ನು

©KTBS Not to be republished

ಆಗಾಗ ತಣ್ಣೀರಿನಲ್ಲಿ ಅದ್ದಿ ತಂಪು ಮಾಡಿಕೊಂಡರೂ ಆ ಬಿಸಿನೀರಿನ ತಾಪ ಶಮನವಾಗುತ್ತಿರಲಿಲ್ಲ. ಅಷ್ಟು ಬಿಸಿ ಅವರು ಮೀಯುವ ನೀರು! ಅಜ್ಜಯ್ಯನ ಸ್ನಾನ ಕೊನೆಗಾಣುವಾಗ ಅವರು 'ಗಂಗೆ', 'ಯಮುನೆ' ಮೊದಲಾದ ಪುಣ್ಯ ನದಿಗಳ ಹೆಸರಿನ ಪಟ್ಟಿಯೊಂದನ್ನು ಗಟ್ಟಿಯಾಗಿ ಉಚ್ಚರಿಸಿ ನಾಲ್ಕು ದಿಕ್ಕುಗಳಿಗೂ ಕೈ ಮುಗಿಯುತ್ತಿದ್ದರು. ಇಬ್ಬರು ಎರಡು ಕೈಗಳನ್ನು ಹಿಡಿದು ಹಾಸಿಗೆಗೆ ಕರೆದೊಯ್ಯುತ್ತಿದ್ದರು. ಹೋಗುವಾಗ ಅವರ ಮೈ ಹೊಗೆಯಾಡುವಂತೆ ಕಾಣುತ್ತಿತ್ತು. ಅಲ್ಲಿ ಸಿದ್ಧವಾಗಿದ್ದ ಕಂಬಳಿ ಮೊದಲಾದುವನ್ನು ಮೈತುಂಬಾ ಹೊದೆದುಕೊಂಡು ಮಲಗಿ ಬೆವರಿಸಿಕೊಳ್ಳುತ್ತಿದ್ದರು. ಅವರು ಆದಿನ ರಾತ್ರಿ ಊಟ ಮಾಡುತ್ತಿರಲಿಲ್ಲ. ಬರಿಯ ಹಾಲನ್ನೆ ಕುಡಿದು ಮಲಗಿ ಬಿಡುತ್ತಿದ್ದರು.

ಅವರ ಕಾಲ ಮುಗಿದು ಹೋಯಿತು. ಅವರೊಡನೆ ಆ ಅಭ್ಯಂಜನದ ಮಹೋತ್ಸವವೂ ಮರೆತು ಹೋಯಿತು.

## ಕರ್ತೃ – ಭಾವ – ಆಕರ



**ಕುವೆಂಪು** ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪಗೌಡ ಅವರ ಮಗ ಪುಟ್ಟಪ್ಪ ಅವರು ಮಲೆನಾಡ ಮಡಿಲಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯವರು. ಜನನ ೧೯೦೪ ಡಿಸೆಂಬರ್ ೨೯. ಪ್ರೌಢಶಾಲಾ ಮತ್ತು ಉನ್ನತ ಶಿಕ್ಷಣವನ್ನು ಮೈಸೂರಿನಲ್ಲಿ ಮುಗಿಸಿ, ಅಲ್ಲಿನ ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತರಾದರು. ೧೯೯೪ ರ ನವೆಂಬರ್ ೯ ರಂದು ನಿಧನರಾದರು.

**ಶ್ರೀರಾಮಾಯಣ ದರ್ಶನಂ** ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೬೮ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಧಾರವಾಡದಲ್ಲಿ ನಡೆದ ೧೯೫೭ ರ ಮೂವತ್ತೊಂಬತ್ತನೆಯ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಇವರಿಗೆ ೧೯೬೪ರಲ್ಲಿ ರಾಷ್ಟ್ರಕವಿ, ೧೯೮೮ರಲ್ಲಿ ಪಂಪಪ್ರಶಸ್ತಿ, ೧೯೯೧ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ದೊರೆತಿದೆ. ಅಲ್ಲದೆ ಮೈಸೂರು, ಕರ್ನಾಟಕ, ಬೆಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್ ಸಂದಿದೆ. ೧೯೯೨ರಲ್ಲಿ ಕರ್ನಾಟಕ ರತ್ನ ಪ್ರಶಸ್ತಿ ಲಭಿಸಿದೆ.

ಆಧುನಿಕ ಕನ್ನಡ ಸಾಹಿತ್ಯದ ಕವಿಗಳಲ್ಲಿ ಅಗ್ರಗಣ್ಯರಾದ ಕುವೆಂಪು ಅವರು ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿ ರಚಿಸಿದ್ದಾರೆ. **ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ** – ಕವನ ಸಂಕಲನಗಳು. **ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು** –ಕಥಾಸಂಕಲನಗಳು. **ಕಾನೂರುಹೆಗ್ಗಡತಿ, ಮಲೆಗಳಲ್ಲಿ ಮದುಮಗಳು** – ಕಾದಂಬರಿಗಳು. **ತಪೋನಂದನ, ರಸೋವೈಸ:** – ವಿಮರ್ಶಾ ಸಂಕಲನಗಳು. **ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ** – ಮಕ್ಕಳ ಪುಸ್ತಕಗಳು. **ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್** – ನಾಟಕಗಳು. **ನೆನಪಿನದೋಣಿಯಲ್ಲಿ** – ಆತ್ಮಕಥನ. ಇವಲ್ಲದೇ **ಅನುವಾದ, ಮಹಾಕಾವ್ಯ** ಮುಂತಾದ **ಸುಮಾರು ಎಪ್ಪತ್ತು** ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಸಂಪತ್ತನ್ನು ಸಮೃದ್ಧಗೊಳಿಸಿದ್ದಾರೆ.

©KTBS Not to be republished

ಭಾರತೀಯ ಪರಂಪರೆಯಲ್ಲಿ ಎಣ್ಣೆಸ್ನಾನಕ್ಕೆ ತನ್ನದೇ ವಿಶೇಷ ಮಹತ್ವವಿದೆ. ಹಬ್ಬ– ಹರಿದಿನಗಳಲ್ಲಿ ಮನೆಯವರೆಲ್ಲರೂ ಸಂತಸದಿಂದ ಇದರಲ್ಲಿ ಭಾಗಿಗಳಾಗುತ್ತಾರೆ. ಸಂಸ್ಕೃತಿಯ ಭಾಗವಾಗಿ ಅನೂಚಾನವಾಗಿ ಬೆಳೆದುಬಂದಿರುವ ಈ ಅಭ್ಯಂಜನಕ್ಕೆ ಭಾರತೀಯ ವೈದ್ಯಚಿಕಿತ್ಸೆ ಹಾಗೂ ಯೋಗ ಪರಂಪರೆಯಲ್ಲಿ ವಿಶೇಷ ಸ್ಥಾನವಿದೆ. ದೈಹಿಕ ಆರೋಗ್ಯದ ದೃಷ್ಟಿಯಿಂದಲೂ ಇಂದೂ ತನ್ನದೇ ಆದ್ಯತೆಯನ್ನು ಪಡೆದುಕೊಂಡಿದೆ. ವೈಜ್ಞಾನಿಕವಾಗಿಯೂ ಅಭ್ಯಂಜನ ಉತ್ತಮ ಆರೋಗ್ಯವನ್ನು ಪಡೆಯಲು ಉತ್ತಮ ವಿಧಾನವೆಂದು ಪರಿಗಣಿಸಲ್ಪಟ್ಟಿದೆ. ಪ್ರಸ್ತುತ ಗದ್ಯಭಾಗ ಮಲೆನಾಡಿನ ಗ್ರಾಮೀಣ ಬದುಕಿನ ಚಿತ್ರಣವನ್ನು ಪ್ರತಿಬಿಂಬಿಸುವಲ್ಲಿ ಸಫಲವಾಗಿದೆ. ಒತ್ತಡ ಹಾಗೂ ಯಾಂತ್ರಿಕ ಜೀವನ ನಡೆಸುವ ಇಂದಿನ ದಿನಗಳಲ್ಲಿ ಅಭ್ಯಂಜನ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಇದೇ ಪ್ರಸ್ತುತ ಗದ್ಯಭಾಗದ ಆಶಯ ಸಾರ.

ಪ್ರಕೃತ ಪಠ್ಯಭಾಗವನ್ನು **ಕುವೆಂಪು** ಅವರ **ಮಲೆನಾಡಿನ ಚಿತ್ರಗಳು – ಗದ್ಯ ಚಿತ್ರಗಳ ಸಂಕಲನ** ಕೃತಿ (ಪುಟ ೨೯–೩೭) ಯಿಂದ ಆಯ್ದು ಪರಿಷ್ಕಾರದೊಂದಿಗೆ ನಿಗದಿಪಡಿಸಿದೆ.

## ಪದ – ಗದ್ಯಾರ್ಥ

ಮಲೆನಾಡು – ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶ ; ಅಭ್ಯಂಜನ – ಎಣ್ಣೆ(ಹರಳೆಣ್ಣೆ) ಹಚ್ಚಿಕೊಂಡು ಮಾಡುವ ಸ್ನಾನ, ಎಣ್ಣೆಮಜ್ಜನ ; ಬುತ್ತಿ – ಪೊಟ್ಟಣ, ಪ್ರಯಾಣ ಇಲ್ಲವೇ ಕೆಲಸಕ್ಕೆ ಹೋಗುವಾಗ ಕಟ್ಟಿಕೊಂಡು ಹೋಗುವ ಸಿದ್ಧಪಡಿಸಿದ ಆಹಾರದ ಗಂಟು, ಕಲಸನ್ನದ ಗಂಟು ; ಹಂಡೆ – ನೀರು ಕಾಯಿಸಲು ಬಳಸುವ ತಾಮ್ರದ ದೊಡ್ಡಪಾತ್ರೆ ; ಐಗಳು – ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವವರು; ಕೀತುಹೋದ – ಕೀವುತುಂಬಿದ ; ದೃಗ್ಗೋಚರ – ಕಣ್ಣಿಗೆ ಕಾಣಿಸುವ; ಉಚ್ಚಳಿಸಿ – ಚಿಮ್ಮಿ ; ಲಲಾಟ – ಹಣೆ ; ಭ್ರೂಮಧ್ಯೆ – ಎರಡು ಹುಬ್ಬುಗಳ ನಡುವೆ ; ಕಮಲನಯನ – ಕಮಲದಂತಹ ಕಣ್ಣುಳ್ಳ ; ಕಜ್ಜಿ – ಒಂದು ವಿಧದ ಚರ್ಮರೋಗ ; ಮದ್ದಲೆ – ಒಂದು ವಿಧದ ಚರ್ಮವಾದ್ಯ ; ಅಚಲ – ಚಲಿಸದ (ಬೆಟ್ಟ, ಪರ್ವತ) ; ಕರ್ಮಕ್ರಿಯೆ – ಕೆಲಸ ಕಾರ್ಯ ; ಚಿರಂಜೀವಿ – ಸಾವು ಇಲ್ಲದವ ; ಸ್ಮಾರಕ – ನೆನಪಿಗಾಗಿ ಕಟ್ಟಿದ್ದು ; ತೈಲಬಿಂದು – ಎಣ್ಣೆಯ ಬಟ್ಟು ; ಬೋಗಣಿ – ಬಾಯಿ ಅಗಲದ ಪಾತ್ರೆ ; ಪಾನಕ – ಬೆಲ್ಲ ಅಥವಾ ಸಕ್ಕರೆಯಿಂದ ತಯಾರಿಸಿದ ಪಾನೀಯ ; ಶಕ್ತಿಗುಂದು – ಶಕ್ತಿ ಕಡಿಮೆಯಾಗು ; ಮೀಯು – ಸ್ನಾನ ಮಾಡು ; ಶಿಥಿಲ – ಸವೆದ ; ಕೊಣದಕಲ್ಲು – ಸ್ನಾನದ ಮನೆಯ ಹಾಸುಗಲ್ಲು ; ಸಶೇಷ – ಶೇಷವಾಗಿ ಉಳಿದ ; ಅಪ್ರಕೃತ – ಪ್ರಕೃತವಲ್ಲದ ; ಹರಳೆಣ್ಣೆ – ಹರಳಿ(ಔಡಲ)ನ ಬೀಜದಿಂದ ತೆಗೆದ ಎಣ್ಣೆ, ಔಡಲಎಣ್ಣೆ; ತೊಯ್ದು – ನೆನೆದು ; ಭೂತರಾಯ – ಮಲೆನಾಡಿನ ಜನರ ಆರಾಧ್ಯದೈವ; ಜಳಕ – ಸ್ನಾನ ; ಮೂರ್ಛೆ – ಜ್ಞಾನತಪ್ಪು ; ಹುಣ್ಣು – ಕೀವು ತುಂಬಿದ ಗಾಯ ; ಕಂಬಳಿ – ಉಣ್ಣೆಹೊದಿಕೆ, ಚಳಿಗಾಲದಲ್ಲಿ ಹೊದೆಯಲು ಬಳಸುವ ಹೊದಿಕೆ, ಮಳೆಯಲ್ಲಿ ಕೆಲಸ ಮಾಡುವಾಗಲೂ ಇದನ್ನು ಹೊದ್ದುಕೊಳ್ಳುವರು ಫಕ್ಕನೆ – ಕೂಡಲೆ; ಜಲಪಾತ – ಎತ್ತರದಿಂದ ರಭಸವಾಗಿ ಬೀಳುವ ನೀರು ; ಹಾಹಾಕಾರ – ಸಹಿಸಲಾಗದ ಸಂದರ್ಭದಲ್ಲಿ ಮಾಡುವ ಉದ್ಗಾರ ವಾಚಕ ; ಚಿಹ್ನೆ – ಗುರುತು ; ಶಮನ – ನಿವಾರಣೆ ; ಬಲಾತ್ಕಾರ – ಒತ್ತಾಯ ; ಅರಿ – ಜ್ಞಾನ ; ಕೂಗು – ಅಳು ; ಹಿಸಿದು – ಬಿರಿದು ; ತೈಲ – ಎಣ್ಣೆ ; ಕದಡಿ – ಬಿರಿದು ; ಧೀರ – ವೀರ ; ರೂಢಿ – ಅಭ್ಯಾಸ

©KTBS Not to be republished

## ಪದ್ಯಾಧಾರ ಟಿಪ್ಪಣಿ

**ಸಪ್ತ ಚಿರಂಜೀವಿಗಳು:** ಅಶ್ವತ್ಥಾಮ, ವ್ಯಾಸ, ಪರಶುರಾಮ, ವಿಭೀಷಣ, ಕೃಪಾಚಾರ್ಯ, ಆಂಜನೇಯ ಮತ್ತು ಬಲಿ ಇವರೇ ಪುರಾಣ ಪ್ರಸಿದ್ಧ ಸಪ್ತ ಚಿರಂಜೀವಿಗಳು.

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಅಭ್ಯಂಜನದ ದಿನ ಮನೆ ಲೆಕ್ಕಕ್ಕೆ ಯಾವುದು ಖರ್ಚಾಗುತ್ತದೆ?

೨ ಕಿರಿಯರಿಗೆ ಎಣ್ಣೆ ಹಚ್ಚುವವರು ಯಾರು?

೩. ದೊಡ್ಡವರ ಮೈಗೆ ಎಣ್ಣೆ ಉಜ್ಜುತ್ತಿದ್ದವರು ಯಾರು?

೪. ಅಜ್ಜಯ್ಯನ ಮುಂದೆ ಬೆರಳಿನಿಂದಿಟ್ಟ ಎಣ್ಣೆಯ ಸ್ಮಾರಕ ಬಿಂದುಗಳಾವುವು?

೫. ಅಜ್ಜಯ್ಯನಿಗೆ ಎಣ್ಣೆ ಉಜ್ಜುವುದನ್ನು ಮಕ್ಕಳು ಹೇಗೆ ನೋಡುತ್ತಿದ್ದರು?

೬. ಅಜ್ಜಯ್ಯ ಅವರಿಗೆ ಅಭ್ಯಂಜನ ಮಾಡಿಸುವಾಗ ಸುಡುನೀರು ತಲೆಯ ಮೇಲೆ ಹೇಗೆ ಬೀಳುತ್ತಿತ್ತು?\

೭. ಕಾರ್ಯದಕ್ಷತೆಯ ಚಿಹ್ನೆ ಎಂದು ಯಾವುದನ್ನು ತಿಳಿದಿದ್ದರು?

೮. ಅಜ್ಜಯ್ಯ ಅವರು ಸ್ನಾನ ಮಾಡಿ ಹೋಗುವಾಗ ಅವರ ಮೈ ಹೇಗೆ ಕಾಣುತ್ತಿತ್ತು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಅಭ್ಯಂಜನದ ದಿನ ಯಾವುದನ್ನು ಹೇಳುವುದು ಕಷ್ಟವಾಗಿತ್ತೆಂದು ಲೇಖಕರು ಹೇಳಿದ್ದಾರೆ?

೨. ತಿಮ್ಮು ಎಣ್ಣೆ ಹಚ್ಚಿಸಿಕೊಳ್ಳುವಾಗ ಗೋಳಾಡಲು ಕಾರಣವೇನು?

೩. ವಾಸುವಿನ ತಲೆಗೆ ಹಾಕಿದ ಎಣ್ಣೆ ಕಮಲನಯನಗಳನ್ನು ಹೇಗೆ ಪ್ರವೇಶಿಸಿತು?

೪. ಅಜ್ಜಯ್ಯ ಅವರು ಮೂರ್ಛೆ ತಿಳಿದಾಗ ಮನೆಯವರು ಏನೇನು ಮಾಡುತ್ತಿದ್ದರು?

೫. ಅಜ್ಜಯ್ಯ ಅವರು ಸ್ನಾನ ಕೊನೆಗಾಣುವಾಗ ಏನು ಮಾಡುತ್ತಿದ್ದರು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಎಣ್ಣೆ ಹಚ್ಚಿಸಿ ಕೊಳ್ಳುವಾಗ ತಿಮ್ಮು ಮತ್ತು ವಾಸು ಪಟ್ಟ ಪಾಡನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. ಅಜ್ಜಯ್ಯ ಅವರ ಅಭ್ಯಂಜನ ಹೇಗೆ ನಡೆಯುತ್ತಿತ್ತು ವಿವರಿಸಿರಿ.

© KTBS Not to be republished

ಈ. ಸಂದರ್ಭಾನುಸಾರ ವಿವರಿಸಿ.

೧. "ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ"

೨. "ಕುದುರೆಗೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೇ ತಿಕ್ಕಿದರು"

೩. "ಲಲಾಟದ ಮಾರ್ಗವಾಗಿ ಭ್ರೂಮಧ್ಯೆ ಇಳಿದು ಕಮಲನಯನಗಳನ್ನು ಪ್ರವೇಶಿಸಿ ಬಿಟ್ಟಿತು"

೪. "ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕ ಬಿಂದುಗಳು"

೫. "ಅದು ನಿಜವಾದ ಅಭ್ಯಂಜನ ಅಲ್ಲವೇ ಅಲ್ಲ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಕೊಟ್ಟಿರುವ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ**

| | | | | |
|---|---|---|---|---|
| ೧. | ಬಿಸಿಯಾದ | ಒಬ್ಬೊಬ್ಬ | ಸಮೀಪವಾದುದು | ಗಾಯವಾಗು |
| ೨. | ಗುಟ್ಟು | ಎಣ್ಣೆ | ಮೈಗೆ | ತಿಕ್ಕಾಟ |
| ೩. | ಕೊಳಲು | ಪಾಂಚಜನ್ಯ | ಪಕ್ಷಿಕಾಶಿ | ಮಲೆಗಳಲ್ಲಿ ಮದುಮಗಳು |

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ವಾಕ್ಯಪ್ರಭೇದ ಮತ್ತು ಸಮಾಸಗಳ ಸ್ಥೂಲ ಪರಿಚಯಾತ್ಮಕ ವಿವರ**
**ವಾಕ್ಯಪ್ರಭೇದಗಳು**

ವಾಕ್ಯಗಳನ್ನು **ಸಾಮಾನ್ಯ, ಸಂಯೋಜಿತ ಮತ್ತು ಮಿಶ್ರವಾಕ್ಯ** ಎಂಬುದಾಗಿ ಮೂರು ವಿಭಾಗ ಮಾಡಲಾಗಿದೆ.

**ಸಾಮಾನ್ಯವಾಕ್ಯ :** **೧. ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.**
**೨. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು.**

ಈ ಎರಡೂ ವಾಕ್ಯಗಳು ಒಂದೊಂದು ಪೂರ್ಣ ಕ್ರಿಯಾಪದದೊಡಗೂಡಿ ಸ್ವತಂತ್ರ ವಾಕ್ಯಗಳಾಗಿವೆ. ಹೀಗೆ – **ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯಗಳೇ ಸಾಮಾನ್ಯವಾಕ್ಯಗಳು.**

**ಸಂಯೋಜಿತವಾಕ್ಯ : ಪಾಂಡವರ ಯಜ್ಞತುರಗ ಮಣಿಪುರವನ್ನು ಪ್ರವೇಶಿಸಿತು ; ಆಗ ಬಭ್ರುವಾಹನನು ಅದನ್ನು ಕಟ್ಟಿ ಹಾಕಿದನು ; ಆದ್ದರಿಂದ ಬಭ್ರುವಾಹನನಿಗೂ ಅರ್ಜುನನಿಗೂ ಯುದ್ಧ ನಡೆಯಿತು.**

ಇಲ್ಲಿ ಮೂರು ಸ್ವತಂತ್ರ ವಾಕ್ಯಗಳು **'ಆಗ', 'ಆದ್ದರಿಂದ'** ಪದಗಳ ಸಹಾಯದಿಂದ ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ. ಹೀಗೆ – **ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ**

©KTBS Not to be republished

**ಎರಡು ಅಥವಾ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ.**

**ಮಿಶ್ರವಾಕ್ಯ : ಗಾಯತ್ರಿ ಗಾಯನಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು.**

ಇಲ್ಲಿ **'ಆಕೆ ತುಂಬಾ ನೊಂದುಕೊಂಡಳು'** ಎಂಬ ಪ್ರಧಾನ ವಾಕ್ಯಕ್ಕೆ **'ಗಾಯತ್ರಿ ಗಾಯನ ಸ್ಪರ್ಧೆಯಲ್ಲಿ ಗೆದ್ದಳು'; 'ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗಲಿಲ್ಲ'** ಎಂಬ ಉಪವಾಕ್ಯಗಳು ಅಧೀನವಾಗಿ **'ಮಿಶ್ರವಾಕ್ಯ'**ವಾಗಿದೆ. ಹೀಗೆ – **ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವೇ ಮಿಶ್ರವಾಕ್ಯ.**

**ಸಮಾಸ**

- **ಜಯಪುರದ ಅರಮನೆ ಸುಂದರವಾಗಿದೆ.**
- **ರಸ್ತೆಯ ವಿಸ್ತರಣೆಗಾಗಿ ಹೆದ್ದಾರಿಯ ಬದಿಯಲ್ಲಿರುವ ಮರಗಳನ್ನು ಕಡಿಯಲಾಗಿದೆ.**

ಈ ಎರಡು ವಾಕ್ಯಗಳಲ್ಲಿರುವ **'ಅರಮನೆ', 'ಹೆದ್ದಾರಿ'** ಎಂಬ ಎರಡು ಪದಗಳನ್ನು ಗಮನಿಸಿದಾಗ **'ಅರಮನೆ'** ಎಂಬ ಪದ **'ಅರಸನ ಮನೆ'** ಎಂಬ ಅರ್ಥವನ್ನೂ **'ಹೆದ್ದಾರಿ'** ಎಂಬ ಪದ **'ಹಿರಿದಾದ ದಾರಿ'** ಎಂಬ ಅರ್ಥವನ್ನೂ ಕೊಡುವ ಪದಗಳೆಂದು ತಿಳಿಯುತ್ತದೆ. ಹೀಗೆ – **ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದವಾಗುವುದೇ ಸಮಾಸ.**

ಈ ರೀತಿ ಸಮಾಸವಾಗುವಾಗ ಸಂಸ್ಕೃತ ಪದದೊಂದಿಗೆ ಸಂಸ್ಕೃತ ಪದವೇ ಸೇರಬೇಕು. ಕನ್ನಡ ಪದದೊಂದಿಗೆ ಕನ್ನಡ ಪದವೇ ಸೇರಬೇಕು. ಸಂಸ್ಕೃತ ಪದಕ್ಕೆ ಕನ್ನಡ, ಕನ್ನಡ ಪದಕ್ಕೆ ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಬಾರದು. ಒಂದು ವೇಳೆ ಇಂತಹ ಪದಗಳೊಂದಿಗೆ ಸಮಾಸವಾದರೆ ಅದನ್ನು **'ಅರಿಸಮಾಸ'** ಎನ್ನುತ್ತಾರೆ. ಆದರೆ **ಪೂರ್ವದ ಕವಿಗಳು** ಪ್ರಯೋಗಿಸಿದ್ದರೆ, **ಬಿರುದಾವಳಿಗಳಾಗಿದ್ದರೆ** ಮತ್ತು **ಗಮಕ** ಅಥವಾ **ಕ್ರಿಯಾ** ಸಮಾಸಗಳಾಗಿದ್ದರೆ ದೋಷವಿಲ್ಲ.

ಕನ್ನಡ ಭಾಷೆಯಲ್ಲಿ **ತತ್ಪುರುಷ, ಕರ್ಮಧಾರಯ, ದ್ವಿಗು, ಅಂಶಿ, ದ್ವಂದ್ವ, ಬಹುವ್ರೀಹಿ, ಕ್ರಿಯಾ ಮತ್ತು ಗಮಕ** ಎಂಬ ಎಂಟು ವಿಧದ ಸಮಾಸಗಳು ಬಳಕೆಯಲ್ಲಿವೆ. ಸಮಾಸ ಪದಗಳನ್ನು ಬಿಡಿಸಿ ಬರೆಯುವ ಕ್ರಮವನ್ನು **ವಿಗ್ರಹವಾಕ್ಯ** ಅಥವಾ **ವಿಗ್ರಹಿಸುವುದು** ಎನ್ನುತ್ತಾರೆ. **ಉದಾ:** ತೈಲದ ಬಿಂದುಗಳು = ತೈಲ ಬಿಂದುಗಳು.

©KTBS Not to be republished

- **ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ವಾಕ್ಯ ಪ್ರಭೇದಗಳನ್ನು ವಿವರಿಸಿ

೨. ಸಮಾಸ ಎಂದರೇನು?

೩. ಸಮಾಸಗಳಲ್ಲಿ ಎಷ್ಟು ವಿಧ? ಪಟ್ಟಿ ಮಾಡಿ.

- **ಪ್ರಾಯೋಗಿಕ ಭಾಷಾಭ್ಯಾಸ**

**ಕೊಟ್ಟಿರುವ ಸಾಮಾನ್ಯ ವಾಕ್ಯಗಳನ್ನು ಸಂಯೋಜಿತ ವಾಕ್ಯವಾಗಿ ಪರಿವರ್ತಿಸಿ ಬರೆಯಿರಿ.**

– ವಾಸುವಿನ ತಲೆಗೆ ಹಾಕಿದ ಎಣ್ಣೆ ಹಣೆಯ ಮೂಲಕ ಇಳಿದು ಕಣ್ಣುಗಳನ್ನು ಪ್ರವೇಶಿಸಿತು.

– ಅವನ ಕಣ್ಣುಗಳು ಉರಿಯತೊಡಗಿದವು.

– ಅವನು ಕಣ್ಣುಗಳನ್ನು ಬಟ್ಟೆಯಿಂದ ಉಜ್ಜತೊಡಗಿದನು.

## ಹೆಚ್ಚಿನ ಓದು

✦ **ರಾಷ್ಟ್ರಕವಿ ಕುವೆಂಪು** ಅವರ **ಮಲೆನಾಡಿನ ಚಿತ್ರಗಳು – ಗದ್ಯ ಚಿತ್ರಗಳ** ಸಂಕಲನವನ್ನು ಓದಿ.

✦ **ಡಾ. ಕೆ.ಸಿ. ಶಿವಾರೆಡ್ಡಿ** ಸಂಪಾದಿಸಿರುವ **ಕುವೆಂಪು ಸಮಗ್ರ ಗದ್ಯ (ಸಂಪುಟ–೧)** ಕೃತಿಯನ್ನು ನೋಡಿ.

✦ ✦ ✦ ✦ ✦

©KTBS Not to be republished

## ಗದ್ಯಪಾಠ – ೮

# ಅಂತರಾಳ

[ಹಳಗನ್ನಡ]

– ಮುದ್ದಣ

**ಅರ್ಥೈಸಿ – ಓದಿ**

| | | | | |
|---|---|---|---|---|
| ಬಂದೊದವಿದ | ಕಿತ್ತಡಿ | ಪುಗುತರ್ಪುದು | ಬಾವನ್ನ | ಅನಿಬರುಮಂ |
| ಮೃಷ್ಟಾನ್ನಭೋಜನ | ಕೆಮ್ಮಕೆಮ್ಮನೆ | ಮೂಜಗ | ಪಾಸುವೊಕ್ಕು | ಕವಡುನುಡಿ |



© KTBS Not to be republished

**ನಿಗದಿತ ಮೂಲ ಹಳಗನ್ನಡ – ಗದ್ಯ**

ಇಂತು ಬಂದೊದವಿದ ಚಳಿಗಾಲದೊಳ್ ರಾಘವನ ಯಜ್ಞ ತುರಂಗಮಂ ಅರಣ್ಯಕನೆಂಬೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದುಂ, ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳಪೊಕ್ಕು ಮುನಿಗೆಱಗಿದರ್. ಆಗಳರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ ಶ್ರೀರಾಮಸತ್ಕಥಾ ವಿನೋದ ಗೋಷ್ಠಿಯೊಳ್....

**ಮನೋರಮೆ :** ಎನ್ನ ಚನ್ನಿಗ! ಆತಿಥ್ಯಮೆಂದೊಡೇಂ? ಬಱಿದೆ ಬಾಯುಪಚಾರಮೆ?

**ಮುದ್ದಣ :** ಅಲ್ತಲ್ತು, ಬಾಯ ಉಪಚಾರಮಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂಟನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನಿರ್ದು ನುಡಿದು ನಡೆದು ಮನ್ನಿಪುದು.

**ಮನೋರಮೆ :** ಅಂತಿರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿನಿವಿರಿದು ಪಡೆಗರಣ್ಯಕಂ ಕೂಟ್ಟೇರಿತ್ತು ಸಮ್ಮನಿಸಿದನೆ?

**ಮುದ್ದಣ:** ಅಪ್ಪುದಪ್ಪುದು. ಅನಿಬರುಮಂ ಯಥೇಚ್ಛಂ ಮೃಷ್ಟಾನ್ನಭೋಜನದಿಂ ತಣಿಸಿದಂ.

**ಮನೋರಮೆ :** ಎನಗಿದಚ್ಚರಿ. ಎಂತುಟಾರ್ತಂ?

**ಮುದ್ದಣ :** ಏಂ! ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ! ಬೇಡಿದ ಪುರುಳನುಱದಿಂ ತಂದೀಗುಂ.

**ಮನೋರಮೆ :** ಅಂತುಟೇಂ, ಘನಂ! ಆವುದೊ ಮಂತ್ರಂ.

**ಮುದ್ದಣ:** ಅವುದೇಂ! ಏಕಾಕ್ಷರೀ ದ್ವ್ಯಕ್ಷರೀ ತ್ರ್ಯಕ್ಷರೀ ಚತುರಾಕ್ಷರೀ ಪಂಚಾಕ್ಷರೀ ಷಡಕ್ಷರೀ ಮುಂತಪ್ಪ ಪ್ರಸಿದ್ಧ ಮಂತ್ರಂಗಳೊಳವಲ್ತೆ.

**ಮನೋರಮೆ :** ಓ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಿಂ ಪೆಱತೊಂದಱ ಗೊಡವೆಯಿಲ್ಲದಿರ್ಕುಂ ತಾಪಸರ್.

**ಮುದ್ದಣ :** ಅಪ್ಪುದಪ್ಪುದು : ತಪ್ಪೇಂ?

**ಮನೋರಮೆ :** ಅಂತದಿರ್ಕೆ. ನಿನ್ನನ್ನರಪ್ಪ ಕಬ್ಬಿಗರ್ ಮನೆವಾರ್ತೆಯೊಳಿನಿಸೊಂದುಂಗೊಡವೆಗೊಳ್ಳದೆ ಕೆಮ್ಮ ಕೆಮ್ಮನೆ ಪಾಟ್ಟತೆಯ ಕಬ್ಬದೊಳೇವೊಟ್ಟುಂ ಬೆಮೆಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೊ? ಉಣಲೇಂ, ತಿನಲೇಂ? ಅಂತಿರೊಂದು ಜಪಮಂ ಪಿರಿಯ ತವಸಿಗಳತ್ತಣಿನುಪದೇಶಂ ಗೊಂಡೊಡಾಗದೆ!

**ಮುದ್ದಣ :** (ಮುಗುಳ್ನಗೆಯಿಂ) ಏಂ! ಎಮ್ಮವರೊಂದಿರಕೆ ನಗುವಾ? ಆ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊಱತೆಯೊ! ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಟೆಯಿಸುವ ಪೊಗಟ್ವಿ ತೆಗಟ್ವಿ ಕೊಳ್ವಾಳ್ವ ತಾಳ್ವ ತೂಳ್ವ ಪೂಟ್ವಿ ಪೇಟ್ವಿ ಬಾಟ್ವಿ ಸಿಂಗರದ ಬಣ್ಣಗಬ್ಬಿಗರೆಮ್ಮತೆಱನನಿನ್ನುಂ ನೀನಱೆಯಯ್.

**ಮನೋರಮೆ :** (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ?

**ಮುದ್ದಣ :** ತಡೆಯೇನಳ್ಕೇಂ!

**ಮನೋರಮೆ :** ನಿನ್ನೊಳಮೊಳವೆ?

**ಮುದ್ದಣ :** ಎನ್ನೊಳಂತಿದು ಪಾಸುವೊಕ್ಕು.

**ಮನೋರಮೆ :** ಆ! ನೀನುಂ ಬಲ್ ಮೈಮೆಗಾಱಂ. ನಿನಗಾರತ್ತಣಿನೆಂದುಪದೇಶಮಾಯ್ತು?

**ಮುದ್ದಣ :** ಗುರುವತ್ತಣಿನಂದೆಳವೆಯೊಳೆ.

**ಮನೋರಮೆ :** ಎನ್ನೆಱಿಕೆಯ! ಅದಾವುದೊ ಮಂತ್ರಮೆನ್ನೊಳುಸಿರ?

**ಮುದ್ದಣ :** ಎಲೆ ಪೆಣ್ಣೆ! ನೀನಾರೊಳಮೆಂದೆಂದಿಂಗುಮುಸಿರಲ್ಬಾರದು, ಜೋಕೆ!

**ಮನೋರಮೆ :** ಎಂದುಮೆಂತುಮುಸಿರನಾಡೆಂ.

©KTBS Not to be republished

**ಮುದ್ದಣ :** ಅಂತಾದೊಡಿಂತಿದು, ಕೇಳ್....ಭ....ವ....ಪೆಱರೊಳಾಡೆನೆಂಬ ನಂಬುಗೈಯಂ ಪೊಯ್.

**ಮನೋರಮೆ :** ಇದೆ. ಪಿಡಿ ನಂಬುಗೈಯಂ, ನಿನ್ನಾಣೆ, ಕುಲದೈವದಾಣೆ! ಎಂದುಂ ಪೆಱವರೊಳೊರೆಯೆಂ.

**ಮುದ್ದಣ :** ಉಂ! ......ಭವತಿ......ಭಿ......ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದು ಗುಟ್ಟಂ ಬಿಟ್ಟೊಡೆಮ್ಮನ್ನರ ಬಾಟ್ ಪಾಟಿಕ್ಕುಂ.

**ಮನೋರಮೆ :** ಆನೇಂ ಮೋಡೆಯೆ! ಪೋ! ತನ್ನಾಣೆ, ಕಣ್ಣಾಣೆ, ಕೇಳ್ವೆಂ.

**ಮುದ್ದಣ :** (ಏಕ್ಕಟಿಯೊಳ್) 'ಭವತಿ ಭಿಕ್ಷಾಂ ದೇಹಿ' ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ. ಆರೊಳಾನುಮುಸಿರದಿರ್.

**ಮನೋರಮೆ :** (ಅರೆಮುನಿಸಿಂ) ಪೋ ಮಾಣೆಲೆ ರಮಣ! ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆನೀ ತೆಱನ ಮಾಟದ ಕವಡುನುಡಿಯ ಕೊಂಕೆಂಬುದನಱಿಯದಾದೆಂ. ನೀಂ ಕಬ್ಬಿಗನೊ, ಸಬ್ಬವಕಾಱನೊ! ನಿನ್ನೀ ಕಬ್ಬದ ಸೊಗಸನೆಮ್ಮನ್ನರಪ್ಪ ಜಾಣೆಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ?

**ಮುದ್ದಣ :** ಸಾಲ್ಗುಮೀಪರಿಹಾಸಂ. ಮುಂಗತೆಯಂ ಕೇಳ್.

## ಕರ್ತೃ - ಭಾವ - ಆಕರ



**ಲಕ್ಷ್ಮೀನಾರಾಯಣಪ್ಪ** ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ನಂದಳಿಕೆಯ ಶ್ರೀಮಹಾಲಿಂಗೇಶ್ವರ ದೇವಳದಲ್ಲಿ ಮಾಲೆಗಾರರಾಗಿದ್ದ ತಿಮ್ಮಪ್ಪಯ್ಯ ಮತ್ತು ಮಹಾಲಕ್ಷ್ಮಮ್ಮ ದಂಪತಿಗಳ ಮಗ. ೧೮೭೦ ಜನವರಿ ೨೪ ರಂದು ಜನಿಸಿದ ಈತನನ್ನು ತಾಯಿ 'ಮುದ್ದಣ' ಎಂದು ಮುದ್ದಿನಿಂದ ಕರೆಯುತ್ತಿದ್ದಳು. ಹಾಗಾಗಿ 'ಲಕ್ಷ್ಮೀನಾರಾಯಣ' ಎಂದು ನಾಮಕರಣ ಮಾಡಿದ್ದರೂ ಕನ್ನಡನಾಡು ಈತನನ್ನು 'ಮುದ್ದಣ' ಎಂದೇ ಕರೆಯಿತು. ಈತ ನಂದಳಿಕೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಉಡುಪಿಗೆ ಬಂದರೂ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗದೆ ವ್ಯಾಯಾಮ ಶಿಕ್ಷಕನ ತರಬೇತಿ ಪಡೆದು ೧೮೮೯ರಲ್ಲಿ ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿ ಹತ್ತುರೂಪಾಯಿ ಮಾಸಿಕ ವೇತನ ಪಡೆದು ವೃತ್ತಿ ಜೀವನ ಆರಂಭಿಸಿದನು.

ಅದೃಷ್ಟವಶಾತ್ ಮಳಲಿ ಸುಬ್ಬರಾಯರೆಂಬ ವಿದ್ವಾಂಸರ ಪರಿಚಯವಾಗಿ ಮುದ್ದಣನಲ್ಲಿ ಸಾಹಿತ್ಯಾಸಕ್ತಿ ಬೆಳೆಯಿತು. ತತ್ಪರಿಣಾಮವಾಗಿ 'ರತ್ನಾವತಿಕಲ್ಯಾಣ' ಮತ್ತು 'ಕುಮಾರವಿಜಯ' ಎಂಬ ಯಕ್ಷಗಾನ ಪ್ರಸಂಗಗಳು, ವಾರ್ಧಕ ಷಟ್ಪದಿಯಲ್ಲಿ ರಚಿಸಲ್ಪಟ್ಟ 'ಶ್ರೀರಾಮಪಟ್ಟಾಭಿಷೇಕಂ' ಕಾವ್ಯ, ಹಳಗನ್ನಡ ಶೈಲಿಯಲ್ಲಿ ಬರೆಯಲ್ಪಟ್ಟ 'ಅದ್ಭುತರಾಮಾಯಣ' ಮತ್ತು 'ಶ್ರೀರಾಮಾಶ್ವಮೇಧಂ' ಗದ್ಯಕಾವ್ಯಗಳು ಮುದ್ದಣನಿಂದ ರಚಿತವಾದುವು. ಉಡುಪಿಯಿಂದ ಕುಂದಾಪುರದ ಬೋರ್ಡ್ ಹೈಸ್ಕೂಲಿಗೆ ವರ್ಗಾವಣೆಗೊಂಡು ಕೆಲವು ಸಮಯದ ಬಳಿಕ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿ ಸೇವೆಸಲ್ಲಿಸಿದನು.

©KTBS Not to be republished

'ಹೊಸಗನ್ನಡದ ಅರುಣೋದಯದ ಮುಂಗೋಳಿ' ಎಂಬ ಪ್ರಶಂಸೆಗೆ ಭಾಜನನಾದ ಮುದ್ದಣ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸುಭದ್ರ ಸ್ಥಾನ ಗಳಿಸಿದ್ದಾನೆ. ಒಂದು ಕಡೆ ಕಡುಬಡತನ ಇನ್ನೊಂದು ಕಡೆ ಆಗಿನ ಕಾಲದಲ್ಲಿ ಗುಣಪಡಿಸಲು ಸಾಧ್ಯವಾಗದಿದ್ದ ಕಾಯಿಲೆ–ಇವೆರಡರಿಂದ ಜರ್ಝರಿತನಾದ ಮುದ್ದಣ ಅಲ್ಪಾಯುಷಿಯಾಗಿ ೧೯೦೧ ರ ಫೆಬ್ರವರಿ ಹದಿನೈದರಂದು ಇಹಲೋಕ ತ್ಯಜಿಸಬೇಕಾಗಿ ಬಂದುದು ಕನ್ನಡಿಗರ ದೌರ್ಭಾಗ್ಯ.

* * *

ಎಷ್ಟೇ ಕಷ್ಟಗಳಿದ್ದರೂ ಮನಸ್ಸನ್ನೇ ಸುಡುವ ಚಿಂತೆಯಿದ್ದರೂ ನವಿರಾದ ಹಾಸ್ಯ ಅವುಗಳನ್ನು ಸ್ವಲ್ಪಕಾಲ ಮರೆಯುವಂತೆ ಮಾಡುತ್ತದೆ. 'ನಗು' ಮಾನವನನ್ನು ಗೆಲುವಿನ ಹಾದಿಗೆ ತರುವ ದಿವ್ಯೌಷಧ. 'ಶ್ರೀರಾಮಾಶ್ವಮೇಧ' ಕೃತಿಯಲ್ಲಿ ಮಡದಿ ಮನೋರಮೆ (ನಿಜನಾಮ ಕಮಲಾಬಾಯಿ) ಯೊಡನೆ ಸಂವಾದದಲ್ಲಿ ನಿರತನಾದಾಗ ವ್ಯಕ್ತವಾಗುವ ಮಾತುಗಳು ಮುದ್ದಣನ ಕಷ್ಟ ಜೀವನದ ಪ್ರತೀಕವೇ ಆಗಿವೆ. ಪ್ರಕೃತ ಗದ್ಯಭಾಗದಲ್ಲಿ 'ಸಪ್ತಾಕ್ಷರೀ ಮಂತ್ರದ' ಶ್ರೇಷ್ಠತೆಯ ನೆಪದೊಂದಿಗೆ ತನ್ನ ಹಾಗೂ ಅಂದಿನ ಕವಿಗಳ ದಾರಿದ್ರ್ಯವನ್ನು ಪರೋಕ್ಷವಾಗಿ ಮುದ್ದಣ ವ್ಯಕ್ತಪಡಿಸಿದ್ದಾನೆ. ಹೊರನೋಟಕ್ಕೆ ಕುತೂಹಲಕಾರಿಯೂ ಹಾಸ್ಯಮಯವೂ ಆಗಿದ್ದರೆ ಒಳಗೆ ದಾರುಣವ್ಯಥೆಯ ಕಥೆ ಅಡಗಿಕೊಂಡು ಕರುಣಾರಸ ಅಂತರ್ಗತವಾಗಿ ಹರಿಯುವುದನ್ನು ಇಲ್ಲಿ ಕಾಣಬಹುದು.

* * *

**'ಅಂತರಾಳ'** ಗದ್ಯಭಾಗವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ, **'ಮುದ್ದಣಭಂಡಾರ'** – ಸಂಪುಟ ಎರಡು – ಇದರ **'ತ್ರಯೋದಶಾಶ್ವಾಸಂ – ಅರಣ್ಯಕ ಮುನಿದರ್ಶನಂ'** (ಪುಟ–೨೦೧–೨೦೪) ಭಾಗದಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಲಾಗಿದೆ.

### ಪ್ರಸ್ತುತ ಗದ್ಯಪಾಠದ ಪೂರ್ವಕತೆ

ಶ್ರೀರಾಮನು ರಾವಣಾದಿಗಳನ್ನು ಸಂಹರಿಸಿ ಹರಿಭಕ್ತನೂ ರಾವಣನ ಸೋದರನೂ ಆದ ವಿಭೀಷಣನಿಗೆ ಲಂಕೆಯ ಪಟ್ಟಕಟ್ಟಿ ಸೀತಾ ಸಮೇತ ಅಯೋಧ್ಯೆಗೆ ಬಂದು ರಾಜ್ಯಭಾರ ಮಾಡುತ್ತಿದ್ದನು. ಹೀಗೆ ಹಲವು ವರ್ಷಗಳು ಕಳೆಯುತ್ತಿರಲು ಸೀತೆ ಗರ್ಭಿಣಿಯಾದಳು. ಅದೊಂದು ದಿನ ಸೀತೆಯೊಡನೆ ಶ್ರೀರಾಮಚಂದ್ರನು ರಾಣೀವಾಸದ ಮೊಗಸಾಲೆಯಲ್ಲಿ ಕುಳಿತು ಸಲ್ಲಾಪಗೈಯುತ್ತಿರುವಾಗ ಸೀತೆ ತನ್ನಮನದ ಬೇಸರ ಕಳೆಯಲೋಸುಗ ಕಾಡಿನ ಋಷಿಯಾಶ್ರಮಕ್ಕೆ ಹೋಗಿಬರಬೇಕೆಂಬ ಆಸೆಯನ್ನು ಪ್ರಕಟಿಸಿದಳು. ಇದಕ್ಕೊಪ್ಪಿದ ಶ್ರೀರಾಮ ಆದಷ್ಟು ಬೇಗ ಲಕ್ಷ್ಮಣನ ಮೂಲಕ ವ್ಯವಸ್ಥೆ ಮಾಡುವೆನೆಂಬ ಭರವಸೆ ನೀಡಿದ. ವಿಧಿಲೀಲೆಯನ್ನು ಬಲ್ಲವರಾರು? ಅದೇ ದಿನ ರಾತ್ರಿ ಪ್ರಜೆಯೊಬ್ಬ ಆಡಿದ ಮಾತನ್ನು ಬೇಹುಗಾರರಿಂದ ತಿಳಿದ ರಾಮ, ಸೀತೆ ನಿಷ್ಕಳಂಕಿನಿ ಎಂದು ತಿಳಿದಿದ್ದರೂ ಪ್ರಜಾಭಿಪ್ರಾಯಕ್ಕೆ ಮನ್ನಣೆ ನೀಡಬೇಕಾದುದು ರಾಜನ ಆದ್ಯಕರ್ತವ್ಯ ಎಂಬ ದೃಷ್ಟಿಯಿಂದ ಆಕೆಯನ್ನು ತೊರೆಯಲು ನಿರ್ಧರಿಸಿದ. ರಾಜಾಜ್ಞೆಯನ್ನು ಮೀರಲಾರದ ಲಕ್ಷ್ಮಣ ಋಷ್ಯಾಶ್ರಮದರ್ಶನದ ನೆಪವೊಡ್ಡಿ ಸೀತೆಯನ್ನು ಕರೆದೊಯ್ದು ಗೊಂಡಾರಣ್ಯದಲ್ಲಿ ಬಿಟ್ಟುಬಂದ.

ಇತ್ತ ರಾಜಾರಾಮನೆನಿಸಿಕೊಂಡ ಶ್ರೀರಾಮ ಸೀತಾಪರಿತ್ಯಾಗದಿಂದ ವೈಯಕ್ತಿಕವಾಗಿ ನೊಂದಿದ್ದರೂ ರಾಜ್ಯಭಾರದಲ್ಲಿ ಎಳ್ಳಷ್ಟೂ ಅಪಚಾರ ಎಸಗದೆ ಪ್ರಜಾಪಾಲನೆಯಲ್ಲಿ ತೊಡಗಿದ್ದ. ಅದೊಂದು ದಿನ ಅಗಸ್ತ್ಯಮಹರ್ಷಿಗಳು ಶಿಷ್ಯರೊಂದಿಗೆ ಅಯೋಧ್ಯೆಗೆ ಬಂದಾಗ ಅವರನ್ನು ಗೌರವಾದರಗಳಿಂದ ಬರ



©KTBS Not to be republished

ಮಾಡಿಕೊಂಡ ರಾಮ ಋಷಿಪರಿವಾರವನ್ನು ಷೋಡಶೋಪಚಾರದಿಂದ ಸತ್ಕರಿಸಿದ. ತನ್ನಿಂದ ಹತನಾದ ರಾವಣ ಬ್ರಹ್ಮಮಾನಸ ಪುತ್ರ ಪುಲಸ್ತ್ಯರ ಮಗನಾದ ವಿಶ್ರವಸುವಿನ ಮಗನೆಂದೂ ವೇದ ಪಾರಂಗತನೆಂದೂ ಅಗಸ್ತ್ಯರಿಂದ ಕೇಳಿತಿಳಿದ ರಾಮ, ರಾವಣನ ಹತ್ಯೆಯಿಂದ ತನಗೆ ಬ್ರಹ್ಮಹತ್ಯಾ ದೋಷ ಪ್ರಾಪ್ತಿಯಾಯಿತೆಂದು ದು:ಖಿತನಾದ. "ಪಾಪಿಗಳ ಪಾಪನಾಶ ಮಾಡಬಲ್ಲ ನಿನಗೆಂತಹ ಪಾಪವಯ್ಯಾ, ದುಷ್ಟಸಂಹಾರಕ್ಕಾಗಿ ಧರೆಗಿಳಿದು ನಿನ್ನ ಕರ್ತವ್ಯವನ್ನು ಮಾಡಿರುವ ನೀನು ಅಂಜಬೇಕಿಲ್ಲ" ಎಂದು, ಅಗಸ್ತ್ಯರು ಸಮಾಧಾನಪಡಿಸಿದರೂ ರಾಮ ಒಪ್ಪಲಿಲ್ಲ. ಅಶ್ವಮೇಧವನ್ನು ಮಾಡಿದರೆ ಬ್ರಹ್ಮಹತ್ಯಾದೋಷ ನಿವಾರಣೆಯಾಗುವುದೆಂದು ಅಗಸ್ತ್ಯರು ಹೇಳಿದ ಮೇರೆಗೆ ರಾಮನು ಅಶ್ವಮೇಧ ಕೈಗೊಳ್ಳಲು ನಿರ್ಧರಿಸಿದ.

ಯಜ್ಞಾಶ್ವದ ಬೆಂಗಾವಲಿಗೆ ಶತ್ರುಘ್ನನ ಮುಂದಾಳತ್ವದಲ್ಲಿ ಜಾಂಬವ, ಹನುಮಂತ, ಸುಗ್ರೀವಾದಿ ಕಪಿವೀರರು ಹಾಗೂ ಅಯೋಧ್ಯೆಯ ಸೈನ್ಯ ಹೊರಟಿತು. ಯಜ್ಞಾಶ್ವ ತನ್ನಿಚ್ಛಾನುಸಾರ ನಾನಾ ಕಡೆಗಳಲ್ಲಿ ಸಂಚರಿಸುತ್ತಿರುವಾಗ ಕೆಲವು ರಾಜರು ಇದು ರಾಮನ ಯಜ್ಞಾಶ್ವವೆಂದು ತಿಳಿದ ತಕ್ಷಣ ಕಪ್ಪಕಾಣಿಕೆ ನೀಡಿ ತಾವೂ ಅಶ್ವದ ಬೆಂಗಾವಲಿಗೆ ಹೊರಟರು. ಕೆಲವರು ಅಶ್ವವನ್ನು ಕಟ್ಟಿ ಕದನಕ್ಕಿಳಿದು ಸೋತು ಶರಣಾದರು. ಹೀಗೆ ಸಂಚರಿಸುತ್ತಾ ಚಳಿಗಾಲದಲ್ಲಿ ಒಂದು ದಿನ, ಯಜ್ಞಾಶ್ವ ಅರಣ್ಯಕಮುನಿಯ ಆಶ್ರಮವನ್ನು ಹೊಕ್ಕಿತು. ವಿಷಯ ತಿಳಿದ ಶತ್ರುಘ್ನಾದ್ಯರು ಮುನಿಯ ದರ್ಶನ ಮಾಡಿ ಆಶೀರ್ವಾದ ಪಡೆಯುವ ಸಲುವಾಗಿ ಆಶ್ರಮವನ್ನು ಪ್ರವೇಶಿಸಿ ವಂದಿಸಿದರು. ತಮ್ಮಾಶ್ರಮಕ್ಕೆ ಬಂದ ಶತ್ರುಘ್ನ ಹಾಗೂ ಅವನ ಪರಿವಾರವನ್ನು ಅರಣ್ಯಕ ಆಶೀರ್ವದಿಸಿ ಸತ್ಕರಿಸಿದ.

ಅದುವರೆಗೆ ರಾಮಾಶ್ವಮೇಧದ ಕತೆಯನ್ನು ಮುದ್ದಣನಿಂದ ಕೇಳುತ್ತಿದ್ದ ಮನೋರಮೆಗೆ ಸಂದೇಹವೊಂದು ಮೂಡಿತು. ಆ ಸಂದೇಹ ಯಾವುದು? ಮುದ್ದಣ ಅದನ್ನು ಹೇಗೆ ಪರಿಹರಿಸಿದ? ಇದರ ಒಳಗುಟ್ಟೇನು? ಎಂಬುದೇ ಪಠ್ಯಭಾಗದ ಸಾರ.

**ನಿಗದಿತ ಗದ್ಯಪಾಠದ ಪದವಿಂಗಡಣಾ ಓದು**

ಇಂತು ಬಂದು + ಒದವಿದ ಚಳಿಗಾಲದೊಳ್ ರಾಘವನ ಯಜ್ಞತುರಂಗಮಂ ಅರಣ್ಯಕನ್ + ಎಂಬ + ಒರ್ವ ಕಿತ್ತಡಿಯ ಪುಣ್ಯ + ಆಶ್ರಮಮಂ ಪುಗುತರ್ಪುದುಂ; ಕಂಡು ಶತ್ರುಘ್ನ + ಆದ್ಯರ್ ಮುನಿಯ ದರ್ಶನಕೆ + ಎಂದು + ಒಳಪೊಕ್ಕು ಮುನಿಗೆ + ಎಱ(ರ)ಗಿದರ್. ಆಗಳ್ + ಅರಣ್ಯಕನ್ + ಅಭ್ಯಾಗತರಂ ಮನ್ನಿಸಿ ಸರ್ವರಂ + ಆತಿಥ್ಯದಿಂ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯೊಳ್....

**ಮನೋರಮೆ** : ಎನ್ನ ಚನ್ನಿಗ! ಅತಿಥ್ಯಂ + ಎಂದೊಡೆ + ಏಂ? ಬಱೆ(ರಿ)ದೆ ಬಾಯ +ಉಪಚಾರಮೆ?

**ಮುದ್ದಣ** : ಅಲ್ತು + ಅಲ್ತು, ಬಾಯ ಉಪಚಾರಂ + ಅಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರು+ಇತ್ತು ಕುಳ್ಳಿರಿಸಿ ಸವಿ + ಕೂಳ(ಳ)ನ್ + ಇಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನೆ + ಇರ್ದು ನುಡಿದು ನಡೆದು ಮನ್ನಿಪುದು.

**ಮನೋರಮೆ** : ಅಂತೆ + ಇರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿ + ಇನಿ + ಪಿರಿದು ಪಡೆಗೆ + ಅರಣ್ಯಕಂ ಕೂಳ್(ಳ್) + ನೀರು + ಇತ್ತು ಸಮ್ಮನಿಸಿದನೆ?

**ಮುದ್ದಣ** : ಅಪ್ಪುದು + ಅಪ್ಪುದು. ಅನಿಬರುಮಂ ಯಥಾ + ಇಚ್ಛಂ ಮೃಷ್ಟ + ಅನ್ನ ಭೋಜನದಿಂ ತಣಿಸಿದಂ.



©KTBS Not to be republished

**ಮನೋರಮೆ** : ಎನಗೆ + ಇದು + ಅಚ್ಚರಿ ಎಂತುಟು + ಆರ್ತಂ?

**ಮುದ್ದಣ** : ಏಂ! ಮುನಿಗಳ + ಒಂದು ಜಪದ ತಪದ ಮಂತ್ರದ ಬಲ್ಮೆ + ಏಂ ಕಿಱಿ(ರಿ)ದೆ! ಬೇಡಿದ ಪುರುಳಂ + ಊಱ(ರ)ದಿಂ ತಂದು + ಈಗುಂ.

**ಮನೋರಮೆ** : ಅಂತುಟು + ಏಂ, ಘನಂ! ಆವುದೊ ಮಂತ್ರಂ?

**ಮುದ್ದಣ** : ಆವುದು + ಏಂ! ಏಕ + ಅಕ್ಷರೀ ದ್ವಿ + ಅಕ್ಷರೀ ತ್ರಿ + ಅಕ್ಷರೀ ಚತುರ್ + ಅಕ್ಷರೀ ಪಂಚ + ಅಕ್ಷರೀ ಷಟ್ + ಅಕ್ಷರೀ ಮುಂತೆ + ಅಪ್ಪ ಪ್ರಸಿದ್ಧ ಮಂತ್ರಂಗಳ್ + ಒಳವು + ಅಲ್ತೆ.

**ಮನೋರಮೆ** : ಓ! ಇನಿತು + ಒಂದು ಜಪದ ಬಲ್ಮೆ ನೆರಮ್ + ಇರ್ಪಿನಿಂ ಪೆಱ(ರ)ತು + ಒಂದಱ(ರ ಗೊಡವೆ + ಇಲ್ಲದೆ + ಇರ್ಕುಂ ತಾಪಸರ್.

**ಮುದ್ದಣ** : ಅಪ್ಪುದು + ಅಪ್ಪುದು ; ತಪ್ಪು + ಏಂ?

**ಮನೋರಮೆ** : ಅಂತೆ + ಅದು + ಇರ್ಕೆ. ನಿನ್ನ + ಅನ್ನರ್ + ಅಪ್ಪ ಕಬ್ಬಿಗರ್ ಮನೆವಾೞ್ತೆ(ಳ್ತೆ) ಯೊಳ್ + ಇನಿಸು + ಒಂದುಂ ಗೊಡವೆ + ಕೊಳ್ಳದೆ ಕೆಮ್ಮಕೆಮ್ಮನೆ ಪಾೞ್(ಳ್) + ಕತೆಯ ಕಬ್ಬದೊಳ್ ಏ + ಪೊೞ್ತುಂ(ಳ್ತುಂ) ಬೆಮೆಗೊಂಡು + ಇರ್ಪರ್+ ಅಲೇ. ಅವರ್ಗೆ + ಏಂ ಬಟ್ಟೆಯೊ? ಉಣಲ್ + ಏಂ, ತಿನಲ್ + ಏಂ? ಅಂತೆ+ ಇರೆ + ಒಂದು ಜಪಮಂ ಪಿರಿಯ + ತವಸಿಗಳ + ಅತ್ತಣಿಂ + ಉಪದೇಶಂ + ಕೊಂಡೊಡೆ + ಆಗದೆ!

**ಮುದ್ದಣ** : (ಮುಗುಳ್ನಗೆ + ಇಂ) ಏಂ + ಎಮ್ಮ + ಅವರ + ಒಂದು + ಇರಕೆ ನಗುವಾ? ಆ ! ಎಮ್ಮ + ಅನ್ನರ್ + ಅಪ್ಪ ಕಬ್ಬಿಗರ್ಗೆ ಏಂ ಕೊಱ(ರ)ತೆಯೊ ! ತಮ್ಮ + ಒಂದೆ ನುಡಿಯ ಬಲ್ಪಿಂ ಮೂಜಗಮುಮಂ + ಅಱೆ(ಳಿ)ಯಿಸುವ ಪೊಗೞ್ವ(ಳ್ವ), ತೆಗೞ್ವ(ಳ್ವ), ಕೊಳ್ + ಆಳ್ವ, ತಾಳ್ವ, ತೂಳ್ವ, ಪೂೞ್ವ(ಳ್ವ), ಪೇೞ್ವ(ಳ್ವ), ಬಾೞ್ವ(ಳ್ವ), ಸಿಂಗರದ ಬಣ್ಣ + ಕಬ್ಬಿಗರ್ + ಎಮ್ಮ ತೆರನಂ + ಇನ್ನುಂ ನೀನ್ + ಅಱೆ(ರಿ)ಯಯ್.

**ಮನೋರಮೆ** : (ಬಿಸವಂದಂ+ಕೊಂಡು) ನಿಮ್ಮ + ಅವರ್ಗಮ್ + ಅಂತೆ + ಇರೆ ಮಂತ್ರಂ ಸಿದ್ಧಿ+ಅರ್ಕುಮೆ?

**ಮುದ್ದಣ** : ತಡೆ + ಏಂ + ಅಳ್ಕು + ಏಂ?

**ಮನೋರಮೆ** : ನಿನ್ನ + ಒಳಮ್ + ಒಳವೆ?

**ಮುದ್ದಣ** : ಎನ್ನೊಳ್ + ಅಂತು + ಇದು ಪಾಸು + ಮೊಕ್ಕು.

**ಮನೋರಮೆ** : ಆ ! ನೀನುಂ ಬಲ್ ಮೈಮೆಗಾಱಂ(ರಂ) ನಿನಗೆ + ಆರ + ಅತ್ತಣಿಂ + ಎಂದು ಉಪದೇಶಂ + ಆಯ್ತು?

**ಮುದ್ದಣ** : ಗುರು + ಅತ್ತಣಿಂ + ಅಂದೆ + ಎಳವೆಯೊಳೆ

©KTBS Not to be republished

**ಮನೋರಮೆ** : ಎನ್ನ + ಎಱೆ(ರೆ)ಯ ! ಅದು + ಆವುದೊ ಮಂತ್ರಮ್ + ಎನ್ನೊಳ್ + ಉಸಿರ?

**ಮುದ್ದಣ** : ಎಲೆ ಪೆಣ್ಣೆ ! ನೀನು + ಆರೊಳಂ + ಎಂದು + ಎಂದಿಂಗುಂ + ಉಸಿರಲ್ + ಬಾರದು, ಜೋಕೆ !

**ಮನೋರಮೆ** : ಎಂದುಂ + ಎಂತುಂ + ಉಸಿರಂ + ಆಡೆಂ

**ಮುದ್ದಣ** : ಅಂತು + ಆದೊಡೆ + ಇಂತು + ಇದು, ಕೇಳ್....ಭ ....ವ....ಪೆಱ(ರ)ರೊಳ್ + ಆಡೆನ್ + ಎಂಬ ನಂಬುಗೈಯಂ ಪೊಯ್

**ಮನೋರಮೆ** : ಇದೆ ಪಿಡಿ ನಂಬುಗೈಯಂ, ನಿನ್ನ + ಆಣೆ, ಕುಲದೈವದ + ಆಣೆ ! ಎಂದುಂ ಪೆಱ(ರ) ವರೊಳ್ + ಒರೆಯೆಂ

**ಮುದ್ದಣ** : ಉಂ ! ......ಭವತಿ......ಭಿ.....ನೀನ್ + ಎಂತೊ ಮಱ(ರ)ವೆಯೊಳ್ ಪೆಱ(ರ) ರೊಡಂ+ ಉಸಿರ್ದು ಗುಟ್ಟಂ ಬಿಟ್ಟೊಡೆ + ಎಮ್ಮನ್ನರ ಬಾೞ್(ಳ್) ಪಾೞ್(ಳ್) + ಅಕ್ಕುಂ

**ಮನೋರಮೆ** : ಆನ್ + ಏಂ ಮೋಡೆಯೆ ! ಪೋ ! ತನ್ನ + ಆಣೆ, ಕಣ್ಣ + ಆಣೆ, ಕೇಳ್ವೆಂ

**ಮುದ್ದಣ** : 'ಭವತಿ ಭಿಕ್ಷಾಂ ದೇಹಿ' ಎಂಬುದು + ಇದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತ + ಅಕ್ಷರೀ ಮಂತ್ರಂ. ಆರೊಳ್ + ಆನುಂ + ಉಸಿರದಿರ್

**ಮನೋರಮೆ** : ಪೋ ಮಾಣ್ + ಎಲೆ ರಮಣ ! ನಿನ್ನ ನುಡಿಯಂ ಸಾಜಂ ನಿಕ್ಕುವಂ + ಎಂದೇ ಬಗೆದೆಂ ಈ ತೆಱ(ರ)ನ ಮಾಟದ ಕವಡು ನುಡಿಯು ಕೊಂಕು + ಎಂಬುದನ್ + ಅರಿಯದೆ + ಆದೆಂ. ನೀಂ ಕಬ್ಬಿಗನೊ, ಸಬ್ಬವಕಾಱ(ರ)ನೊ? ನಿನ್ನ + ಈ ಕಬ್ಬದ ಸೊಗಸಂ + ಎಮ್ಮ + ಅನ್ನರ್ + ಅಪ್ಪ ಜಾಣೆಲಿ + ಪೆಣ್ಗಳೆ ಕೊಂಡಾಡುವರ್ + ಅಲ್ಲದೆ + ಬಲ್ಲರ್ + ಏನ್ + ಒಲ್ವರೇ?

**ಮುದ್ದಣ** : ಸಾಲ್ಗುಂ + ಈ ಪರಿಹಾಸಂ. ಮುಂ + ಕತೆಯಂ ಕೇಳ್

## ಪದ – ಗದ್ಯಾರ್ಥ

ಇಂತು – ಹೀಗೆ ; ಒದವಿದ – ಒದಗಿದ ; ತುರಂಗ – ತುರಗ, ಕುದುರೆ, ಅಶ್ವ ; ಕಿತ್ತಡಿ – ತಪಸ್ವಿ ; ಪುಗುತರ್ಪುದುಂ – ಪ್ರವೇಶಿಸುವುದು, ಪ್ರವೇಶಿಸಿತು ; ಆದ್ಯರ್–ಮೊದಲಾದವರು ; ಎರಗು– ನಮಸ್ಕರಿಸು; ಅಭ್ಯಾಗತರು – ತಾವಾಗಿಯೇ ಬಂದವರು ; ಮನ್ನಿಸಿ – ಗೌರವಿಸಿ ; ವಿನೋದ – ಆನಂದ, ಉತ್ಸಾಹ, ಸಂಭ್ರಮ; ಗೋಷ್ಠಿ – ಮಾತುಕತೆ, ಸಂಭಾಷಣೆ, ಕಥಾಲಾಪ ; ಚೆನ್ನಿಗ – ಚೆಲುವ ; ಏಂ – ಏನು; ಅಲ್ತು – ಅಲ್ಲ ; ಬಾವನ್ನ – ಶ್ರೀಗಂಧ ; ಸಾಯಿರ – ಸಾವಿರ ; ಇನಿತು – ಇಷ್ಟು ; ಯಥೇಚ್ಛ – ಬೇಕಾದಷ್ಟು, ; ಮೃಷ್ಟ – ರಸವತ್ತಾದ, ರುಚಿಯಾದ ; ತಣಿಸಿದಂ – ತೃಪ್ತಿಪಡಿಸಿದನು ; ಎಂತುಟು – ಹೇಗೆ ; ಆರ್ತ – ಸಮರ್ಥ ; ಬಲ್ಮೆ – ಬಲುಮೆ, ಶಕ್ತಿ ; ಪುರುಳಂ – ದ್ರವ್ಯವನ್ನು ; ಉರದಿ – ಕೂಡಲೆ, ತಕ್ಷಣ ; ಈಗುಂ – ಕೊಡುವುದು, ಕೊಡಬಲ್ಲುದು ; ಅಂತುಟು – ಅಷ್ಟು, ಹಾಗೆ ; ಗನ – ಘನ,

©KTBS Not to be republished

ಶ್ರೇಷ್ಠ ; ಏಕ – ಒಂದು ; ದ್ವಿ – ಎರಡು ; ತ್ರಿ – ಮೂರು; ಚತುರ್ – ನಾಲ್ಕು ; ಪಂಚ –ಐದು; ಷಟ್ – ಆರು ; ಮುಂತಪ್ಪ – ಮೊದಲಾದ ; ಒಳವು – ಇರುವುವು ; ಅಲ್ತೆ – ಅಲ್ಲವೆ; ನೆರಮ್– ಸಹಾಯ ; ಇರ್ಪುಂ – ಇರುವರು ; ಇರ್ಕೆ – ಇರಲಿ ; ಅನ್ನರ್ – ಅಂತಹವರು; ಮನೆವಾಳ್ತೆ– ತನ್ನ ಸಂಸಾರ ; ಕೆಮ್ಮನೆ – ಸುಮ್ಮನೆ ; ಕಬ್ಬ – ಕಾವ್ಯ ; ಬೆಮೆಗೊಂಡು – ಭ್ರಮೆಗೊಂಡು, ಆಸೆಪಟ್ಟು ; ಅಲೇ – ಅಲ್ಲವೇ ; ಬಟ್ಟೆ – ದಾರಿ ; ಇರಕೆ – ಇರುವಿಕೆಗೆ ; ಬಲ್ಪು – ಸಾಮರ್ಥ್ಯ ; ಅಟೆ– ನಾಶ ; ಕೊಳ್ – ಖರೀದಿಸು, ಬೆಲೆಕೊಟ್ಟು ತೆಗೆದುಕೊ, ಕೊಂಡುಕೊ ; ತಾಳ್ವ – ಅನುಭವಿಸುವ; ತೂಳ್ವ– ನಾಶಪಡಿಸುವ ; ಪೂಟ್ವಿ– ಹುಗಿಯುವ, ಹೂಳುವ ; ಪೇಳ್ವ – ಆಜ್ಞಾಪಿಸುವ ; ಬಾಟ್ವಿ – ಬಾಳಿಸುವ, ಉಳಿಸುವ ; ಸಿಂಗರದ – ಸೊಬಗಿನ, ಭೂಷಣ ಪ್ರಾಯವಾದ ; ತೆಱ –ಅವಕಾಶ, ಸಾಮರ್ಥ್ಯ; ಸಿದ್ಧಿ – ಕೈವಶಮಾಡಿಕೊಳ್ಳುವಿಕೆ, ಅತಿಮಾನುಷ ಶಕ್ತಿ ; ನಿನ್ನೊಳಮ್ – ನಿನ್ನಲ್ಲಿಯೂ; ಒಳವೆ –ಇರುವುದೇ; ಪಾಸುವೊಕ್ಕು – ಹಾಸುಹೊಕ್ಕು ; ಮೈಮೆಗಾರ – ಶ್ರೇಷ್ಠ, ಸಮರ್ಥ ; ಎಳವೆ – ಬಾಲ್ಯ ; ಎಱೆಯ – ಒಡೆಯ, ಪ್ರಿಯ ; ಉಸಿರು – ಹೇಳು ; ಪೆಱ – ಇತರ ; ನಂಬುಗೆ – ಭರವಸೆ ; ಪೊಯ್ –ಕೊಡು; ಒರೆ – ಹೇಳು ; ಭವತಿ – ಪೂಜ್ಯಳೇ ; ಮೋಡೆ – ಮೂಢೆ ; ಪೆರ್ಮೆ – ಹೆಮ್ಮೆ; ಮಾಣ್ – ಬಿಡು; ನಿಕ್ಕುವ – ನಿಶ್ಚಯ ; ಕವಡು – ಕಪಟ ; ಸಬ್ಬವಕಾರ – ಹಾಸ್ಯಗಾರ ; ಜಾಣಿಲಿ – ಜಾಣ್ಮೆ ಇಲ್ಲದ ; ಒಲ್ವರೇ – ಮೆಚ್ಚುವರೇ ; ಪರಿಹಾಸ – ಚೇಷ್ಟೆ, ವಿನೋದ ; ಮುಂ – ಮುಂದಿನ

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತು?

೨. ಮನೋರಮೆಯಲ್ಲಿ ಮೂಡಿದ ಸಂದೇಹವೇನು?

೩. ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು?

೪. ತಪಸ್ವಿಗಳಿಗೆ ಬೇರೆಗೊಡವೆ ಇಲ್ಲದಿರಲು ಕಾರಣವೇನು?

೫. ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಹೇಗೆ ಸತ್ಕರಿಸಿದ?

೨. ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯೇನು?

೩. ಮುದ್ದಣನಿಗೆ ಒಲಿದ ಮಂತ್ರದ ಬಗ್ಗೆ ಮನೋರಮೆಯ ಪ್ರತಿಕ್ರಿಯೆ ಏನು?

© KTBS Not to be republished

ಇ. **ಕೊಟ್ಟಿರುವ ಪ್ರಶ್ನೆಗಳಿಗೆ ಐದು/ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮುದ್ದಣ ಪರಿಹಾಸ ಮಾಡಿದನೆಂದು ಮನೋರಮೆ ಹೇಳಲು ಕಾರಣವೇನು?

೨. ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ–ಹೆಂಡತಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಈ. **ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಶತ್ರುಘ್ನಾದ್ಯರನ್ನು ಅರಣ್ಯಕ ಸತ್ಕರಿಸಿದ ವಿಚಾರದಲ್ಲಿ ಮುದ್ದಣ ಮನೋರಮೆಯರ ಮಧ್ಯೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. 'ರಾಮಾಶ್ವಮೇಧ' ಕೃತಿಯಲ್ಲಿ ಮುದ್ದಣ ಪರೋಕ್ಷವಾಗಿ ತನ್ನ ಬಾಳಿನ ಕತೆಯನ್ನು ಬಿಚ್ಚಿಟ್ಟಿದ್ದಾನೆ ಎಂಬುದನ್ನು 'ಅಂತರಾಳ' ಪಾಠದ ಆಧಾರದಿಂದ ಸಮರ್ಥಿಸಿ.

ಉ. **ಸಂದರ್ಭಾನುಸಾರ ವಿವರಿಸಿ.**

೧. "ಎನಗಿದಚ್ಚರಿ ಎಂತುಟಾರ್ತಂ"

೨. "ಅಪ್ಪುದಪ್ಪುದು ತಪ್ಪೇಂ"

೩. "ಉಣಲೇಂ ತಿನಲೇಂ"

೪. "ಎಮ್ಮವರೊಂದಿರಕೆ ನಗುವ?"

೫. "ಗುರುವತ್ತಣಿಂದೆಳವೆಯೊಳೆ"

೬. "ಸಾಲ್ಗುಮೀ ಪರಿಹಾಸಂ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಮೃಷ್ಟಾನ್ನ – ಸವರ್ಣದೀರ್ಘ ಸಂಧಿ :: ಒಡನಿರ್ದು __________

೨. ಕಾವ್ಯ – ಕಬ್ಬ :: ಆಶ್ಚರ್ಯ __________

೩. ಮನ್ನಿಸಿ – ಗೌರವಿಸಿ :: ಬಾವನ್ನ __________

೪. ಕುವೆಂಪು – ಕುಪ್ಪಳಿ :: ಮುದ್ದಣ __________

© KTBS Not to be republished

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ಸಮಾಸ ಸ್ಥೂಲ ಪರಿಚಯಾತ್ಮಕ ವಿವರ**

**೧. ತತ್ಪುರುಷ ಸಮಾಸ**

**ಬೆಟ್ಟದ + ತಾವರೆ > ಬೆಟ್ಟದಾವರೆ (ಷಷ್ಠೀ ತತ್ಪುರುಷ)**

**ವಯಸ್ಸಿನಿಂದ + ವೃದ್ಧ > ವಯೋವೃದ್ಧ (ತೃತೀಯಾ ತತ್ಪುರುಷ)**

**ಹಗಲಿನಲ್ಲಿ + ಕನಸು > ಹಗಲುಗನಸು (ಸಪ್ತಮೀ ತತ್ಪುರುಷ)**

ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರಡೆರಡು ಪದಗಳು ಸೇರಿ ಒಂದು ಪದವಾಗಿರುವುದು, ಪೂರ್ವಪದದ ಅಂತ್ಯದಲ್ಲಿ ವಿಭಕ್ತಿಪ್ರತ್ಯಯವಿದ್ದು ಸಮಾಸವಾಗುವಾಗ ಆ ಪ್ರತ್ಯಯಗಳು ಲೋಪವಾಗಿರುವುದು ಕಂಡುಬರುತ್ತದೆ. ಯಾವ ವಿಭಕ್ತಿಪ್ರತ್ಯಯ ಲೋಪವಾಗಿದೆಯೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು. ಹೀಗೆ **– ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷ ಸಮಾಸ. ಇದರಲ್ಲಿ ಉತ್ತರಪದದ ಅರ್ಥ ಪ್ರಧಾನ.**

**೨. ಕರ್ಮಧಾರಯ ಸಮಾಸ**

**ಹಿರಿದು + ಮರ > ಹೆಮ್ಮರ**

**ಮೆಲ್ಲಿತು + ನುಡಿ > ಮೆಲ್ನುಡಿ**

**ದಿವ್ಯವಾದ + ಪ್ರಕಾಶ > ದಿವ್ಯಪ್ರಕಾಶ**

ಇಲ್ಲಿ **ಹಿರಿದು, ಮರ, ಮೆಲ್ಲಿತು, ನುಡಿ** ಎಂಬ ನಾಲ್ಕು ಪದಗಳು ಕನ್ನಡದವು. **ದಿವ್ಯ, ಪ್ರಕಾಶ** ಎಂಬ ಎರಡು ಪದಗಳು ಸಂಸ್ಕೃತ ಪದಗಳು. ಮೂರೂ ಸಮಾಸಗಳ ಪೂರ್ವಪದಗಳು ವಿಶೇಷಣಗಳಾಗಿವೆ. **'ದಿವ್ಯ'** ಸಂಸ್ಕೃತ ಪದವಾದ ಕಾರಣ ಅರ್ಥ ಸ್ಪಷ್ಟತೆಗಾಗಿ **'ಆದ'** ಎಂಬ ಪದ ಪೂರ್ವಪದಕ್ಕೆ ಸೇರಿ **'ದಿವ್ಯವಾದ'** ಎಂಬ ಪದ ರಚನೆಯಾಗಿದೆ. ಕನ್ನಡಪದಗಳಲ್ಲಿ ಹೀಗಿರುವುದಿಲ್ಲ. ಹೀಗೆ**–ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ. ಇದರಲ್ಲಿ ಉತ್ತರ ಪದದ ಅರ್ಥವೇ ಪ್ರಧಾನ.**

**ಕರ್ಮಧಾರಯ** ಸಮಾಸದಲ್ಲಿ **ವಿಶೇಷಣ ಪೂರ್ವಪದ ಕರ್ಮಧಾರಯ, ಉಪಮಾನ ಪೂರ್ವಪದ** ಅಥವಾ **ಉಪಮಾನ ಪರಪದ ಕರ್ಮಧಾರಯ, ಸಂಭಾವನಾ ಪೂರ್ವಪದ ಕರ್ಮಧಾರಯ, ಅವಧಾರಣಾ ಪೂರ್ವಪದ ಕರ್ಮಧಾರಯ ಸಮಾಸ** ಎಂಬ ನಾಲ್ಕು ವಿಧಗಳಿವೆ.

©KTBS Not to be republished

**೩. ದ್ವಿಗು ಸಮಾಸ**

**ಮೂರು + ಮಡಿ > ಮುಮ್ಮಡಿ**

**ನಾಲ್ಕು + ದೆಸೆ > ನಾಲ್ದೆಸೆ**

**ಪಂಚಗಳಾದ + ಇಂದ್ರಿಯ > ಪಂಚೇಂದ್ರಿಯ**

ಈ ಮೂರು ಸಮಾಸಗಳಲ್ಲಿ ಪೂರ್ವಪದ **ಸಂಖ್ಯಾವಾಚಕ**ಗಳಾಗಿವೆ. ಮೂರನೆಯದಾದ **ಪಂಚೇಂದ್ರಿಯ** ಎಂಬ ಪದದಲ್ಲಿ ಎರಡೂ ಪದಗಳು ಸಂಸ್ಕೃತವಾದುದರಿಂದ **ಆದ** ಎಂಬ ಪದ ಪೂರ್ವಪದದೊಂದಿಗೆ ಸೇರಿಕೊಂಡಿದೆ. ಹೀಗೆ–**ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿದ್ದರೆ ಅದು ದ್ವಿಗು ಸಮಾಸ.**

- **ಅಭ್ಯಾಸ ಅರಿವು**

  **ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

  ೧. ತತ್ಪುರುಷ ಸಮಾಸ ಎಂದರೇನು?

  ೨. ಕರ್ಮಧಾರಯ ಸಮಾಸದ ವಿಧಗಳಾವುವು?

  ೩. ದ್ವಿಗು ಸಮಾಸ ಎಂದರೇನು? ಉದಾಹರಣೆ ಕೊಡಿ.

- **ಪ್ರಾಯೋಗಿಕ ಭಾಷಾಭ್ಯಾಸ**

**ಕೊಟ್ಟಿರುವ ಸಮಾಸಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

ಚಳಿಗಾಲ ಯಜ್ಞತುರಂಗ ಬಾಯುಪಚಾರ ಸವಿಗೂಳು ಮೃಷ್ಟಾನ್ನ

ಏಕಾಕ್ಷರೀ ಪಂಚಾಕ್ಷರೀ ಮೂಜಗ ಸಪ್ತಾಕ್ಷರೀ

## ಹೆಚ್ಚಿನ ಓದು

✦ **ಪ್ರೊ. ಜಿ. ವೆಂಕಟಸುಬ್ಬಯ್ಯ** ಅವರು ಸಂಪಾದಿಸಿದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮುದ್ರಿಸಿರುವ **ಮುದ್ದಣಭಂಡಾರ – ಸಂಪುಟ ಒಂದು ಮತ್ತು ಎರಡು** ಕೃತಿಯನ್ನು ಗಮನಿಸಿ.

✦ ✦ ✦ ✦ ✦

©KTBS Not to be republished

## ಪದ್ಯಪಾಠ – ೧

# ಕನ್ನಡಿಗರ ತಾಯಿ

[ನವೋದಯ]

–ರಾಷ್ಟ್ರಕವಿ ಎಂ. ಗೋವಿಂದಪೈ

**ಅರ್ಥೈಸಿ – ಓದಿ**

ತಾಳ್ವೆ ಆಳ್ವೆ ಪತ್ರಮೀವ ಮೃಗೋರಗ ನಗಾಳಿ ಸುರಭಿ ಹೊನ್ನಗನಿ ಬೇಲನಾಡ ನಿಡುಕರೆನಿತೊ ಹಿಂಗತೆಯಿನಿವಾಲ ಕೊಂಡಕುಂದವರ್ಯ ಸುಗಂಧದೊಸಗೆ.



**ನಿಗದಿತ ಮೂಲ ನವೋದಯ ಪದ್ಯ**

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮ ನಾಳ್ವೆ,
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು!
ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು. ॥೧॥

©KTBS Not to be republished

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿ ನಗರ ನಗಾಳಿಯೊ!
ಇಲ್ಲಿಲ್ಲದುದುಳಿದುದೆ?
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ? ||೨||

ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರ ವರೇಣ್ಯರ,
ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ! ||೩||

ಹಳೆಯ ಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪಮಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ
ನೆಮ್ಮತೃಷೆಗೆ ದಕ್ಕಿಸು!
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು! ||೪||

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತು ಸಿರಿಂ ತೀಡದನ್ನ
ಸುರಭಿ ಎಲ್ಲಿ? ನೀನದನ್ನ
ನವಶಕ್ತಿಯಿನೆಬ್ಬಿಸು–
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು। ||೫||

©KTBS Not to be republished

ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು!
ಇದನೊಂದನೆ ಕೋರುವೆ!
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ? ॥೬॥

## ಕರ್ತೃ – ಭಾವ – ಆಕರ



**ರಾಷ್ಟ್ರಕವಿ ಎಂ. ಗೋವಿಂದಪೈ** ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ೨೩.೦೩.೧೮೮೩ ರಲ್ಲಿ ಜನಿಸಿದರು. ತಂದೆ ಸಾಹುಕಾರ ತಿಮ್ಮಪ್ಪೈ, ತಾಯಿ ದೇವಕಿಯಮ್ಮ. ಬಿ.ಎ. ಪದವಿಯನ್ನು ಪಡೆದಿದ್ದ ಗೋವಿಂದಪೈ ಅವರು ದೇಶೀ ಭಾಷೆಗಳಲ್ಲಲ್ಲದೆ ವಿದೇಶಿ ಭಾಷೆಗಳ ಪಾಂಡಿತ್ಯವನ್ನುಳ್ಳವರಾಗಿದ್ದರು. ಪ್ರಾಸ ಬಿಟ್ಟು ಪದ್ಯ ರಚಿಸಿದ ಮೊದಲ ಕವಿ ಎಂಬ ಹೆಗ್ಗಳಿಕೆಗೂ ಪಾತ್ರರಾದವರು. ಸಂಶೋಧಕ, ವಿಮರ್ಶಕ, ಅನುವಾದಕರಾಗಿಯೂ ಜನಪ್ರಿಯರಾದ ರಾಷ್ಟ್ರಕವಿ ಗೋವಿಂದಪೈ ಅವರ 'ಸುವಾಸಿನಿ' ಮೊದಲ ಕವಿತೆ ೧೯೦೦ ರಲ್ಲಿ **ಸುವಾಸಿನಿ** ಪತ್ರಿಕೆಯಲ್ಲಿ ಪ್ರಕಟವಾಯಿತು. ಅವರ ಇತರ ಕವನ ಸಂಕಲನಗಳು ಇಂತಿವೆ. **ಗಿಳಿವಿಂಡು, ನಂದಾದೀಪ** ಮೊದಲಾದವು. **ನವೀನ ಚಂದ್ರಸೇನರ ಬಂಗಾಳಿ ಕೃಷ್ಣ ಚರಿತೆಯ** ಗದ್ಯಾನುವಾದ, **'ಸಿಂಗಾಲ ಸುತ್ತ'** ಬೌದ್ಧ ಸೂತ್ರಗಳ ಕನ್ನಡ ಅನುವಾದ. ಅಲ್ಲದೇ **೩೫ ವೃತ್ತಗಳುಳ್ಳ** ಪ್ರಾಸ ರಹಿತ **ಗೊಮ್ಮಟ ಜಿನಸ್ತುತಿಯನ್ನು** ರಚಿಸಿ ಪ್ರಕಟಿಸಿದರು. **ರವೀಂದ್ರನಾಥ ಠಾಕೂರ್, ಅಹಮ್ಮದ್ ಇಕ್ಬಾಲ್, ಉಮರ್ ಖಯ್ಯಾಮಿನ ರುಬಾಯಿಗಳನ್ನು** ಭಾಷಾಂತರಿಸಿದ್ದಾರೆ. **ವೈಶಾಖ ಮತ್ತು ಗೊಲ್ಗೊಥಾ** ಖಂಡಕಾವ್ಯವನ್ನು ಪ್ರಕಟಿಸಿದ್ದಾರೆ.

ಜಪಾನಿನ **ನೋ ನಾಟಕವನ್ನು** ಕನ್ನಡಕ್ಕೆ ಅನುವಾದಿಸಿರುವರಲ್ಲದೇ **ಚಿತ್ರಭಾನು ಹೆಬ್ಬೆರಳು, ಪಾರ್ಶ್ವನಾಥ ತೀರ್ಥಂಕರ ಚರಿತೆ, ಬಾಹುಬಲಿ ಗೊಮ್ಮಟೇಶ್ವರ ಚರಿತೆ, ಭಗವಾನ್ ಬುದ್ಧ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಜೀವಿತಾವಧಿಯನ್ನು ಸಂಶೋಧನೆ, ಸಾಹಿತ್ಯಕ್ಕಾಗಿ ಮೀಸಲಿಟ್ಟಿದ್ದ ಅವರಿಗೆ ೧೯೪೯ ರಲ್ಲಿ ಮದ್ರಾಸ್ ಸರ್ಕಾರ **ರಾಷ್ಟ್ರಕವಿ** ಬಿರುದು ನೀಡಿ ಗೌರವಿಸಿದೆ. ಇವರು ಕನ್ನಡದ ಮೊದಲ ರಾಷ್ಟ್ರಕವಿ ಹೆಗ್ಗಳಿಕೆಗೆ ಪಾತ್ರರಾದವರು. ಹೊಗಳಿಕೆ ಮತ್ತು ಪ್ರಚಾರಕ್ಕೆ ಹಾತೊರೆಯದ ಇವರು ೧೯೫೦ ರಲ್ಲಿ ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳದ ಅಧ್ಯಕ್ಷತೆವಹಿಸಿದ್ದರು. ೦೬.೦೯.೧೯೬೩ ರಲ್ಲಿ ಗೋವಿಂದ ಪೈ ಅವರು ದೈವಾಧೀನರಾದರು.

* * *

ಇದು ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಕನ್ನಡತಾಯಿಯನ್ನು ಸ್ತುತಿಸಿ ಬರೆದ ಕವನ. ಕನ್ನಡತಾಯಿ ತನ್ನ ಮುಖವನ್ನು ತೋರುವ ಮೂಲಕ ಕನ್ನಡದ ಮಕ್ಕಳನ್ನು ಒಂದಾಗಿಸಬೇಕು ಎನ್ನುವುದು ಪದ್ಯದ ಮುಖ್ಯ ಆಶಯ. ಕನ್ನಡನಾಡಿನಲ್ಲಿ ಎಲ್ಲಾ ಸಂಪತ್ತು ಇದೆ. ತಾಯಿಯ ಮುಖ ಕಂಡಾಗ ಅದೆಲ್ಲವೂ



©KTBS Not to be republished

ಗೋಚರವಾಗುತ್ತದೆ. ಹೀಗೆ ಗೋಚರಿಸಿದಾಗ ಮಾತ್ರ ಕನ್ನಡ ತಾಯಿಯ ಕೀರ್ತಿ ಜಗತ್ತಿನಾದ್ಯಂತ ಪಸರಿಸಲು ಸಾಧ್ಯ. ಅದಕ್ಕಾಗಿ ಕನ್ನಡತಾಯಿ ಎಲ್ಲರ ನಡೆ–ನುಡಿ, ಆಚಾರ–ವಿಚಾರಗಳಲ್ಲಿ ನೆಲೆಯಾಗಬೇಕು. ಕನ್ನಡ ತಾಯಿ ಜನ್ಮದಾತೆಗೆ ಸಮನಾಗಿರುವುದರಿಂದ ಅವಳ ಹರಕೆ–ಹಾರೈಕೆ ನಮಗೆ ಶ್ರೀರಕ್ಷೆ.

* * *

ಪ್ರಸ್ತುತ ಪದ್ಯವನ್ನು **ಎನ್. ಎಸ್. ರಘುನಾಥ್** ಅವರು ಸಂಪಾದಿಸಿರುವ **ಶತಮಾನದ ಮಕ್ಕಳ ಸಾಹಿತ್ಯ** ಸಂಕಲನದಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಿದೆ.

## ಪದ ಪದ್ಯಾರ್ಥ

ಮೊಗ – ಮುಖ ; ತಾಳ್ವೆ – ಸಹಿಸುವೆ ; ಆಳ್ವೆ – ಆಳುವೆ ; ಲತೆ – ಬಳ್ಳಿ ; ಕೆನೆ – ಸಾರ, ತಿರುಳು ; ನಗಾಳಿ – ಪರ್ವತಗಳ ಸಮೂಹ ; ದಿವಂ – ಆಕಾಶ ; ಬಸಿರು – ಗರ್ಭ, ಗರ್ಭಾಶಯ; ಕಾರಕಳ – ಕಾರ್ಕಳ (ಉಡುಪಿ ಜಿಲ್ಲೆಯ ಒಂದು ತಾಲೂಕು ಕೇಂದ್ರ); ನಿಡುಕರು –ನಿಡಿದಾಗಿ ನಿಂತಿರುವ (ನಿಡು ನಿಂದಿರುವ) ಗೊಮ್ಮಟ ಮೂರ್ತಿ ; ತೃಷೆ – ಬಾಯಾರಿಕೆ ; ಸುರಭಿ – ಸುಗಂಧ, ಸುವಾಸನೆ ; ಒಸಗೆ– ಸಂತೋಷ, ಶುಭವಾರ್ತೆ ; ಶರ್ವ – ನೃಪತುಂಗನ ಮತ್ತೊಂದು ಹೆಸರು ; ಬೇಲನಾಡು – ಬೇಲೂರು; ಬಿಳಿಯ ಕೊಳ – ಬೆಳಗೊಳ, ಶ್ರವಣಬೆಳಗೊಳ

## ಪಠ್ಯಾಧಾರಿತ ಟಿಪ್ಪಣಿ

**ನಗಾಳಿ:** ನಗ – ಪರ್ವತ ; ಆಳಿ – ಸಮೂಹ – ಪರ್ವತಗಳ ಸಮೂಹ

**ಖಗ :** ಖ – ಆಕಾಶ : ಗ – ಗಮಿಸುವುದು (ಸಂಚರಿಸುವುದು) ಆಕಾಶದಲ್ಲಿ ಸಂಚರಿಸುವುದು – ಪಕ್ಷಿ

**ಖಗಮೃಗೋರಗಾಳಿ :** ಖಗ – ಪಕ್ಷಿ ; ಮೃಗ – ಪ್ರಾಣಿ ; ಉರಗ – ಹಾವು ; ಆಳಿ – ಸಮೂಹ; ಪ್ರಾಣಿ, ಪಕ್ಷಿ, ಹಾವುಗಳ ಸಮೂಹ.

**ಕೊಂಡಕುಂದವರ್ಯ:** ಜೈನಧರ್ಮದಲ್ಲಿ **ದಿಗಂಬರ – ಶ್ವೇತಾಂಬರ** ಎಂಬ ಸಂಪ್ರದಾಯ ಭೇದಗಳು ಹುಟ್ಟುವ ಮೊದಲು ಜೈನಧರ್ಮವು **ಅರ್ಹಂತ, ಅನೇಕಾಂತ** ಎಂಬಿವೇ ಮೊದಲಾದ ಹೆಸರುಗಳಿಂದ ಪ್ರಸಿದ್ದವಾಗಿತ್ತು. ವಿಕ್ರಮ ಶಕದ ೧೩೬ನೆಯ ವರ್ಷದಲ್ಲಿ ಅಂದರೆ ಕ್ರಿ.ಶ. ೮೦–೮೧ ರಲ್ಲಿ ಅದು **ದಿಗಂಬರ– ಶ್ವೇತಾಂಬರ** ಸಂಪ್ರದಾಯಗಳೆಂದು ಕವಲಾಗುತ್ತಲೇ **ದಿಗಂಬರ** ಸಂಪ್ರದಾಯಕ್ಕೆ **ಮೂಲ ಸಂಘ**ವೆಂದು ಹೆಸರಾಯಿತು. **ಪದ್ಮನಂದಿ** ಎಂಬ ಮೊದಲನೆಯ ಹೆಸರುಳ್ಳ **ಕೊಂಡಕುಂದಾಚಾರ್ಯ**ನು ಈ **ಮೂಲಸಂಘ**ದ ಮುಂದಾಳೆಂದೂ ಒಂದು **ಗಣ**ದ ಒಡೆಯನೆಂದೂ ಕಂಡುಬರುತ್ತದೆ.

**ಹಿಂಗತೆಯಿನಿವಾಲ ಸೊಲ್ಲ :** ಹಿಂಗತೆ – ಹಿನ್ನೆಲೆಯ ಕತೆ (ಬೇಲೂರು, ಹಳೆಬೀಡು ಇತ್ಯಾದಿ ಶಿಲ್ಪಕಲೆಗಳ ಹಿಂದೆ ಇರುವ ಕತೆ) ಇನಿದು – ಇನಿದಾದ, ಸವಿಯಾದ, ರುಚಿಯಾದ, ಪಾಲು – ಹಾಲು ; ಸೊಲ್ಲು – ಮಾತು ; ಹಿನ್ನೆಲೆಯ ಕಥೆ ಸವಿಯಾದ ಹಾಲಿನಂತಿರುವ ಮಾತುಗಳಿಂದ ಕೂಡಿದೆ.



©KTBS Not to be republished

**ಎಮ್ಮ ತೃಷೆಗೆ ದಕ್ಕಿಸು:** ಎಮ್ಮ – ನಮ್ಮ : ತೃಷೆ – ದಾಹ, ಬಾಯಾರಿಕೆ ; ದಕ್ಕಿಸು – ನೀಡು ;
ಕರ್ನಾಟಕದ ಶಿಲ್ಪಕಲೆಯ ಇತಿಹಾಸವನ್ನು ತಿಳಿದುಕೊಳ್ಳಬೇಕೆಂಬ ದಾಹವುಳ್ಳ (ಬಯಕೆವುಳ್ಳ) ನಮಗೆ ನೀಡು.

## ಕಲಿತ ಪಾಠದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ನಮ್ಮನ್ನು ಆಳುವವಳು ಯಾರು?

೨. ಲತೆ ಯಾವುದನೆಲ್ಲಾ ನೀಡುತ್ತದೆ?

೩. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?

೪. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?

೫. ಕನ್ನಡಿಗರ ಪಾಡು ಏನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು?

೨. ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?

೩. ಕವಿ ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಆಶಿಸುತ್ತಾರೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ ಏಕೆ?

೨. ಕವಿ ಕನ್ನಡ ತಾಯಿಯಲ್ಲಿ ಏನೆಂದು ಕೋರುತ್ತಾರೆ?

೩. ಗೋವಿಂದ ಪೈ ಅವರ ಪ್ರಮುಖ ಕೃತಿಗಳಾವುವು?

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡಿಗರ ತಾಯಿ ಮೊಗ ತೋರಬೇಕೆಂದು ಕವಿ ಏಕೆ ಬಯಸುತ್ತಾರೆ?

೨. ಕನ್ನಡ ನಾಡಿನ ಕವಿ ಹಾಗೂ ಕಲೆಯ ಮಹತ್ವವೇನು? – ವಿವರಿಸಿ

© KTBS Not to be republished

ಉ. ಸಂದರ್ಭಾನುಸಾರ ವಿವರಿಸಿ.

೧. "ಖಗ ಮೃಗೋರಗಾಳಿಯೋ"

೨. "ನಿನ್ನ ಕಲ್ಲೆ ನುಡಿವುದಲ್ಲ!"

೩. "ನಮ್ಮ ಮನಮನೊಂದೆ ಕಲಸು!"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಅ. ಹೊಂದಿಸಿ ಬರೆಯಿರಿ.**

| | ಅ | ಬ |
|---|---|---|
| ೧. | ಬೇಲನಾಡು | ಬಾಹುಬಲಿ |
| ೨. | ಶರ್ವ | ಖಂಡಕಾವ್ಯ |
| ೩. | ಗೊಲ್ಗೊಥಾ | ಕವನಸಂಕಲನ |
| ೪. | ಗಿಳಿವಿಂಡು | ಹಳೆಬೀಡು |
| | | ಬೇಲೂರು |
| | | ನೃಪತುಂಗ |

**ಆ. ಬಿಟ್ಟ ಸ್ಥಳ ತುಂಬಿ.**

೧. ಹರಸು ತಾಯೆ ______ ಕಾಯೆ

೨. ಹಾಲು ಹರಿವ _______ ಭೂಮಿಗಿಳಿದುದೆ?

೩. ಜೈನರಾದ ಪೂಜ್ಯಪಾದ ________

೪. _________ ಸೇಡು ನಮ್ಮ ಪಾಡು

- **ಪಠ್ಯಾಧಾರ ಚಟುವಟಿಕೆ**

**ಅ. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ಜೈನರಾದ ___ ___ ____ ___ ___ ___ ____ವಿದ್ಯಾರಣ್ಯರ! (ಏಳು ಸಾಲು)

**ಆ. ಕವಿತೆಯಲ್ಲಿ ಬರುವ ಮಹಾತ್ಮರ ಭಾವಚಿತ್ರಗಳನ್ನು ಸಂಗ್ರಹಿಸಿ.**

## ಹೆಚ್ಚಿನ ಓದು

✦ ರಾಷ್ಟ್ರಕವಿ **ಎಂ.ಗೋವಿಂದಪೈ** ಅವರ **ಗಿಳಿವಿಂಡು** ಕವನ ಸಂಕಲನದ ಕವಿತೆಗಳನ್ನು ಕಲಿಯಿರಿ.

✦ ✦ ✦ ✦ ✦

©KTBS Not to be republished

## ಪದ್ಯಪಾಠ – ೨


# ಭಾರತೀಯತೆ

[ಆಧುನಿಕ]

– ಕೆ.ಎಸ್. ನರಸಿಂಹಸ್ವಾಮಿ

**ಅರ್ಥೈಸಿ – ಓದಿ**

| | | | |
|---|---|---|---|
| ಕರಾವಳಿ | ಪೆರ್ದೆರೆ | ಯಂತ್ರಘೋಷ | ಕೊರಲು |
| ಹುತಾತ್ಮ | ಸ್ಮರಣೆ | ಬಿರುಗಾಳಿ | ಮೊಳಗು |



©KTBS Not to be republished

**ನಿಗದಿತ ಮೂಲ ಆಧುನಿಕ ಪದ್ಯ**

ಆಕಾಶಕ್ಕೆದ್ದು ನಿಂತ ಪರ್ವತ ಹಿಮ ಮೌನದಲ್ಲಿ
ಕರಾವಳಿಗೆ ಮುತ್ತನಿಡುವ ಪೆರ್ದೆರೆಗಳ ಗಾನದಲ್ಲಿ
ಬಯಲ ತುಂಬ ಹಸಿರ ದೀಪ ಹಚ್ಚಿ ಹರಿವ ನದಿಗಳಲ್ಲಿ
ನೀಲಿಯಲ್ಲಿ ಹೊಗೆಯ ಚೆಲ್ಲಿ ಯಂತ್ರಘೋಷವೇಳುವಲ್ಲಿ
ಕಣ್ಣು ಬೇರೆ, ನೋಟವೊಂದು–
ನಾವು ಭಾರತೀಯರು.

ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ
ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ
ಒಂದೆ ನೆಲದ ತೊಟ್ಟಿಲಲ್ಲಿ ಬೆಳೆದ ನಮ್ಮ ಕೊರಳಿನಲ್ಲಿ
ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ
ಭಾಷೆ ಬೇರೆ, ಭಾವವೊಂದು–
ನಾವು ಭಾರತೀಯರು.

ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ
ಎಲ್ಲೆ ಇರಲಿ, ನಾವು ಒಂದು–
ನಾವು ಭಾರತೀಯರು.

## ಕರ್ತೃ – ಭಾವ – ಆಕರ



ಆಧುನಿಕ ಕಾವ್ಯ ಸಂದರ್ಭದ ಪ್ರಮುಖ ಕವಿಗಳಲ್ಲಿ ಒಬ್ಬರಾದ **ಕೆ.ಎಸ್. ನರಸಿಂಹಸ್ವಾಮಿ** ಅವರು ೨೬–೦೧–೧೯೧೫ ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ **ಕಿಕ್ಕೇರಿಯಲ್ಲಿ** ಜನಿಸಿದರು. ಇವರ ಮೊದಲ ಕವನ ಸಂಕಲನ **ಮೈಸೂರು ಮಲ್ಲಿಗೆ** ೧೯೪೨ರಲ್ಲಿ ಪ್ರಕಟವಾಯಿತು. ಇವರು **ಶಿಲಾಲತೆ, ಐರಾವತ, ನವಪಲ್ಲವ, ಇರುವಂತಿಗೆ, ದೀಪದ ಮಲ್ಲಿ, ಮನೆಯಿಂದ ಮನೆಗೆ, ತೆರೆದ ಬಾಗಿಲು** ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ೧೯೭೭ ರಲ್ಲಿ ಇವರ **ತೆರೆದ ಬಾಗಿಲು** ಎಂಬ **ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.** ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ **ದುಂಡು ಮಲ್ಲಿಗೆ** ಕವನ ಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ. ಇವರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ **ಪ್ರೇಮಕವಿ** ಎಂದೇ ಗುರುತಿಸಿದೆ. ೨೦೦೪ರಲ್ಲಿ ದೈವಾಧೀನರಾದರು.

**ಭಾರತೀಯತೆ** ಕವನದಲ್ಲಿ ಕವಿ ಭಾರತೀಯರ ಏಕತೆಯನ್ನು ಕುರಿತು ಅಭಿಮಾನದಿಂದ ಹೇಳಿದ್ದಾರೆ. ಭಾರತ ದೇಶದ ಪ್ರಾಕೃತಿಕ ಸೌಂದರ್ಯ, ಜನರ ಜೀವನ ಶೈಲಿ, ಸಾಂಸ್ಕೃತಿಕ ಪರಂಪರೆ, ಭಿನ್ನತೆಯಲ್ಲಿ ಏಕತಾಭಾವ, ದೇಶಭಕ್ತಿ, ತ್ಯಾಗ, ಪರೋಪಕಾರಬುದ್ಧಿ ಮುಂತಾದ ಉತ್ಕೃಷ್ಟ ಗುಣಗಳನ್ನು ಕವಿ ಇಲ್ಲಿ ವಿಶದೀಕರಿಸಿದ್ದಾರೆ.

* * *

ಪ್ರಕೃತ **ಭಾರತೀಯತೆ** ಕವನವನ್ನು **ಕೆ. ಎಸ್. ನರಸಿಂಹಸ್ವಾಮಿ** ಅವರ **ನವಪಲ್ಲವ** ಕವನ ಸಂಕಲನ (ಪುಟ ೪೬೪)ದಿಂದ ಆರಿಸಿಕೊಂಡಿದೆ.

©KTBS Not to be republished

## ಪದ – ಪದ್ಯಾರ್ಥ

ಹಿಮ – ಮಂಜು ; ಕರಾವಳಿ – ಸಮುದ್ರತೀರ ; ಪೆರ್ದೆರೆ – ದೊಡ್ಡ ಅಲೆ ; ಘೋಷ – ಗಟ್ಟಿಯಾಗಿ ಹೇಳುವುದು ; ಗಡಿ – ಸೀಮೆ, ಎಲ್ಲೆ ; ಯೋಧ – ಸೈನಿಕ ; ಕೊರಳು – ಧ್ವನಿ ; ತನು–ದೇಹ; ತೆರು – ನೀಡು, ತ್ಯಾಗ ಮಾಡು ; ಹುತಾತ್ಮ – ದೇಶಕ್ಕಾಗಿ ಪ್ರಾಣ ತೆತ್ತವ ; ಸ್ಮರಣೆ – ನೆನಪು; ನೆರೆ – ಪಕ್ಕ ; ನೆರಳು – ಆಶ್ರಯ ; ಮೊಳಗು – ಅಬ್ಬರ ; ಬೆಳಕು – ಜ್ಞಾನ

## ಕಲಿತ ಪದ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪರ್ವತ ಹಿಮ ಯಾವ ಎತ್ತರಕ್ಕೆ ಎದ್ದು ನಿಂತಿದೆ?

೨. ಪೆರ್ದೆರೆಗಳು ಯಾವುದಕ್ಕೆ ಮುತ್ತನಿಡುತ್ತಿವೆ?

೩. ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ?

೪. ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?

೫. ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು?

೬. ನಮ್ಮ ಪಯಣ ಎತ್ತ ಸಾಗಿದೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕಣ್ಣು ಬೇರೆಯಾದರೂ ನೋಟ ಒಂದಾಗುವ ಸಂದರ್ಭಗಳನ್ನು ತಿಳಿಸಿ.

೨. 'ಭಾಷೆ ಬೇರೆಯಾದರೂ ಭಾವ ಒಂದು' –ಸಮರ್ಥಿಸಿ.

**ಇ. ಕೊಟ್ಟಿರುವ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ನಾವು ಭಾರತೀಯರು ಎಂಬ ಅಭಿಮಾನ ಮಿಡಿಯುವ ಸನ್ನಿವೇಶಗಳನ್ನು ವಿವರಿಸಿ.

**ಈ. ಸಂದರ್ಭಾನುಸಾರ ವಿವರಿಸಿ.**

೧. "ಕಣ್ಣು ಬೇರೆ, ನೋಟವೊಂದು"

೨. "ಭಾಷೆ ಬೇರೆ, ಭಾವವೊಂದು"

೩. "ಎಲ್ಲೆ ಇರಲಿ, ನಾವು ಒಂದು"

©KTBS Not to be republished

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಬಿಟ್ಟ ಸ್ಥಳ ತುಂಬಿ.**

೧. ಯಂತ್ರ _______ ವೇಳುವಲ್ಲಿ.

೨. ಒಂದೆ ನೆಲದ _______ .

೩. ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ _______ .

೪. ಎಲ್ಲೆ ಇರಲಿ ನಾವು _______ .

೫. ನಡೆವ ______ ಪಯಣದಲ್ಲಿ .

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ಛಂದಸ್ಸು : ಪರಿಚಯಾತ್ಮಕ ವಿವರ.**

ಕಾವ್ಯವನ್ನು **ಗದ್ಯ, ಪದ್ಯ** ಮತ್ತು **ಚಂಪೂ** ಎಂದು ಮೂರು ವಿಭಾಗ ಮಾಡಲಾಗಿದೆ. **ಚಂಪೂ ಕಾವ್ಯ** ಗದ್ಯಪದ್ಯ ಮಿಶ್ರಿತ ಶೈಲಿಯಾಗಿರುವುದರಿಂದ ಪ್ರಧಾನವಾಗಿ **ಗದ್ಯ** ಮತ್ತು **ಪದ್ಯ** ಎಂಬೆರಡೇ ವಿಭಾಗಗಳೆಂದೂ ಹೇಳಬಹುದು.

ಪದ್ಯಗಳನ್ನು ರಚಿಸುವಾಗ ನಿರ್ದಿಷ್ಟ ನಿಯಮಗಳನ್ನು ಅನುಸರಿಸಲಾಗುವುದು. ಅದೇ **ಛಂದಸ್ಸು.** ವ್ಯಾಕರಣಶಾಸ್ತ್ರವು **ಗದ್ಯ** ಮತ್ತು **ಪದ್ಯ** ಎರಡಕ್ಕೂ ಸಂಬಂಧಿಸಿದ್ದು. ಛಂದಶ್ಶಾಸ್ತ್ರವು **ಪದ್ಯಕ್ಕೆ** ಮಾತ್ರ ಸೀಮಿತವಾದುದು.

ಆಧುನಿಕ ಕನ್ನಡ ಕಾವ್ಯಗಳಲ್ಲಿ **ಛಂದಸ್ಸು** ಹೆಚ್ಚು ಬಳಕೆಯಾಗುತ್ತಿಲ್ಲ. ಆದರೆ ಕಾವ್ಯ ಪರಂಪರೆಯಲ್ಲಿ ಛಂದಸ್ಸಿಗೆ ವಿಶೇಷ ಮಹತ್ವವಿದೆ. ಇಲ್ಲಿ ಕೊಟ್ಟಿರುವ ಮೂರು ಕಾರಣಗಳಿಂದಾಗಿ ಛಂದಸ್ಸಿಗೆ ಗುರುತರವಾದ ಮಹತ್ವವುಂಟು.

- **ಹಿಂದಿನ ಕಾವ್ಯಗಳ ಲಕ್ಷಣ ತಿಳಿಯಲು**
- **ಛಂದಸ್ಸನ್ನು ಕಡೆಗಣಿಸಿದ್ದರ ಔಚಿತ್ಯದ ಬಗ್ಗೆ ಮರು ಚಿಂತಿಸಲು**
- **ಛಂದಸ್ಸಿನ ಹೊಸ ಬಗೆಯ ಪ್ರಯೋಗಗಳನ್ನು ಅರಿಯಲು**

ಒಂದು ಗೊತ್ತಾದ ಸಾಲುಗಳ (ಪಾದಗಳ) ನಿಯಮ ಅನುಸರಿಸಿ ಬರೆದವುಗಳೇ ಪದ್ಯಗಳು. **ಮೂರು ಪಾದಗಳ** ಪದ್ಯವನ್ನು **ತ್ರಿಪದಿ** ಎಂತಲೂ **ನಾಲ್ಕು ಪಾದಗಳ** ಪದ್ಯವನ್ನು **ಚೌಪದಿ** ಎಂತಲೂ **ಆರುಪಾದಗಳ** ಪದ್ಯವನ್ನು **ಷಟ್ಪದಿ** ಎಂತಲೂ ಇತ್ತೀಚಿನ **ಹದಿನಾಲ್ಕು ಪಾದಗಳ** ಪದ್ಯವನ್ನು **ಅಷ್ಟಷಟ್ಪದಿ (ಸುನೀತ/ಸಾನೆಟ್)** ಎಂತಲೂ ಕರೆಯುವರು. ಹಾಗಾಗಿ ಪದ್ಯ ಎಂಬುದು ನಿರ್ದಿಷ್ಟ ಸಂಖ್ಯೆಯ ಪಾದಗಳಿಂದ ಕೂಡಿರಬೇಕು. ಪದ್ಯದ ಪ್ರತಿಯೊಂದು ಪಾದ **ಪ್ರಾಸ, ಯತಿ** ಮತ್ತು **ಗಣಗಳ** ನಿಯಮದಿಂದ ಕೂಡಿರುತ್ತದೆ. ಆದುದರಿಂದ



©KTBS Not to be republished

**ಪದ್ಯವನ್ನು ರಚಿಸಲು ಬೇಕಾದ ನಿರ್ದಿಷ್ಟ ಪಾದಗಳ ಬಗ್ಗೆ ಮತ್ತು ಪ್ರತಿ ಪಾದದಲ್ಲಿ ಇರಬೇಕಾದ ಪ್ರಾಸ, ಯತಿ, ಗಣಗಳ ಬಗ್ಗೆ ತಿಳಿಸುವ ಶಾಸ್ತ್ರವೇ ಛಂದಸ್ಸು.**

**ಪ್ರಾಸ :** ಗು**ರು** ಹಿರಿಯರ ಅರಿಯದವನ ಅರಿವದೇತ**ಕೆ**

ಪ**ರ** ಹಿತಾರ್ಥಕಿಲ್ಲದವನ ಶರೀರವೇತ**ಕೆ**

ಹ**ರಿ**ಯ ಪೂಜೆ ಮಾಡದವನ ಜನುಮವೇತ**ಕೆ**

ಸೇ**ರಿ**ದವರ ಹೊರೆಯದಂಥ ದೊರೆಯು ಏತ**ಕೆ**

ಈ ಪದ್ಯವನ್ನು ಗಮನಿಸಿದಾಗ ಪ್ರತಿ ಸಾಲಿನ ಎರಡನೆಯ ಅಕ್ಷರದಲ್ಲಿರುವ ವ್ಯಂಜನಾಕ್ಷರ ಒಂದೇ ಆಗಿದೆ. ಅದೇ ರೀತಿ ಪ್ರತಿ ಸಾಲಿನ ಕೊನೆಯ ವ್ಯಂಜನವೂ ಒಂದೇ ಆಗಿದೆ. ಹೀಗೆ – **ಪದ್ಯದ ಪ್ರತಿಯೊಂದು ಪಾದದ ಎರಡನೆಯ ಅಕ್ಷರದಲ್ಲಿ ಅಥವಾ ಪ್ರತಿಸಾಲಿನ ಕೊನೆಯ ಅಕ್ಷರದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದೇ ಪ್ರಾಸ.**

ಪ್ರತಿಸಾಲಿನ **ಎರಡನೆಯ ಅಕ್ಷರ** ಪ್ರಾಸವಾಗಿದ್ದರೆ **ಆದಿಪ್ರಾಸ** ಎಂತಲೂ **ಅಂತ್ಯದಲ್ಲಿ** ಬರುವ ಪ್ರಾಸವನ್ನು **ಅಂತ್ಯಪ್ರಾಸ** ಎಂತಲೂ (ಹೆಚ್ಚಾಗಿ ರಗಳೆ ಛಂದಸ್ಸಿನಲ್ಲಿ ಕಾಣಬಹುದು) **ಮಧ್ಯದಲ್ಲಿ** ಬರುವ ಪ್ರಾಸವನ್ನು **ಒಳಪ್ರಾಸ** ಅಥವಾ **ಮಧ್ಯಪ್ರಾಸ** ಎಂತಲೂ ಕರೆಯುವರು.

**ಯತಿ : ಪದ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪವಾಗದಂತೆ ನಿಲ್ಲಿಸುವ ಸ್ಥಳವನ್ನು ಯತಿ ಎನ್ನುವರು.** **ಯತಿ** ಎಂಬುದು ಸಂಸ್ಕೃತ ಕಾವ್ಯಗಳಲ್ಲಿ ಬಳಕೆಯಾದಷ್ಟು ಕನ್ನಡದಲ್ಲಿ ಬಳಕೆಯಾಗಿಲ್ಲ.

**ಗಣ :** ಗಣ ಎಂದರೆ **ಗುಂಪು** ಎಂದರ್ಥ. **ಪದ್ಯದ ಪ್ರತಿಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪೇ ಗಣ. ಮಾತ್ರೆಗಳ ಲೆಕ್ಕಾಚಾರದಿಂದ** ಗುಂಪು ಮಾಡಿದರೆ **ಮಾತ್ರಾಗಣ** ಎಂತಲೂ **ಅಕ್ಷರಗಳ ಲೆಕ್ಕಾಚಾರದಿಂದ** ಗುಂಪು ಮಾಡಿದರೆ **ಅಕ್ಷರಗಣ** ಎಂತಲೂ **ಅಂಶಗಳ ಆಧಾರದಿಂದ** ಗುಂಪು ಮಾಡಿದರೆ **ಅಂಶಗಣ** ಎಂತಲೂ ಕರೆಯುವರು.

- **ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಛಂದಸ್ಸು ಎಂದರೇನು?

೨. ಪ್ರಾಸ ಎಂದರೇನು? ಅದರ ವಿಧಗಳಾವುವು?

೩. ಗಣ ಎಂದರೇನು? ವಿವರಿಸಿ.

©KTBS Not to be republished

- **ಪ್ರಾಯೋಗಿಕ ಭಾಷಾಭ್ಯಾಸ**

ಅ. ಭಾರತೀಯತೆ ಪದ್ಯದಲ್ಲಿ ಯಾವ ಪ್ರಾಸವಿದೆ?

ಆ. ಭಾರತೀಯತೆ ಪದ್ಯದ ಮೂರನೆಯ ಚರಣದಲ್ಲಿರುವ ಪ್ರಾಸಾಕ್ಷರ ಪದಗಳನ್ನು ಬರೆಯಿರಿ.

- **ಪಠ್ಯಾಧಾರ ಚಟುವಟಿಕೆ**

**ಅ. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ನಾಡಿಗಾಗಿ ತನುವ ತೆತ್ತ ___ ___ ___ ___ ಧೀರ ಪಯಣದಲ್ಲಿ. (ನಾಲ್ಕು ಸಾಲು)

## ಹೆಚ್ಚಿನ ಓದು

✦ ರಾಷ್ಟ್ರಕವಿ **ಜಿ.ಎಸ್. ಶಿವರುದ್ರಪ್ಪ** ಅವರ **ಪ್ರೀತಿ ಇಲ್ಲದ ಮೇಲೆ** ಕವನಸಂಗ್ರಹದಲ್ಲಿನ ಐಕ್ಯಗಾನ ಕವಿತೆಯನ್ನು ಓದಿ.

✦ ✦ ✦ ✦ ✦

©KTBS Not to be republished

## ಪದ್ಯಪಾಠ – ೩


# ಗೆಳೆತನ

[ಆಧುನಿಕ]

– ಚೆನ್ನವೀರಕಣವಿ

**ಅರ್ಥೈಸಿ – ಓದಿ**

| | | | | |
|---|---|---|---|---|
| ಸುವಿಶಾಲ | ದುರ್ಭರ | ಅಮೃತ | ಜೀವನ್ಮೃತ | ಚಂಚಲತೆ |
| ಅಹಮಿಕೆ | ತಿಳಿಗೊಳದೊಲು | ಶುದ್ಧ ಸ್ಫಟಿಕ | ಕೂರ್ಪು | ಅಪ್ಪುಕಯ್ದು |



© KTBS Not to be republished

**ನಿಗದಿತ ಮೂಲ ಆಧುನಿಕ ಪದ್ಯ**


ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು;
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು–ಜೀವನ್ಮೃತ!

ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲು ಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವಮಿಲ್ಲ ದ್ವೇಷ ಗುಣಮಣಮಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವ ಶುದ್ಧ ಸ್ಫಟಿಕ – ಬೆಳದಿಂಗಳು!

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

ಹೇಗೊ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಮೆ
ಆಗು ಹೋಗುಗಳಿಂಗೆ ಬಾಗದಂತೆ,
ಸುಖಕೆ ಸಂತಸಬಟ್ಟು ದು:ಖದಲಿ ಸಹಭಾಗಿ –
ಯಾಗೆ ಜೀವನ ರಸದ ಪಾಕದಂತೆ –
ಸರಸವಿರಸವನೆಲ್ಲ ಅಪ್ಪುಕಯ್ದು
ಬಾಳುವರು ಗಂಧದೊಲು ಜೀವ ತೆಯ್ದು!

## ಕರ್ತೃ – ಭಾವ – ಆಕರ



ನವೋದಯ (ಆಧುನಿಕ) ಪರಂಪರೆಯ ಪ್ರಮುಖ ಕವಿಗಳಲ್ಲಿ **ಚೆನ್ನವೀರಕಣವಿ** ಒಬ್ಬರು. ಗದಗ ಜಿಲ್ಲೆಯ **(೧೯೨೮) ಹೊಂಬಳ**ದವರು. ನವೋದಯ ಮತ್ತು ನವ್ಯ ಮಾರ್ಗಗಳ ಸಮನ್ವಯತೆ ಸಾಧಿಸಿದ ಕವಿಯೆಂದೇ ಪ್ರಸಿದ್ಧರು. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣ ಮತ್ತು ವ್ಯಾಸಂಗ ವಿಸ್ತರಣ ವಿಭಾಗದಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

**ಆಕಾಶ ಬುಟ್ಟಿ, ಭಾವಜೀವಿ, ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರೆವಣಿಗೆ, ನೆಲಮುಗಿಲು, ಕಾವ್ಯಾಕ್ಷಿ, ಚಿರಂತನ ದಾಹ** ಇವರ ಪ್ರಮುಖ ಕವನ ಸಂಕಲನಗಳು. ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ೧೯೮೧ ರಲ್ಲಿ **ಜೀವಧ್ವನಿ** ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿವೆ. ೧೯೯೬ ರಲ್ಲಿ ಹಾಸನದಲ್ಲಿ ನಡೆದ ೬೫ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

* * *

ಪ್ರಕೃತ ಕವನದಲ್ಲಿ ಗೆಳೆತನ, ಅದರ ಸವಿ, ಮಹತ್ವ ಹಾಗೂ ಅನ್ಯೋನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೆಳೆತನಕ್ಕೆ ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ಬದುಕಿನಲ್ಲಿ ಮಿಗಿಲಾದ ಸ್ಥಾನವಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಆಧುನಿಕ ಪ್ರಪಂಚದಲ್ಲಿ ಗೆಳೆತನ ವೈಯಕ್ತಿಕ ನೆಲೆಯಿಂದ

© KTBS Not to be republished

ವಿಶ್ವಸಾಮರಸ್ಯದ ನೆಲೆಗೆ ಧಾವಿಸುತ್ತಿರುವ ಸಂದರ್ಭದಲ್ಲಿ ಈ ಕವಿತೆ ಮಹತ್ವವನ್ನು ಪಡೆದಿದೆ. ಇದೇ ಕವಿತೆಯ ಆಂತರ್ಯಭಾವ.

* * *

ಪ್ರಕೃತ **ಗೆಳೆತನ** ಕವನವನ್ನು **ಚೆನ್ನವೀರಕಣವಿ** ಅವರ **ಆಕಾಶಬುಟ್ಟಿ** ಕವನ ಸಂಕಲನ (ಪುಟ ೩೫–೩೬) ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

## ಪದ – ಪದ್ಯಾರ್ಥ

ತಂಗು – ಇಳಿದುಕೋ, ಬೀಡುಬಿಡು ; ಪಸರಿಸು – ಹರಡು, ವಿಸ್ತರಿಸು ; ದುರ್ಭರ – ತಾಳಲಾಗದ; ಬವಣೆ – ಕಷ್ಟ ; ಇಹಲೋಕ – ಭೂಲೋಕ ; ಜೀವನ್ಮೃತ – ಬದುಕಿದ್ದೂ ಸತ್ತಂತಿರುವ ; ವಂಚನೆ – ಮೋಸ ; ಚಂಚಲತೆ – ಸ್ಥಿರವಲ್ಲದ; ಅಹಮಿಕೆ – ಅಹಂಕಾರ ; ನೆವ – ಕಾರಣ ; ನುಡಿ – ಮಾತು ; ಮಿಗಿಲು – ಶ್ರೇಷ್ಠ ; ದೋಷ – ತಪ್ಪು, ಕುಂದುಕೊರತೆ; ಹದ – ಪಕ್ವತೆ, ಸರಿಯಾದ ಸ್ಥಿತಿ ; ಕೂರ್ಮೆ – ಒಲವು, ಪ್ರೀತಿ ; ಬಾಗು – ಮಣಿ, ಬಗ್ಗು, ಶರಣಾಗು ; ರಸಪಾಕ – ರುಚಿಯಾದ ಅಡುಗೆ; ಅಪ್ಪುಕಯ್– ಒಪ್ಪಿಕೊಳ್ಳು, ಸ್ವೀಕರಿಸು.

## ಕಲಿತ ಪದ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕವಿ ಎಲ್ಲಿ ತಂಗಿದ್ದಾರೆ?

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?

೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ?

೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು?

**ಆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ?

೨. ಗೆಳೆತನದ ಶುಚಿರುಚಿ ಎಂಥದ್ದು?

೩. ಜೀವನ ರಸಪಾಕವಾಗುವುದು ಹೇಗೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನ ಇಹಲೋಕಕಿರುವ ಅಮೃತ ಹೇಗೆ? ತಿಳಿಸಿ.

೨. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ

೩. ಗೆಳೆಯರು ಹೇಗೆ ಬಾಳುತ್ತಾರೆ?

©KTBS Not to be republished

**ಈ. ಕೊಟ್ಟಿರುವ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನದ ಮಹತ್ವವನ್ನು ಕಣವಿ ಅವರು ಹೇಗೆ ತಿಳಿಸಿದ್ದಾರೆ?

**ಉ. ಸಂದರ್ಭಾನುಸಾರ ವಿವರಿಸಿ.**

೧. "ಅದನುಳಿದರೇನಿಹುದು– ಜೀವನ್ಮೃತ!"

೨. "ಭಾವ ಶುದ್ಧ ಸ್ಫಟಿಕ– ಬೆಳದಿಂಗಳು!"

೩. "ಕಂಡ ಕಂಡವರೇನು ಬಲ್ಲರಿದನು"

೪. "ಬಾಳುವರು ಗಂಧದೊಲು ಜೀವ ತೆಯ್ದು!"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಗುಂಪಿಗೆ ಸೇರದ ಪದವನ್ನು ಗುರುತಿಸಿ.**

೧. ಹೆಗಲುಗೊಟ್ಟು ಸಂತಸಬಟ್ಟು ಉಂಡವನು ತಿಳಿಗೊಳ

೨. ಲೋಕ ಅಮೃತ ಎದೆ ಸಾಹಸ

೩. ಭಾವಜೀವಿ ಕಾವ್ಯಾಕ್ಷಿ ದೀಪಧಾರಿ ಜೀವಧ್ವನಿ

೪. ಬಾನು ಆಕಾಶ ಭಾನು ಗಗನ

- **ಪಠ್ಯಾಧಾರ ಚಟುವಟಿಕೆ**

**ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ಉಪ್ಪಿಗಿಂತಲು ರುಚಿಯು __ __ __ __ ___ ___ ಇದರ ಹದನು (ಆರು ಸಾಲು)

## ಹೆಚ್ಚಿನ ಓದು

✦ ಭಾರತೀಯ ವಿದ್ಯಾಭವನದ ಭಾರತ ಭಾರತಿ ಪುಸ್ತಕಮಾಲೆಯ ಕೃಷ್ಣ–ಕುಚೇಲರ ಸ್ನೇಹ ಕತೆಯನ್ನು ಓದಿ

✦ ✦ ✦ ✦ ✦

©KTBS Not to be republished

**ಪದ್ಯಪಾಠ – ೪**

# ಭರವಸೆ

[ದಲಿತ/ಬಂಡಾಯ]

**– ಬಿ.ಟಿ. ಲಲಿತಾನಾಯಕ್**

**ಅರ್ಥೈಸಿ ಓದಿ**

ವಸಂತನಾಗಮನ  ಕುಕಿಲರಾಗ  ಬಳುಕಾಡಿ  ಬಾನಸಂಚಾರಿಣಿ  ಹೊನ್ನಗಣಿಯೆ

ಅರುಹೆ  ಸ್ವಾರ್ಥ  ಸೊಗಡ  ಭ್ರಮರ  ಗಾನಲಹರಿ



©KTBS Not to be republished

**ನಿಗದಿತ ಮೂಲ ದಲಿತ/ಬಂಡಾಯ ಪದ್ಯ**

ಅರಳಿ ಮಲ್ಲಿಗೆ ಮೊಗ್ಗು ಸುತ್ತ ಗಂಧವ ಚೆಲ್ಲಿ
ವಸಂತನಾಗಮನ ಸಾರಿದಾಗ
ಮಾಮರದ ರೆಂಬೆಯಲಿ ಕುಳಿತಿದ್ದ ಕೋಗಿಲೆಯು
ಬೆರೆಸಿತದರೊಳಗೊಂದು ಕುಕಿಲರಾಗ

ಬಳುಕಾಡಿ ಮಲ್ಲಿಗೆಯು ಕೋಗಿಲೆಯ ಕರೆದಿತ್ತು;
"ಪ್ರಿಯ ಗೆಳತಿ ಹಾಡೊಂದ ಹಾಡೇ
ಬಾನಸಂಚಾರಿಣಿಯೆ ಅನುಭವದ ಹೊನ್ನಗಣಿಯೆ
ಲೋಕವಾರ್ತೆಯದೇನು ಅರುಹೆ"

"ಏನೆಂದು ಹಾಡಲಿ ನಾನು ಏನ ಅರುಹಲಿ ಚೆಲುವೆ
ಬಣ್ಣ ಬೆಡಗಿನ ಮಾತನರಿಯೆ
ಕೃತಕತೆಯ ಜಾಲದಲಿ ಸಿಲುಕಿಕೊಂಡಿದೆ ಜಗವು
ನೈಜತೆಗೆ ಇಲ್ಲ ಬೆಲೆಯು

ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ
ಮರೆತೇಬಿಟ್ಟಿಹನು ಮಣ್ಣ ಸೊಗಡ್ಸ

ಮಾವು ಮಲ್ಲಿಗೆ ಭ್ರಮರ ಮತ್ತದರ ಝೇಂಕಾರ
ಕವಿ ಕಲ್ಪನೆಯ ಗಾನಲಹರಿ
ನಲುಗದಿರು ಇದ ಕೇಳಿ ಬರಡಲ್ಲ ಈ ಬುವಿಯು
ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

## ಕರ್ತೃ – ಭಾವ – ಆಕರ



**ಶ್ರೀಮತಿ ಬಿ. ಟಿ. ಲಲಿತಾನಾಯಕ್** ಅವರು ಚಿಕ್ಕಮಗಳೂರು ಜಿಲ್ಲೆಯ ತಂಗಲಿ ತಾಂಡ್ಯದಲ್ಲಿ ೦೪.೦೪.೧೯೪೫ ರಲ್ಲಿ ಜನಿಸಿದರು. ಬಂಡಾಯ ಹಾಗೂ ಸ್ತ್ರೀ ಸಂವೇದನೆಯ ಬರೆಹಗಳ ಮೂಲಕ ಖ್ಯಾತರಾದ ಇವರು ಹಲವಾರು ಮೌಲಿಕ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. **ಚಂದ್ರ ಪರಾಭವ, ಭಟ್ಟನ ಕನಸು, ನೆಲೆಬೆಲೆ, ನಂರೂಪ್ಲಿ, ಗತಿ, ಹಬ್ಬ ಮತ್ತು ಬಲಿ, ಇದೇ ಕೂಗು ಮತ್ತೆ ಮತ್ತೆ, ದೇವದುರ್ಗ ತಾಲೂಕು ದರ್ಶನ, ಒಡಲ ಬೇಗೆ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. **ಮಕ್ಕಳ ಕತೆ, ರೇಡಿಯೋ ನಾಟಕ**ಗಳನ್ನೂ ರಚಿಸಿರುವರು. ಅಲ್ಲದೇ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯೆಯಾಗಿಯೂ ಕರ್ನಾಟಕ ಸರಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿಯೂ ಕಾರ್ಯ ನಿರ್ವಹಿಸಿರುವರು.

ಜಗತ್ತಿನ ತಲ್ಲಣಗಳನ್ನು ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯ ಮೂಲಕ ವ್ಯಕ್ತಪಡಿಸುವ ಕವನ **ಭರವಸೆ.** ಲೋಕವಾರ್ತೆಯನ್ನು ನುಡಿಯುವ ಕೋಗಿಲೆಯ ಧ್ವನಿಯಲ್ಲಿರುವ ನಿರಾಸೆ, ಅವಾಸ್ತವಿಕ ಬದುಕಿನ ಬಗೆಗಿನ ವಿಷಾದ ಈ ಕವನದ ಒಡಲು. ಇಲ್ಲಿ ಪ್ರಕೃತಿಯ ನೈಜತೆಗೆ ಮನುಷ್ಯನ ಸ್ವಾರ್ಥ ಹೇಗೆ ದಕ್ಕೆಯಾಗುತ್ತಿದೆ ಎಂಬ ಆತಂಕವಿದೆ. ಈ ಮಣ್ಣಿನ ಗುಣವನ್ನು ಬಿಟ್ಟು ಭ್ರಮೆಯಲ್ಲಿ ಮುಳುಗಿರುವ ವ್ಯಕ್ತಿಯ ಬಗ್ಗೆ ಇಲ್ಲಿ ಸುಪ್ತ ಪ್ರತಿಭಟನೆ ಇದೆ. ಆದರೆ ಅದೇ ಪ್ರತಿಭಟನೆಯ ಕೊನೆಯಲ್ಲಿ ಆಶಾವಾದದ ಸಾಂತ್ವನವಿದೆ. ಈ ಭೂಮಿ ಬರಡಲ್ಲ. ಅಮರ ಪ್ರೇಮದ ಒರತೆ ಎನ್ನುವ ಮೂಲಕ ಭೂಮಿಯ ಸಂಜೀವಿನೀ ಗುಣವನ್ನು ಪ್ರಕೃತ ಕವಿತೆಯಲ್ಲಿ ಎತ್ತಿ ಹಿಡಿಯಲಾಗಿದೆ. ಅದೇ ಕವಿತೆಯ ಆಶಯ ದನಿ.

* * *



©KTBS Not to be republished

ಪ್ರಸ್ತುತ ಕವನವನ್ನು ಬಿ. ಟಿ. ಲಲಿತನಾಯಕ್ ಅವರ **ಬಿದಿರು ಮೆಳೆ ಕಂಟಿಯಲಿ** ಕವನ ಸಂಕಲನ (ಪುಟ ೧೨೧-೨೨) ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

## ಪದ – ಪದ್ಯಾರ್ಥ

ಮೊಗ್ಗು – ಅರಳದೇ ಇರುವ ಹೂ; ಮಾಮರ–ಮಾವಿನಮರ; ಕುಕಿಲ–ಕೋಗಿಲೆಯ ಕೂಗು; ಬಾನ ಸಂಚಾರಿಣಿ– ಆಕಾಶದಲ್ಲಿ ಸಂಚರಿಸುವ: ಹೊನ್ನಗಣಿ–ಚಿನ್ನದಗಣಿ; ಅರುಹು–ತಿಳಿಸು, ಹೇಳು; ಕೃತಕತೆ–ಅಸಹಜತೆ ಮೋಸ; ಜಾಲ–ಗುಂಪು, ಸಮೂಹ; ಪೂರ–ಪೂರ್ತಿಯಾಗಿ; ಭಿತ್ತಿ–ಗೋಡೆ; ಚಿತ್ತಾರ–ಚಿತ್ರ; ಸೊಗಡು–ಕಂಪು, ವಾಸನೆ; ಭ್ರಮರ–ದುಂಬಿ; ಬರಡು–ನಿಸ್ಸಾರ.

## ಕಲಿತ ಪದ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕೋಗಿಲೆ ಕುಕಿಲರಾಗವನ್ನು ಯಾವಾಗ ಬೆರೆಸಿತು?

೨. ಮನುಷ್ಯ ಸ್ವಭಾವದ ಬಗ್ಗೆ ಕವಯಿತ್ರಿಯ ಅಭಿಪ್ರಾಯವೇನು?

೩. ಕನ್ನಡ ಸಾರಸ್ವತ ಲೋಕಕ್ಕೆ ಬಿ.ಟಿ. ಲಲಿತಾನಾಯಕ್ ಅವರ ಕೊಡುಗೆ ಏನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮಲ್ಲಿಗೆ ಕೋಗಿಲೆಯನ್ನು ಕರೆದು ಏನು ಹೇಳಿತು?

೨. ಮಲ್ಲಿಗೆಯ ಕೋರಿಕೆಗೆ ಕೋಗಿಲೆ ಪ್ರಕೃತಿಯ ಬಗ್ಗೆ ಏನೆಂದು ಉತ್ತರ ನೀಡಿತು?

೩. ಕೋಗಿಲೆಯ ಆಶಾವಾದವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯನ್ನು ಬರೆಯಿರಿ

೨. ಕೋಗಿಲೆ ತಿಳಿಸಿದ ಲೋಕವಾರ್ತೆ ಏನು? – ವಿವರಿಸಿ

©KTBS
Not to be republished

**ಈ. ಸಂದರ್ಭಾನುಸಾರ ವಿವರಿಸಿ.**

೧. "ಬೆರೆಸಿತದರೊಳಗೊಂದು ಕುಕಿಲರಾಗ"

೨. "ನೈಜತೆಗೆ ಇಲ್ಲ ಬೆಲೆಯು"

೩. "ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಉ. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| ೧. ಬಾನಸಂಚಾರಿಣಿ | ಝೇಂಕಾರ |
| ೨. ಭಿತ್ತಿ | ನೈಜತೆ |
| ೩. ಭ್ರಮರ | ಕವಿಕಲ್ಪನೆ |
| ೪. ಕೃತಕತೆ | ಕೋಗಿಲೆ |
| ೫. ಗಾನಲಹರಿ | ಗೋಡೆ |
| | ಸಿರಿಮುಡಿ |

**ಹೆಚ್ಚಿನ ಓದು**

✦ **ಬಿ. ಟಿ. ಲಲಿತಾನಾಯಕ್** ಅವರ **ಬಿದಿರುಮೆಳೆ ಕಂಟಿಯಲಿ** ಕವನ ಸಂಕಲನದ ಇತರ ಕವಿತೆಗಳನ್ನು ಓದಿ.

✦ ✦ ✦ ✦ ✦

©KTBS Not to be republished

ಪದ್ಯಪಾಠ – ೫

# ವಚನಾಮೃತ

[ವಚನಗಳು]

**ಅರ್ಥೈಸಿ – ಓದಿ**

| | | | | | |
|---|---|---|---|---|---|
| ತೇದಡೆ | ಸುವರ್ಣ | ಕಳಂಕ | ಹೀನಂಗಳೆಲ್ಲವ | ಮುಂದಿಳುಹು | ಸೀಳನಾಯಿ |
| ಸಮ್ಯಜ್ಞಾನ | ಕಾಯಕ | ನಿರತ | ಗುರುದರ್ಶನ | ಜಂಗಮ | ಹಂಗು |

**ನಿಗದಿತ ಮೂಲ ವಚನ**

ಚಂದನವ ಕಡಿದು ಕೊರೆದು ತೇದಡೆ — **– ಅಕ್ಕಮಹಾದೇವಿ**
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದ ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ,
ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೆ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ,
ನೀ ಕೊಂದಡೆಯೂ ಶರಣೆಂಬುದ ಮಾಣೆ.

* * *

ಕಾಗೆಯಮರಿ ಕೋಗಿಲೆಯಾಗಬಲ್ಲುದೆ? — **– ಅಮುಗೆರಾಯಮ್ಮ**
ಆಡಿನಮರಿ ಆನೆಯಾಗಬಲ್ಲುದೆ?
ಸೀಳ[ಳು]ನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ.

* * *

ಕಾಯಕದಲ್ಲಿ ನಿರತನಾದಡೆ, — **– ಆಯ್ದಕ್ಕಿಮಾರಯ್ಯ**
ಗುರುದರ್ಶನವಾದಡೂ ಮರೆಯಬೇಕು;
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು

©KTBS Not to be republished

# ಕರ್ತೃ – ಭಾವ – ಆಕರ

**ಅಕ್ಕಮಹಾದೇವಿಯ** ಕಾಲ ಕ್ರಿ. ಶ. ಸುಮಾರು ೧೧೬೦. ಶಿವಶರಣೆಯರಲ್ಲಿ ಪ್ರಮುಖಳು. ಈಕೆಯ ಜನ್ಮಸ್ಥಳ ಶಿಕಾರಿಪುರ ತಾಲೂಕಿನ ಉಡುತಡಿ. ಪ್ರಸಿದ್ಧ ವಚನಕಾರ್ತಿ ಹಾಗೂ ಕವಯಿತ್ರಿ. ಅಕ್ಕಮಹಾದೇವಿಯ ಅಂಕಿತ ಮತ್ತು ಆರಾಧ್ಯ ದೈವ ಚೆನ್ನಮಲ್ಲಿಕಾರ್ಜುನ. ಈಕೆ **ಯೋಗಾಂಗತ್ರಿವಿಧಿ, ಸೃಷ್ಟಿ ವಚನ ಮತ್ತು ಮಂತ್ರಗೋಪ್ಯ** ಮೊದಲಾದ ಲಘು ಕೃತಿಗಳನ್ನು ರಚಿಸಿದ್ದಾಳೆ. ಈವರೆಗೆ ಈಕೆಯ ೩೫೪ ವಚನಗಳು ಲಭ್ಯವಾಗಿವೆ.

ಪ್ರಕೃತಿಯಲ್ಲಿರುವ ಗಿಡಮರಗಳಾಗಲಿ ಯಾವುದೇ ವಸ್ತುವಾಗಲೀ ಸಹಜವಾಗಿ ತನ್ನದೇ ವಿಶೇಷ ಅಂಶವನ್ನು ಹೊಂದಿರುತ್ತದೆ. ಮಾನವ ಅವುಗಳನ್ನು ಹೇಗೆ ಬಳಸಿಕೊಂಡರೂ ಅವುಗಳಲ್ಲಿರುವ ಅಂಶಗಳು ಭೇದವೆಣಿಸದೆ ಸಹಜವಾಗಿಯೇ ಇರುವುದೆಂಬುವುದರ ಮೂಲಕ ಅಕ್ಕಮಹಾದೇವಿಯ ಭಕ್ತಿಭಾವ ಪ್ರಸ್ತುತ ವಚನದಲ್ಲಿ ಅಭಿವ್ಯಕ್ತಗೊಂಡಿದೆ.

**ಅಮುಗೆರಾಯಮ್ಮನ** ಕಾಲ ಕ್ರಿ. ಶ. ಸುಮಾರು ೧೧೬೦, ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಈಕೆ ಸೊನ್ನಲಿಗೆಯವಳು (ಈಗಿನ ಸೊಲ್ಲಾಪುರ), ಪತಿ ಅಮುಗೆ ದೇವಯ್ಯ. ನೆಯ್ಗೆ ಇವರ ಕಾಯಕ. ಈಕೆಯ ಅಂಕಿತ **ಅಮುಗೇಶ್ವರ. ಅಕ್ಕಮಹಾದೇವಿ, ಅಕ್ಕಮ್ಮ, ಆಯ್ದಕ್ಕಿ ಲಕ್ಕಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಅಕ್ಕನಾಗಮ್ಮ, ದುಗ್ಗಳೆ** ಮೊದಲಾದ ವಚನಕಾರ್ತಿಯರು ಈಕೆಯ ಸಮಕಾಲೀನರು. ತಮ್ಮ ವೈಚಾರಿಕ ಪ್ರಖರತೆ ಹಾಗೂ ಸಾಮಾಜಿಕ ಕಳಕಳಿಯಿಂದ ಜೀವನವನ್ನು ವಿಭಿನ್ನ ದೃಷ್ಟಿಕೋನದಿಂದ ದರ್ಶಿಸಿ, ಚಿಂತನಗೈದು ವಚನ ರಚನೆಯ ಮಹಾಕಾಯಕವನ್ನು ರೂಢಿಸಿಕೊಂಡರು. ಗಂಡು, ಹೆಣ್ಣೆಂಬ ಸಾಂಪ್ರದಾಯಿಕ ವರ್ಗೀಕರಣದ ಚೌಕಟ್ಟಿನಿಂದ ಹೊರಬಂದು ಸಮಾನತೆಯ ತತ್ವದ ಆಧಾರದಿಂದ ತನ್ನ ಧೋರಣೆಯ ಛಾಪನ್ನು ವಚನಗಳಲ್ಲಿ ಮೂಡಿಸಿದಳು.

ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿಗಳಲ್ಲಿ ವಿಶೇಷ ಗುಣಗಳು ಸಹಜವಾಗಿರುತ್ತವೆ. ಆದರೆ ಮಾನವ ಹೊಂದಿರುವ ವಿಶೇಷ ಗುಣವನ್ನು ಇತರ ಪ್ರಾಣಿ ಪಕ್ಷಿಗಳು ಅನುಕರಿಸಲು ಸಾಧ್ಯವಿಲ್ಲ. ಅದರಿಂದಾಗಿ ಮಾನವ ಅರಿವು, ಆಚಾರ, ಸಮ್ಯಜ್ಞಾನ ಇವುಗಳಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದೆಂಬುದನ್ನು ಅಮುಗೆರಾಯಮ್ಮ ವಚನಗಳ ಮೂಲಕ ಸ್ಪಷ್ಟಪಡಿಸಿದ್ದಾಳೆ.

**ಆಯ್ದಕ್ಕಿಮಾರಯ್ಯನ** ಕಾಲ ಕ್ರಿ. ಶ. ಸುಮಾರು ೧೧೬೦. ಶಿವಶರಣ ಹಾಗೂ ವಚನಕಾರ, ಈತನು ರಾಯಚೂರು ಜಿಲ್ಲೆಯ ಅಮರೇಶ್ವರದ **ಆಯ್ದಕ್ಕಿಲಕ್ಕಮ್ಮನ ಪತಿ.** ಆಯ್ದಕ್ಕಿಮಾರಯ್ಯನೆಂದೇ ಪ್ರಸಿದ್ಧ. ಈವರೆಗೆ ಈತನ ಸುಮಾರು **೩೨** ವಚನಗಳು ದೊರೆತಿವೆ. ಎಂಥ ಪರಿಸ್ಥಿತಿ ಎದುರಾದರೂ ಕಾಯಕವ ಬಿಡದೆ ಮಾಡಬೇಕು. ಕಾಯಕ ಮಾಡಿ ಬದುಕಬೇಕು, ಯಾಚನೆ ಮಾಡಬಾರದು ಹಾಗೂ ಕೂಡಿಡಬಾರದು ಎಂದು ಹೇಳುವ ಮೂಲಕ ಕಾಯಕಬದುಕಿನ ಮಹತ್ವವನ್ನು ಸಾರಿದ್ದಾರೆ, ಇಂತಹ ಆದರ್ಶವನ್ನು ಹೊಂದಿರುವ ಈತನ ಅಂಕಿತ **ಅಮರೇಶ್ವರಲಿಂಗ,** ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದುತಂದು ದಾಸೋಹ ಮಾಡುವುದೇ ಅವರ ಕಾಯಕವಾಗಿತ್ತು.

©KTBS Not to be republished

**ಕಾಯಕವೇ ಕೈಲಾಸ** ಎಂದು ಹೇಳುವ ಮೂಲಕ ಬಸವಣ್ಣ ಅವರು ಹೇಳಿದ ಕಾಯಕದ ಮಹತ್ವ ಆಯ್ದಕ್ಕಿಮಾರಯ್ಯ ಅವರ ವಚನಗಳಲ್ಲೂ ವ್ಯಕ್ತವಾಗಿದೆ. ಮನುಷ್ಯನಿಗೆ ಕಾಯಕವೇ ಮುಖ್ಯ. ಕಾಯಕದಲ್ಲೇ ಸರ್ವಸ್ವವನ್ನೂ ಕಾಣಬಹುದು. ಇದು ಶ್ರೇಷ್ಠ ಹಾಗೂ ಸಾರ್ವಕಾಲಿಕ ಸತ್ಯ. ಕರ್ತವ್ಯ ನಿಷ್ಠೆ ಮತ್ತು ಬದ್ಧತೆಯನ್ನು ಸಾರುವ ಈ ವಚನ ಇಂದಿಗೂ ಪ್ರಸ್ತುತ.

ಪ್ರಸ್ತುತ ಆರಿಸಿ ನಿಗದಿಪಡಿಸಿರುವ **ಅಕ್ಕಮಹಾದೇವಿ ಮತ್ತು ಅಮುಗೆರಾಯಮ್ಮ** ಅವರ ವಚನಗಳನ್ನು **ಶಿವಶರಣೆಯರ ವಚನ ಸಂಪುಟ – ೫ (ಸಮಗ್ರ ವಚನ ಸಂಪುಟ)** ಅನುಕ್ರಮವಾಗಿ ವಚನ ಸಂಖ್ಯೆ–೧೬೯ (ಪುಟ–೫೨) ಮತ್ತು ವಚನ ಸಂಖ್ಯೆ–೪೦ (ಪುಟ–೧೭೭) ಹಾಗೂ **ಆಯ್ದಕ್ಕಿಮಾರಯ್ಯ** ಅವರ ವಚನವನ್ನು **ಎಂ. ಎಂ. ಕಲಬುರ್ಗಿ** ಅವರು ಸಂಪಾದಿಸಿ ಪ್ರಕಟಿಸಿರುವ **ವಚನ ಸಂಪುಟ–೧** (ಸಮಗ್ರ ವಚನ ಸಂಪುಟ–೬) ವಚನ ಸಂಖ್ಯೆ–೭ (ಪುಟ–೩೬೯), ಕೃತಿಯಿಂದ ನಿಗದಿತ ವಚನವನ್ನು ಆಯ್ದುಕೊಂಡಿದೆ.

## ಪದ – ಪದ್ಯಾರ್ಥ

ಕಂಪು – ಸುವಾಸನೆ ; ಸುವರ್ಣ – ಚಿನ್ನ, ಬಂಗಾರ ; ಕಳಂಕ – ದೋಷ ; ಗಾಣ –ಎಣ್ಣೆ ತೆಗೆಯುವ ಯಂತ್ರ ; ಹೀನಂಗಳು – ಕೆಟ್ಟ ಕೆಲಸಗಳು ; ಹಾನಿ – ಕಷ್ಟ, ತೊಂದರೆ; ಮಾಣೆ – ಬಿಡೆನು

ಅರಿವು – ಜ್ಞಾನ, ತಿಳಿವಳಿಕೆ ; ಸೀಳುನಾಯಿ – ಕಾಡುನಾಯಿ (ಭಯಂಕರವಾದ ಒಂದು ಜಾತಿಯ ನಾಯಿ) ; ಆಚಾರ – ಒಳ್ಳೆಯ ನಡತೆ ; ನಾಮ – ಹೆಸರು ; ಗಾವಿಲ – ಹೆಡ್ಡ, ಗಾಂಪ

ಕಾಯಕ – ಕಾರ್ಯ, ಕೆಲಸ, ಉದ್ಯೋಗ ; ಜಂಗಮ –ಚಲನಶೀಲ, ಲೋಕ ಸಂಚಾರಿ, ವೀರ ಶೈವ ಧರ್ಮಾನುಸಾರ ವಿರಕ್ತ ; ಹಂಗು – ಋಣ

## ಪದ್ಯಾಧಾರ ಟಿಪ್ಪಣಿ

**ಚಂದನ :** ಒಂದು ಜಾತಿಯ ಮರ, ತೇದಾಗ ಸುಗಂಧವನ್ನು ಸೂಸುವುದು. ಇದು ಪರಿಮಳದೊಂದಿಗೆ ತಂಪನ್ನೂ ನೀಡುತ್ತದೆ. ಔಷಧೀಯ ಗುಣವುಳ್ಳದ್ದಾಗಿದೆ.

**ಸಮ್ಯಜ್ಞಾನ :** ಸುಜ್ಞಾನ, ಒಳ್ಳೆಯ ತಿಳಿವು, ಒಳ್ಳೆಯ ನಡತೆ, ಬುದ್ಧಿ–ಮನಸ್ಸುಗಳಿಗೆ ಹೊಳೆಯುವ ಒಳ್ಳೆಯ ಅನುಭವ ಮತ್ತು ಸತ್ಯದ ತಿಳಿವಳಿಕೆ, ಸದಾಚಾರ.

**ಆದಡೂ:** ಇದು 'ಆದರೂ' ಪದಕ್ಕೆ ಪರ್ಯಾಯವಾಗಿ ಬಳಸುತ್ತಿದ್ದ ಪದ.

**ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿಯಿತ್ತೆ? :** ಚಿನಿವಾರ ಚಿನ್ನವನ್ನು ಬೆಂಕಿಯಲ್ಲಿಟ್ಟು ಕಾಯಿಸಿ ಒರೆ ಕಡ್ಡಿಯಿಂದ ಒರೆಯುತ್ತಾನೆ. ಆಗ ಚಿನ್ನ ಫಳಫಳನೆ ಹೊಳೆಯುತ್ತದೆ. ತನ್ನನ್ನು ಕಾಯಿಸಿದ್ದರಿಂದ ಬೆಂದು ನೊಂದ ಚಿನ್ನ ಅನ್ಯ ಮಾರ್ಗವಿಲ್ಲದೆ ಸೋತು ಹೊಳಪು ಕೊಟ್ಟದ್ದಲ್ಲ. ಬೆಂಕಿಯಲ್ಲಿ ಕರಗಿ ಒರೆ ಕಡ್ಡಿಯಿಂದ ಒರೆದಾಗ ಫಳಫಳನೆ ಹೊಳೆಯುವುದು ಚಿನ್ನದ ಸಹಜ ಧರ್ಮ ಹಾಗೂ ಗುಣ.

©KTBS Not to be republished

## ಕಲಿತ ಪದ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಅಕ್ಕಮಹಾದೇವಿ ಯಾವುದನ್ನು ಹಾನಿ ಎಂದಿದ್ದಾಳೆ?

೨. ಅಕ್ಕಮಹಾದೇವಿಯ ಅಂಕಿತ ಯಾವುದು?

೩. ಕೋಗಿಲೆಯಾಗಲು ಯಾವುದಕ್ಕೆ ಸಾಧ್ಯವಿಲ್ಲ?

೪. ಸೀಳನಾಯಿ ಏನಾಗಲು ಸಾಧ್ಯವಿಲ್ಲ?

೫. ಅಮುಗೆರಾಯಮ್ಮ ಯಾರ ಮುಖ ನೋಡಲಾಗದೆಂದು ಹೇಳಿದ್ದಾಳೆ?

೬. ಅಮುಗೆರಾಯಮ್ಮ ಅವರ ಅಂಕಿತ ಯಾವುದು?

೭. ಕಾಯಕದಲ್ಲಿ ನಿರತವಾದರೆ ಯಾವುದನ್ನು ಮರೆಯಬೇಕು?

೮. ಜಂಗಮ ಮುಂದಿದ್ದರೂ ಯಾವುದನ್ನು ಹರಿಯಬೇಕು?

೯. ಆಯ್ದಕ್ಕಿಮಾರಯ್ಯನ ಪ್ರಕಾರ ಕೈಲಾಸವೆಂದರೆ ಯಾವುದು?

೧೦. ಆಯ್ದಕ್ಕಿಮಾರಯ್ಯನ ಅಂಕಿತ ಯಾವುದು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನಗಳಲ್ಲಿ ಹೇಗೆ ವ್ಯಕ್ತಗೊಂಡಿದೆ?

೨. ಅರಿವು, ಆಚಾರ, ಸಮ್ಯಜ್ಞಾನದ ಬಗ್ಗೆ ಅಮುಗೆರಾಯಮ್ಮ ಅವರ ಅನಿಸಿಕೆ ಏನು?

೩. ಆಯ್ದಕ್ಕಿಮಾರಯ್ಯ ಅವರು ಕಾಯಕದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ?

**ಇ. ಕೊಟ್ಟಿರುವ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ವಚನಾಮೃತದಲ್ಲಿ ಅಡಗಿರುವ ಭಕ್ತಿ–ಭಾವವನ್ನು ವಿವರಿಸಿ.

**ಈ. ಸಂದರ್ಭಾನುಸಾರ ವಿವರಿಸಿ.**

೧. “ನೀ ಕೊಂದಡೆಯೂ ಶರಣೆಂಬುದ ಮಾಣೆ”

೨. “ಕಾಗೆಮರಿ ಕೋಗಿಲೆಯಾಗಬಲ್ಲುದೆ?”

೩. “ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು”

೪. “ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು”

© KTBS Not to be republished

- **ವಸ್ತುನಿಷ್ಠ/ನಿಖರ ನಿರ್ಣಾಯ ಪ್ರಶ್ನೆಗಳು**

**ಕೊಟ್ಟಿರುವ ಪದಗಳಲ್ಲಿ ಸೂಕ್ತವಾದ ಪದವನ್ನು ಆರಿಸಿ ಬರೆಯಿರಿ.**

೧. ಈ ಮರವನ್ನು ಕಡಿದು ಕೊರೆದು ಅರೆದಾಗ ಕಂಪನ್ನು ನೀಡುವುದು ________

ಅ. ಮಾವು ಆ. ಬೇವು

ಇ. ಚಂದನ ಈ. ಅರಳಿ

೨. ಗಾವಿಲ ಪದದ ಅರ್ಥ________

ಅ. ಜಾಣ ಆ. ಮೇಧಾವಿ

ಇ. ಮೂಢ ಈ. ಪಂಡಿತ

೩. ಆಯ್ದಕ್ಕಿಮಾರಯ್ಯ ಅವರ ಅಂಕಿತ ________

ಅ. ಅಮುಗೇಶ್ವರ ಆ. ಅಮರೇಶ್ವರ

ಇ. ಸೋಮೇಶ್ವರ ಈ. ಗುಹೇಶ್ವರ

೪. ಆನೆ ಪದದ ಸಮಾನಾರ್ಥಕ ಪದ ________

ಅ. ಅಜ ಆ. ಗಜ

ಇ. ದ್ವಿಜ ಈ. ಜಲಜ

೫. ಜಂಗಮ ಪದದ ವಿರುದ್ಧಾರ್ಥಕ ಪದ ________

ಅ. ವಿರಕ್ತ ಆ. ವಿದ್ವಾಂಸ

ಇ. ಗುರು ಈ. ಸ್ಥಾವರ

- **ಪಠ್ಯಾಧಾರ ಚಟುವಟಿಕೆ**

**ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ಅಕ್ಕಮಹಾದೇವಿ ಅವರ ವಚನದ ಮೊದಲ (ಚಂದನವ __ __ __ __ __ __ ಸಿಹಿಯ ಬಿಟ್ಟಿತ್ತೆ?) ಆರು ಸಾಲುಗಳು

೨. ಅಮುಗೆರಾಯಮ್ಮ ಅವರ ವಚನದ ಮೊದಲ (ಕಾಗೆಯಮರಿ ___ ___ ___ ___ ಸಮ್ಯಜ್ಞಾನವನರಿಯದೆ) ನಾಲ್ಕು ಸಾಲುಗಳು

## ಹೆಚ್ಚಿನ ಓದು

✦ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಪ್ರಕಟಿಸಿರುವ **ಸಮಗ್ರ ವಚನ ಸಂಪುಟ**ದಲ್ಲಿರುವ ಕೆಲವು ಜನಪ್ರಿಯ ವಚನಗಳನ್ನು ಸಂಗ್ರಹಿಸಿ.

✦ ✦ ✦ ✦ ✦

©KTBS Not to be republished


# ಪದ್ಯಪಾಠ – ೬

## ಒಳ್ನುಡಿ
[ಸರ್ವಜ್ಞನ ವಚನ]

– ಸರ್ವಜ್ಞ

**ಅರ್ಥೈಸಿ – ಓದಿ**

| | | | | |
|---|---|---|---|---|
| ಕುತ್ತ | ಬಂದಕ್ಕು | ಕರತಲಾಮಲಕ | ಅದ್ವಾನ | ಅಜ್ಞಾನಿ |
| ತೆಂಕಲು | ಪಂಕಜಾರಾತಿ | ಭೋಂಕನೆ | ಇಮ್ಮೆಯುಂಡವ | ಯೋಗಿ |



©KTBS Not to be republished

**ನಿಗದಿತ ಮೂಲ ಸರ್ವಜ್ಞನ ವಚನ**

ತಂದೆತಾಯಿಗಳ ಘನ । ದಿಂದ ವಂದಿಸುವಂಗೆ ।
ಬಂದ ಕುತ್ತಗಳು ಬಯಲಾಗಿ ಸ್ವರ್ಗವದು ।
ಮುಂದೆ ಬಂದಕ್ಕು ಸರ್ವಜ್ಞ ॥೧॥

ಗುರುಗಳಿಗೆ ಹಿರಿಯರಿಗೆ । ಶಿರಬಾಗಿ ಎರಗಿದರೆ ।
ನರಸುರರು ಒಲಿದು ಸಿರಿಸುರಿದು ಕೈಲಾಸ ।
ಕರತಲಾಮಲಕ ಸರ್ವಜ್ಞ ॥೨॥

ವಿದ್ಯವೇ ತಾಯ್ತಂದೆ । ಬುದ್ಧಿ ಸೋದರಮಾವ ।
ಅದ್ವಾನಕಾದವನೆ ನಂಟ – ಸುಖದಿ ತಾ ।
ನಿರ್ದದೇ ರಾಜ್ಯ ಸರ್ವಜ್ಞ ॥೩॥

ಬಲ್ಲವರ ಒಡನಾಟ । ಬೆಲ್ಲವನು ಮೆದ್ದಂತೆ ।
ಅಲ್ಲದಹುದೆಂಬ ಅಜ್ಞಾನಿಯೊಡನಾಟ ।
ಕಲ್ಲುಹಾದಂತೆ ಸರ್ವಜ್ಞ ॥೪॥

ತೆಂಕಲು ಮುಗಿಲಡರೆ । ಶಂಕರನ ದೆಸೆ ಮಿಂಚೆ ।
ಪಂಕಜಾರಾತಿ ಗುಡಿಗಟ್ಟೆ – ಮಳೆಯು ತಾ ।
ಭೋಂಕನೆ ಬಕ್ಕು ಸರ್ವಜ್ಞ ॥೫॥

ಒಮ್ಮೆಯುಂಡವ ತ್ಯಾಗಿ । ಇಮ್ಮೆಯುಂಡವ ಭೋಗಿ ।
ಬಿಮ್ಮಗುಂಡವ ನೆರೆರೋಗಿ ಯೋಗಿ ತಾ ।
ಸುಮ್ಮಗಿರುತಿಹನು ಸರ್ವಜ್ಞ ॥೬॥

## ಕರ್ತೃ – ಭಾವ – ಆಕರ

ಸರ್ವಜ್ಞ ಕವಿಯ ಕಾಲ ಕ್ರಿ. ಶ. ಸುಮಾರು ೧೬ನೆಯ ಶತಮಾನ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಅಬಲೂರು ಗ್ರಾಮದವರು. ಅವರ ತ್ರಿಪದಿಗಳು ಸರ್ವಜ್ಞ ಅಂಕಿತದಿಂದ ಮುಕ್ತಾಯವಾಗುವವು. ಈ ತ್ರಿಪದಿಗಳು ಧರ್ಮ, ನೀತಿ, ಜ್ಞಾನ ಇವೇ ಮೊದಲಾದ ವಿಷಯಗಳನ್ನು ಒಳಗೊಂಡಿವೆ. ನಿರ್ದಾಕ್ಷಿಣ್ಯ, ನಿರ್ಭೀತಿ, ಸತ್ಯನಿಷ್ಠೆ, ಧರ್ಮಶ್ರದ್ಧೆ ಇವು ಅವರ ಜೀವನದ ಪ್ರಮುಖ ಅಂಶಗಳಾಗಿದ್ದವು. ಸರ್ವಜ್ಞ ಕನ್ನಡ ಪ್ರಜ್ಞೆಯ ಪ್ರತೀಕ. ಈ ದೃಷ್ಟಿಯಲ್ಲಿ ಅವರು ವಚನಕಾರರು ಮತ್ತು ಕೀರ್ತನಕಾರರನ್ನು ಹೋಲುತ್ತಾರೆ. ಅವರು ತಮ್ಮ ಕಾವ್ಯವನ್ನು ಸಾಮಾಜಿಕ ಅಸ್ತ್ರವಾಗಿ ಬಳಸಿದ್ದಾರೆ. ಪಂಡಿತರನ್ನು, ಪಾಮರರನ್ನು, ಮನರಂಜಿಸಿದ, ತಲೆದೂಗಿಸಿದ ಕನ್ನಡ ಸಾಹಿತ್ಯದಲ್ಲಿ ಚಿರಸ್ಮರಣೀಯವಾಗಿರುವ ಸರ್ವಜ್ಞವಚನಗಳು ಕನ್ನಡಿಗರ ನಾಲಗೆಯಲ್ಲಿ ಇಂದಿಗೂ ನಲಿಯುತ್ತಿವೆ.

**ಸರ್ವಜ್ಞನೆಂಬುವನು ಗರ್ವದಿಂದಾದವನೆ ಸರ್ವರೊಳಗೊಂದೊಂದು ನುಡಿಗಲಿತು ವಿದ್ಯದ ಪರ್ವತವೆ ಆದ ಸರ್ವಜ್ಞ** ಇದು ಇವರ ಜೀವನ ದೃಷ್ಟಿ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ – ನೀತಿಯನ್ನು ತಮ್ಮ ಸರಳ ವಚನಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಹಾಗೆಯೇ ವಿದ್ಯೆಯ ಮಹತ್ವವನ್ನು ಸಾರುವುದರೊಂದಿಗೆ ಜ್ಞಾನಿ–ಅಜ್ಞಾನಿಗಳ ಒಡನಾಟವನ್ನು ಉಪಮೆಗಳ ಮೂಲಕ ಉದಾಹರಿಸಿದ್ದಾರೆ. ಅವರ ಅಪಾರವಾದ ಲೋಕಾನುಭವಕ್ಕೆ ಅವರ ತ್ರಿಪದಿಗಳು ಸಾಕ್ಷಿಯಾಗಿವೆ. ಆಹಾರವೇ ಆರೋಗ್ಯದ ಮೂಲ ಎಂಬುದನ್ನು ಉತ್ತಮವಾಗಿ ನಿರೂಪಿಸಿದ್ದಾರೆ. ಇವೇ ಅವರ ವಚನಗಳ ಅಂತರಾಳದ ಸಾರ.

ಪ್ರಸ್ತುತ ಆರು ತ್ರಿಪದಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು (ಬೆಂಗಳೂರು) ಸಂಪಾದಿಸಿ ಪ್ರಕಟಿಸಿರುವ **ಸರ್ವಜ್ಞ ವಚನಗಳು** [ಪುಟ–೧೫೧ ತ್ರಿಪದಿ ೧೨೨೨, ೧೨೨೩, ಪುಟ–೧೬೪ ತ್ರಿಪದಿ ೧೩೨೧, ಪುಟ–೧೦೨ ತ್ರಿಪದಿ ೮೧೦, ಪುಟ–೧೯೪ ತ್ರಿಪದಿ ೧೫೭೯ ಮತ್ತು ಪುಟ–೨೪೭ ತ್ರಿಪದಿ ೨೦೨೩] ಕೃತಿಯಿಂದ ಆಯ್ದು ನಿಗದಿಪಡಿಸಿದೆ.

©KTBS Not to be republished

## ಪದ – ಪದ್ಯಾರ್ಥ

ಫನ – ಶ್ರೇಷ್ಠ, ಗೌರವ ; ವಂದಿಸು – ನಮಸ್ಕರಿಸು ; ಕುತ್ತ – ಸಂಕಟ; ಶಿರಬಾಗಿ – ತಲೆಬಾಗಿ; ಎರಗು – ನಮಸ್ಕರಿಸು ; ನರ – ಮನುಷ್ಯ ; ಸುರ – ದೇವತೆ ; ಕೈಲಾಸ – ಮುಕ್ತಿಧಾಮ ; ಸಿರಿ– ಸಂಪತ್ತು ; ಅದ್ವಾನ – ಆಪತ್ತು, ತಾಪತ್ರಯ ; ಬಲ್ಲವ – ಜ್ಞಾನಿ ; ಮೆದ್ದಂತೆ – ತಿಂದ ಹಾಗೆ ; ಹಾದಂತೆ– ಮೇಲೆಬಿದ್ದಂತೆ, ಎಡವಿದಂತೆ ; ತೆಂಕಣ – ದಕ್ಷಿಣ ; ಮುಗಿಲು – ಮೋಡ ; ಅಡರು – ಆವರಿಸು ; ಶಂಕರನದೆಸೆ –ಈಶಾನ್ಯ ದಿಕ್ಕು ; ಭೋಂಕನೆ–ಭೋರ್ಗರೆಯುತ್ತ ; ಒಮ್ಮೆ – ಒಂದು ಬಾರಿ; ಇಮ್ಮೆ – ಎರಡು ಬಾರಿ ; ಬಿಮ್ಮಗೆ – ಹೆಚ್ಚು ಬಾರಿ

## ಪದ್ಯಾಧಾರ ಟಿಪ್ಪಣಿ

**ಪಂಕಜಾರಾತಿ ಗುಡಿಗಟ್ಟೆ : ಪಂಕ** – ಕೆಸರು, **ಜ** – ಹುಟ್ಟಿದ್ದು, ಜನಿಸಿದ್ದು, **ಪಂಕಜ** – ಕೆಸರಿನಲ್ಲಿ ಹುಟ್ಟಿದ್ದು, ಕಮಲ, ತಾವರೆ, **ಅರಾತಿ** – ಶತ್ರು. **ಪಂಕಜಾರಾತಿ** – ಕಮಲದ ಶತ್ರು. ಕಮಲವು ಸೂರ್ಯೋದಯಕ್ಕೆ ಅರಳಿ ಸೂರ್ಯಾಸ್ತಮಾನದಲ್ಲಿ ಮುದುಡಿ ಮತ್ತೆ ಸೂರ್ಯೋದಯಕ್ಕೆ ಅರಳುವ ಹೂ. ಇದು ಚಂದ್ರಪ್ರಕಾಶವಿರುವಾಗ ಮುದುಡಿಕೊಂಡಿರುತ್ತದೆ. ಹಾಗಾಗಿ ಚಂದ್ರನು ಕಮಲದ ಶತ್ರು ಎಂಬುದು ಕವಿಯ ಭಾವ. ಗುಡಿ ಕಟ್ಟುವುದು ಎಂದರೆ ಚಂದ್ರಬಿಂಬದ ಸುತ್ತ ಪ್ರಭಾವಲಯ ಉಂಟಾಗುವುದು. ಜನಪದರು ಇದನ್ನು **ಚಂದ್ರನಿಗೆ ಕೊಡೆಹಿಡಿಯಲಾಗಿದೆ** ಎನ್ನುವರು. ಚಂದ್ರನಿಗೆ ಕೊಡೆಹಿಡಿದಾಗ ಮಳೆ ಬರುತ್ತದೆ ಎಂಬುದು ಕೃಷಿಕರ ಭಾವನೆ.

**ಕರತಲಾಮಲಕ :** ಕರತಲ – ಅಂಗೈ, ಆಮಲಕ – ನೆಲ್ಲಿಕಾಯಿ, ಅಂಗೈಯಲ್ಲಿರುವ ನೆಲ್ಲಿಕಾಯಿ ಎಂದರೆ ಸುಲಭ/ಸುಲಲಿತವಾಗಿ ಮಾಡಲು ಸಾಧ್ಯವಾದುದು, ಚೆನ್ನಾಗಿ ತಿಳಿದುದು

**ಯೋಗಿ :** ಯೋಗದಲ್ಲಿ ನಿರತನಾದವ, ನಿಯಮಬದ್ಧವಾಗಿ ಜೀವನ ನಡೆಸುವವ.

## ಕಲಿತ – ಪದ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ತಂದೆತಾಯಿಯರನ್ನು ವಂದಿಸುವವರಿಗೆ ಯಾವ ಫಲ ದೊರೆಯುತ್ತದೆ?

೨. ಗುರುಹಿರಿಯರಿಗೆ ವಂದಿಸಿದರೆ ನರಸುರರು ಏನನ್ನು ನೀಡುವರು?

೩. ನಿಜವಾದ ನಂಟ ಯಾರು?

೪. ವಿದ್ಯೆ ಮತ್ತು ಬುದ್ಧಿಯನ್ನು ಯಾವುದಕ್ಕೆ ಹೋಲಿಸಿದೆ?

© KTBS Not to be republished

೫. ಬಲ್ಲವರ ಒಡನಾಟ ಹೇಗಿರುತ್ತದೆ?

೬. ಸರ್ವಜ್ಞನ ಪ್ರಕಾರ ಭೋಗಿ ಯಾರು?

೭. ಸರ್ವಜ್ಞ ನೆರೆರೋಗಿಯೆಂದು ಯಾರನ್ನು ಕರೆದಿದ್ದಾರೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ತಂದೆತಾಯಿ ಹಾಗೂ ಗುರುಹಿರಿಯರನ್ನು ಗೌರವಿಸುವ ಬಗ್ಗೆ ಸರ್ವಜ್ಞನ ಅಭಿಪ್ರಾಯವೇನು?

೨. ಜ್ಞಾನಿ–ಅಜ್ಞಾನಿಗಳ ಒಡನಾಟ ಹೇಗಿರುತ್ತದೆ?

೩. ಸರ್ವಜ್ಞನ ಪ್ರಕಾರ ಮಳೆ ಬರುವ ಸೂಚನೆಗಳಾವುವು?

೪. ಸರ್ವಜ್ಞ ಆರೋಗ್ಯ ಮತ್ತು ಆಹಾರದ ಸಂಬಂಧವನ್ನು ಹೇಗೆ ವಿವರಿಸಿದ್ದಾರೆ?

**ಇ. ಕೊಟ್ಟಿರುವ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. 'ಒಳ್ನುಡಿ' ಪದ್ಯ ಪಾಠದ ಆಶಯವನ್ನು ವಿವರಿಸಿ

**ಈ. ಸಂದರ್ಭಾನುಸಾರ ವಿವರಿಸಿ.**

೧. "ಬಂದ ಕುತ್ತಗಳು ಬಯಲಾಗಿ ಸ್ವರ್ಗವದು ಮುಂದೆ ಬಂದಕ್ಕು"

೨. "ಕೈಲಾಸ ಕರತಲಾಮಲಕ ಸರ್ವಜ್ಞ"

೩. "ಅದ್ವಾನಕಾದವನೆ ನಂಟ"

೪. "ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ"

೫. "ಬಿಮ್ಮಗುಂಡವ ನೆರೆರೋಗಿ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಕೊಟ್ಟಿರುವ ಪದಗಳಲ್ಲಿ ಸೂಕ್ತವಾದ ಉತ್ತರವನ್ನು ಕ್ರಮಾಕ್ಷರದೊಂದಿಗೆ ಆರಿಸಿ ಬರೆಯಿರಿ.**

೧. ಇವರನ್ನು ಗೌರವದಿಂದ ವಂದಿಸಿದರೆ ಬಂದ ಕಷ್ಟಗಳು ಪರಿಹಾರವಾಗುತ್ತವೆ: ________

ಅ. ಗುರುಗಳನ್ನು ಆ. ತಂದೆತಾಯಿಯರನ್ನು

ಇ. ಅಣ್ಣಂದಿರನ್ನು ಈ. ಹಿರಿಯರನ್ನು

೨. ಇದನ್ನು ಸೋದರಮಾವನಿಗೆ ಹೋಲಿಸಲಾಗಿದೆ: __________

ಅ. ವಿದ್ಯೆ ಆ. ಅಹಂಕಾರ

ಇ. ಬುದ್ಧಿ ಈ. ಅದ್ವಾನ

೩. ದಿನಕ್ಕೆ ಒಂದುಬಾರಿ ಊಟ ಮಾಡುವವನನ್ನು ಸರ್ವಜ್ಞನು ಹೀಗೆಂದ: _________

©KTBS Not to be republished

ಅ. ಜೋಗಿ ಆ. ಭೋಗಿ

ಇ. ರೋಗಿ ಈ. ತ್ಯಾಗಿ

೪. ಪಂಕಜದ ಶತ್ರು ಎಂದು ಗುರುತಿಸಲಾದುದು ________

ಅ. ಚಂದ್ರನನ್ನು ಆ. ನಕ್ಷತ್ರವನ್ನು

ಇ. ಸೂರ್ಯನನ್ನು ಈ. ದೇವೇಂದ್ರನನ್ನು

೫. ಬಲ್ಲವರ ಒಡನಾಟವನ್ನು ಇದಕ್ಕೆ ಹೋಲಿಸಿ ಹೇಳಲಾಗಿದೆ: __________

ಅ. ಬೆಲ್ಲಕ್ಕೆ ಆ. ಸಿಹಿ ತಿಂಡಿಗೆ

ಇ. ಸಕ್ಕರೆಗೆ ಈ. ಕಲ್ಲುಸಕ್ಕರೆಗೆ

## ಭಾಷಾಭ್ಯಾಸ

### ಸೈದ್ಧಾಂತಿಕ ಭಾಷಾಭ್ಯಾಸ

**ಅಲಂಕಾರ : ಪರಿಚಯಾತ್ಮಕ ವಿವರ**

ಮನುಷ್ಯ ತನ್ನ ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ವೈವಿಧ್ಯಪೂರ್ಣ ಬಟ್ಟೆ, ಆಭರಣ ಇತ್ಯಾದಿ ಸೌಂದರ್ಯ ಸಾಧನಗಳನ್ನು ಬಳಸುತ್ತಾನೆ. ಹೀಗೆ ಅಲಂಕಾರ ಮಾಡಿಕೊಂಡ ವ್ಯಕ್ತಿ ಇತರರಿಂದ ಆಕರ್ಷಿಸಲ್ಪಡುತ್ತಾನೆ. ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅಲಂಕಾರ ಮಾಡಿಕೊಂಡಂತೆ ಮನುಷ್ಯ ತನ್ನ ಮಾತೂ ಇತರರಿಗೆ ಇಂಪಾಗಿ ಕೇಳುವಂತೆ ಮಾಡುವ ಸಲುವಾಗಿ ಚಮತ್ಕಾರದಿಂದ ಮಾತನಾಡುತ್ತಾನೆ. ಹಾಗಾಗಿ – **ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ**. ಅಲಂಕಾರದಲ್ಲಿ **ಶಬ್ದಾಲಂಕಾರ** ಮತ್ತು **ಅರ್ಥಾಲಂಕಾರ** ಎಂಬ ಎರಡು ವಿಧಗಳಿವೆ.

**ಶಬ್ದಾಂಕಾರ : ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಿದರೆ ಅದನ್ನು ಶಬ್ದಾಲಂಕಾರ** ಎನ್ನುತ್ತಾರೆ. ಇದರಲ್ಲಿ **ಅನುಪ್ರಾಸ, ಯಮಕ** ಮತ್ತು **ಚಿತ್ರ ಕವಿತ್ವ** ಎಂದು ಪ್ರಧಾನವಾಗಿ **ಮೂರು** ವಿಧಗಳಿವೆ. **ಅನುಪ್ರಾಸವನ್ನು ವೃತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂದು ವಿಭಾಗಿಸಲಾಗಿದೆ.

**ಅರ್ಥಾಲಂಕಾರ : ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎನ್ನುತ್ತಾರೆ**. ಇದರಲ್ಲಿ ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಇವುಗಳಲ್ಲಿ ಬರುವ **ಉಪಮೇಯ ಉಪಮಾನ**ಗಳ ಸಹಾಯದಿಂದ ಅದು ಯಾವ ಅಲಂಕಾರ ಎಂದು ನಿರ್ಧರಿಸಲಾಗುವುದು.

**ಉಪಮೇಯ** : ಉಪಮೇಯವನ್ನು **ವರ್ಣ್ಯ** ಎಂತಲೂ ಕರೆಯುವರು. **ಅಲಂಕಾರಿಕ ವಾಕ್ಯದಲ್ಲಿ ಯಾವ ವಸ್ತುವನ್ನು ಕುರಿತು ವರ್ಣಿಸಲಾಗುತ್ತದೆಯೋ. ಅದೇ ವರ್ಣ್ಯ** ಅಥವಾ **ಉಪಮೇಯ.**

**ಉಪಮಾನ** : ಉಪಮಾನವನ್ನು **ಅವರ್ಣ್ಯ** ಎಂತಲೂ ಕರೆಯುವರು. **ಯಾವ ವಸ್ತುವನ್ನು ಆಧರಿಸಿ ಅಥವಾ ಮಾನವಾಗಿಟ್ಟುಕೊಂಡು ವರ್ಣಿಸಲಾಗುತ್ತದೆಯೋ ಅದೇ ಅವರ್ಣ್ಯ** ಅಥವಾ **ಉಪಮಾನ.**

**ಉಪಮಾಲಂಕಾರ : ಉಪಮಾ** ಎಂದರೆ **ಹೋಲಿಕೆ** ಎಂದರ್ಥ. **ಯಾವ ಅಲಂಕಾರದಲ್ಲಿ ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುತ್ತದೆಯೋ ಆ ಅಲಂಕಾರವೇ ಉಪಮಾಲಂಕಾರ.**



©KTBS Not to be republished

**ಉದಾ : ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.** ಇಲ್ಲಿ ಮನೋರಮೆಯ ಹಣೆ ಅರ್ಧಚಂದ್ರಾಕೃತಿಯಲ್ಲಿದೆ ಎಂದು ಹೇಳುವ ಬದಲಿಗೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು, ಎಂದು ಹೇಳಲಾಗಿದೆ.

- ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ **ಮನೋರಮೆಯ ಹಣೆ** ಎಂಬುದು **ಉಪಮೇಯವಾಯ್ತು.**
- ಬಾಲಚಂದ್ರನನ್ನು ಆಧಾರವಾಗಿಟ್ಟುಕೊಂಡು ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ **ಬಾಲಚಂದ್ರ** ಎಂಬುದು **ಉಪಮಾನವಾಯ್ತು.**
- ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳುವಂತಹ **ಅಂತೆ, ವೋಲ್, ವೊಲ್** ಮುಂತಾದ ಪದಗಳೇ **ವಾಚಕ ಪದಗಳು.** ಇಲ್ಲಿ **ಅಂತೆ,** ಎಂಬುದು **ವಾಚಕ** ಪದ.
- ಉಪಮೇಯಕ್ಕೂ ಉಪಮಾನಕ್ಕೂ ಸಮಾನವಾಗಿ ಹೊಂದಿಕೆಯಾಗುವ ಕ್ರಿಯಾಪದವೇ **ಸಮಾನಧರ್ಮ.** ಇಲ್ಲಿ **ಆಕರ್ಷಣೀಯವಾಗಿತ್ತು** ಎಂಬುದು **ಸಮಾನಧರ್ಮ.**
- ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳಿರುವುದರಿಂದ ಇದು **ಉಪಮಾಲಂಕಾರ.**

**ಉಪಮಾಲಂಕಾರದಲ್ಲಿ ಪೂರ್ಣೋಪಮಾಲಂಕಾರ, ಲುಪ್ತೋಪಮಾಲಂಕಾರ** ಎಂಬ ಎರಡು ವಿಧಗಳಿವೆ.

**ಪೂರ್ಣೋಪಮಾಲಂಕಾರ :** ಯಾವ ಉಪಮಾಲಂಕಾರದಲ್ಲಿ **ಉಪಮೇಯ, ಉಪಮಾನ, ವಾಚಕ ಪದ, ಸಮಾನಧರ್ಮ** ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದೇ **ಪೂರ್ಣೋಪಮಾಲಂಕಾರ.**

**ಉದಾ.: ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರ್ವೆವರು ಬಾಲಕರು ಬಿದ್ದರು.**

**ಉಪಮೇಯ** : ಭರತಕುಲದ ನೂರ್ವೆವರು ಬಾಲಕರು
**ಉಪಮಾನ** : ಬಿರುಗಾಳಿಗೆ ತುತ್ತಾದ ಮರಗಿಡಗಳು
**ವಾಚಕಪದ** : ಅಂತೆ
**ಸಮಾನಧರ್ಮ** : ಬೀಳುವುದು
**ಅಲಂಕಾರ** : ಉಪಮಾಲಂಕಾರ (ಪೂರ್ಣೋಪಮಾಲಂಕಾರ)
**ಸಮನ್ವಯ** : **ಉಪಮೇಯ**ವಾದ ಭರತಕುಲದ ನೂರ್ವೆವರು ಬಾಲಕರು ಬಿದ್ದಿರುವುದನ್ನು **ಉಪಮಾನ** ವಾದ ಬಿರುಗಾಳಿಗೆ ತುತ್ತಾದ ಮರಗಿಡಗಳಿಗೆ ಹೋಲಿಸಿರುವುದರಿಂದ ಇದು **ಉಪಮಾಲಂಕಾರ.**

ಈ ಅಲಂಕಾರದಲ್ಲಿ **ಉಪಮೇಯ, ಉಪಮಾನ, ವಾಚಕಪದ, ಸಮಾನಧರ್ಮ** ಎಂಬ ನಾಲ್ಕು ಅಂಶಗಳಿರುವುದರಿಂದ ಇದು **ಪೂರ್ಣೋಪಮಾಲಂಕಾರವೂ** ಹೌದು.

**ಲುಪ್ತೋಪಮಾಲಂಕಾರ:** ಇದು ಉಪಮಾಲಂಕಾರದ ಇನ್ನೊಂದು ಪ್ರಭೇದ. ಪೂರ್ಣೋಪಮಾಲಂಕಾರವಾಗಬೇಕಾದರೆ ಇರಬೇಕಾದ ನಾಲ್ಕು ಅಂಶಗಳಲ್ಲಿ ಯಾವುದಾದರೂ ಅಂಶ ಇಲ್ಲವಾದರೆ ಅದು **ಲುಪ್ತೋಪಮಾಲಂಕಾರ**ವಾಗುತ್ತದೆ. ಯಾವ ಅಂಶ ಲುಪ್ತವಾಗಿದೆಯೋ ಅದೇ ಹೆಸರಿನಿಂದ ಆ ಅಲಂಕಾರವನ್ನು ಕರೆಯಲಾಗುತ್ತದೆ. ಅಂದರೆ ಉಪಮೇಯ ಇಲ್ಲವಾದರೆ ಅದು **ಉಪಮೇಯ ಲುಪ್ತೋಮಾಲಂಕಾರ.** ಹಾಗೆಯೇ

ಉಪಮಾನಲುಪ್ತೋಪಮಾಲಂಕಾರ, ವಾಚಕಲುಪ್ತೋಪಮಾಲಂಕಾರ, ಧರ್ಮಲುಪ್ತೋಪಮಾಲಂಕಾರ, ವಾಚಕಧರ್ಮಲುಪ್ತೋಪಮಾಲಂಕಾರ ಇತ್ಯಾದಿ ಲುಪ್ತೋಪಮಾಲಂಕಾರಗಳಿವೆ.

**● ಅಭ್ಯಾಸ – ಅರಿವು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಅಲಂಕಾರ ಎಂದರೇನು?

೨. ಉಪಮಾಲಂಕಾರ ಎಂದರೇನು? ನಿದರ್ಶನ ಸಹಿತ ವಿವರಿಸಿ.

೩. ಪೂರ್ಣೋಪಮಾಲಂಕಾರ ಎಂದರೇನು? ವಿವರಣೆ ನೀಡಿ.

**● ಪ್ರಾಯೋಗಿಕ ಭಾಷಾಭ್ಯಾಸ**

**ಅ. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯ ಮಾಡಿ.**

೧. ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ

೨. ಅಜ್ಞಾನಿಯೊಡನಾಟ ಕಲ್ಲುಹಾದಂತೆ

**ಆ. ಒಳ್ನುಡಿ ಪದ್ಯದಲ್ಲಿ ಬಂದಿರುವ ಪ್ರಾಸ ಯಾವುದು?**

**ಇ. ಒಳ್ನುಡಿ ಪದ್ಯದ ಒಂದನೆಯ ಚರಣದಲ್ಲಿ ಪ್ರಾಸಾಕ್ಷರವಿರುವ ಪದಗಳನ್ನು ಬರೆಯಿರಿ.**

**ಈ. ಮೂಡಣ, ಪಡುವಣ ಇಂತಹ ದಿಗ್ವಾಚಕ ಪದಗಳನ್ನು ಬರೆಯಿರಿ.**

**ಉ. ತ್ಯಾಗಿ, ಭೋಗಿ, ರೋಗಿ – ಈ ರೀತಿಯ ಐದು ಅಂತ್ಯಪ್ರಾಸ ಪದಗಳನ್ನು ಬರೆಯಿರಿ.**

**● ಪಠ್ಯಾಧಾರ ಚಟುವಟಿಕೆ**

**ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ಪ್ರಸ್ತುತ ಪದ್ಯಪಾಠದ ಒಂದು (ತಂದೆತಾಯಿಗಳ ___ ___ ___ ಸರ್ವಜ್ಞ – ಮೂರು ಸಾಲು) ಮತ್ತು ಮೂರನೆಯ (ವಿದ್ಯವೇ ____ ____ ____ ಸರ್ವಜ್ಞ – ಮೂರು ಸಾಲು) ಚರಣಗಳು

## ಹೆಚ್ಚಿನ ಓದು

✦ **ಡಾ. ಎಲ್. ಬಸವರಾಜು** ಅವರು ಸಂಪಾದಿಸಿರುವ **ಸರ್ವಜ್ಞನ ವಚನಗಳು** ಕೃತಿಯನ್ನು ಓದಿ

✦ **ಡಾ. ರಾಗೌ** ಅವರು ಸಂಪಾದಿಸಿರುವ **ಸರ್ವಜ್ಞನ ವಚನಗಳು** ಪುಸ್ತಕವನ್ನು ಓದಿ

✦ ✦ ✦ ✦ ✦

© KTBS Not to be republished

## ಪದ್ಯಪಾಠ – ೭

# ಜೀವನ ದರ್ಶನ

[ದಾಸರ ಪದ]

**ಅರ್ಥೈಸಿ – ಓದಿ**

| | | | | | |
|---|---|---|---|---|---|
| ಬಯಸುವವಗೆ | ಮತಿವಂತ | ಸುಸಂಗ | ದುಸ್ಸಂಗ | ಕುಟಿಲ | ಕುಜನ |
| ಸಟೆ | ಘಾತಕತನ | ಬಿಸಜನಾಭ | ವಸುಧೆ | ಜಗವಲ್ಲಭ | ತತ್ತ್ವೇಂದ್ರಿಯ |

**ನಿಗದಿತ ಮೂಲ ದಾಸರ ಪದ – ಪದ್ಯ**

**– ಶ್ರೀಪಾದರಾಜ**

ಭಕ್ತಿ ಬೇಕು ವಿರಕ್ತಿ ಬೇಕು ಸರ್ವ
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವವಗೆ ॥ಪ॥

ಸತಿ ಅನುಕೂಲ ಬೇಕು ಸುತನಲ್ಲಿ ಗುಣಬೇಕು
ಮತಿವಂತನಾಗಬೇಕು ಮತ ಒಂದಾಗಿರಬೇಕು ॥೧॥

ಜಪದ ಜಾಣುವೆ ಬೇಕು ತಪದ ನೇಮವೆ ಬೇಕು
ಉಪವಾಸ ವ್ರತ ಬೇಕು ಉಪಶಾಂತವಿರಬೇಕು ॥೨॥

ಸುಸಂಗ ಹಿಡಿಯಲೆಬೇಕು ದುಸ್ಸಂಗ ಬಿಡಲಿಬೇಕು
ರಂಗವಿಠಲನ್ನ ಬಿಡದೆ ನೆರೆ ನಂಬಿರಬೇಕು ॥೩॥

**– ಪುರಂದರದಾಸ**

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದರೇನು ಫಲ ॥ಪ॥

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಮನದಲಿ
ವಿಠಲನ ನೆನೆದರೇನು ಫಲ ॥೧॥

ಮಾತಾ–ಪಿತರನು ಬಳಲಿಸುವಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ॥೨॥



©KTBS Not to be republished

ಕಪಟತನದಲಿ ಕಾಡುವರೆಲ್ಲರು
ಜಪಗಳ ಮಾಡಿದರೇನು ಫಲ
ಕುಪಿತ ಬುದ್ಧಿಯನು ಬಿಡದೆ ನಿರಂತರ
ಉಪವಾಸ ಮಾಡಿದರೇನು ಫಲ ॥೩॥

ಹೀನಕೃತ್ಯಗಳ ಮಾಡುತ ನದಿಯಲಿ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ ॥೪॥

– ಕನಕದಾಸ

ಕುಲ ಕುಲ ಕುಲವೆನ್ನುತಿಹರು
ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ ॥ಪ॥

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣಲಿಲ್ಲವೆ? ॥೧॥

ಮೃಗಗಳ ಮೈಯಲ್ಲಿ ಪುಟ್ಟಲು ಕಸ್ತೂರಿ
ತೆಗೆದು ಪೂಸುವರು ದ್ವಿಜರೆಲ್ಲರು
ಒಗೆಯಿಂದ ನಾರಾಯಣನಾವ ಕುಲವಯ್ಯ
ಜಗವಲ್ಲಭನಾವ ಕುಲ ಪೇಳಿರಯ್ಯ ॥೨॥

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ ಮಹಾತ್ಮನು ನೆಲೆಯಾದಿಕೇಶವ
ಯಾತರ ಕುಲವಯ್ಯ ಆತನೊಲಿದ ಮೇಲೆ ॥೩॥

## ಕರ್ತೃ – ಭಾವ – ಆಕರ

**ಶ್ರೀಪಾದರಾಜ :** ಕಾಲ ಸುಮಾರು ಕ್ರಿ. ಶ. ೧೪೦೪ ರಿಂದ ೧೫೦೨. ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ದ್ವೈತತತ್ವದ ಪ್ರತಿಪಾದಕರು ಹಾಗೂ ಆದ್ಯಕೀರ್ತನಕಾರರು. ಚನ್ನಪಟ್ಟಣ ತಾಲೂಕಿನ ಅಬ್ಬೂರು ಗ್ರಾಮದಲ್ಲಿ ಹುಟ್ಟಿದರು. ತಂದೆ ಶೇಷಗಿರಿಯಪ್ಪ, ತಾಯಿ ಗಿರಿಯಮ್ಮ. ಶ್ರೀರಂಗ ಕ್ಷೇತ್ರದ ಶ್ರೀ ಸ್ವರ್ಣವರ್ಣತೀರ್ಥರಿಂದ ಸಂನ್ಯಾಸ ದೀಕ್ಷೆ ಪಡೆದು ಅಲ್ಲಿಯೇ ಪೀಠಾಧಿಪತಿಗಳಾಗಿದ್ದು; ತದನಂತರ ಕೋಲಾರ ಜಿಲ್ಲೆ ಮುಳಬಾಗಿಲಿನ ನರಸಿಂಹತೀರ್ಥದಲ್ಲಿ ನೆಲೆಸಿ ಬೃಂದಾವನಸ್ಥರಾದರು. ಇವರ ಅಂಕಿತ **ಶ್ರೀರಂಗವಿಠ್ಠಲ**. ಇವರ ಶಿಷ್ಯರಲ್ಲಿ ಪ್ರಮುಖರು ಶ್ರೀವ್ಯಾಸರಾಯರು. ಶ್ರೀಪಾದರಾಜ ಅವರ **೮೨ ಕೀರ್ತನೆಗಳು, ೩ ಸುಳಾದಿಗಳು, ೧೫ ಉಗಾಭೋಗಗಳು, ೧ ದಂಡಕ** ಲಭ್ಯವಿದೆ.

ಮಾನವನ ಜೀವನದ ಮುಖ್ಯ ಗುರಿ ಮುಕ್ತಿ ಸಂಪಾದನೆ. ಹರಿದಾಸರು ಭಕ್ತಿಯ ಮೂಲಕ ಮುಕ್ತಿ ಪಡೆಯುವ ಮಾರ್ಗವನ್ನು ತೋರಿದರು. ಪ್ರಕೃತ ಪದ್ಯದಲ್ಲಿ ಮುಕ್ತಿಯನ್ನು ಬಯಸುವವನಿಗೆ ವಾತಾವರಣ ಹೇಗೆ ಅನುಕೂಲಕರವಾಗಿರಬೇಕು ಎಂಬ ಚಿತ್ರಣವಿದೆ. ಇವರ ಕೀರ್ತನೆಗಳಲ್ಲಿ ಆತ್ಮಶೋಧನೆ, ಭಗವಂತನ ಆರಾಧನೆ, ದ್ವೈತತತ್ವ ಪ್ರತಿಪಾದನೆ ಮತ್ತು ಲೋಕನೀತಿ, ನೀತಿಬೋಧನೆಗಳು ಅಡಕವಾಗಿವೆ. **ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ** ಕೀರ್ತನೆ ಜನಪ್ರಿಯವಾದದ್ದು. ಶ್ರೀಯುತರ ಕೀರ್ತನೆಗಳಲ್ಲಿ ದೇಸಿಯತೆಯ ಸೊಗಡಿದೆ.

ಶ್ರೀಪಾದರಾಜರ ಪ್ರಸಕ್ತ ಕೀರ್ತನೆಯನ್ನು ಡಾ. ಜಿ. ವರದರಾಜರಾವ್ ಅವರು ಸಂಪಾದಿಸಿರುವ **ಶ್ರೀಪಾದರಾಜರ ಕೃತಿಗಳು** (ಪುಟ ೪೦) ಸಂಕಲನದಿಂದ ಆರಿಸಲಾಗಿದೆ.

**ಪುರಂದರದಾಸ :** ಹರಿದಾಸ ಸಾಹಿತ್ಯದ ಅಶ್ವಿನಿದೇವತೆಗಳಲ್ಲಿ ಒಬ್ಬರು. ಈಗಿನ ಮಹಾರಾಷ್ಟ್ರದ ಪುರಂದರಗಡದಲ್ಲಿ ಕ್ರಿ.ಶ. ಸುಮಾರು ೧೪೮೦ ರಲ್ಲಿ ಜನಿಸಿದರು. ತಂದೆ ವರದಪ್ಪ ನಾಯಕ, ತಾಯಿ ಸರಸ್ವತಿ. ಪೂರ್ವದ ಹೆಸರು ಶ್ರೀನಿವಾಸನಾಯಕ. ಆಭರಣ ವ್ಯಾಪಾರಿಯಾಗಿದ್ದ ಇವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯತಾಳಿದರು. ಹರಿಭಕ್ತನಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. **ದಾಸರೆಂದರೆ ಪುರಂದರದಾಸರಯ್ಯ** ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಕೆಗೆ ಪಾತ್ರರಾದವರು. ಪುರಂದರದಾಸರು ಕರ್ನಾಟಕ ಸಂಗೀತದ **ಪಿಳ್ಳಾರಿಗೀತೆ**ಗಳನ್ನು ರಚಿಸಿ **ಕರ್ನಾಟಕಸಂಗೀತದ ಪಿತಾಮಹ**ರೆನಿಸಿಕೊಂಡರು. ಇವರ **ಅಂಕಿತ ಪುರಂದರವಿಠಲ**.

ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ. ಯಾವುದೇ ಕೆಲಸ ನಿರ್ವಹಿಸಿದರೂ ಅದರಿಂದ ಫಲಾ–ಫಲವನ್ನು ಅಪೇಕ್ಷಿಸಬಾರದು. ನಿರ್ಮಲಭಕ್ತಿ ಇಲ್ಲದಿದ್ದರೆ ಮಾಡಿದ ಕೆಲಸ ಕೂಡ ನಿಷ್ಫಲವಾಗುತ್ತದೆ ಎಂಬುದನ್ನು ಪುರಂದರದಾಸರು ಸರಳ ಉದಾಹರಣೆಗಳ ಮೂಲಕ ನಿರೂಪಿಸಿದ್ದಾರೆ.

**ಪುರಂದರದಾಸ**ರ ಪ್ರಕೃತ ಕೀರ್ತನೆಯನ್ನು ಶ್ರೀಕಾವ್ಯಪ್ರೇಮಿ ಅವರು ಸಂಪಾದಿಸಿ ಪ್ರಕಟಿಸಿರುವ **ಪುರಂದರದಾಸರ ಹಾಡುಗಳು** ಸಂಕಲನದಿಂದ (ಪುಟ–೧೮೨) ಆಯ್ದುಕೊಳ್ಳಲಾಗಿದೆ.

**ಕನಕದಾಸ :** ಹಾವೇರಿ ಜಿಲ್ಲೆಯ ಬಾಡ ಗ್ರಾಮದವರು. ಕಾಲ ಕ್ರಿ. ಶ. ಸುಮಾರು ೧೫೦೮. ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ಇವರ ಮೊದಲ ಹೆಸರು ತಿಮ್ಮಪ್ಪನಾಯಕ. ವಿಜಯನಗರ ಸಾಮ್ರಾಜ್ಯದ ನೆರಳಲ್ಲಿ ಸಣ್ಣ ಮಂಡಲವೊಂದರ ಡಣಾಯಕರಾಗಿದ್ದರು. ಡಣಾಯಕರಾಗಿದ್ದ ತಿಮ್ಮಪ್ಪನಾಯಕನಿಗೆ ದೊರೆತ ಕೊಪ್ಪರಿಗೆ ಬಂಗಾರವನ್ನು ಬಡವರಿಗೆ ದಾನ ಮಾಡಿದ್ದರಿಂದ ಕನಕದಾಸರಾದರು. ಸಂತ ಕವಿ. ಹರಿದಾಸ ಪರಂಪರೆಯ ಮತ್ತು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರು. ಯುಗ ಪ್ರವರ್ತಕ, ಕ್ರಾಂತಿಕಾರ ಹಾಗೂ ದಾಸಶ್ರೇಷ್ಠರು. ಇವರ ವಿಶಿಷ್ಟ ಗುಣಗಳಾದ ಭಕ್ತಿ, ವೈರಾಗ್ಯ, ಕಾವ್ಯ ರಚನಾ ಪ್ರತಿಭೆಗಳು ವ್ಯಾಸರಾಯರ ಶಿಷ್ಯರಾಗುವಂತೆ ಮಾಡಿತು. ಕನಕದಾಸರ ಆರಾಧ್ಯದೈವ ಮತ್ತು ಅಂಕಿತ **ಕಾಗಿನೆಲೆ ಆದಿಕೇಶವ**. ಇವರು ರಚಿಸಿದ ಕೃತಿಗಳು **ಹರಿಭಕ್ತಿಸಾರ, ರಾಮಧಾನ್ಯಚರಿತೆ, ಮೋಹನ ತರಂಗಿಣಿ** ಮತ್ತು **ನಳಚರಿತೆ.**

೧೨ ನೆಯ ಶತಮಾನದಲ್ಲಿಯೇ ಜಾತಿಪದ್ಧತಿಯನ್ನು ನಿರ್ಮೂಲನ ಮಾಡಲು ಬಸವಾದಿ ವಚನಕಾರರು ಶ್ರಮಿಸಿದರು. ಆದರೂ ಜಾತಿಪದ್ಧತಿ ಮುಂದುವರಿದಿತ್ತು. ಇದನ್ನು ಕಂಡ ಕನಕದಾಸರು **ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ** ಎಂದು ಪ್ರಶ್ನಿಸಿದ್ದಾರೆ.



©KTBS Not to be republished

ವ್ಯಕ್ತಿಗೆ ಕುಲ ಮುಖ್ಯವಲ್ಲ ಗುಣ ಮುಖ್ಯ. ಉತ್ತಮಗುಣವುಳ್ಳವರನ್ನು ಭಗವಂತನು ಉದ್ಧಾರ ಮಾಡುತ್ತಾನೆ. ಆದ್ದರಿಂದ ಉತ್ತಮಗುಣಗಳನ್ನು ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ತಿಳಿ ಹೇಳಿದ್ದಾರೆ.

ಶ್ರೀಕನಕದಾಸರ ಕೀರ್ತನೆಯನ್ನು ಶ್ರೀ **ಬಿ.ಎಂ.ಶ್ರೀಕಂಠಯ್ಯ** ಅವರು ಸಂಕಲಿಸಿರುವ **ಕನ್ನಡಬಾವುಟ** ಪುಸ್ತಕದಿಂದ (ಪುಟ–೬೪–೬೫) ಆರಿಸಲಾಗಿದೆ.

## ಪದ –ಪದ್ಯಾರ್ಥ

ವಿರಕ್ತಿ – ವೈರಾಗ್ಯ, ಆಸೆ, ಆಮಿಷಗಳಿಗೆ ಒಳಗಾಗದಿರುವುದು ; ಮುಕ್ತಿ – ಬಿಡುಗಡೆ ; ಸತಿ – ಹೆಂಡತಿ ; ಸುತ – ಮಗ ; ಮತ – ಅಭಿಪ್ರಾಯ, ಗುರಿ ; ಜಾಣುವೆ – ಜಾಣ್ಮೆ, ಬುದ್ಧಿವಂತಿಕೆ ; ಉಪಶಾಂತ – ನೆಮ್ಮದಿ, ಸಮಾಧಾನ ; ಸುಸಂಗ – ಒಳ್ಳೆಯವರ ಸ್ನೇಹ ; ದುಸ್ಸಂಗ – ಕೆಟ್ಟವರ ಸಹವಾಸ ; ನೆರೆ – ಪೂರ್ಣ

ಕುಟಿಲ – ಮೋಸ, ವಂಚನೆ ; ಕುಜನರು – ಕೆಟ್ಟಜನರು ; ಸಟೆ – ಸುಳ್ಳು ; ಕುಪಿತ – ಸಿಟ್ಟಿನಿಂದ ಕೂಡಿದ

ಪುಟ್ಟಲು – ಹುಟ್ಟಲು, ಜನಿಸಲು ; ಕ್ಷೀರ – ಹಾಲು ; ವಸುಧೆ – ಭೂಮಿ ; ಭೂಸುರ – ಬ್ರಾಹ್ಮಣ, ದ್ವಿಜ ; ಉಣ್ಣು – ತಿನ್ನು ; ಕಸ್ತೂರಿ – ಕಸ್ತೂರಿ ಮೃಗದ ನಾಭಿಯಲ್ಲಿರುವ ಪರಿಮಳ ದ್ರವ್ಯ; ಪೂಸುವರು – ಹಚ್ಚುವರು, ಲೇಪಿಸುವರು ; ಒಗೆಯಿಂದ – ಹುಟ್ಟಿನಿಂದ ; ಜಗವಲ್ಲಭ – ಜಗತ್ತಿನ ಒಡೆಯ; ತತ್ವೇಂದ್ರಿಯಗಳು – ತತ್ತ್ವಗಳು ಮತ್ತು ಇಂದ್ರಿಯಗಳು.

## ಕಲಿತ ಪದ್ಯದ ಅಭ್ಯಾಸ

✦ **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ವ್ಯಕ್ತಿಯು ಮುಕ್ತಿ ಪಡೆಯಲು ಏನೇನು ಬೇಕು?

೨. ಸುತನಲ್ಲಿ ಎಂತಹ ಗುಣವಿರಬೇಕು?

೩. ವ್ಯಕ್ತಿಯು ನೆಮ್ಮದಿಯಿಂದ ಬಾಳಬೇಕಾದರೆ ಏನು ಮಾಡಬೇಕು?

೪. ಎಂತಹವರ ಸಂಗದಲ್ಲಿರಬೇಕು?

೫. ಎಂತಹವರು ಮಂತ್ರಗಳನ್ನು ಪಠಿಸಿದರೆ ಫಲವಿಲ್ಲ?

೬. ವಿಠಲನನ್ನು ಯಾರು ನೆನೆದರೆ ಫಲವಿಲ್ಲ?

©KTBS Not to be republished

೭. ಯಾರನ್ನು ಬಳಲಿಸಬಾರದು?

೮. ಗೀತೆಯನ್ನು ಓದಿದಷ್ಟು ಫಲ ಯಾವಾಗ ದೊರೆಯುತ್ತದೆ?

೯. ತಾವರೆ ಹುಟ್ಟುವುದು ಎಲ್ಲಿ?

೧೦. ತಾವರೆಯನ್ನು ಯಾರಿಗೆ ಅರ್ಪಿಸುತ್ತಾರೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ವ್ಯಕ್ತಿ ಮುಕ್ತಿ ಪಡೆಯಲು ಹೇಗೆ ನಡೆದುಕೊಳ್ಳಬೇಕು?

೨. ನಮ್ಮ ಶ್ರಮ ಯಾವಾಗ ನಿಷ್ಫಲವಾಗುವುದು?

೩. ಯಾವ ವಸ್ತುಗಳ ಬಳಕೆಯಲ್ಲಿ ಅವುಗಳ ಕುಲವನ್ನು ನೋಡುವುದಿಲ್ಲ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಶ್ರೀಪಾದರಾಜರು ನೀಡಿರುವ ಜೀವನ ಸಂದೇಶ ತಿಳಿಸಿ

೨. ಪುರಂದರದಾಸರ ದೃಷ್ಟಿಯಲ್ಲಿ ನಮ್ಮ ಶ್ರಮಕ್ಕೆ ಫಲ ದೊರೆಯುವುದು ಯಾವಾಗ? ವಿವರಿಸಿ.

೩. ಕುಲ ಮತಗಳ ಬಗ್ಗೆ ಕನಕದಾಸರ ಅಭಿಪ್ರಾಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಈ. ಸಂದರ್ಭಾನುಸಾರ ವಿವರಿಸಿ.**

೧. "ಸುಸಂಗ ಹಿಡಿಯಲೆಬೇಕು ದುಸ್ಸಂಗ ಬಿಡಲೆಬೇಕು"

೨. "ಸಟೆಯನ್ನಾಡುವ ಮನುಜರು ಮನದಲಿ ವಿಠಲನ ನೆನೆದರೇನು ಫಲ"

೩. "ಸ್ನಾನವ ಮಾಡಿದರೇನು ಫಲ"

೪. "ವಸುಧೆಯೊಳಗೆ ಭೂಸುರರುಣಲಿಲ್ಲವೆ?"

೫. "ಆತ ಮಹಾತ್ಮನು ನೆಲೆಯಾದಿಕೇಶವ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

| | | | |
|---|---|---|---|
| ೧. ಅಬ್ಬೂರು | ಮುಳಬಾಗಿಲು | ನರಸಿಂಹತೀರ್ಥ | ಅಂಬುತೀರ್ಥ |
| ೨. ಹರಿಭಕ್ತಿಸಾರ | ರಾಮಧಾನ್ಯ ಚರಿತೆ | ಯಶೋಧರ ಚರಿತೆ | ನಳಚರಿತೆ |
| ೩. ವಸುಧೆಯೊಳಗೆ | ದ್ವಿಜರೆಲ್ಲರು | ನಾರಾಯಣನಾವ | ಪೇಳಿರಯ್ಯ |



©KTBS Not to be republished

## ಭಾಷಾಭ್ಯಾಸ

- **ಪ್ರಾಯೋಗಿಕ ಭಾಷಾಭ್ಯಾಸ**

**ಅ. ವಿರುದ್ಧಾರ್ಥಕ ಪದವನ್ನು ಬರೆಯಿರಿ.**

ಸುಸಂಗ ಅನುಕೂಲ ಕುಜನ ಸಟೆ ನೀತಿ

**ಆ. ಕೊಟ್ಟಿರುವ ಪದಗಳ ತದ್ಭವರೂಪ ಬರೆಯಿರಿ.**

ಭಕ್ತಿ ಮುಕ್ತಿ ಕಸ್ತೂರಿ

ಯಾತ್ರೆ ಶ್ರೀ ಮೃಗ

- **ಪಠ್ಯಾಧಾರ ಚಟುವಟಿಕೆ**

**ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ಪುರಂದರದಾಸರ ಕೀರ್ತನೆಯ ಮೂರನೆಯ ಚರಣದ (ಮಾತಾಪಿತರನು ___ ___ ___ ___ ಗೀತೆಯನೋದಿದರೇನು ಫಲ) ನಾಲ್ಕು ಸಾಲು

೨. ಕನಕದಾಸ ಅವರ ಪ್ರಸ್ತುತ ಕೀರ್ತನೆಯ ಮೊದಲನೆಯ ಚರಣದ (ಕೆಸರೊಳುತಾವರೆ ___ ___ ___ ___ ಭೂಸುರರುಣಲಿಲ್ಲವೆ) ನಾಲ್ಕು ಸಾಲು

## ಹೆಚ್ಚಿನ ಓದು

- **ಡಾ. ಜಿ ವರದರಾಜರಾವ್** ಅವರು ಸಂಪಾದಿಸಿರುವ **ಶ್ರೀಪಾದರಾಜರ ಕೃತಿಗಳು** ಪುಸ್ತಕವನ್ನು ಓದಿ
- **ಪ್ರೊ. ಎಸ್. ಕೆ. ರಾಮಚಂದ್ರರಾವ್** ಅವರು ಸಂಪಾದಿಸಿರುವ **ಪುರಂದರ ಸಾಹಿತ್ಯ ದರ್ಶನ –** ಸಂಪುಟ ೧ ಮತ್ತು ೨ ಕೃತಿಯ ಜನಪ್ರಿಯ ಕೀರ್ತನೆಗಳನ್ನು ಓದಿ
- **ಪ್ರೊ. ದೇ.ಜವರೇಗೌಡ** ಅವರು ಸಂಪಾದಿಸಿರುವ **ಜನಪ್ರಿಯ ಕನಕ ಸಂಪುಟ** ಕೃತಿಯನ್ನು ಓದಿ

✦ ✦ ✦ ✦ ✦

©KTBS Not to be republished

**ಪದ್ಯಪಾಠ – ೮**

# ವಾತ್ಸಲ್ಯ
[ನಡುಗನ್ನಡ/ಷಟ್ಪದಿ]

– ಕುಮಾರವಾಲ್ಮೀಕಿ (ನರಹರಿ)

**ಅರ್ಥೈಸಿ ಓದಿ**

| | | | | |
|---|---|---|---|---|
| ಅಂಬುಜಾನನೆ | ಸೇವಾಲಂಬಕ | ನೇರಿರಿಸಿ | ತೋಹಿನಲಿ | ಕರವತಿಗೆ |
| ಭೂರಿಬಾಣ | ಹರ್ಮ್ಯಸಿ | ನಿಶಾಚರ | ಹದನನು | ಸಂಸ್ಕೃತಿ |



© KTBS Not to be republished

**ನಿಗದಿತ ಮೂಲ ನಡುಗನ್ನಡ/ಷಟ್ಪದಿ – ಪದ್ಯ**

ಅಂಬುಜಾನನೆ ಕೇಳು ತಾಂಡವ
ನೆಂಬಮುನಿ ಪಿತೃಮಾತೃಸೇವಾ
ಲಂಬಕನು ತೊಳಲಿದನು ನಾನಾ ತೀರ್ಥಯಾತ್ರೆಯಲಿ ॥
ಅಂಬುವನು ತರಲೆಂದು ಪಿತೃಗಳ
ಕಂಬಿಯನು ನೇರಿರಿಸಿ ಚರ್ಮದ
ತಂಬುಗೆಯ ಕೊಂಡಜಿಸುತಿರುಳೈದಿದನು ಜೀವನವ ॥೧॥

ತೋಹಿನಲಿ ತಾನಿರುಳು ಶರಸ
ನ್ನಾಹನಾಗಿರೆ ತಾಂಡವನು ತ
ದ್ವಾಹಿನಿಯೊಳದ್ದಿದನು ಕರವತಿಗೆಯನು ಕೈ ನೀಡಿ ॥
ಮೋಹಿಸಿತು ಘುಳುಘುಳು ನಿನಾದ ವ
ರಾಹನಿಸ್ವನದಂತೆ ಮುನಿಯೆಂ
ಬೂಹೆಕೊಳ್ಳದೆ ಕೊಂಡು ಹರಿದುದು ಚಿತ್ತವಘಪಥಕೆ ॥೨॥

ಆ ರವ ಧ್ವನಿಗೊಡುವುದನು ಭೂ
ದಾರವೆಂದೇ ಬಗೆದು ಹೂಡಿದ
ಕೂರಲಗು ಬಿಡೆ ಬಿದ್ದುದುರದಲಿ ವೈಶ್ಯಮುನಿವರನ ॥
ಭೂರಿಬಾಣ ವ್ಯಥೆಯನಾ ಮುನಿ
ಸೈರಿಸದೆ ಶಂಕರ ಸದಾಶಿವ
ಮಾರಹರ ಹರಯೆನುತ ಹಮ್ಮೈಸಿದನು ಮೂರ್ಛೆಯಲಿ ॥೩॥



ನರರು ರಜನೀಮುಖದ ಸೀಮಾ
ಚರಿತರುತ್ತರಭಾಗ ರಾತ್ರೀ
ಚರರಿಗಾಗಿಹುದಿದುವೆ ನೀ ನರನೋ ನಿಶಾಚರನೊ ॥
ನಿರುತವಾವುದು ಹೇಳೆನಲು ನಾವ್
ನರರು ವಿಟತಾಪಸರು ತೀರ್ಥಾ
ಚರಿತರಿನ್ನಾರಾದಡೇನೆಮಗಾಯ್ತು ಹರಿವೆಂದ ॥೪॥

ಹಳೆದಿನದ ತಾಯ್ತಂದೆಗಳ ಬಿಡ
ದಲಸದವರನು ಹೊತ್ತು ತೊಳಲಿದೆ
ನಿಳೆಯೊಳುಳ್ಳ ಸಮಸ್ತತೀರ್ಥಕ್ಷೇತ್ರಗಿರಿವನವ ॥
ಉಳಿದುದೊಂದೇ ಕಾಶಿ ಕಾಶಿಯೊ
ಳಿಳುಹುವದೆ ಸಂಕಲ್ಪವದು ತಾ
ನಿಲುಕದಾದುದು ದೈವಗತಿ ಬೇಜಿದ್ದುದೆನಗೆಂದ ॥೫॥



©KTBS Not to be republished

ನೀರನೆಱೆಕೊಂಡೊಯ್ದು ಮೇಲುಪ
ಚಾರವೇನದ ಮಾಡು ಗಂಗಾ
ತೀರವನು ಸಾರುವಡೆ ಕೊಂಡೊಯ್ದಿಳುಹು ಕಾಶಿಯಲಿ ॥
ಭಾರವಿದು ನಿನಗಿದುವೆ ಮೃತಸಂ
ಸ್ಕಾರಪರಿಯಂತರಸ ಕೇಳೆಂ
ದೂರುಜವ್ರತಿ ಸರಳ ಕೀಲಿಸಿ ಮುಗಿದನಕ್ಷಿಗಳ ॥೬॥

ನೀರೊಳಗೆ ಜಾಱಿದನೊ ಮೇಣು
ಗ್ರೋರಗನೊಳಳಿವಾಯ್ತೊ ದುಷ್ಟಚ
ಮೂರ ಚಪ್ಪರಿಸಿದುದೊ ಕೆಡೆದನೊ ಹಳ್ಳಕೊಳ್ಳದಲಿ ॥
ಕ್ರೂರಲುಬ್ಧಕರಸ್ತ್ರಹತಿಯಲಿ
ತೀರಿದನೊ ಹಾ ಕಂದ ಹಾ ಎಂ
ಬೂರುಜವ್ರತಿಗಳನು ಕಂಡತಿಮಱುಕವಾಯ್ತೆಂದ ॥೭॥

ನೊಂದೆನಾ ನುಡಿಗೇಳುತವೆ ಪೂ
ರ್ಣೇಂದುಮುಖಿ ಕೇಳ್ ಪಾಂಡವನ ತಾಯ್
ತಂದೆಗಳ ದನಿದೋಱದಿಳುಹಿದೆನಿಳೆಗೆ ಮರದಿಂದ ॥
ಇಂದಿದೇನೈ ತಡದೆ ನೀರನು
ತಂದಡೆಱೆ ತಮಗೆನಲು ವಿಗತಾ
ನಂದಮಾನಸನಾಗಿ ಬಳಿಕೆಱೆದೆನು ಹಿಮೋದಕವ ॥೮॥


ಹೊಲಸುದೋಱದೆ ಮಗನೆ ಜಲವೆಮ
ಗಲಸಿದೆಯಲಾ ಸೇವೆಯಲಿ ವಿಧಿ
ಮುಳಿಯದಕಟಾ ಪಾಪಿಗಳಿಗೆನುತೊಕ್ಕರಾ ಜಲವ ॥
ಬಳಿಕ ತನ್ನಿಂದಾದ ಹದನನು
ತಿಳಿಯ ಹೇಳಿದು ಶಾಪವನು ಕೈ
ಗೊಳಿಸಿ ತನಗೆಂದವರ್ಗೆ ಕೈಗಳ ಮುಗಿದೆ ನಾನೆಂದ ॥೯॥

ಅಳಿದ ಮಗನೋಪಾದಿ ನಿಮ್ಮನು
ಸಲಹುವೆನು ನಂಬುವುದು ನೀವೆನ
ಲಲಸಿ ಬಳಿಕಸುವಿಡಿಯಲೊಲ್ಲದೆ ಸುತವಿಯೋಗದಲಿ॥
ಅಳಿವು ಸಮನಿಸಲೆನುತ ನಳಿನಜ
ನಿಳಯಕಭಿಮುಖರಾದರನಿಬರು
ಜಳನ ಸಂಸ್ಕೃತಿಯಿಂದ ಮಾಡಿದೆನೂರ್ಧ್ವದೇಹಿಕವ ॥೧೦॥



©KTBS
Not to be republished

## ಕರ್ತೃ – ಭಾವ – ಆಕರ



**ಕುಮಾರವಾಲ್ಮೀಕಿಯ** ಕಾಲ ಸುಮಾರು ಕ್ರಿ.ಶ. ೧೫೦೦. ವಿಜಯಾಪುರ(ಬಿಜಾಪುರ) ಜಿಲ್ಲೆಯ **ತೊರವೆಯಲ್ಲಿ** ಜನಿಸಿದ ಈತನ ಆರಾಧ್ಯದೈವ ತೊರವೆಯ **ನರಸಿಂಹ. ನರಹರಿ** ಎಂಬುದು ಈತನ ನಿಜನಾಮ. ಸಂಸ್ಕೃತದಲ್ಲಿ ರಚಿತವಾದ **ವಾಲ್ಮೀಕಿರಾಮಾಯಣವನ್ನು** ಇವನು ಕನ್ನಡದಲ್ಲಿ ಕಾವ್ಯರೂಪಕ್ಕೆ ತಂದಿರುವುದರಿಂದ ಈತನನ್ನು **ಕುಮಾರವಾಲ್ಮೀಕಿ** ಎಂದು ಕರೆಯಾಲಾಗಿದೆ. (ತಾನೇ ಹಾಗೆ ಕರೆದುಕೊಂಡನೆಂದೂ ಪ್ರತೀತಿ ಇದೆ.) ಈತ **ತೊರವೆ ನರಹರಿಯ** ಅಂಕಿತದಲ್ಲಿ ಈ ರಾಮಾಯಣವನ್ನು ರಚಿಸಿರುವುದರಿಂದ ಈ ಕಾವ್ಯಕ್ಕೆ **ತೊರೆವ ರಾಮಾಯಣ** ಎಂಬ ಹೆಸರು ಬಂತು. **ವ್ಯಾಸಭಾರತವನ್ನು** ಕನ್ನಡದಲ್ಲಿ ಕಾವ್ಯರೂಪಕ್ಕೆ ತಂದ **ನಾರಣಪ್ಪ ಕುಮಾರವ್ಯಾಸ**ನಾದುದನ್ನೂ ಅದು **ಗದುಗಿನ ವೀರನಾರಾಯಣನ** ಅಂಕಿತದಲ್ಲಿ ಇದ್ದುದರಿಂದ **ಗದುಗುಭಾರತ** ಆದುದನ್ನೂ ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಕುಮಾರವಾಲ್ಮೀಕಿಗೆ **ಕವಿರಾಜಹಂಸ** ಎಂಬ ಬಿರುದು ಇದೆ.

ಋಣತ್ರಯಗಳಲ್ಲಿ ಪಿತೃಋಣ ಎಂಬುದು ಒಂದು. ಪಿತೃಋಣ ಎಂದರೆ ತಾಯಿತಂದೆಯರು ನಮಗೆ ಜನ್ಮಕೊಟ್ಟು ಸಾಕಿಸಲಹಿರುವ ಕಾರಣಕ್ಕೆ ಇರುವ ಋಣ. ಈ ಋಣವನ್ನು ತೀರಿಸಬೇಕಾದುದು ಪ್ರತಿಯೊಬ್ಬನ ಆದ್ಯ ಕರ್ತವ್ಯ. ಇದು ಭಾರತೀಯ ಸಂಸ್ಕೃತಿಯಲ್ಲಂತೂ ಅತ್ಯಂತ ಮಹತ್ವದ್ದು.

ತಾಯಿತಂದೆಯರ ಸೇವೆ ಮಾಡುತ್ತಾ ಜೀವನ ಸವೆಸಿ ಕೃತಕೃತ್ಯರಾದ ಮಹಾನ್ ವ್ಯಕ್ತಿಗಳ ನಿದರ್ಶನಗಳು ಪುರಾಣಗಳಲ್ಲಿ ಕಂಡುಬರುತ್ತವೆ. ಅಂತಹ ಕತೆಗಳಲ್ಲಿ ಶ್ರವಣಕುಮಾರನ ಕತೆಯೂ ಒಂದು. ತಂಡುಮುನಿಯ ಮಗನಾದುದರಿಂದ ಈತನನ್ನು ತಾಂಡವಮುನಿ ಎಂದೂ ಕರೆಯುತ್ತಾರೆ. ಈತ ಕಣ್ಣುಕಾಣದ ತನ್ನ ತಾಯಿತಂದೆಯರ ಸೇವೆ ಮಾಡುವುದರಲ್ಲೇ ಸುಖವನ್ನು ಕಂಡವನು. ತಾಯ್ತಂದೆಯರ ಅಪೇಕ್ಷೆ ಮೇರೆಗೆ ಅವರನ್ನು ಹೊತ್ತು ತೀರ್ಥಯಾತ್ರೆ ಮಾಡಿದವನು. ಆ ಕಾಯಕದಲ್ಲಿರುವಾಗಲೇ ದುರದೃಷ್ಟವಶಾತ್ ವಿಧಿ ಲೀಲೆಗೆ ಸಿಲುಕಿದನು. ತಪ್ಪು ಮಾಡಿದವರು ಕ್ಷಮೆಯಾಚಿಸುವುದು ವಾಡಿಕೆ. ದಶರಥ ತಾನು ಮಾಡಿದ ತಪ್ಪಿಗೆ ಶಿಕ್ಷೆ ನೀಡಬೇಕೆಂದು ಕೇಳಿಕೊಳ್ಳುವುದು, ತಾಂಡವ ಮುನಿಯ ತಾಯಿತಂದೆಯರನ್ನು ಅವರ ಮಗನಂತೆಯೇ ನೋಡಿಕೊಳ್ಳುವೆನೆಂಬ ಭರವಸೆ ನೀಡುವುದು ಮುಂತಾದ ಅನುಸರಣೀಯ ಉದಾತ್ತ ಗುಣಗಳನ್ನು ಪ್ರಕೃತ ಪದ್ಯಭಾಗ ಒಳಗೊಂಡಿದೆ.

* * *

**ಎನ್. ಬಸವರಾಧ್ಯರು** ಸಂಪಾದಿಸಿದ **ಕುಮಾರವಾಲ್ಮೀಕಿ** ವಿರಚಿತ ತೊರವೆರಾಮಾಯಣ ಕೃತಿಯ **ಒಂದನೆಯ ಸಂಪುಟದ ಅಯೋಧ್ಯಾಕಾಂಡದ ಐದನೆಯ ಸಂಧಿಯಿಂದ** ಪ್ರಕೃತ ಭಾಗವನ್ನು (ಪುಟ ೧೯೮–೨೦೩) ಆಯ್ದುಕೊಳ್ಳಲಾಗಿದೆ.



©KTBS Not to be republished

**ಪ್ರಸ್ತುತ ಪದ್ಯಪಾಠದ ಪೂರ್ವ ಕತೆ.**

ಅಯೋಧ್ಯೆಯ ಅರಸ ದಶರಥನು. ತನ್ನ ಹಿರಿಯ ಮಗ ರಾಮನಿಗೆ ಪಟ್ಟಕಟ್ಟಬೇಕೆಂದು ನಿಶ್ಚಯಿಸಿದ. ಪಟ್ಟಾಭಿಷೇಕದ ತಯಾರಿಯಲ್ಲಿರುವಾಗ ಮಂಥರೆಯ ದುರ್ಬೋಧನೆಗೆ ಒಳಗಾದ ಕೈಕೆಯಿಂದಾಗಿ ಶ್ರೀರಾಮನು ಮಡದಿ ಸೀತೆ ಹಾಗೂ ತಮ್ಮ ಲಕ್ಷ್ಮಣನ ಸಹಿತ ಹದಿನಾಲ್ಕು ವರ್ಷಗಳ ಕಾಲ ಅರಣ್ಯವಾಸ ಅನುಭವಿಸಬೇಕಾಯ್ತು. ರಾಮನನ್ನು ಕಾಡಿಗೆ ಅಟ್ಟಲು ಮನವೊಪ್ಪದ ದಶರಥ ಪ್ರಜ್ಞಾಹೀನನಾಗಿ ಧರೆಗುರುಳುತ್ತಾನೆ. ಎಚ್ಚರಗೊಂಡಾಗ ರಾಮ, ಸೀತೆ ಮತ್ತು ಲಕ್ಷ್ಮಣರು ಕಾಡಿಗೆ ಹೋಗಲು ಸಿದ್ಧರಾಗಿರುತ್ತಾರೆ. ಇದನ್ನು ಕಂಡ ದಶರಥ ಮಂತ್ರಿ ಸುಮಂತ್ರನನ್ನು ಬಳಿಗೆ ಕರೆದು ರಾಮ ಲಕ್ಷ್ಮಣರೊಂದಿಗೆ ಹೋಗಬೇಕೆಂದೂ ದಾರಿಯಲ್ಲಿ ಶತಾಯಗತಾಯ ಪ್ರಯತ್ನಿಸಿ ಅವರನ್ನು ಅಯೋಧ್ಯೆಗೆ ಮರಳುವಂತೆ ಮಾಡಬೇಕೆಂದೂ ಆಜ್ಞಾಪಿಸುತ್ತಾನೆ. ರಾಜಾಜ್ಞೆಯಂತೆ ಹೊರಟ ಮಂತ್ರಿ ಬರಿಗೈಯಲ್ಲಿ ಹಿಂತಿರುಗುತ್ತಾನೆ. ವಿಷಯ ತಿಳಿದ ದಶರಥ ಯೋಚನೆಗೀಡಾಗುತ್ತಾನೆ. ತನ್ನ ನಾಲ್ವರು ಮಕ್ಕಳಲ್ಲಿ ರಾಮಲಕ್ಷ್ಮಣರಿಬ್ಬರು ಅರಣ್ಯವಾಸಿಗಳಾದರು. ಭರತ ಶತ್ರುಘ್ನರು ಮಾವನ ಮನೆಯಲ್ಲಿದ್ದಾರೆ. ಪುತ್ರಶೋಕ ತನ್ನನ್ನು ಕಾಡುತ್ತಿದೆ. ಹಾಗಾಗಿ ತಂಡುಮುನಿಯ (ತಾಂಡವನ ತಂದೆ) ಶಾಪದಂತೆ ತನ್ನ ಅವಸಾನ ಕಾಲ ಸಮೀಪಿಸಿತೆಂದು ಊಹಿಸುತ್ತಾನೆ. ಸಮೀಪದಲ್ಲಿರುವ ಪತ್ನಿ ಕೌಸಲ್ಯೆಗೆ ಹಲವು ವರ್ಷಗಳ ಹಿಂದೆ ನಡೆದ ಆ ಅಚಾತುರ್ಯದ ಘಟನೆಯನ್ನು ವಿವರಿಸುವ ಭಾಗವೇ ಪ್ರಕೃತ ಪದ್ಯಭಾಗ.

**ನಿಗದಿತ ಪದ್ಯದ ಪದವಿಂಗಡಣಾ ಓದು**

೧. ಅಂಬುಜ + ಆನನೆ ಕೇಳು ತಾಂಡವನು + ಎಂಬ ಮುನಿ ಪಿತೃ ಮಾತೃ ಸೇವಾ + ಆಲಂಬಕನು ತೊಳಲಿದನು ನಾನಾ ತೀರ್ಥಯಾತ್ರೆಯಲಿ. ಅಂಬುವನು ತರಲು + ಎಂದು ಪಿತೃಗಳ ಕಂಬಿಯನು ನೇರು + ಇರಿಸಿ ಚರ್ಮದ ತಂಬುಗೆಯ ಕೊಂಡು + ಅಐ(ರ) ಸುತ + ಇರುಳು + ಐದಿದನು ಜೀವನವ

೨. ತೋಹಿನಲಿ + ತಾನು + ಇರುಳು ಶರಸನ್ನಾಹನು + ಆಗಿರೆ ತಾಂಡವನು ತತ್ + ವಾಹಿನಿಯೊಳು + ಅದ್ದಿದನು ಕರವತಿಗೆಯನು ಕೈನೀಡಿ. ಮೋಹಿಸಿತು ಘುಳು ಘುಳು ನಿನಾದ ವರಾಹ ನಿಸ್ವನದಂತೆ ಮುನಿ + ಎಂಬ + ಊಹೆ ಕೊಳ್ಳದೆ ಕೊಂಡು + ಹರಿದುದು ಚಿತ್ತ + ಅಘಪಥಕೆ

೩. ಆ ರವ ಧ್ವನಿ + ಕೊಡುವುದನು ಭೂದಾರ + ಎಂದೇ ಬಗೆದು ಹೂಡಿದ ಕೂರ್ + ಅಲಗು ಬಿಡೆ ಬಿದ್ದುದು + ಉರದಲಿ ವೈಶ್ಯಮುನಿವರನ ಭೂರಿ ಬಾಣ ವ್ಯಥೆಯನು + ಆ ಮುನಿ ಸೈರಿಸದೆ ಶಂಕರ ಸದಾಶಿವ ಮಾರಹರ ಹರ + ಎನುತ ಹಮ್ಮೈಸಿದನು ಮೂರ್ಚೆಯಲಿ

೪. ನರರು ರಜನೀ ಮುಖದ ಸೀಮಾ ಚರಿತರು + ಉತ್ತರಭಾಗ ರಾತ್ರೀ ಚರರಿಗೆ + ಆಗಿಹುದು + ಇದುವೆ ನೀ ನರನೋ ನಿಶಾಚರನೊ ನಿರುತ + ಆವುದು ಹೇಳು + ಎನಲು ನಾವ್ ನರರು ವಿಟತಾಪಸರು ತೀರ್ಥ + ಆಚರಿತರು + ಇನ್ನು + ಆರು + ಆದೊಡೆ + ಏನು + ಎಮಗೆ + ಆಯ್ತು ಹರಿವು + ಎಂದ



©KTBS Not to be republished

೫. ಹಳೆದಿನದ ತಾಯ್ + ತಂದೆಗಳ ಬಿಡದೆ + ಅಲಸದೆ + ಅವರನು ಹೊತ್ತು ತೊಳಲಿದೆನು + ಇಳೆಯೊಳು + ಉಳ್ಳ ಸಮಸ್ತ ತೀರ್ಥಕ್ಷೇತ್ರ ಗಿರಿವನವ ಉಳಿದುದು + ಒಂದೇ ಕಾಶಿ, ಕಾಶಿಯೊಳು + ಇಳುಹುವ + ಅದೆ ಸಂಕಲ್ಪ + ಅದು ತಾ ನಿಲುಕದೆ + ಆದುದು ದೈವಗತಿ ಬೇಱಿೆ(ರೆ) + ಇದ್ದುದು + ಎನಗೆ + ಎಂದ

೬. ನೀರನು + ಎಱೆ(ರೆ)ಕೊಂಡು + ಒಯ್ದು ಮೇಲೆ + ಉಪಚಾರ + ಏನು + ಅದ ಮಾಡು ಗಂಗಾತೀರವನು ಸಾರುವಡೆ ಕೊಂಡು + ಒಯ್ದು + ಇಳುಹು ಕಾಶಿಯಲಿ ಭಾರ + ಇದು ನಿನಗೆ + ಇದುವೆ ಮೃತ ಸಂಸ್ಕಾರ ಪರಿಯಂತ + ಅರಸ ಕೇಳ್ + ಎಂದು + ಊರುಜವ್ರತಿ ಸರಳ ಕೀಲಿಸಿ ಮುಗಿದನು + ಅಕ್ಷಿಗಳ

೭. ನೀರ + ಒಳಗೆ ಜಾಱಿ(ರಿ)ದನೊ ಮೇಣ್ + ಉಗ್ರ + ಉರಗನೊಳು + ಅಳಿವಾಯ್ತೊ ದುಷ್ಟಚಮೂರ ಚಪ್ಪರಿಸಿದುದೊ ಕೆಡೆದನೊ ಹಳ್ಳಕೊಳ್ಳದಲಿ ಕ್ರೂರಲುಬ್ಧಕರ + ಅಸ್ತ್ರಹತಿಯಲಿ ತೀರಿದನೊ ಹಾ ಕಂದ ಹಾ ಎಂಬ + ಊರುಜ ವ್ರತಿಗಳನು ಕಂಡು + ಅತಿಮಱು(ರು)ಕ + ಆಯ್ತು + ಎಂದ

೮. ನೊಂದೆನು + ಆನುಡಿ + ಕೇಳುತವೆ ಪೂರ್ಣ + ಇಂದುಮುಖಿ ಕೇಳ್ ತಾಂಡವನ ತಾಯ್ ತಂದೆಗಳ ದನಿ + ತೋಱ(ರ)ದೆ + ಇಳುಹಿದೆನು + ಇಳೆಗೆ ಮರದಿಂದ ಇಂದು + ಇದು + ಏನೈ ತಡದೆ ನೀರನು ತಂದಡೆ + ಎಱೆ(ರೆ) ತಮಗೆ ಎನಲು ವಿಗತ + ಆನಂದ ಮಾನಸನು + ಆಗಿ ಬಳಿಕ + ಎಱೆ(ರೆ)ದೆನು ಹಿಮ + ಉದಕವ

೯. ಹೊಲಸು + ತೋಱಿ(ರಿ)ದೆ ಮಗನೆ ಜಲ + ಎಮಗೆ ಅಲಸಿದೆ + ಅಲಾ ಸೇವೆಯಲಿ ವಿಧಿ ಮುಳಿಯದೆ + ಅಕಟಾ ಪಾಪಿಗಳಿಗೆ + ಎನುತ + ಒಕ್ಕರು + ಆ ಜಲವ ಬಳಿಕ ತನ್ನಿಂದ + ಆದ ಹದನನು ತಿಳಿಯ ಹೇಳಿದು ಶಾಪವನು ಕೈ + ಕೊಳಿಸಿ ತನಗೆ + ಎಂದು + ಅವರ್ಗೆ ಕೈಗಳ ಮುಗಿದೆ ನಾನು + ಎಂದ

೧೦. ಅಳಿದ ಮಗನ + ಓಪಾದಿ ನಿಮ್ಮನು ಸಲಹುವೆನು ನಂಬುವುದು + ನೀವು + ಎನಲು + ಅಲಸಿ ಬಳಿಕ + ಅಸು + ಪಿಡಿಯಲು + ಒಲ್ಲದೆ ಸುತ ವಿಯೋಗದಲಿ ಅಳಿವು ಸಮನಿಸಲಿ + ಎನುತ ನಳಿನಜ ನಿಳಯಕೆ + ಅಭಿಮುಖರು + ಆದರು + ಅನಿಬರು ಜಳನ ಸಂಸ್ಕೃತಿಯಿಂದ ಮಾಡಿದೆನು + ಊರ್ಧ್ವದೇಹಿಕವ

## ಪದ – ಪದ್ಯಾರ್ಥ

೧. ಅಂಬುಜ – ತಾವರೆ ; ಆನನ – ಮುಖ ; ಆಲಂಬ – ಆಶ್ರಯ ; ತೊಳಲು – ಸಂಚರಿಸು, ತಿರುಗಾಡು ; ಕಂಬಿ – ಸಲಾಕೆ ; ನೇರು – ನೇತುಹಾಕು, ತೂಗುಹಾಕು ; ಆಱ(ರ)ಸು – ಹುಡುಕು ; ಐದು – ತಲುಪು ; ಜೀವನ – ನೀರು

©KTBS Not to be republished

೨. ತೋಹು – ತೋಪು, ಮರಗಳ ಗುಂಪು ; ಶರ – ಬಾಣ ; ಸನ್ನಾಹ – ಸಿದ್ಧತೆ ; ತತ್ –ಅದೇ; ವಾಹಿನಿ – ಕೊಳ, ನದಿ ; ಕರವತಿಗೆ – ತಂಬಿಗೆ, ಕರಪಾತ್ರೆ ; ನಿನಾದ –ಧ್ವನಿ ; ವರಾಹ – ಹಂದಿ ; ನಿಸ್ವನ – ಧ್ವನಿ ; ಚಿತ್ತ – ಮನಸ್ಸು ; ಅಘ – ಪಾಪ ; ಪಥ – ದಾರಿ,

೩. ರವ – ಶಬ್ದ, ಧ್ವನಿ ; ಭೂದಾರ – ಕಾಡುಹಂದಿ ; ಕೂರ್ – ಹರಿತ ; ಅಲಗು – ಬಾಣ ; ಉರ – ಎದೆ ; ಭೂರಿ – ಮಹಾ ; ವ್ಯಥೆ – ನೋವು ; ಹಮ್ಮೈಸು – ಹೌಹಾರು, ಮೈಮರೆ

೪. ರಜನೀಮುಖ – ಸೂರ್ಯಾಸ್ತದ ಸಮಯ, ರಾತ್ರಿಯ ಆರಂಭ ; ಚರಿತರು – ಸಂಚರಿಸುವವರು ; ಚರರು – ಸಂಚರಿಸುವವರು ; ನಿಶಾಚರ –ರಾತ್ರಿ ಸಂಚರಿಸುವವ, ರಾಕ್ಷಸ, ಕಳ್ಳ ; ನಿರುತ – ಸತ್ಯ, ನಿಜ; ವಿಟತಾಪಸ – ಒಂದೆಡೆನಿಲ್ಲದೆ ಸಂಚಾರ ಮಾಡುತ್ತಿರುವ ತಪಸ್ವಿ ; ಹರಿವು – ಸಂಬಂಧ ತಪ್ಪಿ ಹೋಗು

೫. ಅಲಸದೆ – ಬೇಸರಿಸದೆ, ಆಯಾಸಗೊಳ್ಳದೆ ; ತೊಳಲು – ತಿರುಗಾಡು ; ಸಮಸ್ತ – ಎಲ್ಲ; ದೈವಗತಿ–ದೈವೇಚ್ಛೆ

೬. ಸಾರುವಡೆ – ಹೋಗುವುದಾದರೆ, ಸೇರುವುದಾದರೆ ; ಮೃತಸಂಸ್ಕಾರ – ಸತ್ತವರಿಗೆ ಮಾಡುವ ಉತ್ತರ ಕ್ರಿಯಾದಿ ಸಂಸ್ಕಾರ ; ಊರುಜ – ವೈಶ್ಯ ; ಸರಳು – ಬಾಣ ; ಕೀಲಿಸಿ – ಕಿತ್ತು ಹಾಕಿಸಿ ; ಅಕ್ಷಿ – ಕಣ್ಣು

೭. ಮೇಣ್ – ಅಥವಾ ; ಉಗ್ರ – ಕ್ರೂರ ; ಉರಗ – ಹಾವು ; ಅಳಿವು – ಸಾವು, ಮರಣ ; ಚಮೂರ – ಹುಲಿ ; ಕೆಡೆ – ಬೀಳು ; ಲುಬ್ಧಕ – ಬೇಡ, ಬೇಟೆಗಾರ ; ಅಸ್ತ್ರ – ಬಾಣ ; ಹತಿ – ಹೊಡೆತ, ಪೆಟ್ಟು ; ತೀರು – ಸಾಯು, ಮರಣ ಹೊಂದು ; ವ್ರತಿ – ವ್ರತದಲ್ಲಿ ತೊಡಗಿದವ, ಯತಿ

೮. ಪೂರ್ಣೇಂದುಮುಖಿ – ಹುಣ್ಣಿಮೆಯ ಚಂದ್ರನಂತೆ ಮುಖವುಳ್ಳವಳು ; ಎಱಿ(ರೆ) – ಹೊಯ್ಯು ; ವಿಗತ – ಕಳೆದ, ಮರೆಯಾದ; ಮಾನಸ – ಮನಸ್ಸುಳ್ಳವ ; ಹಿಮ – ತಂಪು ; ಉದಕ – ನೀರು

೯. ಹೊಲಸು – ಕೊಳಕು, ಅಶುದ್ಧ ; ಅಲಾ – ಅಲ್ಲವೇ ; ಮುಳಿಯು – ಕೋಪಿಸಿಕೊಳ್ಳು, ಸಿಟ್ಟುಗೊಳ್ಳು; ಅಕಟಾ – ಅಯ್ಯೋ ; ಒಕ್ಕರು – ಉಗುಳಿದರು ; ಹದನನು – ಸಂಗತಿಯನ್ನು, ವಿಚಾರವನ್ನು

೧೦. ಓಪಾದಿ – ಹಾಗೆ, ಅಂತೆ ; ಅಸು – ಪ್ರಾಣ ; ವಿಯೋಗ – ಅಗಲಿಕೆ, ಅಗಲುವಿಕೆ, ಶೋಕ, ; ಸಮನಿಸು – ಉಂಟಾಗು ; ನಳಿನಜನಿಳಯ – ಬ್ರಹ್ಮಲೋಕ, ಸತ್ಯಲೋಕ ; ಅಭಿಮುಖರಾದರು – ಆ ಕಡೆಗೆ ಮುಖ ಮಾಡಿದರು ; ಅನಿಬರು – ಅವರಿಬ್ಬರು

©KTBS Not to be republished

## ಪಠ್ಯಾಧಾರ ಟಿಪ್ಪಣಿ

**ಅಂಬುಜಾನನೆ** : ಅಂಬು – ನೀರು ; ಜ – ಜನಿಸಿದ್ದು – ನೀರಿನಲ್ಲಿ ಜನಿಸಿದ್ದು – ತಾವರೆ; ಆನನೆ–ಮುಖ ಉಳ್ಳವಳು; ಅಂಬುಜಾನನೆ–ತಾವರೆಯಂತೆ ಮುಖ ಉಳ್ಳವಳು–ಕೌಸಲ್ಯೆ

**ಊರುಜ** : ಊರು – ತೊಡೆ ; ಜ – ಜನಿಸಿದವ – ತೊಡೆಯಿಂದ ಜನಿಸಿದವ – ವೈಶ್ಯ.

**ಉರಗ** : ಉರ – ಎದೆ ; ಗ – ಗಮಿಸುವ, ಹರಿದಾಡುವ – ಎದೆಯ ಸಹಾಯದಿಂದ ಹರಿದಾಡುವಂತಹದು – ಹಾವು

**ಪೂರ್ಣೇಂದುಮುಖಿ** : ಪೂರ್ಣ + ಇಂದು – ಪೂರ್ಣಚಂದ್ರ – ಹುಣ್ಣಿಮೆಯಚಂದ್ರ ; ಮುಖಿ –ಮುಖವುಳ್ಳವಳು – ಹುಣ್ಣಿಮೆಯ ಚಂದ್ರನಂತೆ ಮುಖವುಳ್ಳವಳು – ಕೌಸಲ್ಯೆ

**ನಳಿನಜನಿಳಯ** : ನಳಿನ – ಕಮಲ ; ಜ – ಜನಿಸಿದವ ;ನಳಿನಜ – ಬ್ರಹ್ಮ; ನಿಳಯ–ಮನೆ; ನಳಿನಜ ನಿಳಯ – ಬ್ರಹ್ಮನಮನೆ, ಬ್ರಹ್ಮಲೋಕ, ಸತ್ಯಲೋಕ.

**ಊರ್ಧ್ವ ದೇಹಿಕ** : ಊರ್ಧ್ವ – ಮೇಲೆ, ಮೇಲಿನ ; ದೇಹಿಕ – ದೇಹಕ್ಕೆ ಸಂಬಂಧ ಪಟ್ಟ – ಮೇಲಿನ ಲೋಕಕ್ಕೆ ಹೋಗಿರುವ ದೇಹಕ್ಕೆ ಸಂಬಂಧ ಪಟ್ಟ – ಸತ್ತವನಿಗೆ ಸಂಬಂಧ ಪಟ್ಟ

**ತಾಂಡವ** : ಇವನ ನಿಜನಾಮ ಶ್ರವಣ. ತಂಡುಮುನಿಯ ಮಗನಾದುದರಿಂದ ತಾಂಡವ ಎಂಬ ಹೆಸರು ಬಂತು.

## ಕಲಿತ ಪಠ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ತಾಂಡವ ಯಾರ ಸೇವೆ ಮಾಡುತ್ತಿದ್ದನು?

೨. ತಾಂಡವ ತಂದೆತಾಯಿಗಳಿರುವ ಕಂಬಿಯನ್ನು ಎಲ್ಲಿ ಇರಿಸಿದನು?

೩. ಘುಳುಘುಳು ನಿನಾದ ದಶರಥನಲ್ಲಿ ಯಾವ ಭಾವನೆಯನ್ನು ಹುಟ್ಟಿಸಿತು?

೪. ತಾಂಡವನ ಯಾವ ಸಂಕಲ್ಪ ಈಡೇರಲಿಲ್ಲ?

೫. ದಶರಥ 'ಪೂರ್ಣೇಂದುಮುಖಿ' ಎಂದು ಯಾರನ್ನು ಸಂಬೋಧಿಸಿದನು?

೬. ವಿಧಿ ಯಾರಿಗೆ ಮುಳಿಯುತ್ತದೆ?

©KTBS Not to be republished

೭. ತಾಂಡವನ ತಂದೆ ತಾಯಿಗಳು ದಶರಥನನ್ನು ಏನೆಂದು ಶಪಿಸಿದರು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ದಶರಥ ತಾಂಡವನೊಡನೆ "ನೀ ನರನೋ ನಿಶಾಚರನೋ" ಎಂದು ಕೇಳಲು ಕಾರಣವೇನು?

೨. ತಾಂಡವ ತಂದೆತಾಯಿಯರ ಸೇವೆಯನ್ನು ಹೇಗೆ ಮಾಡುತ್ತಿದ್ದನು?

೩. ಮರದಿಂದ ಇಳಿಸಿದಾಗ ತಾಂಡವನ ತಂದೆತಾಯಿಯರು ಏನು ಹೇಳಿದರು?

೪. ತಾಂಡವನ ತಂದೆತಾಯಿಯರು ನೀರನ್ನು ಉಗುಳಲು ಕಾರಣವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. "ದೈವಗತಿ ಬೇರಿದ್ದುದು" ಎಂದು ತಾಂಡವ ಹೇಳಲು ಕಾರಣವೇನು?

೨. ತಾಂಡವ ದಶರಥನಲ್ಲಿ ಏನೆಂದು ಬೇಡಿಕೊಂಡ?

೩. ತಾಂಡವನ ತಂದೆತಾಯಿಯರ ಯಾವ ಮಾತುಗಳು ದಶರಥನಲ್ಲಿ ಮರುಕ ಹುಟ್ಟಿಸಿದವು?

೪. ತಾಂಡವ ಒಬ್ಬ ಆದರ್ಶಮಗ ಎಂಬುದನ್ನು ಸಮರ್ಥಿಸಿ.

**ಈ. ಕೊಟ್ಟಿರುವ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ತಾಂಡವ ಮತ್ತು ದಶರಥ – ಇವರಿಬ್ಬರಲ್ಲಿ ಯಾರನ್ನು ಮೆಚ್ಚುತ್ತೀರಿ? ಏಕೆ? –ವಿವರಿಸಿ

**ಉ. ಸಂದರ್ಭಾನುಸಾರ ವಿವರಿಸಿ.**

೧. "ನೀ ನರನೋ ನಿಶಾಚರನೊ"

೨. "ದನಿದೋಱದಿಳುಹಿದೆನಿಳೆಗೆ"

೩. "ವಿಧಿ ಮುಳಿಯದಕಟಾ ಪಾಪಿಗಳಿಗೆ"

೪. "ಶಾಪವನು ಕೈಗೊಳಿಸಿ ತನಗೆ"

- **ವಸ್ತುನಿಷ್ಠ/ನಿಖರ ನಿರ್ಣಯ ಪ್ರಶ್ನೆಗಳು**

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಅಂತರಾಳ – ರಾಮಾಶ್ವಮೇಧ :: ವಾತ್ಸಲ್ಯ __________

೨. ಕುಮಾರವ್ಯಾಸ – ಗದುಗಿನ ನಾರಣಪ್ಪ :: ಕುಮಾರ ವಾಲ್ಮೀಕಿ _________

©KTBS Not to be republished

೩. ಕಮಲಜ – ಬ್ರಹ್ಮ :: ಅಂಬುಜ ____________

೪. ಊರು – ತೊಡೆ :: ಉರ ____________

## ಭಾಷಾಭ್ಯಾಸ

**ಸೈದ್ಧಾಂತಿಕ ಭಾಷಾಭ್ಯಾಸ**

**ಮಾತ್ರಾಗಣ : ಪರಿಚಯಾತ್ಮಕ ವಿವರ**

**ಮಾತ್ರೆ** : ಛಂದಶ್ಶಾಸ್ತ್ರದಲ್ಲಿ ಮಾತ್ರೆ, ಎಂದರೆ ಕಾಲವನ್ನು ಅಳೆಯುವ ಮಾನ. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ **ಒಂದು ಮಾತ್ರಾಕಾಲ**. ಮಾತ್ರೆಗಳಲ್ಲಿ **ಲಘು** ಮತ್ತು **ಗುರು** ಎಂಬ ಎರಡು ವಿಧಗಳಿವೆ. ಲಘುವನ್ನು **'U'** ಎಂತಲೂ ಗುರುವನ್ನು **'—'** ಎಂತಲೂ ಗುರುತಿಸಲಾಗುವುದು.

ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಲಘು**. ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಗುರು**.

**ಗುರು ಎನಿಸುವ ಅಕ್ಷರಗಳು :**

| | | | |
|---|---|---|---|
| | | — U | — U U |
| ✦ **ದೀರ್ಘಾಕ್ಷರಗಳು** | = | ಕಾ ಲು | ಆ ಗ ಸ |
| | | — UU | — U U |
| ✦ **ಸಂಯುಕ್ತಾಕ್ಷರದ ಹಿಂದಿನ ಅಕ್ಷರ** | = | ಅ ಕ್ಷ ರ | ಭ ಕ್ಷ ಣೆ |
| | | — U U | — U |
| ✦ **ಅನುಸ್ವಾರ, ವಿಸರ್ಗಗಳಿಂದ ಕೂಡಿರುವ ಅಕ್ಷರ** | = | ಬಂ ದ ನು | ದುಃಖ |
| | | UU — | UU — |
| ✦ **ವ್ಯಂಜನಾಕ್ಷರದ ಹಿಂದಿನ ಅಕ್ಷರ** | = | ಬರುವಳ್ | ಮರಗಳ್ |
| | | — U | — U U |
| ✦ **ಐ, ಔ ಸಹಿತವಾದ ಅಕ್ಷರ** | = | ಗೈ ಮೆ | ಔ ಷ ಧ |

✦ **ಷಟ್ಪದಿಯ ಮೂರು ಮತ್ತು ಆರನೆಯ ಪಾದಗಳ ಕೊನೆಯ ಅಕ್ಷರ** = ಈ ಅಕ್ಷರಗಳು ಒಂದು ಮಾತ್ರಾ ಲಕ್ಷಣದಿಂದ ಕೂಡಿದ್ದರೂ ಹಾಡುವಾಗ ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುತ್ತವೆ. ಹಾಗಾಗಿ ಈ ಅಕ್ಷಗಳು **ಗುರು** ಎನಿಸಿಕೊಳ್ಳುವ ಯಾವುದೇ ಲಕ್ಷಣಗಳನ್ನು ಪಡೆಯದಿದ್ದರೂ **ಗುರುವಾಗಿಯೇ** ಪರಿಗಣಿಸಲ್ಪಡುತ್ತವೆ.

**ಮಾತ್ರಾಗಣ** : ಮಾತ್ರೆಗಳ ಆಧಾರದಿಂದ ಗಣವಿಭಾಗ ಮಾಡಲಾಗುವ **ಮಾತ್ರಾಗಣದಲ್ಲಿ ಮೂರು**

©KTBS Not to be republished

**ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣ** ಎಂಬುದಾಗಿ ಮೂರು ವಿಧಗಳಿವೆ.. **ಕಂದ, ಷಟ್ಪದಿ, ರಗಳೆ** ಛಂದಸ್ಸುಗಳು **ಮಾತ್ರಾಗಣ** ಆಧಾರಿತ ಛಂದಸ್ಸುಗಳು.

**ಕಂದ** : ಮಾತ್ರಾಗಣ ಆಧಾರಿತ ಛಂದಸ್ಸುಗಳಲ್ಲಿ **ಕಂದ** ಕೂಡಾ ಒಂದು. ಇದು **ಚೌಪದಿ**ಯಾಗಿರುತ್ತದೆ. ಕೊಟ್ಟಿರುವ ಪದ್ಯದ ಆಧಾರದಿಂದ ಇದರ ಲಕ್ಷಣಗಳನ್ನು ತಿಳಿದುಕೊಳ್ಳಬಹುದು.

— — | U — U | — — |
ಕಾ ವೇ | ರಿ ಯಿಂದ | ಮಾ ಗೋ |

— U U | U U — | U — U | — — | U U — |
ದಾ ವ ರಿ | ವ ರ ಮಿ | ರ್ದ ನಾಡ | ದಾ ಕ | ನ್ನ ಡ ದೊಳ್ |

— U U | U U U U | — U U |
ಭಾ ವಿ ಸಿ | ದ ಜ ನ ಪ | ದಂ ವ ಸು |

— U U | U U — | U U U U | U U U U | — — |
ಧಾ ವ ಳ | ಯ ವಿ ಲೀ | ನ ವಿ ಶ ದ | ವಿ ಷ ಯ ವಿ | ಶೇ ಷಂ |

ಈ ಪದ್ಯದಲ್ಲಿ ನಾಲ್ಕು ಪಾದಗಳಿವೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ ತಲಾ ಹನ್ನೆರಡು ಮಾತ್ರೆಗಳಿವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ತಲಾ ಇಪ್ಪತ್ತು ಮಾತ್ರೆಗಳಿವೆ. ಒಂದು ಮತ್ತು ಮೂರನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಪರಸ್ಪರ ಸಮವಾಗಿವೆ. ಹಾಗೆಯೇ ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿವೆ. ಹಾಗಾಗಿ ಮೊದಲೆರಡು ಪಾದಗಳನ್ನು **ಪೂರ್ವಾರ್ಧ** ಎಂತಲೂ ಮೂರು ಮತ್ತು ನಾಲ್ಕನೆಯ ಪಾದಗಳನ್ನು **ಉತ್ತರಾರ್ಧ**ವೆಂತಲೂ ಕರೆಯಬಹುದು. ಪ್ರತಿಪಾದಗಳೂ ತಲಾ **ನಾಲ್ಕು ಮಾತ್ರೆಗಳ ಗಣದಂತೆ** ವಿಭಾಗಿಸಲ್ಪಟ್ಟಿವೆ.

**ಲಕ್ಷಣ :**

- ನಾಲ್ಕು ಪಾದಗಳಿರಬೇಕು.
- ಒಂದು ಮತ್ತು ಮೂರನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳಿರಬೇಕು.
- ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳಿರಬೇಕು.
- ಪ್ರತಿ ಪಾದವೂ ಆದಿಪ್ರಾಸದಿಂದ ಕೂಡಿರಬೇಕು.

©KTBS Not to be republished

**ಷಟ್ಪದಿ** : ಆರು ಪಾದಗಳಿಂದ ಕೂಡಿರುವ ಪದ್ಯವೇ **ಷಟ್ಪದಿ.** ಷಟ್ಪದಿಯಲ್ಲಿ **ಶರ, ಕುಸುಮ, ಭೋಗ, ಭಾಮಿನಿ, ವಾರ್ಧಕ, ಪರಿವರ್ಧಿನಿ** ಎಂಬ ಆರು ವಿಧಗಳಿವೆ. **ಭಾಮಿನಿ ಷಟ್ಪದಿ** ಇಂತಿದೆ:

| | | | | | | |
|---|---|---|---|---|---|---|
| — U | UU — | U U U | U U — | | | |
| ತೋಹಿ | ನಲಿ ತಾ | ನಿ ರು ಳು | ಶ ರ ಸ | | | |
| —U | — U U | — U | U U — | | | |
| ನ್ನಾಹ | ನಾ ಗಿ ರೆ | ತಾಂಡ | ವ ನು ತ | | | |
| —U | U U — | UUU | U U U U | U U U | — — | — |
| ದ್ವಾಹಿ | ನಿ ಯೊಳ | ದ್ದಿದನು | ಕ ರ ವ ತಿ | ಗೆ ಯನು | ಕೈ ನೀ | ಡಿ |
| — U | U U U U | U U U | — U U | | | |
| ಮೋಹಿ | ಸಿ ತು ಘುಳು | ಘುಳು ನಿ | ನಾ ದ ವ | | | |
| — U | —U U | — U | U U — | | | |
| ರಾ ಹ | ನಿ ಸ್ವ ನ | ದಂ ತೆ | ಮು ನಿಯೆಂ | | | |
| — U | —U U | — U | U U U U | —U | UUUU | — |
| ಬೂಹೆ | ಕೊಳ್ಳ ದೆ | ಕೊಂಡು | ಹ ರಿ ದು ದು | ಚಿ ತ್ತ | ವಫಪಥ | ಕೆ |

ಈ ಪದ್ಯದಲ್ಲಿ ಆರು ಪಾದಗಳಿವೆ. ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳಲ್ಲಿ ತಲಾ ೧೪ ಮಾತ್ರೆಗಳಿವೆ. ಮೂರು ಮತ್ತು ಆರನೆಯ ಪಾದಗಳಲ್ಲಿ ತಲಾ ೨೧ ಮಾತ್ರೆ ಮತ್ತು ಒಂದು ಗುರು ಇದೆ. ಮಾತ್ರಾಸಂಖ್ಯೆಯ ಆಧಾರದಿಂದ ನೋಡಿದಾಗ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಒಂದಕ್ಕೊಂದು ಸಮ. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮ. ಹಾಗಾಗಿ ಒಂದು, ಎರಡು ಮತ್ತು ಮೂರನೆಯ ಪಾದಗಳನ್ನು **ಪೂರ್ವಾರ್ಧ**ವೆಂತಲೂ ನಾಲ್ಕು, ಐದು ಮತ್ತು ಆರನೆಯ ಪಾದಗಳನ್ನು **ಉತ್ತರಾರ್ಧ**ವೆಂತಲೂ ಕರೆಯಬಹುದು. ಪ್ರತಿಪಾದಗಳ ಮಾತ್ರೆಗಳನ್ನು ಮೂರರ ಅನಂತರ ನಾಲ್ಕು ಮಾತ್ರೆಗಳ ಗಣಗಳಂತೆ ವಿಭಾಗಿಸಲಾಗಿದೆ. ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರವನ್ನು ಗಣಕ್ಕೆ ಗಣಿಸಲಾಗಿಲ್ಲ.

**ಲಕ್ಷಣ :**

- ಆರು ಪಾದಗಳಿರಬೇಕು.
- ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ತಲಾ ಎರಡೆರಡು ಗಣಗಳಿರಬೇಕು. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳು ಮತ್ತು ಒಂದು ಗುರು ಇರಬೇಕು.
- ಪ್ರತಿಪಾದವೂ ಆದಿಪ್ರಾಸದಿಂದ ಕೂಡಿರಬೇಕು.

©KTBS Not to be republished

## ● ಅಭ್ಯಾಸ – ಅರಿವು

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಮಾತ್ರೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.

೨. ಮಾತ್ರಾಗಣ ಎಂದರೇನು? ಅದರ ವಿಧಗಳಾವುವು? – ತಿಳಿಸಿ

೩. ಕಂದಪದ್ಯದ ಲಕ್ಷಣಗಳೇನು?

೪. ಷಟ್ಪದಿ ಎಂದರೇನು? ಭಾಮಿನಿಷಟ್ಪದಿಯ ಲಕ್ಷಣಗಳೇನು?

## ● ಪ್ರಾಯೋಗಿಕ ಭಾಷಾಭ್ಯಾಸ

೧. **ವಾತ್ಸಲ್ಯ** ಪದ್ಯದ ನಾಲ್ಕನೆಯ (ನರರು __ __ __ __ __ __ಹರಿವೆಂದ) ಚರಣಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ.

## ● ಪಠ್ಯಾಧಾರ ಚಟುವಟಿಕೆ

**ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. **ವಾತ್ಸಲ್ಯ** ಪದ್ಯದ ಮೊದಲ ಚರಣ (ಅಂಬುಜಾನನೆ __ __ __ __ __ __ ಜೀವನವ) ವನ್ನು ಕಂಠಪಾಠ ಮಾಡಿ.

### ಹೆಚ್ಚಿನ ಓದು

✦ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ಪ್ರಕಟಿಸಿರುವ **ಕುಮಾರವಾಲ್ಮೀಕಿ ವಿರಚಿತ ತೊರವೆರಾಮಾಯಣ ಸಂಪುಟ – ೧ ಮತ್ತು ೨ ಕೃತಿಯನ್ನು** ಓದಿ.

✦ ✦ ✦ ✦ ✦

©KTBS Not to be republished

## ಭಾಗ – ೨

# ಪಥ್ಯ ಪೋಷಕ ಅಧ್ಯಯನ

## ೧. ನಮ್ಮ ಹೃದಯ ನಮ್ಮ ಕೈಯಲ್ಲಿ

**ಮೂಲ ಲೇಖಕ: ಡಾ. ಬಿ. ಎಂ.ಹೆಗ್ಡೆ**
**ಅನುವಾದ–ಡಾ. ಮಹಾಬಲೇಶ್ವರ ರಾವ್**

### ನಿಗದಿತ ಮೂಲ ವೈದ್ಯಕೀಯ ಗದ್ಯ

ಸದ್ಯದ ಜಗತ್ತಿನಲ್ಲಿ ರಸ್ತೆ ಅಪಘಾತ ಹಾಗೂ ಕ್ಯಾನ್ಸರ್‌ನಿಂದ ಬಹಳ ಮಂದಿ ಸಾವಿಗೀಡಾಗುತ್ತಿದ್ದಾರೆ. ಇವೆರಡನ್ನು ಬಿಟ್ಟರೆ ಹೃದಯಾಘಾತ ಅತ್ಯಂತ ಮಾರಣಾಂತಿಕವಾಗಿದೆ. ಹೃದಯಾಘಾತದ ಪ್ರಮಾಣವನ್ನು ಪೂರ್ತಿಯಾಗಿ ನಿವಾರಣೆ ಮಾಡಲು ಅಸಾಧ್ಯ. ಆದರೆ ಕೊಂಚ ಜಾಗರೂಕತೆ ವಹಿಸಿದರೆ ನಮ್ಮ ಹೃದಯ ಹೆಚ್ಚು ಕಾಲ ದಕ್ಷತೆಯಿಂದ ಕೆಲಸ ಮಾಡುವುದು.

ಹೃದಯಾಘಾತಕ್ಕೆ ಪ್ರಮುಖ ಕಾರಣವೆಂದರೆ ಯಾರಿಂದಲೂ ಬದಲಿಸಲಾಗದ ನಮ್ಮ ಆನುವಂಶೀಯತೆ. ನಮ್ಮ ತಂದೆ–ತಾಯಿಗಳು ಹೃದಯ ಸಂಬಂಧಿ ಕಾಯಿಲೆಗಳಿಂದ ನರಳುತ್ತಿದ್ದಿರಬಹುದು ಅಥವಾ ಇಂಥ ಪ್ರಕರಣಗಳಾಗಿದ್ದಿರಬಹುದು. ನಾವು ನಮ್ಮ ಪಾಲಕರಿಂದ ಪಡೆದುಕೊಂಡ 'ಜೀನ್'ಗಳಲ್ಲಿ ಈ ಲಕ್ಷಣಗಳು ನಮಗೆ ಬಳುವಳಿಯಾಗಿ ಬಂದಿರುತ್ತವೆ. ಹೃದಯಾಘಾತಕ್ಕೆ ನಿಖರ ಕಾರಣಗಳೇನು ಎಂಬುದು ತಿಳಿದಿಲ್ಲವಾದರೂ ಅದಕ್ಕೆ ಪೂರಕ ಹಾಗೂ ಪ್ರೇರಕವಾದ ಹಲವಾರು ಅಂಶಗಳನ್ನು ರೋಗಶಾಸ್ತ್ರಜ್ಞರು ಕಂಡುಕೊಂಡಿದ್ದಾರೆ. ಈ ಅಂಶಗಳನ್ನು ಅಪಾಯಕಾರಿ ಅಂಶಗಳೆನ್ನುತ್ತಾರೆ. ಇವು ಯಾವುವು? ಎಂಬುದನ್ನೀಗ ತಿಳಿದುಕೊಳ್ಳೋಣ.

### ಊಟ – ಉಪಾಹಾರ

ಸಾಮಾನ್ಯವಾಗಿ ನೀವು ಎಷ್ಟು ತಿನ್ನಬೇಕೆಂದು ಬಯಸುತ್ತೀರೊ ಅದರಲ್ಲಿ ಅರ್ಧದಷ್ಟನ್ನು ಮಾತ್ರ ತಿನ್ನುವಿರಾದರೆ ಹೃದಯಾಘಾತವನ್ನು ತಡೆಗಟ್ಟಬಹುದು. ಕೆಲವೊಂದು ಬಗೆಯ ಆಹಾರ ಪದಾರ್ಥಗಳನ್ನು ವರ್ಜಿಸುವ ಕುರಿತು ವಿಪರೀತ ಗೀಳು ನಿಮಗಿದ್ದರೆ ಅದರಿಂದ ಹೃದಯಕ್ಕೆ ಹಾನಿಯಾದೀತು. ನಿಮಗೆ ಏನು ತಿನ್ನಬೇಕೆನಿಸುತ್ತದೋ ಅದನ್ನು ತಿನ್ನಿ; ಆದರೆ ಮಿತವಾಗಿ ಹಿತವಾಗಿ ತಿನ್ನಿ. ಪ್ರಕೃತಿಯಲ್ಲಿ ಲಭಿಸುವ ಆಹಾರ ನಮ್ಮ ಶರೀರಕ್ಕೆ ಅತ್ಯುಪಯುಕ್ತ. ನಮ್ಮ ನಾಲಗೆ ರುಚಿಗೆ ತಕ್ಕ ಹಾಗೆ ಇರಬೇಕೆಂದು ಪ್ರಕೃತಿ ಸಂಪತ್ತಿನ ಸಹಜ ರುಚಿ ಹಾಳು ಮಾಡಬಾರದು.

©KTBS Not to be republished

**ಮದ್ಯಪಾನ – ಧೂಮಪಾನ**

ಮದ್ಯಪಾನ ಮಾಡುವುದು ಹೃದಯಕ್ಕೆ ಒಳ್ಳೆಯದಲ್ಲ. ಮದ್ಯಪಾನದಿಂದ ಹೃದಯದ ಸ್ನಾಯುಗಳು ತಮ್ಮ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುತ್ತವೆ. ಇದರಿಂದಾಗಿ ವ್ಯಕ್ತಿ ಅಪಾಯಕ್ಕೆ ತುತ್ತಾಗುತ್ತಾನೆ. ಮದ್ಯವು ಹೃದಯದ ಮೇಲೆ ಬೀರುವ ದುಷ್ಪರಿಣಾಮಗಳ ಬಗೆಗೆ ಇತ್ತೀಚಿನ ಸಂಶೋಧನೆಗಳು ಹೆಚ್ಚಿನ ಬೆಳಕು ಚೆಲ್ಲಿವೆ. ಹೀಗಾಗಿ ಅತ್ಯಲ್ಪ ಪ್ರಮಾಣದ ಮದ್ಯ ಸೇವನೆ ಅಪಾಯಕಾರಿಯಲ್ಲ ಎಂದು ಉಪದೇಶಿಸುವುದು ಮೂರ್ಖತನವಾಗುತ್ತದೆ. ಮದ್ಯಪಾನಿಗಳಲ್ಲಿ ಆಕಸ್ಮಿಕ ಅಥವಾ ದಿಢೀರ್ ಸಾವು ತೀರ ಸಾಮಾನ್ಯ. ಧೂಮಪಾನ ಇನ್ನೊಂದು ಅಪಾಯಕಾರಿ ಅಂಶ. ಈ ಅಪಾಯಕಾರಿ ಅಂಶವನ್ನು ಕಡೆಗಣಿಸುವುದರಿಂದ ಮೃತ್ಯುವಿಗೆ ಆಹ್ವಾನ ನೀಡಿದಂತೆ.

**ವ್ಯಾಯಾಮ**

ರಟ್ಟೆಮುರಿದು ಕೆಲಸ ಮಾಡುವವರಿಗೆ ಹೃದಯಾಘಾತವಾಗುವುದು ಕಡಿಮೆ. ಕೂತಲ್ಲೇ ಕೂತು ಕೆಲಸ ಮಾಡುವವರಲ್ಲಿ ಹೃದಯಾಘಾತ ತೀರ ಸಾಮಾನ್ಯ ಎಂಬ ಭಾವನೆ ಇದೆ. ಇದಕ್ಕೆ ಸಂಬಂಧಪಟ್ಟಂತೆ ಲಭ್ಯವಿರುವ ವೈಜ್ಞಾನಿಕ ಮಾಹಿತಿ ತೃಪ್ತಿಕರವಾಗಿಲ್ಲ. ಕಷ್ಟಪಟ್ಟು ದುಡಿಯುವ ಮೀನುಗಾರರು ಹಾಗೂ ಕೂತು ಕೆಲಸ ಮಾಡುವ ವ್ಯಾಪಾರಸ್ಥರು – ಇವರ ನಡುವೆ ಹೃದಯಾಘಾತದ ಪ್ರಮಾಣದಲ್ಲಿ ವಿಶೇಷ ವ್ಯತ್ಯಾಸಗಳಿಲ್ಲ ಎಂಬುದನ್ನು ನಾವು ಮಂಗಳೂರಿನಲ್ಲಿ ನಡೆಸಿದ ಒಂದು ಸಮೀಕ್ಷೆಯಲ್ಲಿ ಕಂಡುಕೊಂಡಿದ್ದೇವೆ. ಒಂದೇ ಒಂದು ವ್ಯತ್ಯಾಸವೆಂದರೆ ಮೀನುಗಾರರಿಗೆ ಬದುಕಿನಲ್ಲಿ ತೀರ ತಡವಾಗಿ ಹೃದಯಾಘಾತವಾದರೆ ಕೂತು ಕೆಲಸ ಮಾಡುವವರಿಗೆ ಸಣ್ಣ ಪ್ರಾಯದಲ್ಲಿ ಹೃದಯಾಘಾತ ಆಗಬಹುದು. ವಿಪರೀತ ಸ್ಪರ್ಧಾತ್ಮಕವಾದ ಆಟೋಟ ಹಾಗೂ ವಿಪರೀತ ಶ್ರಮ ಮತ್ತು ಒತ್ತಡಗಳು ಹೃದಯದ ಆರೋಗ್ಯಕ್ಕೆ ಉತ್ತಮವಲ್ಲ. ಅತಿಯಾಗಿ ತಿನ್ನದೆ, ದೇಹದ ತೂಕ ಹೆಚ್ಚಾಗದಂತೆ ನೋಡಿಕೊಂಡು ದೈನಂದಿನ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋದರೆ ಪ್ರತಿಯೊಬ್ಬ ವ್ಯಕ್ತಿಗೂ ತಕ್ಕಷ್ಟು ವ್ಯಾಯಾಮ ಸಿಕ್ಕಿಯೇ ಸಿಗುತ್ತದೆ. ಇದರಿಂದ ಹೃತ್ಕ್ರಿಯೆ ಸಮರ್ಪಕವಾಗಿ ನಡೆಯುತ್ತದೆ.

**ಒತ್ತಡ**

ಜೀವನದಲ್ಲಿ ಸಾಕಷ್ಟು ಒತ್ತಡಗಳಿವೆ. ಮಗುವಿಗೆ ಜನ್ಮ ನೀಡಲಿರುವ ತಾಯಿ, ಮೊದಲ ಬಾರಿ ಶಾಲೆಗೆ ಕಾಲಿಟ್ಟ ಹುಡುಗ, ಸಂದರ್ಶನ ಎದುರಿಸಲು ಹೊರಟಿರುವ ತರುಣ/ತರುಣಿ, ಪರೀಕ್ಷೆಗೆ ತಯಾರಾಗುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿ, ಹಸೆಮಣೆ ಏರ ಹೊರಟ ತರುಣ/ತರುಣಿಯರು – ಇವರೆಲ್ಲರೂ ಒತ್ತಡಕ್ಕೆ ಒಳಗಾಗುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಒತ್ತಡವೆಂಬುದು ಜೀವನದ ಅವಿಭಾಜ್ಯ ಅಂಗ. ಒತ್ತಡವಿಲ್ಲದೆ ಬದುಕಿರಿ ಎಂದು ಸಲಹೆ ನೀಡುವುದು ಕಷ್ಟ. ಸಾಮಾನ್ಯ ಸಂದರ್ಭಗಳಲ್ಲಿ ಒತ್ತಡ ಹೃದಯದ ಮೇಲೆ ಯಾವ ದುಷ್ಪರಿಣಾಮವನ್ನೂ ಬೀರುವುದಿಲ್ಲ. ಆದರೆ ತೀವ್ರ ಹತಾಶೆ, ಅಸಾಧಾರಣ

© KTBS Not to be republished

ಒತ್ತಡ ಅಥವಾ ಮಾಮೂಲಿ ಒತ್ತಡಕ್ಕೆ ವಿಪರೀತ ಪ್ರತಿಕ್ರಿಯೆ – ಇವು ಮನುಷ್ಯನನ್ನು ಕೊಲ್ಲುತ್ತವೆ. ನೀವು ಕೆಲಸವನ್ನು ಪ್ರೀತಿಸುವವರಾದರೆ, ನೀವು ದಿನದ ಇಪ್ಪತ್ತನಾಲ್ಕು ಗಂಟೆ ಕೆಲಸ ಮಾಡಿದರೂ ಒತ್ತಡದ ಅನುಭವವಾಗುವುದಿಲ್ಲ.

**ನಿದ್ರೆ**

ಆರೋಗ್ಯಕರ ಜೀವನ ನಡೆಸಲು ಒಬ್ಬ ವ್ಯಕ್ತಿಗೆ ದಿನದಲ್ಲಿ ಸರಾಸರಿ ಐದರಿಂದ ಏಳು ಗಂಟೆ ಅವಧಿಯ ವಿಶ್ರಾಂತಿದಾಯಕ ನಿದ್ರೆಯ ಆವಶ್ಯಕತೆ ಇದೆ. ಕುತೂಹಲದ ಸಂಗತಿ ಎಂದರೆ, ಪ್ರತಿನಿತ್ಯ ಎಂಟು ಗಂಟೆಗಿಂತಲೂ ಹೆಚ್ಚು ಕಾಲ ನಿದ್ರೆ ಮಾಡುವುದು ಆರೋಗ್ಯದ ದೃಷ್ಟಿಯಿಂದ ಹಾನಿಕಾರಕ.

## ಕಲಿತ ಪಠ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಹೃದಯಾಘಾತಕ್ಕೆ ಪ್ರಮುಖ ಕಾರಣಗಳೇನು?

೨. ಹೃದಯಾಘಾತದ ಪ್ರಮಾಣ ಯಾರಲ್ಲಿ ಕಡಿಮೆ ಇರುತ್ತದೆ?

೩. ಒತ್ತಡದಿಂದ ಪಾರಾಗುವುದು ಹೇಗೆ?

೪. ಮದ್ಯಪಾನ ಮತ್ತು ಧೂಮಪಾನದಿಂದಾಗುವ ದುಷ್ಪರಿಣಾಮಗಳೇನು? – ವಿವರಿಸಿ.

೫. ಹೃದಯಾಘಾತವನ್ನು ತಡೆಗಟ್ಟಲು ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳೇನು?

✦ ✦ ✦ ✦ ✦

©KTBS Not to be republished

# ೨. ಸಾರ್ಥಕ

– ದಿನಕರ ದೇಸಾಯಿ

ನನ್ನ ದೇಹದ ಬೂದಿ – ಗಾಳಿಯಲಿ ತೂರಿಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ:
ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದುಬರೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ–ಹೊಳೆಯಲ್ಲಿ ಹರಿಯ ಬಿಡಿ
ತೇಲಿ ಬೀಳಲಿ ಮೀನ ಬಾಯಿಯಲ್ಲಿ;
ಮುಷ್ಟಿ ಬೂದಿಯ ತಿಂದು – ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ–ಕೊಳದಲ್ಲಿ ಬೀಗಿ ಬಿಡಿ
ತಾವರೆಯು ದಿನದಿನವೂ ಅರಳುವಲ್ಲಿ;
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ಸತ್ತಮೇಲಾದರೂ ದೇಹ ಸೇವೆಗೆ ನಿಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ದೇಹ,
ನಿಜಸೇವೆ ಗೈಯಲಿಕೆ ಬರಲಿ ಮುಂದು.

## ಕಲಿತ ಪದ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?

೨. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?

೩. ದೇಹ ಏಕೆ ವ್ಯರ್ಥವಾಗಿದೆ?

೪. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? – ವಿವರಿಸಿ.

೫. **ಸಾರ್ಥಕ** ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ?

✦ ✦ ✦ ✦ ✦

©KTBS Not to be republished

# ೩. ಭೂಕೈಲಾಸ

## ಪೌರಾಣಿಕ ನಾಟಕ

ರಚನೆ: ಪಾರಂಪಳ್ಳಿ. ನರಸಿಂಹಐತಾಳ

### ದೃಶ್ಯ – ಸಮುದ್ರತೀರ

(ರಾವಣನ ಕೈಯಲ್ಲಿ ಶಿವನ ಆತ್ಮಲಿಂಗ)

**ರಾವಣ** : ಆಹಾ! ಪಶುಪತಿ! ಇದೇನು ನಿನ್ನ ಲೀಲೆ? ಈ ತಾಣ ಅದೆಷ್ಟು ಸೊಗಸಾಗಿದೆ! ಚಿಲಿಪಿಲಿಗುಟ್ಟುವ ಪಕ್ಷಿಗಳ ಗುಂಪು, ತಣ್ಣನೆ ತೀಡಿಬರುವ ತಂಗಾಳಿ. ಪಶ್ಚಿಮ ಸಮುದ್ರದಲ್ಲಿ ಮುಳುಗುತ್ತಿರುವ ಸೂರ್ಯ. ಓಹ್! ಸಂಧ್ಯಾಕಾಲ ಬರುತ್ತಿದೆ. ನನ್ನ ಅನುಷ್ಠಾನಕ್ಕೆ ಸಮಯ ಮೀರುವುದಲ್ಲ.! ಏನು ಮಾಡಲಿ! ಈ ಆತ್ಮಲಿಂಗವನ್ನು ಯಾರ ಕೈಗೆ ಒಪ್ಪಿಸಲಿ? ಓ, ವಟುವೊಬ್ಬ ಇತ್ತಲೇ ಬರುತ್ತಿರುವನು. ಆತನನ್ನೇ ಕರೆಯುವೆ. ಅಯ್ಯಾ ಕುಮಾರ! ಇತ್ತ ಬಾ.

**ವಟು** : (ಪ್ರವೇಶಿಸಿ) ಏನಯ್ಯಾ, ನನ್ನನ್ನೇಕೆ ಕರೆದೆ?

**ರಾವಣ** : ನಿನ್ನ ಹೆಸರೇನು ಪುಟ್ಟ?

**ವಟು** : ನನ್ನ ಹೆಸರು ಗಣಪ ಎಂದು.

**ರಾವಣ** : ನಿನ್ನ ತಂದೆ–ತಾಯಿ ಯಾರು?

**ವಟು** : ತಂದೆ ಪರಮೇಶ್ವರ, ತಾಯಿ ಶಾಂಭವಿ.

**ರಾವಣ** : ನನಗೊಂದು ಕೆಲಸ ಆಗಬೇಕಾಗಿದೆ; ಮಾಡಿಕೊಡುವೆಯಾ?

**ವಟು** : ನನ್ನಿಂದ ಆಗುವುದಾದರೆ ಮಾಡುತ್ತೇನೆ.

**ರಾವಣ** : ನೋಡು ಗಣಪ! ನಾನು ಸಂಧ್ಯಾವಂದನೆ ಮಾಡಬೇಕಾಗಿದೆ. ನನ್ನ ಕೈಯಲ್ಲಿ ಇರುವ ಈ ಲಿಂಗವನ್ನು ನೆಲದಲ್ಲಿ ಇಡುವಂತಿಲ್ಲ. ಸಂಧ್ಯಾವಂದನೆ ಮುಗಿಯುವವರೆಗೆ ಇದನ್ನು ಹಿಡಿದುಕೊಂಡಿರುವಿಯಾ?

**ವಟು** : ಆಗಲಿ, ಇತ್ತ ಕೊಡಿ (ತೆಗೆದುಕೊಳ್ಳುವನು) ಅಯ್ಯೋ! ಇದು ಬಹಳ ಭಾರವಾಗಿದೆ. ನನ್ನಿಂದಾಗದು.

**ರಾವಣ** : ಹೆದರಬೇಡ! ನನ್ನ ಜಪ ಮುಗಿಯುವವರೆಗೆ ಇದನ್ನು ಹಿಡಿದಿರು.

**ವಟು** : ಆದರೆ ಒಂದು ಮಾತು. ನನ್ನ ಕೈಲಾಗದಿದ್ದರೆ ನಿನ್ನನ್ನು ಕರೆಯುತ್ತೇನೆ. ಮೂರು ಬಾರಿ ಕರೆದಾಗಲೂ ಬಾರದಿದ್ದರೆ ನೆಲದ ಮೇಲೆ ಇಟ್ಟು ಬಿಡುತ್ತೇನೆ.

**ರಾವಣ** : ಬೇಡ ಬೇಡ ಹಾಗೆ ಮಾಡಬೇಡ. ನಾನು ಆದಷ್ಟು ಬೇಗ ಬಂದು ಬಿಡುವೆ. (ರಾವಣ ಹೋಗುವನು, ನಾರದ ಬರುವನು)

**ನಾರದ** : ಸದ್ಯ ಶಿವನ ಆತ್ಮಲಿಂಗವನ್ನು ರಾವಣ ನಿನ್ನ ಕೈಗೊಪ್ಪಿಸಿದ್ದಾನೆ. ಆದಷ್ಟು ಬೇಗ ನೆಲದಲ್ಲಿ ಇಟ್ಟುಬಿಡು.

**ವಟು** : ಅದು ಹೇಗೆ ಸಾಧ್ಯ ನಾರದರೆ. ಇದನ್ನು ಹಿಡಿದುಕೊಂಡಿರುತ್ತೇನೆಂದು ಮಾತು ಕೊಟ್ಟಿರುವೆ. ವಚನಭಂಗ ಮಾಡಲೇ?

©KTBS Not to be republished

**ನಾರದ :** ವಚನಭಂಗ ಮಾಡಬಾರದು. ಆದರೆ ನೀನೇ ಅವನೊಡನೆ ಹೇಳಿದಂತೆ ಮೂರುಬಾರಿ ಕರೆದು ಕೆಳಗಿಡು.

**ವಟು :** ಆಗಲಿ ಹಾಗೆಯೇ ಮಾಡುತ್ತೇನೆ. ರಾವಣಾss (ನೇಪಥ್ಯದಲ್ಲಿ ರಾವಣ–ಅರ್ಘ್ಯ ಕೊಡುತ್ತಿದ್ದೇನೆ......)

**ನಾರದ :** ಅಂಬಾತನಯ! ಇನ್ನೊಮ್ಮೆ ಕೂಗಿಬಿಡು.

**ವಟು :** ರಾವಣಾss ಭಾರ ತಡೆಯಲಾರೆ ಬೇಗ ಬಾsss (ನೇಪಥ್ಯದಲ್ಲಿ "ಸಂಧ್ಯಾವಂದನೆ ಮುಗಿಯುತ್ತಾ ಬಂತು. ಇದೋ ಬಂದೆ")

**ನಾರದ :** ಗಣೇಶ! ಇದು ಅಂತಿಮ ಕ್ಷಣ. ನಮ್ಮನ್ನು ಹಾಲಿನಲ್ಲಾದರೂ ಹಾಕು ನೀರಲ್ಲಾದರೂ ಹಾಕು....ನಿನ್ನಿಷ್ಟ ನಾನಿನ್ನು ಬರುತ್ತೇನೆ.....ನಾರಾಯಣ..... (ನಿರ್ಗಮನ)

**ವಟು :** ಒಳ್ಳೆಯ ನಾರದರು ! ಪಾಪ ಅವರಿಗೂ ಭಯ. ಈ ರಾವಣನ ಅರಮನೆ ಕಾಯುವುದು ಯಾರಿಗಾದರೂ ಕಷ್ಟವೇ. ! ಓ! ಅನುಷ್ಠಾನ ಮುಗಿಯುವಂತಿದೆ. ರಾವಣಾss ಭಾರ ತಡೆಯಲಾರೆ. ನೀನು ಬರಲಿಲ್ಲ. ಇದೋ ಲಿಂಗವನ್ನು ಇಡುತ್ತೇನೆ. ಇಟ್ಟೇಬಿಟ್ಟೆ (ಕೆಳಗಿರಿಸುವನು)

**ರಾವಣ :** ಬಂದೆ....ಬಂದೆ....ಗಣಪ! ಇಡಬೇಡ ಇಡಬೇಡ (ಪ್ರವೇಶಿಸಿ) ಅಯ್ಯೋ ಎಂತಹ ಅಚಾತುರ್ಯ ಮಾಡಿದೆ. ಘೋರ ತಪವನ್ನಾಚರಿಸಿ ಸಾಧಿಸಿದ ನನ್ನ ಎಲ್ಲಾ ಶ್ರಮ ವ್ಯರ್ಥವಾಯಿತು. ಮಾತೆಗೆ ಏನು ಹೇಳಲಿ (ದು:ಖಿಸುವನು)

**ನಾರದ :** (ಪ್ರವೇಶಿಸಿ) ಇದೇನು ಲಂಕೇಶ್ವರ! ಅತುಲ ಪರಾಕ್ರಮಿಯಾದ ನೀನು ಇದೇಕೆ ದು:ಖಪಡುತ್ತಿರುವೆ?

**ರಾವಣ :** (ಕೋಪದಿಂದ) ನಾನು ಅತ್ಯಂತ ಪರಿಶ್ರಮದಿಂದ ಪಡೆದ ಶಿವನ ಆತ್ಮಲಿಂಗವನ್ನು ಈ ಪೋರ ನೆಲದ ಮೇಲೆ ಇಟ್ಟು ನನ್ನಾಸೆಯನ್ನು ಮಣ್ಣು ಮಾಡಿದ (ಬಾಲಕನ ನೆತ್ತಿಗೆ ಗುದ್ದುವನು. ಗಣಪನ ಕುತ್ತಿಗೆ ಕುಗ್ಗಿ ಹೋಗುವುದು)

**ನಾರದ :** ಸಾವಧಾನ ರಾವಣೇಶ್ವರ! ತಪ್ಪು ಮಾಡಿದವ ನೀನು. ಇವನಾರು ಗೊತ್ತೇ?

**ರಾವಣ :** ಯಾರಾದರೆ ನನಗೇನು?

**ನಾರದ :** ಹಾಗಲ್ಲ ಲಂಕೇಶ! ಇವನು ಶಿವಪಾರ್ವತಿಯರ ಮಗ, ಪ್ರಮಥ ಗಣಗಳಿಗೊಡೆಯ, ಗಣಪತಿ.

**ರಾವಣ :** ಗಣಪತಿಯೇ? ಇವನೇಕೆ ನನ್ನ ಕಾರ್ಯಕ್ಕೆ ತಡೆಯೊಡ್ಡಿದ?

**ನಾರದ :** ಯಾವುದೇ ಕಾರ್ಯ ಆರಂಭಿಸುವ ಮೊದಲು ಈತನನ್ನು ಪೂಜಿಸಬೇಕೆಂಬುದು ಶಿವ ಪಾರ್ವತಿಯರ ಆಜ್ಞೆ, ಪೂಜಿಸದಿದ್ದರೆ ಈತ ವಿಘ್ನಕಾರಕನಾಗುತ್ತಾನೆ. ಕಾರ್ಯ ಫಲಿಸುವುದಿಲ್ಲ. ನೀನು ತಪವನ್ನಾಚರಿಸುವ ಮೊದಲು ಇವನನ್ನು ಪೂಜಿಸಲಿಲ್ಲ. ಅದಕ್ಕೆ ಹೀಗಾಯ್ತು.

**ರಾವಣ :** ಹೌದೇ? ಅಯ್ಯಾ ಗಣೇಶ! ಕ್ಷಮಿಸು ಸ್ವಾಮೀ! (ನಮಿಸುವನು)

**ವಟು :** ಶುಭಮಸ್ತು!

© KTBS Not to be republished

**ರಾವಣ :** (ಮರುಗುತ್ತಾ) ಅಯ್ಯೋ......ಮಾತೆಯ ಆಸೆಯನ್ನು ತೀರಿಸಲಾಗಲಿಲ್ಲವಲ್ಲಾ! ಈ ಆತ್ಮಲಿಂಗವನ್ನು ಕಿತ್ತು ಒಯ್ಯಲೇಬೇಕು. ಓಂ ನಮಃ ಶಿವಾಯ (ಕೀಳಲು ಪ್ರಯತ್ನಿಸುತ್ತಾನೆ. ಪ್ರತಿ ಬಾರಿಯೂ ಲಿಂಗದ ಒಂದು ಸಣ್ಣ ಭಾಗ ರಾವಣನ ಕೈಗೆ ಬರುತ್ತದೆ. ಹೀಗೆ ಬಂದ ನಾಲ್ಕು ತುಂಡುಗಳನ್ನು ನಾಲ್ಕು ದೆಸೆಗೆ ಬಿಸಾಡುವನು. ಕೊನೆಗೆ ದಣಿದ ರಾವಣ ಪ್ರಜ್ಞೆತಪ್ಪಿ ಬೀಳುವನು. ಶಿವಪಾರ್ವತಿಯರು ಪ್ರತ್ಯಕ್ಷರಾಗುವರು)

**ಶಿವ :** ಭಕ್ತಾಗ್ರೇಸರ! ರಾವಣ! ಎದ್ದೇಳು.

**ರಾವಣ :** ಪ್ರಭೋ! ಪ್ರತ್ಯಕ್ಷನಾದೆಯಾ ಪರಮೇಶ್ವರಾ! ಎಂತಹ ವರ ದಯಪಾಲಿಸಿದೆ ದೇವಾ? ಆತ್ಮಲಿಂಗವನ್ನು ಕೊಟ್ಟಂತೆ ನಟಿಸಿ ಈ ಸಮುದ್ರ ತೀರದಲ್ಲಿ ನೆಲೆಯೂರುವಂತೆ ಮಾಡಿದೆ. ಮಾತೆ ಕೈಕಸಾದೇವಿಗೆ ಏನೆಂದು ಉತ್ತರ ನೀಡಲಿ.

**ಶಿವ :** ಲಂಕೇಶ! ಹತಾಶೆ, ಕ್ರೋಧಗಳಿಗೆ ವಶನಾಗಬೇಡ. ನಿನ್ನ ತಪ್ಪುಗಳನ್ನು ತಿಳಿದು ತಿದ್ದಿಕೋ. ಮಾತೆಯ ಮಹದಾಸೆ ಈಡೇರಿಸಲು ಬಂದ ನೀನು ಬೇಡಿರುವುದು ಏನನ್ನು? ವಿಶ್ವದ ಸಕಲ ಚರಾಚರಗಳ ಪ್ರಾಣಸ್ವರೂಪವಾದ ಜ್ಯೋತಿರ್ಲಿಂಗವನ್ನು. ಇದು ಸಕಲರಿಗೂ ಸೇರಿದ್ದು. ಮೂರು ಲೋಕಗಳನ್ನು ಗೆದ್ದಿರುವೆನೆಂಬ ಅಹಂಕಾರದಿಂದ ನಿನ್ನ ಸ್ವಾರ್ಥಕ್ಕಾಗಿ ಈ ಆತ್ಮಲಿಂಗವನ್ನು ನಿನ್ನದಾಗಿಸಿಕೊಳ್ಳಲು ಹೊರಟೆ. ಆದರೆ ಆಗಲಿಲ್ಲ. ಅದು ತನ್ನ ಮಹಾಬಲದಿಂದ ನಿನ್ನನ್ನೇ ಗೆದ್ದಿತು. ಹಾಗಾಗಿ ಇನ್ನು ಮುಂದೆ **ಮಹಾಬಲೇಶ್ವರ** ಎಂಬ ಹೆಸರಿನಿಂದ ಈ ಪಶ್ಚಿಮಸಮುದ್ರ ತೀರದಲ್ಲಿ ನೆಲೆಸಿ ಭಕ್ತರಿಂದ ಪೂಜೆಗೊಳ್ಳಲಿ. ಈ ಸ್ಥಳ **ಗೋಕರ್ಣ** ಎಂಬ ಹೆಸರಿನಿಂದ ಪ್ರಸಿದ್ಧಿಗೊಳ್ಳಲಿ. ಮಾತೆ ಕೈಕಸಾದೇವಿಗೆ **ಶಿವನ ಆತ್ಮಲಿಂಗವನ್ನು ಧರೆಗಿಳಿಸುತ್ತೇನೆ** ಎಂದು ನೀನು ನೀಡಿದ ವಚನವೂ ಕೈಗೂಡಿದಂತಾಯ್ತು. ಚಿಂತಿಸಬೇಡ.

**ರಾವಣ :** ಧನ್ಯೋಽಸ್ಮಿ ಮಹಾದೇವ! ಧನ್ಯೋಽಸ್ಮಿ.

## ಕಲಿತ ಪಠ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಆತ್ಮಲಿಂಗವನ್ನು ಪಡೆದು ರಾವಣ ಬಂದು ನಿಂತ ಸ್ಥಳ ಹೇಗಿದೆ?

೨. ರಾವಣ ವಟುವನ್ನು ಏಕೆ ಕರೆದನು?

೩. ವಟುವಿನ ತಂದೆ–ತಾಯಿಯರು ಯಾರು?

೪. ಆತ್ಮಲಿಂಗವನ್ನು ಹಿಡಿದುಕೊಂಡಿರಲು ವಟು ಹಾಕಿದ ನಿಬಂಧನೆ ಏನು?

೫. ರಾವಣನಿಗೆ ಶಿವನಿಂದ ದೊರಕಿದ ಅಭಯ ವಚನವೇನು?

✦ ✦ ✦ ✦ ✦



© KTBS Not to be republished

# ೪. ಸಿಂಧೂ ಸಂಸ್ಕೃತಿ

**ಸಂಗ್ರಹ: ಪಠ್ಯ ಪುಸ್ತಕ ಸಮಿತಿ**

ಭರತಖಂಡದ ಸಂಸ್ಕೃತಿ ಅನೇಕ ಪ್ರಾಚೀನ ಸಂಸ್ಕೃತಿಗಳಿಗಿಂತ ಹೆಚ್ಚು ಪ್ರಾಚೀನ. ಆಧುನಿಕ ಸಂಸ್ಕೃತಿಗಳಿಗಿಂತ ಹೆಚ್ಚು ಆಧುನಿಕ. ಕಾಲದಲ್ಲಿ ಅದು ಪ್ರಾಚೀನ. ದೃಷ್ಟಿಯಲ್ಲಿ ಅದು ಆಧುನಿಕ. ಪ್ರಾಚೀನ ಅರ್ವಾಚೀನಗಳೆರಡನ್ನೂ ಸೇರಿಸುವ ಸಾಮರಸ್ಯದ ಶಕ್ತಿ ಈ ಸಂಸ್ಕೃತಿಗಿದೆ. ಜಗತ್ತಿನ ಸಂಸ್ಕೃತಿಗಳೆಷ್ಟೋ ಅಳಿದು ಹೋಗಿವೆ. ಆದರೆ ಭಾರತೀಯ ಸಂಸ್ಕೃತಿ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದೆ ಅದರ ಅನುಭವದಿಂದ ಪುಷ್ಟಿಗೊಳ್ಳುತ್ತಾ ಬೆಳೆದುಬಂದಿದೆ. ಉತ್ತರದಲ್ಲಿ ಎತ್ತರವಾದ ಹಿಮಾಲಯ, ಉಳಿದ ಮೂರು ಕಡೆ ಭೋರ್ಗರೆವ ಕಡಲು, ಇದರ ಮಧ್ಯದಲ್ಲಿರುವ ಈ ವಿಶಾಲ ಭೂಖಂಡ; ತಾನೇ ಪ್ರತ್ಯೇಕವಾಗಿ ಬೆಳೆಯಲು ಅದರ ಈ ಭೌಗೋಳಿಕ ಸನ್ನಿವೇಶಗಳೂ ಕಾರಣವಾದವು. ಹಿಮಾಲಯವಂತೂ ಅಚ್ಚಳಿಯದ ಪ್ರಭಾವವನ್ನು ಇಲ್ಲಿನ ಸಂಸ್ಕೃತಿಯ ಮೇಲೆ ಬೀರಿದೆ. ಹಿಮಾಲಯ ಸದೃಶವಾಗಿ ಅದನ್ನು ಬೆಳೆಸಿದೆ. ಎಂದೆಂದೂ ಉಳಿಯುವಂತಹ ಮೂಲಭೂತ ಮೌಲ್ಯಗಳನ್ನು ಭಾರತೀಯ ಸಂಸ್ಕೃತಿ ಅತಿ ಪ್ರಾಚೀನ ಯುಗದಲ್ಲೇ ಕಂಡುಕೊಂಡಿತು. ಅದನ್ನು ಜೀವನದಲ್ಲಿ ಅಳವಡಿಸಿಕೊಂಡಿತು. ಮೇಲಿನಿಂದ ಏಟುಗಳು ಬಿದ್ದಂತೆಲ್ಲಾ ಆ ಸಂಸ್ಕೃತಿ ವೃಕ್ಷ ಹಲವು ಶಾಖೆಗಳಾಗಿ ಕವಲೊಡೆಯಿತು. ನಳನಳಿಸಿ ಬೆಳೆಯಿತು.

ಮೊಹೆಂಜೋದಾರೋ-ಹರಪ್ಪಗಳಲ್ಲಿ ಪ್ರಾಕ್ತನ ಸಂಶೋಧನೆಗಳು ನಡೆಯುವುದಕ್ಕೆ ಮುಂಚೆ ಭರತಖಂಡದ ಹೆಸರು ಅತ್ಯಂತ ಪ್ರಾಚೀನ ನಾಗರಿಕತೆಯನ್ನುಳ್ಳ ದೇಶಗಳ ಸಾಲಿನಲ್ಲಿ ಸೇರುತ್ತಿರಲಿಲ್ಲ. ಆದರೆ ಸಿಂಧೂ ತೀರದ ಆ ಪ್ರಾಚೀನ ನಾಗರಿಕತೆಯ ಅವಶೇಷಗಳು ವಿದ್ವಾಂಸರನ್ನು ಚಕಿತಗೊಳಿಸಿದವು. ಭರತಖಂಡದ ಸಂಸ್ಕೃತಿಯ ಇತಿಹಾಸವನ್ನು ಸಾವಿರಾರು ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದುವು. ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾದ ಹಿನ್ನೆಲೆಯ ಶಕ್ತಿಯೊಂದನ್ನು ಸಿಂಧೂ ಸಂಸ್ಕೃತಿ ಪರಿಚಯ ಮಾಡಿಕೊಟ್ಟಿತು. ಈ ಸಂಸ್ಕೃತಿಯ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಈಗಿರುವ ಆಧಾರಗಳು ಸಾಲವು. ಆದರೂ ಅನೇಕ ವಿದ್ವಾಂಸರು ಅದರ ಕಾಲದ ವಿಚಾರವಾಗಿ ಒಂದು ಸ್ಥೂಲ ಅಭಿಪ್ರಾಯಕ್ಕೆ ಬಂದಿದ್ದಾರೆ. ಅದರ ಪ್ರಕಾರ ಕ್ರಿ. ಪೂ. ೨೫೦೦ ರಿಂದ ೧೫೦೦ ವರೆಗೆ ಈ ಸಂಸ್ಕೃತಿ ಉಚ್ಛ್ರಾಯ ಸ್ಥಿತಿಯಲ್ಲಿ ಇತ್ತೆನ್ನಬಹುದು. ಈ ನಾಗರಿಕತೆಯ ನಿವಾಸಿಗಳು ಆ ಕಾಲದಲ್ಲಿ ತಮ್ಮ ಸಮಕಾಲೀನ ಜಗತ್ತಿನ ಎಲ್ಲ ಜನರಿಗಿಂತಲೂ ಹೆಚ್ಚಾಗಿ ಜೀವನದ ಅನುಕೂಲಗಳನ್ನು ರೂಪಿಸಿಕೊಂಡಿದ್ದರು. ಈ ದೃಷ್ಟಿಯಿಂದ ಈಜಿಪ್ಟ್ ಮೊದಲಾದ ಪ್ರಾಚೀನ ನಾಗರಿಕತೆಗಿಂತ ಹೆಚ್ಚು ನಾಗರಿಕರಾಗಿದ್ದರೆನ್ನಬಹುದು.

ಅಲ್ಲಿ ಕಾಣುವ ನಗರ ನಿರ್ಮಾಣದ ಕುಶಲತೆ, ಮನೆಗಳ ರಚನೆಯಲ್ಲಿ ಕಂಡುಬರುವ ಅಚ್ಚುಕಟ್ಟುತನ, ಒಳಚರಂಡಿ ವ್ಯವಸ್ಥೆ ಇವು ಮೆಚ್ಚತಕ್ಕವುಗಳು. ಅಲ್ಲಿನ ವಿಶಾಲವಾದ ರಸ್ತೆಗಳು ಬೆರಗುಗೊಳಿಸುವಂತಿವೆ. ಬಹುಶಃ ಆ ಕಾಲದಲ್ಲಿದ್ದಿರಬಹುದಾದ ದ್ವಿಚಕ್ರವಾಹನ ಹಾಗೂ ಪಾದಚಾರಿಗಳಿಗೂ ಓಡಾಡಲು ಅನುಕೂಲವಾಗಿದ್ದುವು. ನಗರದಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿದ ಒಂದು ಮುಖ್ಯಬೀದಿ, ಅದಕ್ಕೆ ಸೇರಿದಂತೆ ಚಿಕ್ಕಚಿಕ್ಕ ಬೀದಿಗಳು ಇರುತ್ತಿದ್ದವು.

ಮನೆಯನ್ನು ಕಟ್ಟುವುದರಲ್ಲಿ ಸಿಂಧೂಸಂಸ್ಕೃತಿಯ ಜನರು ತೋರಿಸಿರುವ ಅನುಕೂಲತೆಯ ದೃಷ್ಟಿ ಮೆಚ್ಚತಕ್ಕದ್ದು. ಅವರ ಮನೆಗಳ ರಚನೆಯಲ್ಲಿ ಕಂಡುಬರುವ ಮುಖ್ಯ ಲಕ್ಷಣವೆಂದರೆ ತೆರೆದ ಒಳಾಂಗಣ, ಅದರ ಸುತ್ತಲೂ ಕೋಣೆಗಳು ಇರುತ್ತಿದ್ದವು. ಮನೆಗಳು ಅನೇಕ ಕೋಣೆಗಳಿಂದ ಕೂಡಿದ್ದು ಸಾಮಾನ್ಯವಾಗಿ ಮಹಡಿಯ ಮೇಲಿನ ಕೋಣೆಗಳನ್ನು ವಾಸಕ್ಕೆ ಉಪಯೋಗಿಸುತ್ತಿದ್ದರು. ಕೆಳಗಿನ ಕೋಣೆಗಳು

©KTBS Not to be republished

ಅಡುಗೆ ಮನೆ ಮತ್ತು ಉಗ್ರಾಣಗಳಾಗಿರುತ್ತಿದ್ದವು. ಸ್ನಾನದ ಕೋಣೆಗಳು ಮೊಹೆಂಜೋದಾರೋ ಮನೆಗಳ ಒಂದು ಮುಖ್ಯವಾದ ಭಾಗ. ಸ್ನಾನ ಮಾಡಿ ಹರಿದ ನೀರು ಚರಂಡಿಗಳ ಮೂಲಕ ನಗರದ ಒಳಚರಂಡಿಗೆ ಸೇರುತ್ತಿದ್ದವು.

ಸಾಮಾನ್ಯವಾಗಿ ನೀರಿಗಾಗಿ ಪ್ರತಿ ಮನೆಗಳಲ್ಲೂ ಬಾವಿಗಳಿದ್ದವು. ಇದಲ್ಲದೆ ಸಾರ್ವಜನಿಕ ಬಾವಿಗಳಿದ್ದವು. ವಿಶೇಷ ರೀತಿಯಲ್ಲಿ ತಯಾರಾದ ಇಟ್ಟಿಗೆಗಳಿಂದ ಬಾವಿಗಳ ಒಳಭಾಗಗಳನ್ನು ಕಟ್ಟುತ್ತಿದ್ದರು. ಈ ಅತ್ಯಂತ ಪುರಾತನವಾದ ಬಾವಿಗಳು ಮೊನ್ನೆಮೊನ್ನೆ ಭೂಸಂಶೋಧನೆಗೆ ಹೋದವರಿಗೂ ನೀರನ್ನು ಒದಗಿಸಿರುವುದು ಅಚ್ಚರಿಯ ಸಂಗತಿ. ವಿಪುಲವಾದ ನೀರಿನ ಬಳಕೆ, ಸ್ನಾನಗೃಹಗಳು, ಚರಂಡಿ ವ್ಯವಸ್ಥೆ– ಇವುಗಳಿಂದ ಅವರ ಶುಚಿತ್ವದ ಕಲ್ಪನೆಯನ್ನು ಕಂಡುಕೊಳ್ಳಬಹುದು.

ಮನೆಗಳಲ್ಲಿರುವ ಸ್ನಾನದಗೃಹಗಳಂತೆ ಸಾರ್ವಜನಿಕ ಸ್ನಾನದ ತೊಟ್ಟಿಗಳು ಅಲ್ಲಲ್ಲಿ ದೊರೆಯುತ್ತವೆ. ಇಂತಹ ಒಂದು ಸ್ನಾನದ ಕೊಳ ಮೊಹೆಂಜೋದಾರೊದಲ್ಲಿ ಸಿಕ್ಕಿದೆ. ೪೦ × ೨೩ ಚದರ ಅಡಿ ವಿಸ್ತಾರದ ಒಂದು ಈಜುವ ಕೊಳ. ಅದನ್ನು ೧೮೦ × ೧೦೮ ಚದರ ಅಡಿ ವಿಸ್ತಾರದ ಕಟ್ಟಡ ಸುತ್ತುವರೆದಿದೆ. ಈ ಕಟ್ಟಡದ ಒಳಾಂಗಳದ ಮಧ್ಯದಲ್ಲಿ ಈಜು ಕೊಳವಿದೆ. ಈಜುಕೊಳಕ್ಕೆ ಬರಲು ನಾಲ್ಕು ಕಡೆಯಿಂದಲೂ ದಾರಿಗಳಿವೆ. ಈ ಸ್ನಾನದ ಕೊಳಕ್ಕೆ ನಿಯತಕಾಲದಲ್ಲಿ ನೀರು ತುಂಬುವ ವ್ಯವಸ್ಥೆ ಇದ್ದಂತೆ ತೋರುತ್ತದೆ. ಹಳೆಯ ನೀರನ್ನು ಹೊರಗೆ ಹಾಕುವ ಏರ್ಪಾಡೂ ಸಮರ್ಪಕವಾಗಿದೆ. ಈ ಬಗೆಯ ಇಂತಹ ಕಟ್ಟಡ ಇನ್ನಾವ ಪ್ರಾಚೀನ ನಾಗರಿಕತೆಯಲ್ಲಿಯೂ ಕಾಣಲಾರೆಂಬುದು ಡಾ. ಮೆಕ್ಕೆ ಅವರ ಅಭಿಪ್ರಾಯ.

ಇಂತಹದೇ ಇನ್ನೊಂದು ಆಶ್ಚರ್ಯಕರವಾದ ಕಟ್ಟಡವೆಂದರೆ ಹರಪ್ಪದಲ್ಲಿ ದೊರೆತ ದೊಡ್ಡ ಕಣಜ. ಉತ್ತರ–ದಕ್ಷಿಣವಾಗಿ ಇದರ ಉದ್ದ ೧೬೯ ಅಡಿಗಳು. ಪೂರ್ವ–ಪಶ್ಚಿಮವಾಗಿ ಅಗಲ ೧೩೫ ಅಡಿಗಳು. ಮಧ್ಯದಲ್ಲಿ ೨೩ ಅಡಿ ಅಗಲದ ಓಣಿ, ಇದನ್ನು ಸಮವಾಗಿ ಎರಡು ಭಾಗ ಮಾಡುವಂತೆ ರಚನೆಗೊಂಡಿದೆ. ಒಂದೊಂದರಲ್ಲಿಯೂ ಆರು ಕೋಣೆಗಳು ಇದ್ದು ಒಂದೊಂದನ್ನು ನಾಲ್ಕು ಸಣ್ಣಸಣ್ಣ ಭಾಗಗಳನ್ನಾಗಿ ವಿಭಾಗಿಸಲಾಗಿದೆ. ಧಾನ್ಯವನ್ನು ಶೇಖರಿಸಿಡಲು ಈ ಕಟ್ಟಡವನ್ನು ನಿರ್ಮಿಸಲಾಗಿದೆ.

ವ್ಯವಸಾಯವೇ ಈ ಜನರ ಮುಖ್ಯ ಕಸುಬಾಗಿದ್ದು ಗೋಧಿ ಅವರ ಪ್ರಮುಖ ಬೆಳೆಯಾಗಿತ್ತು. ಅದಲ್ಲದೇ ಬಾರ್ಲಿ ಮತ್ತು ಭತ್ತವನ್ನು ಬೆಳೆಯುತ್ತಿದ್ದರು. ಹತ್ತಿಯನ್ನು ಬೆಳೆದು ಅದರಿಂದ ಬಟ್ಟೆ ನೇಯುವುದನ್ನು ಅತಿ ಪ್ರಾಚೀನ ಕಾಲದಲ್ಲೇ ಈ ಜನರು ಕಲಿತಂತೆ ತೋರುತ್ತದೆ. ಇಲ್ಲಿಂದ ಮೆಸಪಟೋಮಿಯ ಮೊದಲಾದ ಕಡೆಗಳಿಗೆ ಹತ್ತಿಯ ಬಟ್ಟೆ ರಫ್ತಾಗುತ್ತಿದ್ದ ಬಗ್ಗೆ ನಿದರ್ಶನಗಳಿವೆ.

ಆಭರಣಗಳನ್ನು ಧರಿಸುವುದರಲ್ಲಿ ಅಲ್ಲಿನ ಜನರಿಗೆ ವಿಶೇಷ ಒಲವಿದ್ದುದು ಕಂಡುಬರುತ್ತದೆ, ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ಲೋಹಗಳಿಂದಲೂ ಫಯಾನ್ಸ್ ಮತ್ತು ಜೇಡಿಮಣ್ಣಿನಿಂದಲೂ ಅನೇಕ ಬಗೆಯ ಆಭರಣಗಳನ್ನು ಅವರು ಮಾಡುತ್ತಿದ್ದರು. ಕಂಠಾಭರಣ, ಡಾಬು, ಉಂಗುರ, ಕಾಲಂದಿಗೆ, ಕೈಕಡಗ ಮೊದಲಾದ ಆಭರಣಗಳನ್ನು ಹೆಂಗಸರು ಧರಿಸುತ್ತಿದ್ದರು ಎನ್ನುವುದಕ್ಕೆ ಕುರುಹುಗಳು ದೊರೆತಿವೆ. ಅನೇಕ ಪ್ರಾಣಿಗಳನ್ನು ಪಳಗಿಸಿ ಅವುಗಳಿಂದ ಉಪಯೋಗ ಪಡೆಯುವುದನ್ನು ಅಲ್ಲಿನ ಜನ ಕಲಿತಿದ್ದರು. ಗೂಳಿ, ಎಮ್ಮೆ, ಕುರಿ, ಹಂದಿ, ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳನ್ನು ಸಾಕುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಅವಶೇಷಗಳು ದೊರೆಕಿವೆ. ಹಸುಗಳ ಸಂಖ್ಯೆಯಂತು ವಿಶೇಷವಾಗಿತ್ತು. ಅವುಗಳ ಹಾಲು ಅವರ ಆಹಾರದ ಒಂದು ಭಾಗವಾಗಿತ್ತೆಂದು ತಿಳಿದುಬರುತ್ತದೆ.

ನಿತ್ಯ ಬಳಕೆಯ ಕೆಲವು ಉಪಕರಣಗಳು ಸಿಂಧೂ ಸಂಸ್ಕೃತಿಯಲ್ಲಿ ದೊರೆತಿವೆ. ತಾಮ್ರ ಮತ್ತು ಕಂಚಿನ ಉಪಕರಣಗಳಲ್ಲದೆ ಅನೇಕ ಬಗೆಯ ಕಲ್ಲಿನ ಆಯುಧಗಳು ಇವುಗಳಲ್ಲಿವೆ. ಈ ಯುಗಕ್ಕಿಂತ ಹಿಂದಿನ ಶಿಲಾಯುಗದ ನಾಗರಿಕತೆಯೂ ಇಲ್ಲಿ ಇದ್ದಿರಬಹುದು ಎಂಬುದಕ್ಕೆ ಇದು ಪುಷ್ಟಿ ಕೊಡುತ್ತದೆ. ಭರ್ಜಿ, ಶೂಲ, ಬಾಣ, ಕತ್ತಿ ಮೊದಲಾದ ಯುದ್ಧೋಪಕರಣಗಳು, ಉಳಿ, ಗರಗಸ ಮೊದಲಾದ ಗೃಹೋಪಕರಣಗಳು ಇಲ್ಲಿ ದೊರೆತಿವೆ. ಪುರಾತನ ನಾಗರಿಕತೆಗಳಲ್ಲೆಲ್ಲಾ ರೋಮನ್ನರ ಕಾಲದವರೆಗೂ ಯಾವ ಗರಗಸವೂ ಕಂಡುಬಂದಿಲ್ಲ. ಮೊಹೆಂಜೋದಾರೋದಲ್ಲಿ ಸಿಕ್ಕಿರುವುದೇ ಅತ್ಯಂತ ಪ್ರಾಚೀನ ಎನ್ನಬಹುದು. ಚಾಕು, ಕೊಡಲಿ, ಬಾಚಿ, ತಾಮ್ರದಕಾವಲಿ, ತಟ್ಟೆ, ಬೀಸುವಕಲ್ಲು, ಚಿಪ್ಪಿನಸೌಟು, ಬೆಳ್ಳಿಯಪಾತ್ರೆ ಮೊದಲಾದವು ಇಲ್ಲಿ ಸಿಕ್ಕಿರುವ ಇತರ ಉಪಕರಣಗಳು.

ಅವರು ಉಪಯೋಗಿಸುತ್ತಿದ್ದ ಮಡಕೆಗಳು ಪರಿಶೀಲನೆಗೆ ಅರ್ಹವಾದುವು. ಅನೇಕ ಬಣ್ಣದ ಜಾಡಿಗಳನ್ನೂ ವಿವಿಧ ಮಾದರಿಯ ಮಡಕೆಗಳನ್ನೂ ಮಾಡುವ ಅವರ ಕೌಶಲ ಮೆಚ್ಚತಕ್ಕದ್ದು. ಶಿಲ್ಪಕಲೆಯಲ್ಲೂ ಅವರು ಪರಿಣತರಾಗಿದ್ದರು. ಸುಣ್ಣದಕಲ್ಲು, ಸಾಬೂನುಕಲ್ಲು ಮೊದಲಾದ ಮೃದು ಶಿಲೆಗಳಿಂದ ನಿರ್ಮಿತವಾದ ಮೂರ್ತಿಗಳು ಆ ಕಾಲದ ಶಿಲ್ಪಕಲೆಯ ಸ್ಮಾರಕಗಳಾಗಿ ಉಳಿದಿವೆ. ಶಿಲಾಮೂರ್ತಿಗಳಂತೆಯೇ ಕಂಚಿನ ಪ್ರತಿಮೆಗಳೂ ಜೇಡಿಮಣ್ಣಿನ ಕಲಾ ಕೃತಿಗಳೂ ಇಲ್ಲಿ ದೊರೆತಿವೆ. ಒಟ್ಟಿನಲ್ಲಿ ಪ್ರಾಚೀನಕಾಲದ ವೈವಿಧ್ಯಮಯವಾದ ಈ ಸಂಸ್ಕೃತಿ ನಮ್ಮದು ಎಂಬುದೇ ಹೆಮ್ಮೆಯ ವಿಷಯ.

* * *

[ಸಂಪನ್ಮೂಲತೆ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೪ನೆಯ ಮುದ್ರಣ, ೧೯೯೨]

## ಕಲಿತ ಪಠ್ಯದ ಅಭ್ಯಾಸ

- **ವಿಷಯಗ್ರಹಣ/ಉತ್ತರ ವಿವರಣಾತ್ಮಕ ಪ್ರಶ್ನೆಗಳು**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಭಾರತೀಯ ಸಂಸ್ಕೃತಿಯ ಹೆಚ್ಚುಗಾರಿಕೆಗೆ ಭೌಗೋಳಿಕ ಸನ್ನಿವೇಶ ಹೇಗೆ ಕಾರಣವಾಗಿದೆ?

೨. ಭಾರತೀಯ ಸಂಸ್ಕೃತಿಗೆ ಸಿಂಧೂ ಸಂಸ್ಕೃತಿಯ ಕೊಡುಗೆ ಏನು?

೩. ಮನೆಕಟ್ಟುವುದರಲ್ಲಿ ಸಿಂಧೂ ಸಂಸ್ಕೃತಿಯ ವಿಶೇಷತೆ ಏನು?

೪. ಮೊಹೇಂಜೋದಾರೋದಲ್ಲಿ ಕಂಡುಬಂದ ಈಜುಕೊಳದ ವಿಶೇಷತೆ ಏನು?

೫. ಭಾರತೀಯ ಸಂಸ್ಕೃತಿ ಪ್ರಾಚೀನ, ಅರ್ವಾಚೀನಗಳ ಸಮ್ಮಿಲನ – ಸಮರ್ಥಿಸಿ

೬. ಸಿಂಧೂ ಸಂಸ್ಕೃತಿಯ ಜನರು ಶೃಂಗಾರ ಪ್ರಿಯರು ಹೇಗೆ? –ವಿವರಿಸಿ

೭. ಸಿಂಧೂ ಸಂಸ್ಕೃತಿ ಅತ್ಯಂತ ಪ್ರಾಚೀನ ಎನ್ನುವುದನ್ನು ಆಧಾರ ಸಹಿತ ವಿವರಿಸಿ.

✦ ✦ ✦ ✦ ✦



©KTBS Not to be republished

# ಪಠ್ಯಾಧಾರಿತ ಪದಕೋಶ

**ಅ**

ಅಕ್ಕರೆ – ಪ್ರೀತಿ

ಅಕ್ಕಸಾಲಿಗ – ಚಿನ್ನದ ಕೆಲಸ ಮಾಡುವವ, ಚಿನಿವಾರ

ಅಗಜೆ – ಪಾರ್ವತಿ, ಗಿರಿಜೆ

ಅಗ್ಗ – ಕಡಿಮೆ ಬೆಲೆ, ಇಳಿ ಬೆಲೆ

ಅಚಲ – ಚಲಿಸದಿರುವ, ಸ್ಥಿರವಾದ, ಪರ್ವತ

ಅಚಾತುರ್ಯ – ಕೈತಪ್ಪಿ ನಡೆದ ಕೆಲಸ, ಕೈಮೀರಿದ ಕಾರ್ಯ

ಅಧ್ವಾನ – ಕಷ್ಟ, ತಾಪತ್ರಯ, ತೊಂದರೆ

ಅಪರಂಜಿ – ಬಂಗಾರ, ಶುದ್ಧ ಚಿನ್ನ, ಹೊನ್ನು

ಅಮರ – ಮರಣವಿಲ್ಲದ, ಸಾವಿಲ್ಲದ

ಅರುಹು – ಹೇಳು, ತಿಳಿಸು

ಅಲಕ್ಷ್ಯ – ಲಕ್ಷ್ಯವಿಲ್ಲದ, ಗಮನ ನೀಡದ

ಅಲಗು – ಬಾಣ, ಅಂಬು

ಅಸು – ಪ್ರಾಣ, ಜೀವ

ಅಕ್ಷಿ – ಕಣ್ಣು, ನೇತ್ರ

ಅಂಬುಜ – ತಾವರೆ, ಕಮಲ

ಅನರ್ಘ್ಯ – ಶ್ರೇಷ್ಠ, ಅಮೂಲ್ಯ

ಅಭ್ಯಂಜನ – ಸ್ನಾನ, ಜಳಕ, ಮಜ್ಜನ

**ಆ**

ಆಕ್ರಂದನ – ಶೋಕ, ದು:ಖ, ಅಳು

ಆಚ್ಛಾದನ – ಬಟ್ಟೆ, ವಸ್ತ್ರ

ಆಜನ್ಮ – ಹುಟ್ಟಿನಿಂದ

ಆಧಿಪತ್ಯ – ಯಜಮಾನಿಕೆ, ಪ್ರಭುತ್ವ

ಆರ್ದ್ರತೆ – ನೀರಿನ ಅಂಶ, ತೇವಾಂಶ

ಆನನ – ಮುಖ, ಮೊಗ, ಮೋರೆ, ಮುಸುಡಿ

ಆಲಯ – ಆಶ್ರಯ, ಮನೆ, ಕುಟೀರ

ಆವೇಶ – ಕೆರಳುವಿಕೆ, ರೋಷ, ಆಗ್ರಹ

**ಇ**

ಇಣಚಿ – ಅಳಿಲು, ಅಳಿಕುಂಚ

**ಉ**

ಉದಕ – ನೀರು, ಜಲ, ತೀರ್ಥ

ಉದ್ಯಮ – ಉದ್ಯೋಗ, ಕೆಲಸ

ಉಪಶಾಂತ – ಸಮಾಧಾನ, ಸಹನೆ

ಉರಗ – ಹಾವು, ಸರಿಸೃಪ

ಉಸಿರು – ಹೇಳು, ಶ್ವಾಸ, ಸೊಲ್ಲು

**ಊ**

ಊರುಜ – ವೈಶ್ಯ, ವ್ಯಾಪಾರಿ

**ಎ**

ಎಕ್ಕಡ – ಪಾದುಕೆ, ಪಾದರಕ್ಷೆ, ಚಪ್ಪಲಿ, ಮೆಟ್ಟು

ಎಡೆಮುಡಿ – ಕೈಕಾಲು ಸೇರಿಸಿ ಕಟ್ಟಿಹಾಕುವುದು

ಎರಗು – ನಮಸ್ಕರಿಸು, ವಂದಿಸು

ಎಳವೆ – ಬಾಲ್ಯ, ಮಗುತನ

**ಒ**

ಒರೆ – ಹೇಳು, ನಿರೂಪಿಸು,

ಒರತೆ – ನೀರಿನ ಬುಗ್ಗೆ, ಚಿಲುಮೆ

©KTBS Not to be republished

### ಕ

ಕರತಲಾಮಲಕ– ಚೆನ್ನಾಗಿ ತಿಳಿದುದು

ಕರಾವಳಿ – ಸಮುದ್ರ ತೀರ

ಕಸವು – ಶಕ್ತಿ, ಬಲ

ಕಬ್ಬ – ಕಾವ್ಯ, ಕವಿತೆ

ಕವಡು – ಕಪಟ, ವಂಚನೆ, ಮೋಸ

ಕಳೇಬರ – ಮೃತದೇಹ, ಶವ

ಕಾಯಕ – ಕೆಲಸ, ಕರ್ತವ್ಯ

ಕಾನನ – ಕಾಡು, ಅರಣ್ಯ

ಕುಟಿಲ – ಮೋಸ, ವಂಚನೆ

ಕುತ್ತು – ಆಪತ್ತು, ಕಷ್ಟ

ಕುಪಿತ – ಕೋಪ, ಸಿಟ್ಟು

ಕೂಲಂಕಷ – ಸಂಪೂರ್ಣ, ಸಮಗ್ರ

ಕೂಸು – ಮಗು, ಶಿಶು, ಕಂದ, ಪಿಳ್ಳೆ

ಕೆಮ್ಮನೆ – ಸುಮ್ಮನೆ

ಕೊರಕಲು – ಕಣಿವೆಯ ಹಾದಿ, ತಗ್ಗು ದಾರಿ

ಕೊರಲು – ಕೊರಳು, ಕತ್ತು, ಗೋಣು

ಕಂಟಕ – ತೊಂದರೆ, ಕಷ್ಟ, ಸಮಸ್ಯೆ

ಕಂಪು – ಸುವಾಸನೆ, ಒಳ್ಳೆ ವಾಸನೆ

ಕ್ಷೀರಸಾಗರ – ಹಾಲಿನ ಸಮುದ್ರ

### ಗ

ಗಡಿ – ಸೀಮೆ, ಎಲ್ಲೆ, ಮಿತಿ

ಗಾವಿಲ – ಹೆಡ್ಡ, ದಡ್ಡ, ಗ್ರಾಮಿಗ

ಗುಮಾಸ್ತ – ಲೆಕ್ಕಿಗ, ಕರಣಿಕ

ಗೌಪ್ಯ – ಗುಟ್ಟು, ರಹಸ್ಯ, ಮುಚ್ಚಿಕೆ

### ಚ

ಚಮೂರ – ಹುಲಿ, ವ್ಯಾಘ್ರ

ಚರ್ವಣ – ಅಗಿದು

ಚಂದನ – ಸುವಾಸನಾ ಭರಿತ ಔಷಧಿ ಮರ

ಚಿಗರೆ – ಜಿಂಕೆ

ಚಿರಂಜೀವಿ – ಸಾವಿಲ್ಲದವ

ಚಿಂತೆ – ಯೋಚನೆ

### ಜ

ಜಳಕ – ಸ್ನಾನ, ಅಭ್ಯಂಜನ

ಜಲಪಾತ – ಧುಮ್ಮಿಕ್ಕುವ ಜಲಧಾರ, ರಭಸದಿಂದ ಧುಮ್ಮಿಕುವ ನೀರು

### ತ

ತನು – ದೇಹ, ಶರೀರ

ತುರಂಗ – ತುರಗ, ಕುದುರೆ

ತೈಲ – ಎಣ್ಣೆ, ಜಿಡ್ಡಿನ ದ್ರವ

ತೃಷೆ – ಬಾಯಾರಿಕೆ, ನೀರಡಿಕೆ

ತೊಯ್ದು – ನೆನೆದು

ತೆಂಕಣ – ದಕ್ಷಿಣ

### ದ

ದಣಿವು – ಆಯಾಸ, ಸುಸ್ತು

ದಿಗ್ಗಜ – ಎಂಟು ದಿಕ್ಕುಗಳಲ್ಲಿ ಪೃಥ್ವಿಗೆ ಆಧರವನ್ನು ಕೊಟ್ಟು ನಿಂತಿರುವ ಆನೆಗಳು

ದೀವಟಿಕೆ – ದೀಪವರ್ತಿ, ದೀಪಪಟ್ಟಿಕಾ

### ಧ

ಧನ – ದ್ರವ್ಯ, ಸಂಪತ್ತು, ಭಾಗ್ಯ

ಧಾವಿಸು – ಶೀಘ್ರವಾಗಿ ಹೊರಡುವುದು

ಧಾಂದ್ಲೆ – ಗಲಾಟೆ, ಗದ್ದಲ, ಗಲಭೆ

### ನ

ನಗಾಳಿ – ಪರ್ವತಗಳ ಸಮೂಹ

ನಮಿಸು – ನಮಸ್ಕರಿಸು

©KTBS Not to be republished

ನವೀನ – ಹೊಸದು, ಆಧುನಿಕ
ನಿರ್ನಾಮ – ನಾಶ, ಹಾಳಾಗುವಿಕೆ
ನಿಪುಣ – ತಜ್ಞ, ಜಾಣ, ಕುಶಲ, ಸಮರ್ಥ
ನಿಮಿತ್ತ – ಕಾರಣ, ನೆಪ
ನಿರುತ – ಸತ್ಯ, ನಿಜ
ನಿಕೃಷ್ಟ – ಕೆಟ್ಟ, ನೀಚ, ಹೀನ
ನಿಲ್ಮನೆ – ಪ್ರವಾಸಿಮಂದಿರ, ಪ್ರವಾಸಿಮನೆ
ನಿಶ್ಚಿತ – ನಿರ್ಧಾರ, ನಿರ್ಣಯಿಸಿದ
ನಿಶಾಚಾರ – ರಾತ್ರಿ ಸಂಚಾರಿಸುವವ, ರಾತ್ರಿನಡೆಗ
ನಿಷ್ಫಲ – ಫಲವಿಲ್ಲದ, ವ್ಯರ್ಥವಾದ
ನೆಪ – ಕಾರಣ, ಸುಳಿವು
ನೆರೆ – ಪಕ್ಕ
ನೇಸರ – ಸೂರ್ಯ, ಭಾಸ್ಕರ, ಭಾನು, ಆದಿತ್ಯ
ನಂದನವನ – ದೇವೇಂದ್ರನ ಉಪವನ

### ಪ

ಪಯಣ – ಪ್ರಯಾಣ
ಪಥ್ಯ – ಆಹಾರದ ಕಟ್ಟುಪಾಡು, ನಿಯಮಿತ ಆಹಾರ
ಪರಿಮಳ – ಸುವಾಸನೆ
ಪರಿಹಾಸ – ವಿನೋದ, ಸರಸ, ಹಾಸ್ಯ
ಪರಾಂಬರಿಸು – ಗಮನಿಸು, ತಿಳಿ
ಪಾತರಗಿತ್ತಿ – ಚಿಟ್ಟೆ, ಪತಂಗ
ಪವಾಡ – ಅತಿಮಾನುಷ ಕೃತ್ಯ, ಸೋಜಿಗ
ಪೆರ್ಮೆ – ಹೆಮ್ಮೆ, ಜಂಭ
ಪಾಶ್ಚಾತ್ಯ – ಪಶ್ಚಿಮದೇಶ, ಹೊರದೇಶ
ಪೊದೆ – ಗಿಡಗಂಟಿ, ಕುರಚಲಗಿಡ
ಪೋರ – ಹುಡುಗ, ಬಾಲಕ
ಪಂಕಜ – ತಾವರೆ, ಕಮಲ
ಪ್ರಸಂಗ – ವಿಷಯ, ಸಂಗತಿ
ಪದ್ಧತಿ – ರೂಢಿ, ನಿಯಮ
ಪ್ರಶಂಸೆ – ಹೊಗಳಿಕೆ
ಪ್ರತಿಷ್ಠಿತ – ಗೌರವ, ಘನತೆ

### ಫ

ಫಟಿಂಗ – ತುಂಟ, ಪೋರ, ಪೋಕರಿ

### ಬ

ಬಟ್ಟೆ – ದಾರಿ, ಮಾರ್ಗ
ಬಣ್ಣಿಸು – ವರ್ಣಿಸು, ವಿವರಿಸು
ಬವಣೆ – ಕಷ್ಟ, ತೊಂದರೆ
ಬಸಿರು – ಹೊಟ್ಟೆ, ಉದರ
ಬಿಮ್ಮಗೆ – ಹೆಚ್ಚು
ಬೀಡು – ವಸತಿ, ತಂಗು, ವಾಸ ಮಾಡುವ ಜಾಗ

### ಭ

ಭವ್ಯ – ಸುಂದರ, ಶುಭಕರ, ಮನೋಹರ, ದೊಡ್ಡ
ಭಿಕಾರಿ – ನಿರ್ಗತಿಕ, ಭಿಕ್ಷುಕ, ಏನೂ ಇಲ್ಲದವ
ಭಿತ್ತಿ – ಗೋಡೆ, ಪ್ರಾಕಾರ
ಭ್ರಮರ – ದುಂಬಿ, ತುಂಬಿ
ಭೂಸುರ – ಪಾರ್ವ, ಬ್ರಾಹ್ಮಣ, ದ್ವಿಜ

### ಮ

ಮಗ್ಗ – ನೇಯುವ ಯಂತ್ರ, ನೇಯ್ಗೆಯಂತ್ರ
ಮತಿ – ಬುದ್ಧಿ, ಅರಿವು, ಜ್ಞಾನ, ತಿಳಿವಳಿಕೆ
ಮನೆವಾಳ್ತೆ – ಸಂಸಾರ, ಕುಟುಂಬ

©KTBS Not to be republished

ಮರುಭೂಮಿ – ಬೆಂಗಾಡು, ಉಸುಕಿನ ಪ್ರದೇಶ
ಮಾಮರ – ಮಾವಿನಮರ
ಮಿಗಿಲು – ಹೆಚ್ಚು, ಶ್ರೇಷ್ಠ
ಮೇಧಾವಿ – ಬುದ್ಧಿವಂತ, ಜ್ಞಾನಿ
ಮುಳಿ – ಕೋಪಿಸಿಕೊಳ್ಳು, ಸಿಟ್ಟಾಗು
ಮಂದಿ – ಜನ

**ಯ**

ಯಥೇಚ್ಚ – ಹೇರಳ, ಬೇಕಾದಷ್ಟು

**ರ**

ರೋಷ – ಸಿಟ್ಟು, ಕೋಪ, ಕೆರಳು

**ಲ**

ಲಲಾಟ – ಹಣೆ, ನೊಸಲು

**ವ**

ವಸತಿ – ಮನೆ, ವಾಸಸ್ಥಳ, ನೆಲೆಸುವಿಕೆ
ವಾಡಿಕೆ – ರೂಢಿ, ಪದ್ಧತಿ, ಸಂಪ್ರದಾಯ
ವಿಪುಲ – ಹೇರಳ, ಹೆಚ್ಚಿನ
ವಿನೋದ – ಸಂತೋಷ, ಆನಂದ
ವೇದಾಂತಿ – ವೇದಗಳನ್ನು ಬಲ್ಲವ
ವಂಚನೆ – ಮೋಸ

**ಶ**

ಶತಮಾನ – ನೂರು ವರ್ಷಗಳು
ಶಮನ – ಶಾಂತಗೊಳಿಸು, ಸಮಾಧಾನ
ಶರ – ಬಾಣ, ಸರಳು
ಶಿರ – ತಲೆ, ಮಂಡೆ
ಶಿಥಿಲ – ನಳಿಸಿದ, ಹಾಳಾದ
ಶೃಂಖಲೆ – ಸಂಕೋಲೆ
ಶೋಧನೆ – ಹುಡುಕುವುದು

**ಸ**

ಸಟೆ – ಸುಳ್ಳು, ಹುಸಿ, ಮಿಥ್ಯೆ
ಸತಿ – ಹೆಂಡತಿ, ಮಡದಿ, ಪತ್ನಿ
ಸಮೀಪ – ಹತ್ತಿರ, ಸಾಮೀಪ್ಯ
ಸಶೇಷ – ಬಾಕಿ ಉಳಿದ
ಸುರರು – ದೇವತೆಗಳು
ಸುಳುಹು – ಸೂಚನೆ, ತಿಳಿವಳಿಕೆ
ಸುವರ್ಣ – ಚಿನ್ನ, ಬಂಗಾರ
ಸೆರೆ – ಬಂಧನ, ವಶದಲ್ಲಿರುವ
ಸಂಪ್ರದಾಯ – ಮೊದಲಿನಿಂದ ಬಂದ ಪದ್ಧತಿ, ಕಟ್ಟಳೆ
ಸ್ಮಾರಕ – ನೆನಪಿಗಾಗಿ ಕಟ್ಟಿದ್ದು
ಸ್ಮರಣೆ – ನೆನಪು, ಜ್ಞಾಪಕ
ಸಂಭಾವನೆ – ಗೌರವಧನ, ದಕ್ಷಿಣೆ, ಇನಾಮು

**ಹ**

ಹತಾಶೆ – ನಿರಾಶೆ
ಹತ್ಯೆ – ಕೊಲೆ, ವಧೆ, ನಾಶ
ಹಾನಿ – ಕೇಡು, ನಷ್ಟ
ಹಾಲಾಹಲ – ವಿಷ
ಹಾಹಾಕಾರ – ಸಹಿಸಲಾಗದ ಸಂದರ್ಭದಲ್ಲಿ ಮಾಡುವ ಉದ್ಗಾರ
ಹಂಗು – ಋಣ, ರಿಣ
ಹಂದರ – ಚಪ್ಪರ, ಮಂಟಪ
ಹಂಬಲ – ಆಸೆ, ಅಪೇಕ್ಷೆ
ಹೊಂಡ – ಹಳ್ಳ, ಗುಂಡಿ

✦ ✦ ✦ ✦ ✦

©KTBS Not to be republished